12th Century's Enlightenment Technic and Revolution



ಬಸವ ಗೀತೆ

ಸತ್ಯಸಂವಾದ

ಬಸವರಾಜ ಸ್ವಾಮಿ

12th Century's
Enlightenment Technic
and Revolution

ಬಸವಗೀತೆ

ಸತ್ಯಸಂವಾದ - 1

12ನೇ ಶತಮಾನದ ಸ್ವಯಂಜ್ಞಾನ ಕ್ರಾಂತಿ ಮತ್ತು ತಂತ್ರಗಾರಿಕೆ

ಲೇಖಕರು
ಬಸವರಾಜ ಸ್ವಾಮಿ

ಪ್ರಕಾಶಕರು
ಶ್ರೀ ಬಸವ ಸೇವಾ ಪ್ರತಿಷ್ಠಾನ
ಸುದ್ದಿಮೂಲ ಕಾರ್ಯಾಲಯ, ಸಿಯಾತಲಾಬ
ರಾಯಚೂರು (ಕರ್ನಾಟಕ)

12th Century's
Enlightenment Technic
and Revolution

BASAVAGEETHE
SATYASAMVADA

by: **Basavraj Swamy**
Editor, Suddimoola, Kannada Daily
Siyatalab, RAICHUR-584102
M.9980553750

ಬಸವಗೀತೆ
ಸತ್ಯಸಂವಾದ
ಲೇಖಕರು: ಬಸವರಾಜ ಸ್ವಾಮಿ

ಪುಟಗಳು : 158 + XVI =174
ಬೆಲೆ : ರೂ.200/-
ಪ್ರಥಮ ಮುದ್ರಣ : 2024
ಕಾಗದ ಬಳಕೆ : 70 GSM NS Maplitho
ಆಕಾರ : ಡೆಮಿ 1/8

Page : 158+XVI
Price : Rs.200/-
First Edition : 2024
Size : Demy 1/8
ಡಿಟಿಪಿ/ಪುಟ ವಿನ್ಯಾಸ : ಕುಮಾರಿ ಶ್ರೀದೇವಿ
ಮುಖಪುಟ : ಮುರಳೀಧರ ವಿ. ರಾಠೋಡ, ಬೆಂಗಳೂರು
ಮುದ್ರಣ : ಟ್ರಿನಿಟಿ ಅಕಾಡೆಮಿ, ಬೆಂಗಳೂರು

ಪ್ರಕಾಶನ :
ಶ್ರೀ ಬಸವ ಸೇವಾ ಪ್ರತಿಷ್ಠಾನ
ಸುದ್ದಿಮೂಲ ಕಾರ್ಯಾಲಯ, ಸಿಯಾತಲಾಬ, ರಾಯಚೂರು

ಬಿನ್ನಹ

ಸು ಸಂಪನ್ನ ಭಾಷಾ ಸಾಮರ್ಥ್ಯದ ಸವಿಗಾಗಿ ಕಾವ್ಯ ಸುಮಧುರ ರಸಾನಂದಕ್ಕಾಗಿ, ಸಮೃದ್ಧ ಸಾಹಿತ್ಯ ಧೀಮಂತಿಕೆಯ ದರ್ಶನಕ್ಕಾಗಿ , ಭವ - ಭಾವಾನಂದಕ್ಕಾಗಿ ಓದಿ ಸುಖಿಸಬೇಕೆನ್ನುವದಾದರೆ-ಭಾರತೀಯ ಸಾಹಿತ್ಯ ನಂದನದಿ ಮಗ-ಮಗಿಪ ಬಿರಿ ಹೂಗಳನ್ನು ತಳೆದು ಸೌಗಂಧ ಸೂಸುತಿಹ ಕನ್ನಡ ಸಾಹಿತ್ಯವನ್ನು ಓದಬೇಕು. ಲೋಕಾನುಭವಕ್ಕೆ ಮೀರಿದ ಸ್ವಾನುಭಾವದ, ಸ್ವಸ್ವರೂಪ-ಸ್ವದರ್ಶನದ ಅರುವಿನ ಆಡೊಂಬೊಲದ ಆತ್ಮಾನುಭಾವದ ಅನುಸಂಧಾನಕ್ಕಾಗಿ, ಶರಣ ಸಾಹಿತ್ಯ ಅರ್ಥಾತ್ ವಚನ ಸಾಹಿತ್ಯವನ್ನು ಓದಲೇಬೇಕು. ಭಕ್ತಿ-ಜ್ಞಾನ-ವೈರಾಗ್ಯ ತ್ರಿವೇಣಿ ಸಂಗಮದಲ್ಲಿ ಮೀಯುವದಾದಲ್ಲಿ ದಾಸ ಸಾಹಿತ್ಯದ ದಾಸ ಓದುಗನಾಗಬೇಕು. ನಾಡಿನ ಕುರಿತೋದದ ಸಾಮಾನ್ಯ ಜನ ಜೀವನಾನುಭವದ ಸಹಜ ಸುಖಿಯಾಗ ಬೇಕಾದರೆ ಜನರಿಂದ ಜನರಿಗಾಗಿ ಮೂಡಿ ಬಂದ ಜನಪರ-ಜಾನಪದ ಸಾಹಿತ್ಯದ ಒಳ್ಳುಣಿಸಿಗರಾಗಬೇಕು.

ಮಿಕ್ಕಂತೆ ಭಾಷಾ ಪ್ರೌಢಿಮೆ, ಪಾಂಡಿತ್ಯ ಪ್ರಭೆಯ ಸೂರ್ಯಕಾಂತಿಯ ಹೊಂಬೆಳಕಿನ, ಚಂದ್ರಕಾಂತಿಯ ತಂಬೆಳಕಿನ ಸವಿಗಾಣಬೇಕೆಂದರೆ-ಪಂಪ-ರನ್ನ-ಕುಮಾರವ್ಯಾಸ-ಹರಿಹರ-ರಾಘವಾಂಕ ಚಾಮರಸಾದಿಗಳ ಕಾವ್ಯ ಸಮುದ್ರ ವಿಹಾರಿಗಳಾಗಬೇಕು. ಆಡುನುಡಿಯ ಕೋಗಿಲೆಯಾಗಿ ಕುಕಲಿರಿಯ ಬೇಕೆಂದರೆ ಬೆಂದ ಬೇಂದ್ರೆಯಾಗಬೇಕು . ನೂಪುರಂಗಳ ಕಟ್ಟಿ ಥಕ-ಧಿಮಿ, ಥಕ-ಧಿಮಿ ಎಂದು ಕುಣಿದು ಕುಪ್ಪಳಿಸುವ ಕೇಕೆಯಾಗಬೇಕೆಂದರೆ ಶಿವರಾಮ ಕಾರಂತರಾಗಬೇಕು. ಜನಪರ ನಿಲುವಿನ, 'ಎದೆಯ ಧ್ವನಿಗೂ ಮಿಗಿಲು ಶಾಸ್ತ್ರವಿಹುದೇನು ?' ಎಂಬ ಸುವಿಚಾರ ಧಾರೆಯ ಮಹಾಮೇರುವಿನ ಸತ್ಯ ದರ್ಶನವಾಗಬೇಕಾದರೆ ಕುವೆಂಪುವಿನ ಕಾವ್ಯ ಕಂಪಿಗೆ ಕಂಪಿಸುವ ಧೀಮಂತ ಧೀರೋದಾತ್ತ, ನಿಷ್ಪಕ್ಷಪಾತ ನಿಲುವು ನಮ್ಮದಾಗಬೇಕು.

ಈ ಇಪ್ಪತ್ತು-ಇಪ್ಪತ್ತೊಂದನೆಯ ಶತಮಾನದಲ್ಲಿ ಹನ್ನೆರಡನೆಯ ಶತಮಾನದ ಪೂಜ್ಯ ಶರಣರ ವಿಚಾರಧಾರೆ, ಜೀವನಾದರ್ಶನಗಳ ದರ್ಶನವಾಗಬೇಕಾದರೆ, ಶರಣ ತತ್ವ-ಜೀವನತತ್ವಗ್ಗಳ ಸಿಹಿಕರಣಿ(ಸೀಕಾಣಿ)ಯ ತಿರುಳುಂಬ ಹಂಬಲಿಗರಾದರೆ ಡಬ್ಬೇರ ಮಡುವಿನ ಸದ್ಗುರು ವಿದ್ಯಾನಂದ ಶರಣರ ಕರಸಂಜಾತ, ನಾನು ಪ್ರೀತಿಯಿಂದ 'ಬಸವಾನಂದ'ರೆಂದು ಕರೆದು ಸಂಭ್ರಮಿಸುವ ಸುದ್ದಿಮೂಲ ಪತ್ರಿಕೆಯ ಸಂಪಾದಕ ಶರಣ ಶ್ರೀ ಬಸವರಾಜ ಸ್ವಾಮಿಗಳಂಥವರ ಗ್ರಂಥಗಳನ್ನು ಓದಬೇಕು ಎಂಬುದು ನನ್ನ ನಮ್ರ ನಿಲುವು. ಈ ನಿಲುವಿನ ನಿಟ್ಟಿನಲ್ಲಿ ನಾವು ಅಧ್ಯಯನಶೀಲರಾದರೆ ನಮ್ಮ

'ಭವ'ವು 'ಅನುಭವ'ವಾಗಿ 'ಭಾವ'ವು ಅನುಭಾವವಾಗಿ ಮಾರ್ಪುಗೊಳ್ಳಲು ಅನುವಾಗುತ್ತದೆ. ಆತ್ಮಾನು ಸಂಧಾನದ ಸತ್ಪಥಿಕರಾಗಲು ಸಾಧ್ಯವಾಗುತ್ತದೆ ಎಂಬ ವಿಶ್ವಾಸ ತಳೆದವನು ನಾನು.

ವಚನ ಸಾಹಿತ್ಯವೆಂದರೆ-ಶರಣರ 'ಜೀವನಾನುಭವ' ಮತ್ತು 'ಜೀವನಾನುಭಾವ' ಸಾಹಿತ್ಯವೆಂಬುದು ಸರ್ವ ವೇದ್ಯ ಸಂಗತಿ. ಇದು ಎಲ್ಲರ ಅನುಭವ ಮತ್ತು ಅನುಭಾವವಾಗಬೇಕೆಂಬುದು ಆ ಸಾಹಿತ್ಯದ ಮೂಲ ಆಶಯ. ಇನ್ನೊಮ್ಮೆ ಹೇಳುತ್ತೇನೆ -'ಭವ' ಅಂದರೆ ಸಂಸಾರ, ಬದುಕು ಮುಂತಾದವುಗಳನ್ನು 'ಅನು-ಭವ' ಗೊಳಿಸುವುದು. 'ಭಾವ'ಎಂದರೆ ಮನಸ್ಸು - ಆತ್ಮ ಮುಂತಾದವುಗಳನ್ನು 'ಅನು-ಭಾವ' ಗೊಳಿಸುವುದು. ಇನ್ನು ಸಾಮಾಜಿಕ ಧಾರ್ಮಿಕ, ಸಮಾನತಾ ಕ್ರಾಂತಿಗಳೆಂಬವು ಈ ಮೂಲ ಆಶಯಕ್ಕೆ ಪೂರಕ ಮತ್ತು ಪ್ರೇರಕ ಸಂಗತಿಗಳಾಗಿ ನಿಲ್ಲಬಲ್ಲವು.

ವಚನ ಎಂದರೆ ಬರಿ ಮಾತಲ್ಲ . ವಚನವೆಂದರೆ ಪ್ರಮಾಣ, ವಚನವೆಂದರೆ ಭರವಸೆ; ವಚನವೆಂದರೆ ಜೀವನ ಸತ್ಯ, ವಚನವೆಂದರೆ ಅಂತರಂಗ ಭಾವ ಸ್ಫುರಣ-ಜ್ಞಾನರಶ್ಮಿ. ಕರ್ತಾರನ ಕಮ್ಮಟದಲ್ಲಿ ಕುಂದಣಿಸಿದ ಜ್ಞಾನರತ್ನ. ಹೀಗೆ ನೂರಾರು ಅರ್ಥಗಳು. ಆದ್ದರಿಂದ ವಚನಗಳನ್ನು ಕೇವಲ ವಾಚ್ಯಾರ್ಥದ ನೆಲೆಯಲ್ಲಿ ಪರಿಭಾವಿಸದೆ, ಅದರ ಅಂತರ್ಧ್ವನಿತ ಗಮ್ಯಕ್ಕೆ ಮೀರಿದ ಅಗಮ್ಯಾರ್ಥದ ನೆಲೆಯಲ್ಲಿ ಪರಿಭಾವಿಸಿದರೆ ಆಗ ಅದರ ಆಳ-ಅಂತರಾಳದ ಅರಿವಿನ ತಿರುಳ ಸವಿ ನಮಗೆ ಪರಿಣಾಮಕಾರಿಯಾಗಿ ಪರಿಣಾಮಿಸುತ್ತದೆ. ಇಲ್ಲವಾದಲ್ಲಿ ಮೂಲ ಆಶಯದ ನಿರಾಳ, ನಿತಾಂತ ನಿಲುವಿನ ಸತ್ಯ ದರ್ಶನವಾಗುವುದಿಲ್ಲ. ಆದ್ದರಿಂದ ವಚನಗಳ ಮೇಲ್ಪದರಿನ ಅರ್ಥಕ್ಕೆ ನಿಲ್ಲದೆ ಅದರ ಅಂತರಾಳದ ಕಡೆಗೆ ಪಯಣಿಸಬೇಕಾಗುತ್ತದೆ. ಇದನ್ನೇ ಬಸವಾನಂದರಾದ ಶ್ರೀ ಬಸವರಾಜ ಸ್ವಾಮಿಗಳು 'Inner Journey' ಎಂದು ಕರೆದಿದ್ದಾರೆ. ಹೀಗೆ ಅಂತರಂಗದ ಸರಿತ್ಸಾಗರದ ಆಳಕ್ಕೆ ಇಳಿಯಬೇಕಾದರೆ- ಈಜುವ, ಮುಳುಗಿ ಈಜುವ ತಲ್ಲೀನ, ತನ್ಮಯ ಈಜು ಕಲೆಯನ್ನು ನಾವು ರೂಡಿಸಿಕೊಳ್ಳಬೇಕಾಗುತ್ತದೆ. ಈ ರೂಢಿಯನ್ನು ತೊರೆದು ಆರೂಢಿಗಳಾಗಬೇಕಾಗುತ್ತದೆ ಎಂಬ ಮಹತ್ತರ ಸಂದೇಶವನ್ನೇ ಪೂಜ್ಯ ಬಸವಾನಂದ ಬಸವರಾಜ ಸ್ವಾಮಿಗಳು ತಮ್ಮ ಅಂತಸ್ಸಾಕ್ಷಿ ಪ್ರಜ್ಞಾ ಪ್ರೇರಣೆಯಿಂದ ಅಧ್ಯಯನಗೈದು, ಆತ್ಮಾನು ಸಂಧಾನಗೈದು ಹೊರತಂದ ಶರಣ ಸಾಹಿತ್ಯಾಧಾರಿತ ವಿಶ್ಲೇಷಣಾತ್ಮಕ, ವಿವೇಚನಾತ್ಮಕ, ವಿಚಾರಾತ್ಮಕ ಸದ್ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ.

ಡಬ್ಬೇರು ಮಡುವಿನ ಪರಮಪೂಜ್ಯ, ನಿರಾಭಾರಿ ಸುದ್ಗುರು ಶ್ರೀ ವಿದ್ಯಾನಂದರ ಕೃಪಾ ಕಟಾಕ್ಷ ಸಂಜನಿತ ಕಂದನಾಗಿ ಗುರುವಿನ ದಿವ್ಯ ಕರುಣೆ, ಭವ್ಯ ಬೋಧೆಯ ಕೃಪೆಯಿಂದ ತಮ್ಮ ಅಂತರ್ಧ್ವನಿತ ಸತ್ಯ ಸ್ಫುರಣ ಅಧ್ಯಯನ ಬಲದಿಂದ ಬೆಳಕಿನ ಬಳ್ಳಿಯಿಂದ ಮೊದಲ್ಗೊಂಡು ಬಸವಗೀತೆಯವರೆಗೆ ಹನ್ನೊಂದು

ಗ್ರಂಥಗಳನ್ನು ಹೊರತಂದಿದ್ದಾರೆ. ಹೊರತಂದಿದ್ದಾರೆ ಎಂದರೆ ಅವು ಒಳಗಿದ್ದವು ಎಂದರ್ಥ. ಒಳಗಿದ್ದವು ಎಂದರೆ ಅವರ ಒಳಗೆ ಮಾತ್ರವಲ್ಲ. ಆಸಕ್ತಿಯಿಂದ ಅಧ್ಯಯನಗೈವ ಎಲ್ಲರ ಒಳಗೂ ನೆಲದ ಮರೆಯ ನಿಧಾನದಂತೆ ಇದ್ದಿರುವ ಗ್ರಂಥ ಗಳು ಎಂಬ ಭಾವ ಅವರದು. ಈ ನಿಲುವನ್ನೇ ಅವರು ಲೋಕಾನುಭವವನ್ನು ದಾಟಿ, ಸ್ವಾನುಭಾವದ ಸಿರಿ ಸನ್ನಿಧಿಗೈದು, ಅರುವಿನ ಗುರುವಿನೊಂದಿಗೆ ಬೆರೆತು ಕೊಂಡಿದ್ದಾರೆ. ಅರುವಿನಮೃತದ ಸವಿಯನುಣ್ಣುತ್ತ ತಣಿಗೊಂಡಿದ್ದಾರೆ. ತಾವೊಬ್ಬರೆ ತಣಿದುಂಡು ಸುಖಿಸಿದರೆ ಸಾಲದು ಇತರರಿಗೂ ಈ ಸವಿಯುಣಿಸಬೇಕೆಂದು, ತಮ್ಮ ದೇಹಾರ್ಬುದ ಬಾಧೆಗಳನೆಲ್ಲ ಒದ್ದು ಸದೆದಿಕ್ಕಿ ಶರಣ ಸಾಹಿತ್ಯ ಕ್ಷೇತ್ರಕ್ಕೆ ಹತ್ತಾರು ಬೃಹತ್ ಗ್ರಂಥಗಳನ್ನು ರಚಿಸಿ ಲೋಕಾರ್ಪಣೆಗೈದು ಕೃತಾರ್ಥರಾಗಿದ್ದಾರೆ. ನಿತ್ಯವೂ ಸತ್ಸಂಗ ಸುಖಿಗಳಾಗಿದ್ದಾರೆ. ಅವರೊಂದಿಗೆ ಸತ್ಸಂಗ ಸಂವಾದದಲ್ಲಿ ಪಾಲ್ಗೊಳ್ಳುವು ದೆಂದರೆ ಅರುವೆಂಬ ಗುರುವಿನ ತೋಳ್ತೆಕ್ಕೆಯ ಅಪ್ಪುಗೆಯಲ್ಲಿ ಹರ್ಷಗೊಂಡಂತೆ ಮೈ-ಮನಗಳು ಪುಳಕಗೊಳ್ಳುತ್ತವೆ. ಹಾಗೆ ಸುಮ್ಮನೆ ಅವರ ಸತ್ಸಂಗ , ಮಾದರಿಯ ಒಂದರೆಡು ಪ್ರಸಂಗಗಳನ್ನು ಇಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಒಂದೂರು ; ಒಂದು ಸತ್ಸಂಗ ಸಭೆಯಲ್ಲಿ ಸ್ಥಾವರಲಿಂಗ-ಇಷ್ಟಲಿಂಗಗಳೆರಡೂ ಸಾಧಕನಿಗೆ ಅನಿವಾರ್ಯವಾಗುತ್ತವೆಯಲ್ಲವೆ ? ಎಂಬ ಪ್ರಶ್ನೆಯನ್ನು ಮುಂದಿ ಟ್ಟಾಗ ''ಇಲ್ಲ ಇವೆರಡೂ ತನುವಿನ ಹೊರಗಿನವು. ತನುವಿನೊಳಗೆ ತನ್ಮಯವಾಗಿ ರುವ ಅರುವೆಂಬ ಗುರುವಿನ-ಗುರುಲಿಂಗ, ಅರುವೆಂಬ ಗುರುವಿನೊಂದಿಗೆ ಸದಾ ಜಾಗ್ರತವಾಗಿ ಸಮರಸಗೊಂಡ ಚೇತನ ಶೀಲ ಜಂಗಮಲಿಂಗಗಳ ಅನಿವಾರ್ಯತೆ ಇದೆ. ಇವು ತನುವಿನೊಳಗಣ ಲಿಂಗಗಳು. ನಾವೆಲ್ಲರೂ ಇಂಥ ಲಿಂಗಿಗಳಾಗಬೇಕೇ ಹೊರತು ಹೊರಗಿನ ಲಿಂಗಿಗಳಾಗುವದರಿಂದ ಪ್ರಯೋಜನವಿಲ್ಲ''ಎನ್ನುತ್ತಾರೆ. ಸಭೆ ನಿಬ್ಬೆರಗಾಗುತ್ತದೆ.

ಮತ್ತೊಂದು ಸತ್ಸಂಗ ಸಂದರ್ಭದಲ್ಲಿ-'ಸತ್ವ-ರಜೋ-ತಮೋ'ಗುಣಗಳಲ್ಲಿ ಶ್ರೇಷ್ಠವಾದ ಸತ್ವಗುಣ ಸಾಧಕರಾಗುವುದು ಒಳಿತಲ್ಲವೆ ? ಎಂಬ ಪ್ರಶ್ನೆಯನ್ನು ಮುಂದಿಟ್ಟಾಗ - ಇಲ್ಲ -ಹಾಗಲ್ಲ. ರಜೋ-ತಮ ಗುಣಗಳು ಕನಿಷ್ಠವೆಂದು ಬಿಂಬಿಸಲ್ಪಟ್ಟಂತೆಸತ್ವಗುಣವುಶ್ರೇಷ್ಠವೆಂದುಬಿಂಬಿಸಲ್ಪಟ್ಟಿದೆ.ವಾಸ್ತವದಲ್ಲಿಸತ್ವಗುಣವೂ ಶ್ರೇಷ್ಠವಾದುದಲ್ಲ. ಯಾಕೆಂದರೆ ಅಲ್ಲಿ 'ನಾನು ಸಾತ್ವಿಕ' ಎಂಬ ಅಹಂ ಉಂಟಾಗುವ ಸಾಧ್ಯತೆ ಇದೆ. ತಾನು ಇತರರಿಗಿಂತ ಶ್ರೇಷ್ಠ ಎಂಬ ಪ್ರಲೋಭನೆಗೊಳಗಾಗುವ ಸಾಧ್ಯತೆ ಇದೆ. ಅಂತೆಯೆ ಜ್ಞಾನಿಗಳು, ತ್ರಿಗುಣಾತೀತರಾಗುವ ಹಂಬಲಿಗರಾಗಿರುತ್ತಾರೆ. ಆದ್ದರಿಂದ ನಾವು ತ್ರಿಗುಣಾತೀತರಾಗುವ ಸಾಧಕರಾಗಬೇಕು. 'ಆವ ಹಾವಾದರೇನು ವಿಷವೊಂದೆ' ಎಂದು ಬಸವಣ್ಣನವರು ಸಾರಿರುವುದನ್ನು ನಾವು ಗಮನಿಸಬೇಕು ಎನ್ನು ತ್ತಾರೆ.

ಬುದ್ಧನೆಂಬ ಜ್ಞಾನಿ, ಅಂಗುಲೀಮಾಲಾ ಎಂಬ ಅಜ್ಞಾನಿ ಇಬ್ಬರೂ

ನಮ್ಮೊಳಗಿದ್ದಾರೆ. ಅಂಗುಲಿ ಮಾಲಾ ಬುದ್ಧನಿಗೆ ಶರಣಾಗಿ ಜ್ಞಾನ ಪ್ರಬುದ್ಧನಾದಂತೆ, ನಾವು ತನುವಿನಲ್ಲಿ ತನ್ಮಯವಾಗಿರುವ ಅರುವೆಂಬ ಗುರುವಿಗೆ ಶರಣಾಗಿ ಗುರುಲಿಂಗ ದಲ್ಲಿ ಸಮರಸಗೊಳ್ಳಬೇಕು, ಇದುವೇ –'ಲಿಂಗಾಂಗ ಸಾಮರಸ್ಯ'ಎಂದು ಹರ್ಷ ಚಿತ್ತ ರಾಗಿ ನುಡಿಯುತ್ತಾರೆ.

'ತಿಳಿಯೆ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿದೆ
ನೆಲೆಗೆ ಪಂಚಮಶೃತಿಯ ನೊರೆವೆನು ಕೃಷ್ಣ ಮೆಚ್ಚಲಿಕೆ!'

ಎಂದು ಮಹಾಕವಿ ಕುಮಾರವ್ಯಾಸ ತನ್ನ''ಕರ್ಣಾಟ ಭಾರತ ಕಥಾ ಮಂಜರಿ''ಯಲ್ಲಿ ಅಭಿಮಾನದಿಂದ, ಕೃಷ್ಣ ಭಕ್ತಿಯ ನಮ್ರತೆಯಿಂದ ಹೇಳಿಕೊಂಡಂತೆ ನಾನು 'ಬಸವಗೀತೆ'ಯ ಕುರಿತು ಬಸವ ದರ್ಶನದ ವಿನಮ್ರತೆಯಿಂದ ಷಟ್ಪದಿ ಯೊಂದರಲ್ಲಿ ಹೀಗೆ ಹಾಡಿಕೊಂಡಿದ್ದೇನೆ.

ಬಸವ ಗೀತೆಯು ಭವಕೆ ತಾರಕ
ವಿಷಯ ಬದುಕಿನ ಕ್ಲೇಶ ನಾಶಕ
ಲೇಸು ಬಯಸುವ ಸಕಲ ಜೀವರ ದಿವ್ಯದರ್ಶನವು
ಬಸವ ಬೋಧೆಯ ಶರಣ ಮಾರ್ಗವು
ಅಸಮ ಜ್ಞಾನದ ಗಮ್ಯ ತೇಜವು
ವಸುಧೆಯೊಳಗಣ ಸ್ವರ್ಗ ಸುಖವದು ಮನುಜ ಸಂಕುಲಕೆ

ಶರಣ ಬಸವಾನಂದ ಶ್ರೀ ಬಸವರಾಜ ಸ್ವಾಮಿಗಳು ರಚಿಸಿದ ಗ್ರಂಥಗಳ ವಿವರ ಹೀಗಿದೆ.

ಬೆಳಕಿನ ಬಳ್ಳಿ, ಬಯಲ ಬೀಜಗಳು, ರೂಹಿಲ್ಲದ ಚೆಲುವೆ, ಜ್ಞಾನ ಭಂಡಾರಿ ಬಸವಣ್ಣ, ಅಂಬಿಗರ ಚೌಡಯ್ಯನವರ ವಚನಾನುಭವ, ಹಡಪದ ಅಪ್ಪಣ್ಣಗಳ ವಚನಾನುಭಾವ, ಸಿದ್ಧರಾಮ ಶಿವಯೋಗಿಗಳ ವಚನಾನುಭಾವ ಭಾಗ-1, ಭಾಗ-2, ಅರಿವೆ ಗುರು, ಅರಿವೆ ಗುರು (ಇಂಗ್ಲಿಷ್ ಅನುವಾದ), ಬಸವಗೀತೆ. ಇವೆಲ್ಲವೂ ಇವರ ಸ್ವತಂತ್ರ ಕೃತಿಗಳು.

ಒಬ್ಬ ವ್ಯಕ್ತಿ ಶರಣರ ವಚನಗಳನ್ನಾಧರಿಸಿ ಇಷ್ಟೊಂದು ವಿಶ್ಲೇಷಣಾತ್ಮಕ ಬೃಹತ್ ಗ್ರಂಥಗಳನ್ನು ರಚಿಸಿ, ಸಾರಸ್ವತ ಲೋಕಕ್ಕರ್ಪಿಸಿರುವುದು ವಿರಳಾತಿ ವಿರಳ ಸಂಗತಿ. ಅದರಲ್ಲೂ 'ಅರಿವೇ ಗುರು'ಮತ್ತು 'ಬಸವಗೀತೆ'ಗಳು ಶರಣರ ಅನುಭವ ಮಂಟಪದ ರೀತಿಯ ಸಂವಾದ ರೂಪದಲ್ಲಿರುವ ಅಪರೂಪದ ಗ್ರಂಥಗಳು. ಪರಮ ಜ್ಞಾನ ಮಾರ್ಗದ ಅಪರೋಕ್ಷ ನಿಲುವನ್ನು ಸಾದರಪಡಿಸುವ ಸತ್ಸಂಗ-ಸಂಜೀವಿನಿ ಶಕ್ತಿಯ ದರ್ಶನ ಮಾಡಿಸಬಲ್ಲ ಸಾರವತ್ತಾದ ಹೊತ್ತಿಗೆಗಳು.

'ಅರಿವೆ-ಗುರು' ಎಂಬುದು ರಾಯಚೂರು ಆಕಾಶವಾಣಿ ಕೇಂದ್ರದ

ನಿರ್ದೇಶಕರಾಗಿದ್ದ- ಡಾ.ಶರಭೇಂದ್ರ ಸ್ವಾಮಿಯವರ ನಿರ್ದೇಶನದಲ್ಲಿ ಶ್ರವ್ಯ ಸಂವಾದ ರೂಪಕವಾಗಿ 45 ಅವತರಣಿಕೆಗಳಲ್ಲಿ ಪ್ರಸಾರಗೊಂಡು ಜ್ಞಾನಾನುಭಾವಾಸಕ್ತ ಶ್ರೋತೃಗಳನ್ನು ಸೂಜಿಗಲ್ಲಿನಂತೆ ಸೆಳೆದ ಸಮರ್ಥ ಸಂವಾದಗಳು.

ನಮ್ಮ ನಾಡಿನ ಹಲವಾರು ವಿಶ್ವವಿದ್ಯಾಲಯಗಳಲ್ಲಿ - ಬಸವಪೀಠ, ಕನಕ ಪೀಠ ಮುಂತಾದವುಗಳನ್ನು ಸ್ಥಾಪಿಸಿ, ತನ್ಮೂಲಕ ಆಯಾ ಕ್ಷೇತ್ರಗಳ ವಿಶೇಷ ಅಧ್ಯ ಯನ ಹಾಗೂ ಸಂಶೋಧನೆಗಳನ್ನು ಕೈಗೊಳ್ಳಲಾಗುತ್ತಿದೆ. ಇಂಥದೇ ಮಹತ್ತರ ಕಾರ್ಯವನ್ನು ನಮ್ಮ ಶರಣ ಬಸವಾನಂದ ಶ್ರೀ ಬಸವರಾಜ ಸ್ವಾಮಿಗಳು ಏಕಾಂಗಿ ಯಾಗಿ ಬಹುತೇಕ ಶರಣರ ವಚನಗಳ ನಿರ್ವಚನ ಗೈದು, ಉದ್ಗ್ರಂಥಗಳನ್ನು ಪ್ರಕಟಿಸಿ, ಅರುವಿನ ಆಡುಂಬೊಲದ ಪರಮಾನಂದ ತುಂದಿಲರಾಗಿದ್ದಾರೆ. ವಿಶ್ವವಿದ್ಯಾಲಯಗಳು ಮಾಡಬಹುದಾದ ಮಹತ್ತರ ಸೇವೆಗೈದು ಕೃತಾರ್ಥರಾಗಿ ದ್ದಾರೆ. ಇವರ ಒಂದೊಂದು ಗ್ರಂಥಕ್ಕೂ ಸಂಶೋಧನಾತ್ಮಕ P.hd. ಪದವಿ ಪಡೆಯುವ ಸಾಮರ್ಥ್ಯವಿದೆ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಪರಮ ಪೂಜ್ಯ, ನಿರಾಭಾರಿ ಸುದ್ಗುರು ಡಬ್ಬೇರು ಮಡುವಿನ ಶ್ರೀ ವಿದ್ಯಾನಂದ ಶರಣರಿಂದ ರಚಿತವಾದ ಮಾನವನ ದಿವ್ಯತೆಗೆ ಸಾಕ್ಷಿಯಾಗಿ ನಿಲ್ಲಬಲ್ಲಂಥ ಹಲವು ಸದ್ಗ್ರಂಥಗಳನ್ನು ಇವರು ಸಂಪಾದಿಸಿ ಲೋಕಾರ್ಪಣೆಗೈದು ಗುರುಭಕ್ತಿಗೆ ಹಣೆಮಣಿಹ ಸಲ್ಲಿಸಿದ್ದಾರೆ. ಅವುಗಳೆಂದರೆ :

ತೆರಹಿಲ್ಲದಭವ ನುಡಿಗೆಡೆಗೊಡನು, ಗಗನ ಸಿದ್ಧಾಂತ, ಗುರು ಕನ್ಯೆ, ಅರಿತ ಕಿರಣ-ಕಲ್ಪಿತವೃಕ್ಷ-ಕಲ್ಪಿತ ಕೃಪೆ, ಉತ್ತರ ಸಿದ್ದಾಂತ, ನಿಜ ಸುಖಿ, ಅಂತರಾತ್ಮ ಬೋಧೆ, ಕರುಣಾಜಲ, ಸ್ವರೂಪ ಸಿದ್ಧಿ.

ಪೂಜ್ಯ ಸದ್ಗುರು ವಿದ್ಯಾನಂದರ ಬಗ್ಗೆ ಬರೆಯಲು ನನಗೆ ಶಕ್ತಿ ಸಾಲದು. ಅವರು ಅರುವಿನ ಮಹಾಮೇರು. ಆತ್ಮಜ್ಞಾನದ ಖನಿ. ಅವರ ನಡೆ ಪರುಷ, ನುಡಿ-ನವನಿಧಿ; ಪ್ರೀತಿ-ತವರಾಜದ ನೊರೆ-ತೊರೆ. ಸರ್ವರಲ್ಲೂ ಅರುವೆಂಬ ಗುರುದೇವನಿದ್ದಾನೆ ಎಂದು ಸಾರಿದ ಪುಣ್ಯಪುರುಷ. ಇವರು ರಾಯಚೂರು ಜಿಲ್ಲೆಯ ಮಸ್ಕಿ ಹತ್ತಿರದ ಡಬ್ಬೇರುಮಡು ಎಂಬ ಕುಗ್ರಾಮವನ್ನು ಪುಣ್ಯ ಕ್ಷೇತ್ರವನ್ನಾಗಿಸಿದ ಮಹಾನುಭಾವರು. ಇಂಥ ಗುರುವಿನ ಕರುಣೆಯ ಕಂದ, ಶಿಷ್ಯ ಶಿಸು-ನಮ್ಮ ಬಸವಾನಂದ ಶ್ರೀ ಬಸವರಾಜ ಸ್ವಾಮಿ. ಇವರ ಇನ್ನೊಬ್ಬ ಕರಸಂಜಾತ ಕಣ್ಮಣಿ, ಶಿಷ್ಯ ಬೆನಕನಹಳ್ಳಿ ಮಹಾಬೋಧಾಲಯದ ಪೂಜ್ಯ ದೇವಾನಂದ ಶರಣರು. ಇವರಿಬ್ಬರು "ನನ್ನ ಎರಡು ಕಣ್ಣುಗಳಿದ್ದಂತೆ" ಎಂದು ಗುರುವಿ ನಿಂದ ಕರೆಯಿಸಿಕೊಂಡವರು. ಬೆನಕನಹಳ್ಳಿ , ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಪುಟ್ಟ ಗ್ರಾಮ. ಅಲ್ಲಿ ಸದ್ಗುರು ವಿದ್ಯಾನಂದರ ಕರ್ತೃ ಗದ್ದುಗೆಯಿದೆ.

ಈ ಮೂವರು ತನುವಿನೊಳಗಿರುವ ಗುರು, ಲಿಂಗ, ಜಂಗಮದ ತ್ರಿಕೂಟ ಸ್ವರೂಪರು. ಸಕಲ ತನುಗಳಲ್ಲಿರುವ ಗುರುವನ್ನು ಗುರುತಿಸಿ ಆನಂದಿಸಬಲ್ಲವರು.

ಮನವೇ ಶಿಷ್ಯ ಅರಿವೇ ಗುರು. ಮನವು ಅರಿವಿನ ಸಂಗಮಾಡಿ ಅರಿವೆ ತಾನಾದಾಗ ಶಿಷ್ಯ ಎಂಬ ಭಾವ ನಷ್ಟವಾಗಿ ಮನ ಘನವಾಗುವುದು. ಅಲ್ಲಿ ಗುರುವಿಲ್ಲ, ಶಿಷ್ಯನಿಲ್ಲ. ಎಲ್ಲವೂ ಸ್ವಯಂಭೂಯಾತ್ ಎಂಬುದಕ್ಕೆ ಸಾಕ್ಷಿಗಳಾದವರು. ಭಗವದ್ಗೀತೆಯಲ್ಲಿ ಅರ್ಜುನನು ರಣರಂಗದಲ್ಲಿ ಯುದ್ಧ ಪ್ರಾರಂಭಗೊಂಡಾದ ಮೇಲೆ ವಿಷಾದಗೊಂಡ. ಯುದ್ಧ ಮಾಡಲಾರೆನೆಂದಾಗ ಅವನ ವಿಷಾದ ವಿಷಮ ಸ್ಥಿತಿಯನ್ನು ಹೋಗಲಾಡಿಸಲು ಶ್ರೀ ಕೃಷ್ಣ ತನ್ನ ವಿರಾಟ ಸ್ವರೂಪ ದರ್ಶನ ಮಾಡಿಸಿ ಎಚ್ಚರಿಸಿದಂತೆ ; ಬಸವಣ್ಣನವರು ಪ್ರತಿ ನಿತ್ಯ ಸತ್ಸಂಗಕ್ಕಾಗಿ ಆಗಮಿಸಿದ ಶರಣರೆಲ್ಲರನ್ನು ವಿರಾಟ ಸ್ವರೂಪಿಯನ್ನಾಗಿ ನೋಡಿದರು. ಮಾತ್ರವಲ್ಲ ಪ್ರತಿಯೊಬ್ಬರೂ ವಿರಾಟ ಸ್ವರೂಪಿಗಳೇ ಎಂಬುದನ್ನು ಅವರವರಿಗೆ ದರ್ಶನ ಮಾಡಿಸಿದವರು ಎಂಬುದನ್ನು ಸೊಗಸಾಗಿ ನಿರೂಪಿಸುವ ಮಹಾನ್ ವಿರಾಟ್ ಸ್ವರೂಪಿಗಳು. ಈ ಮೂವರೂ ನನ್ನ ಅಜ್ಞಾನವನ್ನು ಮುರಿದು ಜ್ಞಾನದ ಕಟ್ಟು ಕಟ್ಟಿದವರು. ಸಾರಾಯದ ಮಾರ್ಗ ತೋರಿದವರು. ನನ್ನ ಪರಮಾರಾಧ್ಯ ಸದ್ಗುರು ಅವಧೂತೆ ಹನುಮಂತಮ್ಮನನ್ನು ನನ್ನಂತರಂಗದ ಕದವ ತೆರೆದು ತೋರಿದವರು ಎಂದು ಹೇಳಿಕೊಂಡರೆ ನನಗೆ ಸಮಾಧಾನ.

ನಾನು ಆಗಾಗ ಅಲ್ಲಲ್ಲಿ – ನನ್ನ ಉಪನ್ಯಾಸ, ವಚನ –ಪ್ರವಚನ ಮಂಡನೆಯ ಸಂದರ್ಭದಲ್ಲಿ – ''ಡಬ್ಬೇರು ಮಡುವಿನ ವಿಚಾರಧಾರೆ'' ಎಂದು ಪ್ರತಿಪಾದಿಸುತ್ತಾ ಬಂದಿದ್ದೇನೆ. ಈ ವಿಚಾರಧಾರೆ ಬೇರೇನೂ ಅಲ್ಲ–ಶರಣ ವಿಚಾರಧಾರೆ. ಅರ್ಥಾತ್ ಬಸವ ವಿಚಾರಧಾರೆ ಎಂಬುದನ್ನು ಬಸವಾನಂದ ಬಸವರಾಜ ಸ್ವಾಮಿಯವರು ತಮ್ಮ ಬಸವಗೀತೆಯಲ್ಲಿ ಸಾದ್ಯಂತ ಸಂವಾದಿಸಿದ್ದಾರೆ. ಬಸವಗೀತೆಯ ಮೂಲ ಆಶಯ–ನಾವೆಲ್ಲ 'ತನು – ಮನ– ಘನ'ಗಳ ತ್ರಿಕೂಟ. ಅವಿಸ್ಮರಣೀಯ 'ಮಹಾಕೂಟ'. ಈ ತ್ರಿಕೂಟಸ್ಥ ಸ್ಥಿತನೇ ಮಹಾಕೂಟೇಶ್ವರ. ಮಾನವರಾದ ನಾವೆಲ್ಲರೂ ಮಹಾಕೂಟೇಶ್ವರರು. ಇಲ್ಲಿ ಘನವೆಂಬುದೇ ಅರಿವು. ಆ ಅರಿವೇ ಗುರು, ಅವನು 'ಅಭವ'. ಮರೆವು ಎಂಬ ಮನವೇ ಶಿಷ್ಯ; ಇವನು 'ಭವ'. ಈ ಮರೆವೆಂಬ ಮನದ ಹಿಡಿತಕ್ಕೊಳಗಾಗಿ ಅರಿವೆಂಬ ಗುರುವನ್ನು ಮರೆತರೆ ನಾವು 'ಭವಿ'ಗಳು. ಅಂತೆಯೇ ಪೂಜ್ಯ ವಿದ್ಯಾನಂದರು – 'ತೆರಹಿಲ್ಲದಭವ ನುಡಿಗೆಡೆಗೊಡನು' ಎಂದು ಗಟ್ಟಿಯಾಗಿ ಹೇಳಿದ್ದಾರೆ. ದುರ್ದೈವವೆಂದರೆ 'ಮನ' ಎಂಬ ಶಿಷ್ಯನಿಗೆ 'ಅರಿವು' ಎಂಬ ಗುರುವಿನ ಪರಿಚಯವಾಗದಿದ್ದುದು. ಆದ್ದರಿಂದ ಮನ ತನುವನ್ನೇ ತನ್ನವಾರಿಧಿಯ ಆಡುಂಬೊಲವನ್ನಾಗಿಸಿಕೊಂಡು ಆಟವಾಡ ತೊಡಗಿದೆ. ಮನದ ಈ ಮರ್ಕಟ ಕ್ರೀಡೆ ನಿಲ್ಲಬೇಕಾದರೆ 'ಅರಿವು' ಎಂಬ ಗುರುವಿನ ಪರಿಚಯವಾಗಿ ನಾವದಕ್ಕೆ ಶರಣಾಗಬೇಕು.

ಕಬ್ಬಿನ ದಂಟಿನ ಮೇಲೆ ಜೇನು ಗೂಡು ಕಟ್ಟಿದೆ. ಕಬ್ಬು ಮತ್ತು ಜೇನಿನೊಳಗಿರುವುದು ಸಿಹಿ ರಸವೇ, ಆದರೂ ಅವರೆಡರ ಮಧ್ಯೆ ಇರುವ ಕಬ್ಬಿನ ಸಿಪ್ಪೆ, ಆ

ಎರಡು ಸಿಹಿರಸಗಳು ಸಮರಸಗೊಳ್ಳದಂತೆ ಅಡ್ಡಿಯಾಗಿದೆ. ಘನ-ಮನಗಳೊಂದಾಗದ ಆತಂಕ ಸೃಷ್ಠಿಯಾಗಿದೆ.

ನಾವು ಈ ಆತಂಕವನ್ನು ನಿವಾರಿಸಿಕೊಳ್ಳಬೇಕಾದರೆ ಬಸವ - ಸತ್ಸಂಗಿಗಳಾಗಬೇಕು. ಕಬ್ಬಿನ ದಂಟಿನ ಮೇಲಿನ ಜೇನನ್ನು ನವಿರಾಗಿ ಬಿಡಿಸಿಕೊಳ್ಳಬೇಕು. ಕಬ್ಬಿನ ಸಿಪ್ಪೆಯ ಜಜ್ಜಿ ರಸ ತೆಗೆಯಬೇಕು. ಅವೆರಡನ್ನೂ ತನುವಿನೊಳಗೆ ಸಮರಸಗೊಳಿಸಬೇಕು. ನಿತ್ಯವೂ ಅಂಥ ತನಿ ರಸ ಪಾನಮಾಡುವ ಸೌಭಾಗ್ಯವಂತರು ನಾವಾಗಬೇಕು. ಇದು ಶರಣ-ಸಂತ-ಮಹಂತರ ಜ್ಞಾನ ರಸಾನಂದದ ಸುಮಧುರ ಸವಿ. ಇದೇ ಸಮುದ್ರ ಮಥನಾಂತ್ಯದಲ್ಲಿ ಜನಿಸಿದ ಅಮೃತರಸ! ಇಂಥ ರಸಪಾನ ಸವಿಯಲು ನಾವೆಲ್ಲ ಸನ್ನದ್ಧರಾಗಬೇಕು. ಇದಕ್ಕಾಗಿ ನಾವೆಲ್ಲ ಸ್ವ-ಸ್ವರೂಪ ಜ್ಞಾನಮಾರ್ಗದ ಸ್ವ- ಸತ್ಸಂಗಿಗಳಾಗಬೇಕು. ನಿತ್ಯ ಸತ್ಸಂಗ ಸಂಜೀವಿನಿ ಕೂಟಸ್ಥರಾಗಬೇಕು. ಆಗ ನಮಗೆ ಸುಲಭವಾಗಿ ಸಮರಸಗೊಳ್ಳುವ 'ಹಾಲು-ಜೇನಿನ' ಸುಮಧುರ ಸವಿಯನ್ನು ನಿರಾಳವಾಗಿ ಸವಿಯುವ ಸೌಭಾಗ್ಯ ಪ್ರಾಪ್ತವಾಗುತ್ತದೆ. ಇದೇ ವಚನ ತತ್ವ, ಇದೇ ಶರಣ ತತ್ವ, ಇದೇ ಭಗವದ್ಗೀತೆ, ಇದೇ ಶಿವ ಗೀತೆ. ಇದೇ 'ಸತ್ಯಂ-ಶಿವಂ-ಸುಂದರಂ' ಎಂಬ ಸತ್ಯ-ಶಿವ-ಸಹಜೋಕ್ತಿಗೆ ಸಾಕ್ಷಿಯಾಗಿ ನಿಲ್ಲಬಲ್ಲ ನಮ್ಮ ಬಸವಾನಂದ ಬಸವರಾಜ ಸ್ವಾಮಿಯವರ-ಬಸವ ಗೀತೆ.

ದಿನಾಂಕ:11-11-2024
ಸ್ಥಳ: ರಾಯಚೂರು

ಬಿ.ಜಿ.ಹುಲಿ
ವಿಶ್ರಾಂತ ಉಪನ್ಯಾಸಕರು
ರಾಯಚೂರು

..........ಓದುವ ಮುನ್ನ

ದೇಶ ವಿದೇಶಗಳಲ್ಲಿ ಆಗಿ ಹೋದ ಜ್ಞಾನಿಗಳು ಹಾಗೂ ಪ್ರಸ್ತುತ ಇರುವ ಜ್ಞಾನಿಗಳು ಸುಮ್ಮನೆ ಕುಳಿತಿಲ್ಲ. ಬ್ರಹ್ಮಾಂಡದಲ್ಲಿರುವ ಸಕಲ ಮಾನವರು ಜ್ಞಾನದ ಪರಮಸುಖ ಉಣ್ಣಲಿ ಎಂದು ತಾವು ಅನುಭವಿಸುತ್ತಿರುವ ಜ್ಞಾನದ ಪರಮಸುಖವನ್ನು ಬರಹ ಹಾಗೂ ಮಾತಿನ ಮೂಲಕ, ಸಂಜ್ಞೆಗಳ ಮೂಲಕ, ಸೂತ್ರಗಳ ಮೂಲಕ ಹೊರಹಾಕುತ್ತಲೇ ಬಂದಿದ್ದಾರೆ.

ಜ್ಞಾನ ಎನ್ನುವುದು ಮತ್ತೊಬ್ಬರಿಂದ ಪಡೆಯುವುದು ಅಲ್ಲ. ಜ್ಞಾನ ಪ್ರತಿಯೊಂದು ದೇಹದಲ್ಲಿ ಸಂಗಮವಾಗಿದೆ. ಇದನ್ನು ಅರಿವು ಎಂದು ಕರೆಯಲಾಗಿದೆ. ಈ ಅರಿವನ್ನೇ ಗುರು ಎಂದು, ಮಹಾದೇವ ಎಂದು, ಸದಾಶಿವ ಎಂದು, ಸಾಕ್ಷಾತ್ ಪರಬ್ರಹ್ಮ ಎಂದು ಕರೆಯಲಾಗಿದೆ.

ದೇಹದಲ್ಲಿಯೇ ಸಂಗಮವಾದ ಜ್ಞಾನವನ್ನು ದೇಹದ ಮೂಲಕ, ಮನಸ್ಸಿನ ಮೂಲಕ ಅನುಭವಕ್ಕೆ ತಂದುಕೊಂಡು ಜ್ಞಾನ ಸಾಕ್ಷಾತಾರ ಮಾಡಿಕೊಳ್ಳಬಹುದಾಗಿದೆ. ಮನ ದೇಹದಲ್ಲಿಯೇ ಆಶ್ರಯ ಪಡೆದು, ಆಶ್ರಯ ಪಡೆದ ದೇಹವನ್ನೇ ಅಜ್ಞಾನದ ಹಾದಿಗೆ ತಳ್ಳುತ್ತದೆ. ಮನವನ್ನು ಮನದ ಆದೇಶವನ್ನು ಪಾಲಿಸುತ್ತ ತನ್ನ ಆಯುಷ್ಯವನ್ನು ವ್ಯರ್ಥವಾಗಿ ಕಳೆದುಕೊಳ್ಳುವ ಅಜ್ಞಾನಿ ದೇಹವನ್ನು ನೋಡಿ ದೇಹದಲ್ಲಿಯೇ ಸಂಗಮವಾದ ಜ್ಞಾನೇಶ್ವರ ಗಹಗಹಿಸಿ ನಗುತ್ತಾನೆ.

ದೇಹ, ಮನ ಕೊಡುವ ಸುಳ್ಳು ಸುಖಕ್ಕೆ ಮರುಳಾಗಿದೆ. ಮನ ದೇಹದ ಮೂಲಕ ಅನುಭವಿಸುವ ಅಜ್ಞಾನದ ಸುಖಕ್ಕೆ ಮರುಳಾಗಿದೆ. ದೇಹ ಮತ್ತು ಮನದ ಮರಳುತನದ ಆಟವನ್ನು ಅಲ್ಲಗಳೆಯುತ್ತಾ ಜ್ಞಾನದೇವ ಮರುಳಶಂಕರನಾಗಿ ದೇಹದಲ್ಲಿಯೇ ಮಗ್ನನಾಗಿದ್ದಾನೆ.

ಜಗತ್ತಿನಲ್ಲಿರುವ ಸಕಲ ದೇಹಗಳೆಲ್ಲ ಒಂದೇ ಎಂದು ದೇಹದಲ್ಲಿಯೇ ಸಂಗಮವಾದ ಅರಿವಿಗೆ ಮಾತ್ರ ಗೊತ್ತಿದೆ. ದೇಹವನ್ನು ಆವರಿಸಿದ ಮನ ದೇಹಕ್ಕೆ ರಾಜನ ವೇಷ ಹಾಕಿ ರಾಜನಾಗಿದೆ. ಪ್ರಧಾನಿ, ಸೇನಾಪತಿ, ಕಾಲಾಳು ಪ್ರಜೆಯ ವೇಷ ಹಾಕಿ ಆಯಾ ವೇಷದಲ್ಲಿದ್ದ ದೇಹ, ತಾನು ದೇಹವೆಂಬುದನ್ನೇ ಮರೆತುಹೋಗಿದೆ. ಜಾತಿ ಮತ ಪಂಥ ಧರ್ಮ ಹೆಣ್ಣು ಗಂಡು ಶ್ರೀಮಂತ ಬಡವ ಭಿಕ್ಷುಕ ಕಳ್ಳ ಸುಳ್ಳ ಭ್ರಷ್ಟ ಲಂಚಕೋರ ರಾಷ್ಟ್ರಪತಿ ಶಾಸಕ ಸಚಿವ ಮುಂತಾದ ವೇಷಗಳ ಮೂಲಕ ದೇಹ ತನ್ನನ್ನು ತಾನೇ ಸೀಳಿಕೊಂಡಿದೆ.

ದೇಹ ಮತ್ತು ಮನ ದೇಹದಲ್ಲಿಯೇ ಸಂಗಮವಾದ ಜ್ಞಾನದ ಪಾಠ ಕೇಳಿ ಜ್ಞಾನಿಯಾಗದೆ, ಜ್ಞಾನಿ ಎಂದು ತನ್ನನ್ನು ತಾನು ಕರೆದುಕೊಳ್ಳದೆ ಅಜ್ಞಾನದ ಯುದ್ಧದಲ್ಲಿ ಭಾಗಿಯಾಗಿ ತನ್ನನ್ನು ತಾನು ಮರೆತು ಹೋಗಿದೆ.

ದೇಹವನ್ನು ಆವರಿಸಿದ ಮನವೆಂಬ ಸಿದ್ಧಾರ್ಥ, ದೇಹದಲ್ಲಿಯೇ ಸಂಗಮವಾದ ಜ್ಞಾನದ ಮೂಲಕ ಆಲೋಚನೆ ಮಾಡಲು ತೊಡಗಿದ. ದೇಹಕ್ಕೆ ಹಾಕಿದ ರಾಜನ ವೇಷವನ್ನು ಕಿತ್ತೆಸೆದ. ದೇಹದಲ್ಲಿಯೆ ಸಂಗಮವಾದ ಜ್ಞಾನಕ್ಕೆ ಬುದ್ಧ ಎಂದು ನಾಮಕರಣ ಮಾಡಿದ. ಮನವೆಂಬ ಸಿದ್ಧಾರ್ಥ ಜ್ಞಾನವೆಂಬ ಬುದ್ಧನಲ್ಲಿ ಸಂಗಮವಾಗಿ ಸಂಬುದ್ಧನಾದ ! ಬುದ್ಧಂ ಶರಣಂ ಗಚ್ಛಾಮಿ ಎಂದು ಬುದ್ಧನಿಗೆ ಶರಣು ಹೋಗಿ, ಆ ಬುದ್ಧನೇ ತಾನಾದ ! ಹೀಗೆ ಜಗತ್ತಿನಲ್ಲಿರುವ ಸಕಲ ದೇಹಗಳೂ ಸಂಬುದ್ಧರಾಗಬಹುದು ಎಂದು ಸಾರಿದ.

ಬುದ್ಧನ ಪ್ರವಚನಗಳಿಗೆ ಮನ ದೇಹದೊಂದಿಗೆ ತಲೆದೂಗಿತು. ಸಾಕಷ್ಟು ದೇಹಗಳು ಬುದ್ಧನ ದೇಹವನ್ನು ಹಿಂಬಾಲಿಸಿದವು; ಆ ದೇಹಕ್ಕೆ ಅನುಯಾಯಿಗಳಾದವು. ಸಿದ್ಧಾರ್ಥ ಧರಿಸಿದ ವಸ್ತ್ರ, ಮನ ತನುವಿಗೆ ಧರಿಸಿ ಬುದ್ಧನ ವೇಷಧಾರಿಯಾಯಿತು.

ದೇಶ ವಿದೇಶಗಳಲ್ಲಿ ಬುದ್ಧನ ಮಾತು, ಬುದ್ಧನ ವೇಷದಿಂದ ದೇಹಗಳು ಕಂಗೊಳಿಸಿದವು. ಬುದ್ಧನ ಮಾತುಗಳಿಗೆ, ಬುದ್ಧ ಬರೆದ ಅರಿವಿನ ಗ್ರಂಥಗಳಿಗೆ, ಬುದ್ಧನ ತನುವಿಗೆ, ಬುದ್ಧನ ಮೂರ್ತಿಗೆ ಮನ ತನುವಿನೊಂದಿಗೆ ಭಕ್ತಿ ಮಾಡಿ, ತಾನು ಬೌದ್ಧ ಧರ್ಮದವನೆಂದು ಕರೆಯಿಸಿಕೊಂಡಿತು.

ಮನ ತನುವಿನಲ್ಲಿಯೇ ತನ್ಮಯವಾದ ಮಹಾಜ್ಞಾನಿಯೆಂಬ ಸಂಬುದ್ಧನಿಗೆ ಭಕ್ತಿ ಮಾಡಲಿಲ್ಲ. ಸ್ವತಃ ಸಂಬುದ್ಧನಾಗಲಿಲ್ಲ. ಬುದ್ಧನನ್ನು ಆರಾಧಿಸಿ ಬೌದ್ಧನಾಯಿತು! ಬುದ್ಧನೆಂದರೆ ತನುವಿನಲ್ಲಿಯೇ ತನ್ಮಯವಾದ ಅರಿವಿನ ಧರ್ಮಿ. ಈತ ತನುವಿನಲ್ಲಿಯೇ ತನ್ಮಯವಾದ ಅವ್ಯಕ್ತ ಮನಕ್ಕೆ ನಿರಂತರವಾಗಿ ಅರಿವಿನ ಪಾಠ ಮಾಡುತ್ತಾನೆ. ತನು ಮತ್ತು ಮನವನ್ನು ಹಗಲು ಇರುಳೆನ್ನದೆ ತನ್ನತ್ತ ಕೈಮಾಡಿ ಕರೆಯುತ್ತಾನೆ. ಈತನ ಕರೆಗೆ ಓಗೊಟ್ಟು ಈತನನ್ನು ಸಾಕ್ಷಾತ್ಕಾರ ಮಾಡಿಕೊಂಡ ತನುವೇ ಸಂಬುದ್ಧ ತನು. ಹೀಗೆ ಸಂಬುದ್ಧನಾದಾತ, ಸಕಲರೂ ಸಂಬುದ್ಧರಾಗಲಿ ಎನ್ನುವ ಸದುದ್ದೇಶದಿಂದ ಮಾತಿನ ಮೂಲಕ, ಕೃತಿಗಳ ಮೂಲಕ ದಾರಿ ಹೇಳಿಕೊಟ್ಟಿದ್ದಾರೆ. ಆದರೆ ಮನ ದಾರಿ ಹೇಳಿಕೊಟ್ಟ ತನುವನ್ನು, ಆತ ಬರೆದ ಕೃತಿಗಳನ್ನು ತನುವಿನ ಮೂಲಕ ಆರಾಧಿಸುತ್ತದೆ. ಆತನ ಮೂರ್ತಿಗಳನ್ನು ಕೆತ್ತಿ, ಭವ್ಯವಾದ ಆಲಯಗಳನ್ನು ನಿರ್ಮಾಣಮಾಡಿ, ಆತನಿಗೆ ಅನುಯಾಯಿ ಆಗುತ್ತದೆ. ಅರ್ಚನೆ ಪೂಜೆ ಉತ್ಸವಗಳನ್ನು ಮಾಡುತ್ತ, ತನುವಿನ ಮೂಲಕ ಅಜ್ಞಾನ ಮೆರೆಯುತ್ತದೆ. ಇದು ತನು ಮತ್ತು ಮನದ ದುರ್ದೈವವೇ ಸರಿ.

ಏಸುಕ್ರಿಸ್ತ, ಕೃಷ್ಣ, ಮಹ್ಮದ್ ಪೈಗಂಬರರು ಮಹಾಜ್ಞಾನಿಗಳು. ಅಂಗದಲ್ಲಿಯೇ ಸಂಗಮವಾದ ಮಹಾಜ್ಞಾನಕ್ಕೆ ಏಸುಕ್ರಿಸ್ತ (ದೇವರು) ಗಾಡ್ ಎಂದು ಕರೆದರೆ; ಮಹ್ಮದ್ ಪೈಗಂಬರರು ಅಲ್ಲಾ (ದೇವರು)ಎಂದು ಕರೆದರು. ಕೃಷ್ಣ ತಾನು ವಿರಾಟ ಸ್ವರೂಪಿ ಎಂದು, ಅರ್ಜುನನಿಗೆ ತೋರಿದ. ದೇಹದಲ್ಲಿಯೇ ಇದ್ದ ಅರಿವಿನ ದೇವರು ದೇಹ

ಮತ್ತು ಮನಕ್ಕೆ ನಿರಂತರವಾಗಿ ಬೋಧಿಸುತ್ತಾನೆ. ಈತ ನಿರಾಕಾರ, ವಿರಾಟಸ್ವರೂಪಿ, ದೇವರಿದ್ದ ದೇಹ ಸಾಕಾರ, ದೇಹವನ್ನು ಆವರಿಸಿದ ಮನ ನಿರಾಕಾರ. ದೇವರಿದ್ದ ದೇಹವನ್ನು ಮನ ಸೈತಾನನಾಗಿ ಕಾಡುತ್ತದೆ.

ದೇಹದಲ್ಲಿಯೇ ಇದ್ದ ದೇವರನ್ನು ಜ್ಞಾನಿಗಳು ದೇಹ ಮತ್ತು ಮನದ ಮೂಲಕ ದರ್ಶನ ಮಾಡಿಕೊಂಡರು. ಭೂಮಿಯ ಮೇಲೆ ವಾಸಮಾಡುತ್ತಿರುವ ಸಕಲ ದೇಹಗಳು ದೇಹದಲ್ಲಿಯೇ ಇದ್ದ, ಜ್ಞಾನದೇವರನ್ನು ದರ್ಶನ ಮಾಡಿಕೊಳ್ಳುವ ಸೂತ್ರಗಳನ್ನು ಖುರಾನ್ ಬೈಬಲ್ ಭಗವದ್ಗೀತೆಗಳ ಮೂಲಕ ದಾಖಲಿಸಿದರು.

ಜ್ಞಾನದರುಶನಕ್ಕಾಗಿ ದಾಖಲಿಸಿದ ಪುಸ್ತಕಗಳೇ, ಆಯಾ ದೇಹಗಳಿಗೆ ಧರ್ಮಗ್ರಂಥಗಳಾದವು! ಮನ ದೇಹದ ಮೂಲಕ ಪುಸ್ತಕ ಓದಿ, ದೇಹದಲ್ಲಿಯೇ ಇದ್ದ ಅರಿವಿನ ದೇವರನ್ನು ದೇಹ ಕಂಡುಕೊಳ್ಳಲಿಲ್ಲ. ಬದಲಾಗಿ ತನ್ನನ್ನು ತಾನು ಸೀಳಿಕೊಂಡು ಕ್ರೈಸ್ತನಾಯಿತು; ಮುಸಲ್ಮಾನನಾಯಿತು; ಹಿಂದೂ ಆಯಿತು. ಜಾತಿ ಮತ ಪಂಥಗಳು ದೇಹವನ್ನು ಆವರಿಸಿಕೊಂಡು, ದೇಹದೊಂದೊದಿಗೆ ಯುದ್ಧಕ್ಕೆ ಅಣಿಯಾದವು.

ಜ್ಞಾನಿಯೆ ತಾನಾಗಬೇಕಾದ ದೇಹದಲ್ಲಿ, ಹೆಣ್ಣು ಗಂಡು ಎಂಬ ಅಜ್ಞಾನ ಮನೆ ಮಾಡಿತು. ಸಂತಾನಕ್ಕಾಗಿ ಇದ್ದ ಕಾಮ; ತನ್ನ ಪೈಶಾಚಿಕ ಪ್ರವೃತ್ತಿಯನ್ನು ಬೀರಿ; ದೇಹ ದೇಹವನ್ನೇ ಹರಿದು ತಿನ್ನಲು ಅಣಿಯಾಯಿತು. ಭೂಮಿಯ ಮೇಲೆ ವಾಸ ಮಾಡಿದ ದೇಹ ಭೂಮಿಗಾಗಿ, ಭೂಮಿಯೊಳಗಿದ್ದ ಹೇಮಕ್ಕಾಗಿ, ಕಾಮಕ್ಕಾಗಿ ದೇಹ ದೇಹವನ್ನೆ ಕೊಂದು ರಾಜನಾಯಿತು. ದೇಹವೇ ರಾಜನಿಗೆ ಪ್ರಧಾನಿಯಾಯಿತು. ದೇಹವೇ ರಾಜನಿಗೆ ಸೇನಾದಿಪತಿಯಾಯಿತು. ದೇಹವೆ ಆ ರಾಜನಿಗೆ ಸೈನಿಕನಾಯಿತು. ಭೂಮಿ ಹೇಮ ಕಾಮಿನಿಯನ್ನು ಕದ್ದು ಪಡೆದ ದೇಹ ಕಳ್ಳನಾಯಿತು, ಅತ್ಯಾಚಾರಿಯಾಯಿತು. ದೇಹಕ್ಕೆ ಬೋಧೆ ಮಾಡುವ ದೇಹ ಗುರುವಾಯಿತು. ಬೋಧೆ ಪಡೆಯುವ ದೇಹ ಶಿಷ್ಯನಾಯಿತು. ದೇಹದಲ್ಲಿಯೇ ಇದ್ದ ಅರಿವಿನ ದೇವರು, ದೇಹ ಮತ್ತು ಮನದ ಹುಚ್ಚಾಟವನ್ನು ನೋಡಿ, ಗಹಗಹಿಸಿ ನಗುವುದನ್ನು ದೇಹ ಮತ್ತು ಮನ ಕೇಳದಂತಾಯಿತು.

ಯಾರು ಯಾರಿಗೆ ಬೋಧಿಸಬೇಕು? ದೇಹ ದೇಹಕ್ಕೆ ಬೋಧಿಸಿದರೆ ದೇಹ ಮತ್ತು ಮನ ಕೇಳಲು ಸಾಧ್ಯವೇ? ದೇಹವನ್ನು ಆವರಿಸಿದ ಮನಕ್ಕೆ ಪಾಠ ನಿಲ್ಲುವುದಿಲ್ಲ; ಅರಿವಿಗೆ ಪಾಠದ ಅವಶ್ಯಕತೆಯೇ ಇಲ್ಲ.

ಮನವೆಂಬ ಸೈತಾನ ಅರಿವಿನ ದೇವರಿದ್ದ ದೇಹವನ್ನು ಹುಚ್ಚನನ್ನಾಗಿ ಮಾಡಿ, ದೇಹದಲ್ಲಿ ತನ್ನ ಸುಳ್ಳು ಸಾಮ್ರಾಜ್ಯವನ್ನೇ ಕಟ್ಟಿಕೊಂಡು ರಾಜ್ಯಭಾರ ಮಾಡುತ್ತಲಿದ್ದಾನೆ.

ಸರಕಾರದಿಂದ ರಚಿಸಲ್ಪಟ್ಟ ವಿಶ್ವ ವಿದ್ಯಾಲಯಗಳು, ಶಾಲಾ ಕಾಲೇಜುಗಳು ಮನದಿಂದಾಗಿ ದೇಹದಲ್ಲಿ ಜಿಡ್ಡುಗಟ್ಟಿದ ಅಜ್ಞಾನವನ್ನು ಕರಗಿಸಲರಿಯವು. ಏಕೆಂದರೆ

ಇವುಗಳ ಮೂಲಕ ಬೋಧಿಸುವವರು ಮನವುಳ್ಳವರಾಗಿದ್ದಾರೆ. ಮನವೆಂಬ ಅಜ್ಞಾನದ ಮೂಲಕ ಮನಕ್ಕೆ ಬೋಧಿಸುತ್ತಿದ್ದಾರೆ. ಮನವೇ ಬೋಧಕನ ಪಾತ್ರ ಧರಿಸಿದೆ. ಮನವೇ ವಿಧ್ಯಾರ್ಥಿಯಾಗಿ ಬಂದಿದೆ. ಹೆಚ್ಚೆಂದರೆ ಮನ ಪಂಡಿತನಾಗಿ ದೇಹಕ್ಕೆ ಪಂಡಿತನ ಪಾತ್ರ ಧರಿಸಬಹುದು; ಸ್ವತಃ ಜ್ಞಾನಿಯಾಗಲಾರದು. ಗುರುವರ್ಗದಿಂದಲೂ ದೇಹವನ್ನು ಸುಧಾರಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಮನ ದೇಹಕ್ಕೆ ವೇಷ ಹಾಕಿ ಗುರುವನ್ನಾಗಿಸಿದೆ. ವೇಷದ ಮೂಲಕ ದೇಹ ಬದುಕುವ ದಾರಿಯನ್ನು ಕಂಡುಕೊಂಡಿದೆ.

ಖುರಾನ್, ಬೈಬಲ್, ಭಗವದ್ಗೀತೆಗಳನ್ನು ಮನ ದೇಹದ ಮೂಲಕ ಉರು ಹೊಡೆದು, ದೇಹದಲ್ಲಿ ಸಂಗ್ರಹ ಮಾಡಿಕೊಂಡಿದೆ. ಭಗವದ್ಗೀತೆ, ಬೈಬಲ್, ಖುರಾನ್ ಮುಂತಾದ ಅರಿವಿನ ಗ್ರಂಥಗಳು ಮನ ಮತ್ತು ದೇಹಕ್ಕೆ ಬದುಕುವ ದಾರಿಗಳಾಗಿ ಮಾರ್ಪಟ್ಟಿವೆ. ದೇಹದಲ್ಲಿಯೇ ಸಂಗಮವಾದ ಅರಿವಿನ ದೇವರು ಮನ ಮತ್ತು ದೇಹಕ್ಕೆ ಬಳಕೆಯಾಗದೆ ದೇಹದಲ್ಲಿಯೇ ಉಳಿದಿದ್ದಾನೆ.

ಹಾಗಾದರೆ ಪುಸ್ತಕ ಓದುವ ಓದುಗರು ನಾವೇನು ಮಾಡಬೇಕೆಂದು ಕೇಳಬಹುದು. ಬರಹ ರೂಪದಲ್ಲಿ ಮೂಡಿದ ಬಸವಗೀತೆಯನ್ನು ದಯವಿಟ್ಟು ಓದಿ.

ಯುದ್ಧದ ಸಂದರ್ಭದಲ್ಲಿ ಅರ್ಜುನ ಕೇಳಿದ ಪ್ರಶ್ನೆಗೆ ಕ್ರಿಷ್ಣ ವಿರಾಟಸ್ವರೂಪಿಯಾಗಿ ಉತ್ತರ ಕೊಟ್ಟ.

ಬಸವಣ್ಣನವರು ಪ್ರತಿನಿತ್ಯ ಮಾಡುವ ಸತ್ಸಂಗದಲ್ಲಿ, ಸತ್ಸಂಗಕ್ಕಾಗಿ ಆಗಮಿಸಿದ ಶರಣರನ್ನೇ ವಿರಾಟಸ್ವರೂಪಿಯನ್ನಾಗಿ ನೋಡಿದರು ! ಅವರಲ್ಲಿರುವ ಮಹಾಜ್ಞಾನವೆಂಬ ವಿರಾಟಸ್ವರೂಪಿಯನ್ನು, ಅವರಿಗೇ ತೋರಿದರು. ಆ ವಿರಾಟ ಸ್ವರೂಪಕ್ಕೆ ತಾವು ಕಿರಿಯರಾಗಿ, "ಎನಗಿಂತ ಕಿರಿಯರಿಲ್ಲ" ಎಂದು ಹಣೆಮಣಿದು ಶರಣಾಗತರಾಗಿ ಶರಣು ಹೋದರು.

ಪ್ರತಿ ಅಂಗದಲ್ಲಿಯೂ ಸಂಗಮವಾದ, ಅರಿವಿನ ಲಿಂಗಕ್ಕೆ, ಅಂಗವನ್ನು ಆವರಿಸಿದ ಮನದಿಂದಲೇ, ಶರಣು ಹೋಗಿ ಶರಣನಾಗಬೇಕು. ಶರಣ ಸತಿಯಾಗಬೇಕು; ಲಿಂಗ ಪತಿಯಾಗಬೇಕು. ಅಂಗದಲ್ಲಿಯೇ ಸತಿ ಪತಿಗಳಿಬ್ಬರೂ ಸಂಗಮವಾಗಿ, ಅರಿವಿನ ಸಮರಸ ಜೀವನ ನಡೆಸಬೇಕು. ಇದೇ ಲಿಂಗಾಂಗ ಸಾಮರಸ್ಯ!

ತಮಗೆ ತಾವೇ ಸಮರಸ ಜೀವನ ಕಂಡುಕೊಳ್ಳಲು ಓದುಗ ಸಮುದಾಯಕ್ಕೆ "ಬಸವಗೀತೆ" ನೆರವಾಗಬಹುದು. ಈ ಹಿಂದೆ ಬಸವಣ್ಣನವರ 959 ವಚನಗಳನ್ನು ತೆಗೆದುಕೊಂಡು (ಹೆಚ್ಚಿನ ವಚನಗಳನ್ನು ಬಿಟ್ಟು) "ಜ್ಞಾನ ಭಂಡಾರಿ ಬಸವಣ್ಣ" ಪುಸ್ತಕ ಪ್ರಕಾಶಿಸಲಾಗಿತ್ತು . ಅದರಲ್ಲಿಯ 100 ವಚನಗಳನ್ನು ತೆಗೆದುಕೊಂಡು ಬಸವಣ್ಣ ನನ್ನ ಹೃದಯದಲ್ಲಿ ನುಡಿಸಿದಂತೆ ಸಂವಾದ ರೂಪದಲ್ಲಿ "ಬಸವಗೀತೆ" ಬರೆದಿರುವೆ. ಈ

ಪುಸ್ತಕ ಬರೆಯಲು ನನ್ನ ಹೃದಯದಲ್ಲಿ ಪ್ರೇರಣೆ ನೀಡಿದ ಡಬ್ಬೇರುಮಡು ಗ್ರಾಮದ ಸದ್ಗುರು ಶ್ರೀ ವಿದ್ಯಾನಂದ ಶರಣರನ್ನು ಸ್ಮರಿಸುವ ಮೂಲಕ ಬಸವಗೀತೆಯನ್ನು ಓದುಗ ಸಮುದಾಯಕ್ಕೆ ಅರ್ಪಿಸುವೆ. ಸದ್ಗುರುವಿನ ಕೃಪೆಯಿದ್ದರೆ ಬಸವಗೀತೆ 10 ಭಾಗಗಳಲ್ಲಿ ಹೊರ ಬರಲಿದೆ.

ಸಹೃದಯಿ ಆತ್ಮೀಯರೂ, ಅನುಭಾವಿಗಳೂ ಆದ ಶರಣ ಶ್ರೀ ಬಿ.ಜಿ.ಹುಲಿ ವಿಶ್ರಾಂತ ಉಪನ್ಯಾಸಕರು ಅವರು 'ಬಸವಗೀತೆ' ಗೆ ಬಿನ್ನಹ ಬರೆದು ಕೊಟ್ಟಿದ್ದಾರೆ. ಸಕಲ ತನುಗಳಲ್ಲಿ ಅರಿವೆಂಬ ಗುರುದೇವನಾಗಿ ಬಚ್ಚಿಟ್ಟುಕೊಂಡ ಬಸವಣ್ಣನೆ ಹೊರಗೆ ಬಂದು, ಈ ನಾಡನ್ನು ಉದ್ದರಿಸು ತಂದೆ ಎಂದು ಬಿನ್ನಹ ಮಾಡಿಕೊಂಡಂತಿದೆ; ಪೂಜ್ಯ ಶರಣರ ಬರಹ! ಅವರಿಗೆ ಶರಣು ಶರಣಾರ್ಥಿ.

ಅರಿವಿನ ಹಿರಿಯನನ್ನು ಹೊತ್ತುಕೊಂಡು ಓದುವ ಸಕಲ ಹಿರಿಯರಿಗೂ ಶರಣು ಶರಣಾರ್ಥಿ.

ಸ್ಥಳ: ರಾಯಚೂರು
ದಿನಾಂಕ: 02-09-2024

ಬಸವರಾಜ ಸ್ವಾಮಿ
ಸಂಪಾದಕ, ಸುದ್ದಿಮೂಲ

೧

ಮಹಾಮನೆಯಲ್ಲಿ ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಎಂದು ಹೇಳುತ್ತಾ ಕುಳಿತುಕೊಳ್ಳುತ್ತಾರೆ.

ಬಾಹೂರ ಬೊಮ್ಮಣ್ಣ :

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು ;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ;
ನನೆಯೊಳಗಣ ಪರಿಮಳದಂತಿದ್ದಿತ್ತು ;
ಕೂಡಲಸಂಗಮದೇವರ ನಿಲವು
ಕನ್ಯೆಯ ಸ್ನೇಹದಂತಿದ್ದಿತ್ತು . ॥ 1 ॥

ಬಸವರಸ ''ಉದಕದಲ್ಲಿ ಬಯ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು'' ಎಂದಿರುವಿರಿ. ಇದು ಹೇಗೆ ? ಉದಕದಲ್ಲಿ ಕಿಚ್ಚು ಬಚ್ಚಿಟ್ಟುಕೊಂಡಿದೆಯೇ? ಆ ಕಿಚ್ಚಿಗೆ ಬಯಕೆ ಇದೆಯೇ? ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಸುಂದರವಾದ ಪ್ರಶ್ನೆ ಕೇಳಿರುವಿರಿ ಶರಣರೆ. ಇದು ತಮ್ಮೆಲ್ಲರಿಗೂ ವಿಚಿತ್ರವೆನಿಸಿದರೂ ಸತ್ಯವೇ ಆಗಿದೆ. ಉರಿಯುವ ಬೆಂಕಿಯನ್ನು ನಂದಿಸುವ ಗುಣ ಉದಕಕ್ಕಿದೆ. ಆದರೆ, ಉದಕದಲ್ಲಿ ಕಿಚ್ಚು ಬಚ್ಚಿಟ್ಟುಕೊಂಡಿದೆ. ಬಚ್ಚಿಟ್ಟುಕೊಂಡ ಕಿಚ್ಚು ಉದಕವನ್ನು ಸುಡುವುದಿಲ್ಲ. ಉರಿಯುವ ಬೆಂಕಿಯನ್ನು ಉದಕ ತಣ್ಣಗೆ ಮಾಡದೇ ಬಿಡುವುದಿಲ್ಲ. ಇದು ಉದಕದ ಗುಣ. ಉದಕದಲ್ಲಿಯೇ ಬಚ್ಚಿಟ್ಟುಕೊಂಡ ಕಿಚ್ಚಿನ ಗುಣ.

ಮಾದಾರ ಧೂಳಯ್ಯ : ಅದು ಹೇಗೆ ಬಸವಣ್ಣ ? ವಿವರಿಸಿ ಹೇಳಿ.

ಬಸವಣ್ಣ : ಜಲಜನಕ ಉರಿಯುತ್ತದೆ, ಆಮ್ಲಜನಕ ಉರಿಯಲು ಸಹಕರಿಸುತ್ತದೆ. ಜಲಜನಕದ ಎರಡು ಪ್ರಮಾಣ, ಆಮ್ಲಜಕನದ ಒಂದು ಪ್ರಮಾಣ ಸೇರಿ ಉದಕವಾಗಿದೆ. ಈ ಉದಕದಲ್ಲಿ ಉರಿಯುವ ಬೆಂಕಿ ಇದೆ. ಉರಿಯುವುದಕ್ಕೆ ಸಹಕಾರಿ ಆಗುವ ಗಾಳಿಯು ಇದೆ. ಹಾಗೆಯೇ ಉರಿಯುವ ಬೆಂಕಿಯನ್ನು ನಂದಿಸುವ ಉದಕವು ಇದೆ.

ಮಾದಾರ ಧೂಳಯ್ಯ : ನೋಡಲು ಹೋದರೆ ಉದಕ; ಆದರೆ ಉದಕದಲ್ಲಿ ಅದ್ಭುತವಾದ ರಹಸ್ಯ ಅಡಗಿದೆಯಲ್ಲ ಬಸವರಸ!

ಬಸವಣ್ಣ : ಹೌದು ಶರಣರೇ. ಅಷ್ಟೇ ಅಲ್ಲ; ಈ ಜೀವಜಲಬಿಂದುವೇ ಗರ್ಭ ಪ್ರವೇಶ ಮಾಡಿ ರಕ್ತವಾಗಿದೆ, ಮಾಂಸವಾಗಿದೆ, ಮೂಳೆ, ಮಜ್ಜೆ, ಮೇಧಸ್ಸು ಆಗಿದೆ.

ಸುಂದರವಾದ ಚರ್ಮದ ಕವಚವಾಗಿ ಅಂಗವೆಂಬ ಹೆಸರು ಪಡೆದು ಗರ್ಭದಿಂದ ಹೊರಬಂದಿದೆ. ಅಂಗವೆಂಬುದು ಮಾತನಾಡುವ, ಕೇಳುವ, ನೋಡುವ ಮೂಸಿಸುವ ಸ್ಪರ್ಶಿಸುವ, ರುಚಿಸುವ ಜಲರಾಶಿ ; ಜೀವ ಜಲರಾಶಿ!

ತಂದೆಯ ಮುಖಾಂತರ ಗರ್ಭದಲ್ಲಿ ಪ್ರವೇಶ ಮಾಡಿದ ಜೀವಜಲವೇ ಗಟ್ಟಿಗೊಂಡು ಅಂಗವಾಗಿದೆ. ಅಂಗದಲ್ಲಿಯೇ ಕಣ್ಣಾಗಿ ನೋಡುವ ಜ್ಞಾನ ಪಡೆದುಕೊಂಡಿದೆ. ನೋಡುವ ನೋಟ ಕಣ್ಣಲ್ಲಿ ಮೂಡಿ ಆ ಸೌಂದರ್ಯದ ಜ್ಞಾನ, ಅಂಗಕ್ಕೆ ರವಾನಿಸಿ ಇಡೀ ಅಂಗ ಪುಳಕಿತಗೊಂಡು ಧ್ವನಿಯ ಮೂಲಕ ಸಂತೋಷ ಪಡುತ್ತದೆ. ಇದು ಉದಕದ ಪವಾಡ!

ಕಿಚ್ಚು ಗಾಳಿಯಲ್ಲಿ ಬೆರೆತು ತಣ್ಣನೆಯ ಉದಕವಾದದ್ದು ಪವಾಡ. ಜಲವೇ ಜೀವ ಜಲವಾಗಿ ನೋಡಿ ಬೆಳಗಿ ಪುಳಕಿತಗೊಂಡು ಮಾತನಾಡಿದ್ದು ಪವಾಡ !

ಉದಕ ಭರಿತ ಕಣ್ಣಲ್ಲಿರುವ ಕಿಚ್ಚು ಉರಿದು ಬೆಳಕಾಯಿತು. ಆ ಬೆಳಕೆ ವಸ್ತುವಿನ ಮೇಲೆ ಚೆಲ್ಲಿ ಆನಂದ ಪಡೆಯಿತು. ಹೀಗೆ ಮತ್ತೆ ಮತ್ತೆ ಆನಂದ ಪಡೆಯುವ ಬಯಕೆಯೇ ತನುವಿನ ಅಜ್ಞಾನವಾಯಿತು. ಕಣ್ಣಲ್ಲಿ ಹುಟ್ಟಿದ ಬೆಳಕು, ಕಣ್ಣಲ್ಲಿಯೇ ಹುಟ್ಟಿದ ಬಯಕೆಯ ದೆಸೆಯಿಂದ, ತನುವನ್ನು ಸುಡುವಂತೆ ಮಾಡಿತು. ಉದಕದಿಂದಾದ ತನು ; ಉದಕ ಕುಡಿದರೂ ತನುವಿನಲ್ಲಿ ಹುಟ್ಟಿದ ಕಿಚ್ಚು, ನಂದದಂತಾಯಿತು. ಉದಕದಲ್ಲಿ ಹುಟ್ಟಿದ ಕಿಚ್ಚು ಉದಕವನ್ನು ಸುಡುವಂತೆ ಮಾಡಿತು.

ಮಾದಾರ ಧೂಳಯ್ಯ : ಆಹಾ ಧನ್ಯರಾದೆವು ತಂದೆ.

ಉದಕದೊಳಗೆ ಬಚ್ಚಿಟ್ಟುಕೊಂಡ ಬಯಕೆಯ ಕಿಚ್ಚಿನ ರಹಸ್ಯವನ್ನು ಅದೆಷ್ಟು ಸುಂದರವಾಗಿ ವಿವರಿಸಿದಿರಿ ಬಸವರಸ. ಈ ಬಗ್ಗೆ ಮತ್ತಷ್ಟು ವಿವರಿಸಿ ಎನ್ನೊಡೆಯಾ.

ಬಸವಣ್ಣ : ಆಗಲಿ ಶರಣರೇ.

ಉದಕದೊಳಗೆ ಹುಟ್ಟಿದ ಕಿಚ್ಚು, ಕಿವಿಯಲ್ಲಿ ಬೆಳಕಾಗಿ, ಪ್ರತಿ ಶಬ್ದವನ್ನು ಕೇಳಿ, ಅದರ ಆನಂದವನ್ನು ಪ್ರತಿ ಕಣ ಕಣಕ್ಕೆ ಕಳುಹಿಸಿ, ಪುಳಕಿತಗೊಳ್ಳುತ್ತದೆ. ಆದರೆ, ಕಿವಿಯಲ್ಲಿ ಬಯಕೆಯ ಪೊರೆಯನ್ನು ಎಳೆದು, ಶಬ್ದವನ್ನು ಸ್ವೀಕರಿಸಿ, ತನುವನ್ನು ಸ್ಫೋಟಿಸುತ್ತದೆ.

ಉದಕದೊಳಗೆ ಬಚ್ಚಿಟ್ಟುಕೊಂಡ ಕಿಚ್ಚು, ಚರ್ಮದಲ್ಲಿ ಬೆರೆತು, ಸ್ಪರ್ಶ ಜ್ಞಾನದ ಬೆಳಕಾಯಿತು. ತನುವಿಗೆ ಆನಂದವನ್ನು ಉಂಟು ಮಾಡುವ ಮಹಾ ಜ್ಞಾನವಾಯಿತು. ಆ ಶಕ್ತಿಯಲ್ಲಿ ಬಯಕೆಯೆಂಬ ಅಜ್ಞಾನ ಬೆರೆತು, ಸ್ಪರ್ಶವನ್ನು ಸ್ವೀಕರಿಸಿ, ಇಡೀ ತನುವನ್ನು ಸ್ಫೋಟಿಸುವ ಕೆಲಸ ಮಾಡುತ್ತದೆ. ಪ್ರತಿ ಸ್ಪರ್ಶವು ರಸಾಯನವನ್ನು ಉಂಟು ಮಾಡಿ, ತನುವನ್ನು ಕಾಮದಿಂದ ಕೊತಕೊತನೆ ಕುದಿಯುವಂತೆ ಮಾಡುತ್ತದೆ. ಇದು ಉದಕದಲ್ಲಿ ಬಚ್ಚಿಟ್ಟುಕೊಂಡ ಬಯಕೆಯ ಕಿಚ್ಚಿನ ಮಹಿಮೆ!

ಪ್ರಸಾದಿ ಭೋಗಣ್ಣ : ಉದಕದಲ್ಲಿ ಅದೆಂತಹ ಕಿಚ್ಚು ಬಚ್ಚಿಟ್ಟುಕೊಂಡಿದೆ ಬಸವಣ್ಣ! ಇದನ್ನು ಕೇಳಿ ನಾವು ಧನ್ಯರಾದೆವು ತಂದೆ. ಮತ್ತಷ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಆಗಲಿ ಶರಣರೇ.

ಜಲಭರಿತ ತನು, ಜಾತಿ ಮತ ಧರ್ಮಗಳನ್ನು ಸ್ಪರ್ಶದ ರೂಪದಲ್ಲಿ ಸ್ವೀಕರಿಸಿ, ಅದರಲ್ಲಿ ಅಡಗಿದ ಬಯಕೆ ತನುವನ್ನು ಸುಡುವಂತೆ ಮಾಡುತ್ತದೆ. ಚರ್ಮ ಒಂದೇ. ಆದರೂ ಆ ಚರ್ಮದಲ್ಲಿಯೇ ಹೆಣ್ಣು ಗಂಡು ಎನ್ನುವ ಜಾತಿ ಕಂದರ ಬಿತ್ತಿ, ಚರ್ಮದ ಬಯಕೆ, ಚರ್ಮ ಚರ್ಮದೊಂದಿಗೆ ಬೆರೆತು ಸುಖಿಸಿ ಸುಡುವಂತೆ ಮಾಡುತ್ತದೆ.

ರಾವಣನ ಚರ್ಮ, ಸೀತಾಮಾತೆಯ ಚರ್ಮ ಒಂದೇ . ಆದರೂ ಚರ್ಮ ಚರ್ಮವನ್ನು ಬಯಸಿ, ರಾಮಾಯಣವನ್ನೇ ಸೃಷ್ಟಿ ಮಾಡಿತು. ಈ ಕಿಚ್ಚಿನಲ್ಲಿ ವಾನರ ಸೈನ್ಯ, ರಾವಣ ಸೈನ್ಯ ಸುಟ್ಟು ಬೂದಿಯಾಯಿತು. ಶಕ್ತಿಶಾಲಿ ರಾವಣ, ಆತನ ಮಕ್ಕಳು ಸತ್ತು ಹೋದರು. ಬಲಶಾಲಿ ವಾಲಿ ವ್ಯರ್ಥ ಸತ್ತುಹೋದ. ಜಲಭರಿತವಾದ ಚರ್ಮದಲ್ಲಿ ಹುಟ್ಟಿದ ಬಯಕೆಯ ಅಜ್ಞಾನದ ಕಿಚ್ಚನ್ನು, ಬಲಶಾಲಿಗಳಿಗೂ ಅಳಿಸಿ ಹಾಕಲು ಸಾಧ್ಯವಾಗಲಿಲ್ಲ.

ಉದಕದೊಳಗೆ ಬಚ್ಚಿಟ್ಟುಕೊಂಡ ಬಯಕೆಯೆಂಬ ಕಿಚ್ಚು, ಕಣ್ಣಿನೊಳಗೆ ಹರಿದು ನೋಡದಂತೆ ಮಾಡುತ್ತದೆ. ಕಿವಿಯೊಳಗೆ ಹರಿದು ಕೇಳದಂತೆ ಮಾಡುತ್ತದೆ. ಚರ್ಮದೊಳಗೆ ಹರಿದು ಮುಟ್ಟಿ ಸುಖಿಸುವಂತೆ ಮಾಡುತ್ತದೆ. ಇದೇ ಉದಕದೊಳಗೆ ಬಚ್ಚಿಟ್ಟುಕೊಂಡ ಬಯಕೆಯ ಕಿಚ್ಚಿನ ಮಹಿಮೆ!

ಪ್ರಸಾದಿ ಭೋಗಣ್ಣ : ಮಾನವ ಕುಲ ಉದಕದಿಂದಲೇ ಜನ್ಮ ತಳೆದಿದ್ದರೂ, ಅದರಲ್ಲಿ ಬಚ್ಚಿಟ್ಟುಕೊಂಡ ಬಯಕೆಯ ಕಿಚ್ಚು, ಮನುಕುಲವನ್ನು ಬೆಳಗಲು ಸಹಾಯ ಮಾಡುತ್ತದೆ, ಹಾಗೆಯೇ ಇಡೀ ಮನುಕುಲವನ್ನು ಸುಟ್ಟು, ಭಸ್ಮ ಮಾಡಲು ಸಹ ಪ್ರೇರಣೆ ನೀಡುತ್ತದೆ. ಹಾಗೆಯೇ ಜ್ಞಾನ-ಅಜ್ಞಾನವನ್ನು ತಿಳಿದು ತನಗೆ ತಾನೆ ತನ್ನ ಅಜ್ಞಾನವನ್ನು ಸುಟ್ಟು ಕೊಂಡು ಮಹಾಜ್ಞಾನದ ಮೂಲಕ ತನಗೆ ತಾನೇ ಬೆಳಗುವ ಶಕ್ತಿ ಕೂಡಾ ಈ ಉದಕದಲ್ಲಿ ಬಚ್ಚಿಟ್ಟುಕೊಂಡಿದೆ ಎಂಬುದನ್ನು ನಮ್ಮೆಲ್ಲರಿಗೂ ತಿಳಿ ಹೇಳಿದಿರಿ ಬಸವರಸ. ನಮ್ಮ ಜೀವನ ಪಾವನವಾಯಿತು ; ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ಎನ್ನುವ ವಚನದ ಎರಡನೇ ಸಾಲಿನ ವಿಷಯ ಕುರಿತು ಚರ್ಚಿಸೋಣ.

ಸಸಿಗೆ ಹರಿದ ಉದಕ ಸಿಹಿಯಾಗಿದೆ, ಹಾಗೆಯೇ ಹುಳಿಯಾಗಿದೆ, ಹಾಗೆಯೇ ಖಾರ, ಖಾಕು, ಘಾಟು, ಕಹಿ, ಒಗರು ಎಂಬ ಮುಂತಾದ ಹೆಸರಿನ ರುಚಿಗಳು ಸಸಿಯೊಳಗೆ ನಿರ್ಮಾಣವಾಗಿವೆ. ಇದೆಲ್ಲ ಸಸಿಗಳಿಗೆ ಹರಿದ ಉದಕದ ಪವಾಡ. ತನುವಿನಲ್ಲಿದ್ದ ಉದಕ, ನಾಲಿಗೆಯ ಮೂಲಕ ರುಚಿಯನ್ನು ಸವಿದು, ಇಡೀ ತನುವನ್ನು

ಪುಳಕಿತಗೊಳಿಸುತ್ತದೆ. ಮತ್ತೆ ಮತ್ತೆ ರುಚಿಯನ್ನು ಸವಿಯುವ ಬಯಕೆ ಸೃಷ್ಠಿಮಾಡಿ, ಉದಕದ ಕಿಚ್ಚು ಸ್ಫೋಟಗೊಂಡು, ತನುವನ್ನು ಕುದಿಯುವಂತೆ ಮಾಡುತ್ತದೆ.

ಉದಕಕ್ಕೆ ಬಣ್ಣವಿಲ್ಲ, ರುಚಿಯಿಲ್ಲ, ವಾಸನೆಯೂ ಇಲ್ಲ. ಉದಕ ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ ಎನ್ನುವ ಮಾತನ್ನೆ, ತನುವಿನಲ್ಲಿ ಸಂಗಮವಾದ ಜಲ ಹುಸಿ ಮಾಡುತ್ತದೆ.

ಡಕ್ಕೆಯ ಬೊಮ್ಮಣ್ಣ : ಆಹಾ ಎಷ್ಟೊಂದು ರಹಸ್ಯ ಉದಕದಲ್ಲಿ ಬಚ್ಚಿಟ್ಟುಕೊಂಡಿದೆಯಲ್ಲ ಬಸವರಸ.

ಬಸವಣ್ಣ : ಹೌದು ಶರಣರೇ.

ಜಲಕ್ಕೆ ಬಣ್ಣವಿಲ್ಲ, ಆದರೆ ತನುಗಳಿಗೆ ಹರಿದ ಜಲವೇ ರಕ್ತವಾಗಿ ಕೆಂಪಾಗಿದೆ. ತನುವಿನ ಚರ್ಮ ಕೆಂಪು, ಕಪ್ಪು, ಬಿಳಿ, ಕಂದು ಬಣ್ಣಗಳಿಂದ ರಂಜಿಸಿ, ಚರ್ಮ ಎಂದು ಹೆಸರು ಪಡೆದಿದೆ. ಸಸಿಗಳಿಗೆ ಹರಿದ ಜಲಕ್ಕೂ ಕೂಡ ಬಣ್ಣ ಬಂದು, ರುಚಿ ನಿರ್ಮಾಣವಾಗಿದೆ. ರುಚಿ ಸಸಿಯದ್ದಾದರೂ, ನಾಲಿಗೆ ಮೂಲಕ ರುಚಿಸಿ, ಅಡಿಗೆ ರುಚಿಯಾಗಲಿಲ್ಲವೆಂದು, ತನು ತನುವನ್ನು ಹಿಂಸಿಸುತ್ತದೆ. ತನುವಿನ ಕಿಚ್ಚು ರುಚಿ ಗಾಗಿ ಸ್ಫೋಟಗೊಂಡು ತನುವನ್ನು ಕೊಂದು ಹಾಕುವ, ಇಲ್ಲ ನಿಂದಿಸಿ ಆತ್ಮಹತ್ಯೆ ಮಾಡಿ ಕೊಂಡು ಸಾಯುವ ಕೆಲಸ, ಉದಕದಲ್ಲಿ ಸೃಷ್ಟಿಯಾಗಿದೆ.

ಉದಕದಲ್ಲಿ ಹುಟ್ಟಿದ ಬಯಕೆಯ ಮೋಸ ತನುವಿಗೆ ಅರ್ಥವಾದರೆ ರುಚಿ ತನ್ನದಲ್ಲ. ಅದು ಸಸಿಯೊಳಗಣ ರಸದ ರುಚಿ ! ಬಯಕೆ ಇಲ್ಲದೆ ಸವಿದರೆ ಸವಿದಷ್ಟು ಆನಂದ. ಬಯಸಿ ಸವಿದರೆ ಕಿಚ್ಚು. ತಿಳಿದು ಸವಿದರೆ ಸಸಿಯೊಳಗಣ ರಸವೂ ಜಲ. ತನುವೂ ಕೂಡ ಜಲ ! ಸವಿಯುವ ನಾಲಿಗೆಯೂ ಕೂಡಾ ಜಲ, ಜಲ ಜಲದಲ್ಲಿ ಬೆರೆತು ಜಲಮಯ ! ಜಲಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ರುಚಿಯಿಲ್ಲ. ಏಕೆಂದರೆ, ಜಲ ತನುವಾಗಿದೆ. ರುಚಿಯನ್ನು ಸವಿಯುವ ಮನವೂ ಆಗಿದೆ. ಎಲ್ಲವನ್ನು ತಿಳಿಯುವ ಮಹಾ ಜ್ಞಾನವೂ ಆಗಿದೆ. ತನ್ನನ್ನು ತಾನು ತಿಳಿಯುವ ಶಕ್ತಿ ತನುವೆಂಬ ಉದಕಕ್ಕಿದೆ. ಅದನ್ನು ಸಮದರ್ಶಿಯಾಗಿ ಕಾಯ್ದುಕೊಳ್ಳುವ ಯುಕ್ತಿಯು ಜಲಕ್ಕೆ ಇದೆ. ಹೀಗಾಗಿ ಉದಕಭರಿತ ತನು ಜ್ಞಾನದ ಬಂಢಾರವೇ ಆಗಿದೆ.

ಪ್ರಸಾದಿ ಭೋಗಣ್ಣ : ಇಡೀ ಬ್ರಹ್ಮಾಂಡವೇ ಉದಕದಿಂದ ನಿರ್ಮಾಣವಾಗಿದೆ ಎಂಬುದನ್ನು, ತಮ್ಮ ಒಂದು ಸಾಲಿನ ವಚನದಲ್ಲಿ ಉದಕ ಮಾತನಾಡುವುದನ್ನು, ನೋಡುವುದನ್ನು, ಮುಟ್ಟಿ, ಕೇಳಿ, ರುಚಿಸಿ, ಮೂಸಿಸಿ ತಿಳಿಯುವ ಶಕ್ತಿ ಉದಕಕ್ಕಿದೆ ಎಂದು ಜಗತ್ತಿಗೆ ಪರಿಚಯಿಸಿದ ಕೀರ್ತಿ ತಮಗೆ ಸಲ್ಲುತ್ತದೆ ತಂದೆ.

ಢಕ್ಕೆಯ ಬೊಮ್ಮಣ್ಣ : ಬಸವರಸ ತಮ್ಮ ಅಗಾಧವಾದ ಅರಿವಿನ ಪರಿಮಳ ನಮ್ಮ ಶರಣರನ್ನು ಮೂಕ ವಿಸ್ಮಿತರನ್ನಾಗಿಸಿದೆ. ತಮ್ಮ ವಚನದ ಮೂರನೆಯ ಸಾಲು.

'ನನೆಯೊಳಗಣ ಪರಿಮಳದಂತಿದ್ದಿತ್ತು' ಎಂಬುದರ ಬಗ್ಗೆ ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಆಗಲಿ ಶರಣರೆ.

ಉದಕದ ಮಹಿಮೆ ಅಪಾರ, ಉದಕದಿಂದಲೇ ಜಗತ್ತಿನ ನಿರ್ಮಾಣ. ಗಿಡ, ಮರ, ಬಳ್ಳಿ, ಪಶು, ಪಕ್ಷಿ, ಜಲಚರ, ಉರಗ, ಕೀಟ, ಕ್ರಿಮಿಗಳು ಉದಕದಿಂದಲೇ ಜನ್ಮ ತಳೆದಿವೆ. ಇದೆಲ್ಲವನ್ನು ತಿಳಿದು ಜ್ಞಾನ ಬಂಢಾರವೇ ತಾನೆಂದು ಹೇಳಿಕೊಳ್ಳುವ ಮನುಕುಲದ ನಿರ್ಮಾಣವು ಉದಕದಿಂದಲೇ ಆಗಿದೆ.

ಉದಕ ಪರಿಮಳವೂ ಹೌದು, ಸ್ವಾದವೂ ಹೌದು, ಸೌಂದರ್ಯವೂ ಹೌದು. ಹಾಗೆಯೇ ನೋಡುವ ದೃಷ್ಠಿ ಕೇಳುವ ಶಬ್ದ ಸ್ಪರ್ಶಿಸುವ ಸುಖ ಎಲ್ಲವನ್ನು ತಿಳಿಯುವ ಜ್ಞಾನವು ಕೂಡಾ ಉದಕದಿಂದಲೇ ತನುವಿಗೆ ಬಂದಿದೆ. ಉದಕದಲ್ಲಿ ಬಚ್ಚಿಟ್ಟುಕೊಂಡ ಕಿಚ್ಚಿನಿಂದಲೇ ಬಂದಿದೆ.

ಉದಕ ಕಬ್ಬಿನ ಸಸಿಗೆ ಹರಿದು ಸಿಹಿಯಾಗಿದೆ, ಹುಣಸೆಗೆ ಹರಿದು ಹುಳಿಯಾಗಿದೆ, ಮೆಣಸಿಗೆ ಹರಿದು ಖಾರವಾಗಿದೆ, ಈರುಳ್ಳಿಗೆ ಹರಿದು ಖಾಕು ಆಗಿದೆ, ಬೆಳ್ಳುಳ್ಳಿಗೆ ಹರಿದು ಘಾಟಿನ ರುಚಿಯಾಗಿದೆ, ಮಲ್ಲಿಗೆ ಜಾಜಿ ಸಂಪಿಗೆ ನಾನಾ ಪುಷ್ಪಗಳಿಗೆ ಹರಿದು ಸುಗಂಧವಾಗಿದೆ.

ಮಲ್ಲಿಗೆಯ ಮೊಗ್ಗು ಪರಿಮಳವನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡು ಗೋಚರಿಸುತ್ತದೆ. ಮಲ್ಲಿಗೆಯ ಸಸಿಗೆ ಪರಿಮಳವಿಲ್ಲ. ಅದರ ಮೊಗ್ಗಿಗೂ ಪರಿಮಳವಿಲ್ಲ, ಸಸಿ ಮತ್ತು ಮೊಗ್ಗು ಸೀಳಿ ನೋಡಿದರೂ ಪರಿಮಳವಿಲ್ಲ. ಉದಕ ಉಂಡು ಸಸಿಯಾಯಿತು, ಮೊಗ್ಗಾಗಿ ಅರಳುವುದರ ಮೂಲಕ ಪರಿಮಳ ಬೀರಿ ಮಲ್ಲಿಗೆಯಾಯಿತು.

ಉದಕ ತಾನೇ ಸಸಿಯಾಯಿತು, ತಾನೇ ಮೊಗ್ಗಾಯಿತು. ಆ ಮೊಗ್ಗು ತಾನೇ ಅರಳಿ ಪರಿಮಳ ಬೀರಿತು. ತಾನಾಗುವ ಕಾಲಕ್ಕೆ ಆಗುವುದಲ್ಲದೇ, ಸಸಿ ಮಾಡಲು ಬರುವುದಿಲ್ಲ, ಮೊಗ್ಗು ಮಾಡಲು ಬರುವುದಿಲ್ಲ , ಅದನ್ನು ಅರಳಿಸಲು ಕೂಡಾ ಬರುವುದಿಲ್ಲ.

ಚೆನ್ನಬಸವಣ್ಣ : ಒಂದು ತನು ತನಗೆ ತಾನೆ ಜ್ಞಾನಿಯಾಗಬೇಕು ಎಂದು ತಾವು ಹೇಳಿದಂತಾಗಲಿಲ್ಲವೆ? ಒಂದು ತನು ಮತ್ತೊಂದು ತನುವಿಗೆ ಬೋಧೆ ಮಾಡುವ ಅಗತ್ಯವಿಲ್ಲವೆಂದು ತಾವು ಹೇಳಿದಂತಾಗಲಿಲ್ಲವೇ ಬಸವಣ್ಣ?

ಬಸವಣ್ಣ : ಹೌದು ಚೆನ್ನಬಸವಣ್ಣ, ಸರಿಯಾಗಿಯೇ ಊಹಿಸಿದಿರಿ. ಒಂದು ಸಸಿ ತಾನೇ ಪ್ರೌಢತ್ವಕ್ಕೆ ಬಂದು, ಮೊಗ್ಗಾಗಿ ಅರಳಿ ಪರಿಮಳ ಬೀರುತ್ತದೆ. ಸಸಿಗೆ ಯಾವ ಸಸಿಯೂ ಹೂವಾಗಿ ಅರಳಲು ನೆರವಾಗುವುದಿಲ್ಲ. ಹಾಗೆಯೆ ತನು ಕೂಡ ತನಗೆ ತಾನೇ ಜ್ಞಾನದಿಂದ ಅರಳಿ ಅರಿವಿನ ಪರಿಮಳ ಬೀರಬೇಕು; ಎನ್ನುವ ಗುಟ್ಟೆ ಈ ವಚನದ ತಿರುಳು.

ಚೆನ್ನಬಸವಣ್ಣ : ಮತ್ತಷ್ಟು ವಿವರಿಸಲು ಸಾಧ್ಯವೇ ಬಸವರಸ.

ಬಸವಣ್ಣ : ಆಗಲಿ ಚೆನ್ನಬಸವಣ್ಣ.

ಉದಕ ತುಂಬಿದ ಕಬ್ಬು ವಿಕೃತಗೊಂಡು ಎಂದೂ ಕಹಿಯಾಗುವುದಿಲ್ಲ. ಉದಕ ತುಂಬಿದ ಮಲ್ಲಿಗೆ ಮೊಗ್ಗಾಗಿ ಅರಳಿ, ವಿಕೃತಗೊಂಡು ಎಂದೂ ದುರ್ಗಂಧ ಬೀರುವುದಿಲ್ಲ. ಹಾಗೆಯೆ ಉದಕ ತುಂಬಿದ ತನುವಿನಲ್ಲಿ, ತನಗೆ ತಾನೆ ಬಳಕೆ ಮಾಡಿಕೊಳ್ಳುವ ಸಹಜ ಜ್ಞಾನದ ಅರಿವಿನ ಪರಿಮಳ ಇದೆ. ಹಾಗೆಯೆ ಇಡೀ ತನುವನ್ನು ತನಗೆ ಬೇಕಾದಂತೆ ದುರ್ಬಳಕೆ ಮಾಡಿಕೊಂಡು, ವಿಕೃತ ಸುಖ ಬಯಸಿದತ್ತ ವಾಲುವ ಮನವೂ ಇದೆ. ಮನುಷ್ಯನನ್ನು ಬಿಟ್ಟು ಜಲದಿಂದ ರಚನೆಯಾದ ಎಲ್ಲವೂ ಸಹಜತೆಯಲ್ಲಿವೆ. ಮನುಷ್ಯ ಮಾತ್ರ ಒಮ್ಮೆ ಸಹಜ; ಮತ್ತೊಮ್ಮೆ ಅಸಹಜವಾಗಿ ವರ್ತಿಸುತ್ತಾನೆ.

ಜಲಭರಿತವಾದ ತನುವಿನಲ್ಲಿ ಅರಿವು ಇದೆ. ಮನವೂ ಇದೆ. ಮನ ತನುವಿನಲ್ಲಿರುವ ಅರಿವನ್ನು ಬಳಕೆ ಮಾಡಿಕೊಂಡರೆ, ಅರಿವುಳ್ಳ ಸಹಜ ತನು ಎಂದು ಕರೆಯಿಸಿಕೊಂಡು, ಸದಾ ಅರಿವಿನ ಸುಖ ಉಂಡು ಸಹಜವಾಗಿರುತ್ತದೆ, ಎಂದೂ ವಿಕೃತಗೊಳ್ಳುವುದಿಲ್ಲ.

ಮನ ತನುವಿನಲ್ಲಿ ತನ್ಮಯವಾದ ಅರಿವನ್ನು ಬಳಕೆ ಮಾಡಿಕೊಳ್ಳದೇ, ನೇರವಾಗಿ ತನುವನ್ನು ಬಳಕೆ ಮಾಡಿಕೊಂಡರೆ, ವಸ್ತುಗಳ ಮೇಲಿನ ಬಯಕೆ ಅತಿಯಾಗಿ, ಬಯಕೆಯ ಕಿಚ್ಚು ಸ್ಫೋಟಿಸಿ, ರಕ್ಕಸ ತನುವಾಗುತ್ತದೆ. ಅಸಹಜ ತನುವಾಗುತ್ತದೆ.

ಚೆನ್ನಬಸವಣ್ಣ : ತನು, ಸಹಜ ತನು ಆಗಿ ಜೀವಿಸಲು ಸಾಧ್ಯವಿಲ್ಲವೇ ಬಸವಣ್ಣ?

ಬಸವಣ್ಣ : ಸಹಜ ಕಾಯವಾಗಲು, ಕಾಯ ಸ್ವಯಂ ಅರಿವಿನ 'ಕಾಯಕ'ದ ಕೃಷಿ ಮಾಡಲೇಬೇಕು. ನೋಡಲು ಹೋದರೆ ಕಾಯ ಒಂದೇ ಆಗಿ ಕಾಣುತ್ತದೆ. ಆದರೆ ಕಾಯದಲ್ಲಿ 'ಅರಿವು' ಎನ್ನುವ ಗುರುದೇವ ವಾಸ ಮಾಡಿದ ಕಾಯವೊಂದಿದೆ. ಹಾಗೆಯೆ ಗುರುದೇವನನ್ನು ನೆನೆಯುತ್ತ, ಆತನಿಗೆ ಶರಣು ಹೋಗಿ ಶರಣಾಗತನಾಗಲೇಬೇಕಾದ, 'ಮನೋಮಯ'ವಾದ ಕಾಯವೊಂದು ಕಾಯದಲ್ಲಿಯೇ ಇದೆ. ಮನೋಮಯವಾದ ಕಾಯ, ಅರಿವು ಎನ್ನುವ ಗುರುದೇವನಿಗೆ ಶರಣು ಹೋಗಿ ಶರಣಾಗತನಾಗಿ, ಆತ ಹೇಳಿದಂತೆ ಮನೋಮಯವಾದ ಕಾಯ ಸ್ಥೂಲಕಾಯದ ಮೂಲಕ ನಡೆದುಕೊಂಡಾಗ, ಅದು ಸಹಜ ಕಾಯವಾಗುತ್ತದೆ. ಅರಿವನ್ನು ಬಳಕೆ ಮಾಡಿಕೊಂಡು ಜ್ಞಾನಕಾಯವಾಗಿ ಅರಳಿ, ಸದಾ ಅರಿವಿನ ಪರಿಮಳ ಬೀರುತ್ತದೆ. 'ಸೂಕ್ಷ್ಮಕಾಯ', 'ಸ್ಥೂಲ' ಕಾಯದಲ್ಲಿಯೇ ಇರುವ 'ಅರಿವಿನ' ಕಾಯಕ್ಕೆ ಶರಣು ಹೋಗುವ ಕೃಷಿ ಮಾಡಿದಾಗಲೇ ಸಾಧ್ಯವಾಗುತ್ತದೆ. ಈ 'ಕಾಯಕ' ಕಾಯದಿಂದಲೇ ಕಾಯದ ಮೂಲಕ ಕಾಯದಲ್ಲಿಯೇ ನಡೆಯಬೇಕು. ಇದು ಅಗೋಚರ 'ಕಾಯಕ', ಈ ಕಾಯಕದಲ್ಲಿ ನಿರತವಾದ ಕಾಯಕ್ಕೆ ಮಾತ್ರ, ಗೋಚರಿಸುವ ಕಾಯಕ !

ಚೆನ್ನಬಸವಣ್ಣ : ಉದಕದಲ್ಲಿ ಬಚ್ಚಿಟ್ಟುಕೊಂಡ ಅದ್ಭುತವಾದ ರಹಸ್ಯವನ್ನು ನಮಗೆಲ್ಲಾ ತಿಳಿಸಿದಿರಿ ತಂದೆ. ತಮಗೆ ಶರಣು.

ಮೇದಾರ ಕೇತಯ್ಯ : ಬಸವರಸ ತಮ್ಮ ವಚನದ ಕೊನೆಯ ಸಾಲಿನಲ್ಲಿ 'ಕೂಡಲ ಸಂಗಮದೇವರ ನಿಲುವು ಕನ್ಯೆಯ ಸ್ನೇಹದಂತ್ತಿದ್ದಿತ್ತು' ಎಂದು ಹೇಳಿರುವಿರಿ ತಂದೆ, ದಯವಿಟ್ಟು ಅದನ್ನು ನಮ್ಮ ಶರಣರಿಗೆ ವಿವರಿಸಿ ಹೇಳಿ ಬಸವರಸ.

ಬಸವಣ್ಣ : ತನುವಿನಲ್ಲಿ ಅಪಾರವಾದ ಜ್ಞಾನ ಬಚ್ಚಿಟ್ಟುಕೊಂಡಿದೆ. ಅದನ್ನು ಬಳಕೆ ಮಾಡಿಕೊಂಡವನೇ ಮಹಾಜ್ಞಾನಿ.

ತನುವಿನಲ್ಲಿ ಎರಡು ಪಾತ್ರಗಳಿವೆ. ಅರಿವು ತನುವಿನ ಸಹಜ ಗುಣ. ಅದು ಕಬ್ಬಿನಂತೆ ಸದಾ ಸಿಹಿ, ಹೂವಿನಂತೆ ಸದಾ ಪರಿಮಳ. ಅರಿವು ತನುವನ್ನು ಎಂದೂ ವಿಕೃತಗೊಳಿಸುವುದಿಲ್ಲ. ಅರಿವು ತನುವನ್ನು ಬೆಳಗುವ ಬೆಳಕು. ಅದು ಸಹಜ ಬೆಳಕು.

ಮನ ಅರಿವಿನಿಂದ ಉಂಟಾದ ಬೆಳಕಿನ ನೆರಳು. ಅದು ತನುವನ್ನು ಕತ್ತಲಿನಂತೆ ಆವರಿಸಿಕೊಂಡಿದೆ. ತನುವಿಗೆ ಅರಿವಿನ ವೇಷ ಹಾಕಿ ಅರಿವಿನ ತನುವನ್ನು ಸದಾ ದುರ್ಬಳಕೆ ಮಾಡಿಕೊಳ್ಳುತ್ತದೆ.

ತನುವಿನಲ್ಲಿ ತನ್ಮಯವಾದ, ಅರಿವು ಎನ್ನುವ ಗುರುದೇವನನ್ನು, ನಾನು 'ಕೂಡಲಸಂಗಮದೇವ' ಎಂದು ಹೆಸರಿಟ್ಟು ಕರೆದಿದ್ದೇನೆ. ತನುವನ್ನು ಆವರಿಸಿದ ಮನಕ್ಕೆ 'ಕನ್ಯೆ' ಎಂದು ನಾಮಕರಣ ಮಾಡಿದ್ದೇನೆ.

ಮೇದಾರ ಕೇತಯ್ಯ : ಬಸವರಸ, ಗುರುದೇವ ತನುವನ್ನು ಸದಾ ಏಕೆ ಬಳಕೆ ಮಾಡುತ್ತಿಲ್ಲ. ಗುರುದೇವನ ಮಾತನ್ನು ಮನ ಎಂಬ ಕನ್ಯೆ ಏಕೆ ಕೇಳುತ್ತಿಲ್ಲ ?

ಬಸವಣ್ಣ : ಸರಿಯಾದ ಪ್ರಶ್ನೆಯನ್ನೇ ಕೇಳಿರುವಿರಿ ಶರಣರೆ. ಅರಿವು ಎನ್ನುವ ಗುರುದೇವ, ತನುವಿನ ಕಣ ಕಣದಲ್ಲಿ ತನ್ಮಯವಾಗಿ, ಸಂಗಮನಾಥ ಎಂದು ಕರೆಯಿಸಿಕೊಂಡರು ಕೂಡಾ, ಈತನ ಬೆಳಕಿನಿಂದ ಹುಟ್ಟಿದ ಮನವೆಂಬ ಕತ್ತಲು ಇಡೀ ತನುವನ್ನು ಆವರಿಸಿಕೊಂಡು, ಗುರುದೇವನ ಅರಿವಿನ ಬೆಳಕನ್ನು ಪ್ರಕಟವಾಗದಂತೆ ಮಾಡಿದೆ. ತನುವಿನಲ್ಲಿ ಮನ ತನ್ನದೇ ಆದ ಲೋಕಾನುಭವದ ಕತ್ತಲೆ ಸಾಮ್ರಾಜ್ಯವನ್ನು ಕಟ್ಟಿಕೊಂಡಿದೆ. ತನುವಿಲ್ಲದೇ ಅರಿವಿಲ್ಲ, ಅರಿವಿಲ್ಲದ ತನುಗಳು ಈ ಭೂಮಂಡಲದಲ್ಲಿ ಇಲ್ಲವೇ ಇಲ್ಲ.

ಮನ ಕನ್ಯೆ ಇರುವಾಗಲೇ ಅಂದರೆ ಎಳೆತನದಲ್ಲಿಯೇ, ಅರಿವು ಎಂಬ ಗುರುದೇವನ ಸ್ನೇಹ ಮಾಡಬೇಕಿತ್ತು. ಸ್ನೇಹ ಮಾಡಿ, ಪಳಗಿ, ಪ್ರೌಢತ್ವಕ್ಕೆ ಬಂದು, ತನ್ನ ಅಜ್ಞಾನದ ಕನ್ಯೆತನದ ಪೊರೆಯನ್ನು, ಅರಿವಿನ ಬೆಳಕಿನಿಂದ ಕಿತ್ತುಕೊಳ್ಳಬೇಕಾಗಿತ್ತು. ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗಯ್ಯನಿಗೆ, ಮನ ಶರಣುಹೋಗಿ, ಆತನಿಗೆ ಸತಿಯಾಗಿ, ಆ ಪತಿಯೊಂದಿಗೆ ಅಂಗವನ್ನೇ ಆಲಯವನ್ನಾಗಿಸಿಕೊಂಡು, ಆ ಆಲಯದಲ್ಲಿ ಸತಿ ಪತಿಗಳಿಬ್ಬರು ಕೂಡಿ, ಮಹಾಜ್ಞಾನದ ಪರಮಸುಖವನ್ನು

ಉಣ್ಣಬೇಕಾಗಿತ್ತು. ಆ ಮಹಾ ಜ್ಞಾನದ ಸಾಗರದಲ್ಲಿ ಮನ ತನ್ನ ಹೆಸರು ಕಳೆದುಕೊಂಡು ಘನಮನವಾಗಬೇಕಾಗಿತ್ತು. ಹೀಗಾದ ಮೇಲೆ ಮನ ಅತ್ತ ಇತ್ತ ಹರಿದಾಡದೆ, ಅಂಗದಲ್ಲಿಯೇ ಸಂಗಮವಾದ ಅರಿವೆಂಬ ಲಿಂಗಯ್ಯನೊಂದಿಗೆ ಬೆರೆತು, ಆ ಲಿಂಗಯ್ಯನೇ ತಾನಾಗುತ್ತದೆ.

ಮೇದಾರ ಕೇತಯ್ಯ : ಬಸವರಸ ಅಂಗದಲ್ಲಿ ಅರಿವಿನ ಲಿಂಗ ಸಂಗಮವಾದುದನ್ನು ನಮಗೆ ವಿವರಿಸಿ ಹೇಳಿದಿರಿ. ಮನ ಸತಿಯಾಗಿ, ಲಿಂಗಯ್ಯನನ್ನೇ ಪತಿಯಾಗಿಸಿಕೊಂಡು, ಸತಿ ಪತಿಗಳಿಬ್ಬರು ಅಂಗವನ್ನೆ ಆಲಯ ಮಾಡಿಕೊಂಡು ಆ ಅಂಗದಲ್ಲಿಯೇ ಕೂಡಬೇಕು ಎಂಬ ರಹಸ್ಯವನ್ನು ತಿಳಿಯಪಡಿಸಿದಿರಿ ತಂದೆ; ತಮಗೆ ಶರಣು ಶರಣಾರ್ಥಿ.

ಬಸವಣ್ಣ: ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸೇರೋಣ ಎಂದು ಸಭೆಗೆ ಮಂಗಲ ಹಾಡಿದರು.

ಸಕಲ ಶರಣರು ಬಸವಣ್ಣನವರಿಗೆ ಹಣೆಮಣಿದು ಸತ್ಸಂಗದ ಸವಿ ಮಾತುಗಳನ್ನಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೨

ಕತ್ತಲು ನಿಧಾನವಾಗಿ ಸೂರ್ಯನ ಬೆಳಕಿನ ಗರ್ಭದಲ್ಲಿ ಜಾರುತ್ತಲಿದೆ. ಶರಣರು ಮಹಾಮನೆಯತ್ತ ನಡೆಯುತ್ತಾ ಕತ್ತಲ ಬೆಳಕಿನ ಆಟವನ್ನು ಗಮನಿಸುತ್ತಿದ್ದಾರೆ. ವೇದಿಕೆಯ ಮೇಲೆ ಕುಳಿತ ಬಸವಣ್ಣನವರಿಗೆ ಶರಣು ಶರಣಾರ್ಥಿ ಎಂದು ತಲೆಬಾಗಿ ಕುಳಿತುಕೊಳ್ಳುತ್ತಾರೆ.

ಲದ್ದೆಯ ಸೋಮಯ್ಯ :

ಕಾಳಿ ಕಂಕಾಳದಿಂದ ಮುನ್ನ
ತ್ರಿಪುರ ಸಂಹಾರದಿಂದ ಮುನ್ನ
ಹರಿವಿರಂಚಿಗಳಿಂದ ಮುನ್ನ
ಉಮೆಯ ಕಲ್ಯಾಣದಿಂದ ಮುನ್ನ
ಮುನ್ನ ಮುನ್ನ ಮುನ್ನ
ಅಂದಿಂಗೆಳೆಯ ನೀನು: ಹಳೆಯ ನಾನು
ಮಹಾದಾನಿ ಕೂಡಲ ಸಂಗಮದೇವಾ. ॥ 2 ॥

ಬಸವರಸ, ಮುನ್ನ ಮುನ್ನ ಮುನ್ನ ಅಂದಿಂಗೆಳೆಯ ನೀನು ಹಳೆಯ ನಾನು ಎಂದಿರುವಿರಿ. ಅಂದರೆ ದೇವರಿಗಿಂತ ಹಳಬ ಎಂದಂತಾಗಲಿಲ್ಲವೆ? ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಈ ವಚನದಲ್ಲಿ ನಾಲ್ಕು ಕತೆಗಳಿವೆ. ವಿಷ್ಣು, ವಾಮನ, ಬ್ರಹ್ಮನನ್ನು ಕುರಿತ ಕತೆ ಮೊದಲ ಸಾಲಿನಲ್ಲಿದ್ದರೆ. ರಕ್ಕಸ ಸಂಹಾರದ ಕಥೆ ಎರಡನೇ ಸಾಲಿನಲ್ಲಿ ಇದೆ. ಬ್ರಹ್ಮ ವಿಷ್ಣು ಗಿರಿಜಾಕಲ್ಯಾಣದ ಕತೆಗಳು ಮೂರು, ನಾಲ್ಕನೇ ಸಾಲಿನಲ್ಲಿವೆ. ಪೌರಾಣಿಕ ಕತೆಗಳನ್ನ ಓದಿದರೆ ಅಥವಾ ಕೇಳಿದರೆ ಮನ ತನುವಿನಲ್ಲಿ ಸಂಗ್ರಹ ಮಾಡಿಕೊಳ್ಳುತ್ತದೆ. ಕತೆಯ ವೀರಾವೇಶದ ಪಾತ್ರಗಳು ಮನದಲ್ಲಿ ಸುಳಿದು, ಮನ ತನುವಿನ ಮೂಲಕ ಒಂದು ಪಾತ್ರವನ್ನು ಹೊಗಳಿದರೆ, ಮತ್ತೊಂದು ಪಾತ್ರವನ್ನು ತೆಗಳುತ್ತದೆ.

ಕತೆ ಹೇಳುವುದಕ್ಕೆ ಕೇಳುವುದಕ್ಕೆ ಮತ್ತು ಪಾಂಡಿತ್ಯಕ್ಕೆ ಬಳಕೆಯಾಗುತ್ತದೆ. ಆಯಾ ಪಾತ್ರಧಾರಿಗಳ ಕಾಲ ನಿರ್ಣಯಕ್ಕೆ ಬಳಕೆಯಾಗುತ್ತದೆ. ಆಯಾ ಹೆಸರಿನ ದೇವಾಲಯ ಕಟ್ಟಲು ಬಳಕೆಯಾಗುತ್ತದೆ. ಕತೆ ಪುರಾಣಗಳನ್ನು ರಚಿಸಿದ್ದು ಮನ ಮತ್ತು ತನು. ಆ ತನುವಿನ ಮನದಿಂದಲೇ ಅವುಗಳಿಗೆ ದೇವಾಲಯಗಳನ್ನು ನಿರ್ಮಿಸಿ, ರಥ ಉತ್ಸವಗಳನ್ನು ಮಾಡುತ್ತದೆ. ಮನ ಆಯಾ ಪೀಠ ಪರಂಪರೆಗಳನ್ನು ಹಾಗೆಯೆ ಮುಂದುವರಿಸಿಕೊಂಡು ಬಂದು ಅವುಗಳಿಗೆ ತನು ಮತ್ತು ಮನ ವಿಧೇಯಕವಾಗಿದೆ.

ಕತೆಗಳನ್ನು ರಚಿಸಿದ್ದು ಮನವೆ, ಅವುಗಳನ್ನು ಜೀವಂತವಾಗಿಟ್ಟು ದೇವಾಲಯ

ನಿರ್ಮಿಸಿದ್ದೂ ಮನವೆ. ದೇವರಿಗೆ ಮದುವೆ ಮಾಡಿ ಛತ್ರಿ ಚಾಮರ ಬೀಸಿ ಶಯನ ಗೃಹಕ್ಕೆ ಕಳುಹಿಸಿದ್ದು ಕೂಡಾ ಮನವೆ. ಇವುಗಳನ್ನು ನೆನಪಿನಲ್ಲಿಟ್ಟುಕೊಂಡು ಸದಾ ಹೊಸತನವನ್ನು ನಿರ್ಮಿಸುವುದು ಕೂಡಾ ಮನವೆ.

ಲದ್ದೆಯ ಸೋಮಯ್ಯ : ದೇವರುಗಳು ಇದ್ದುದು ಸತ್ಯವಲ್ಲವೇ? ಇದೆಲ್ಲಾ ಮನದ ನಿರ್ಮಾಣವು ಎಂದಿರಿ, ಅದು ಹೇಗೆ? ದಯವಿಟ್ಟು ವಿವರಿಸಿ ಬಸವರಸ.

ಬಸವಣ್ಣ : ಆಗಲಿ ಶರಣರೆ. ಬ್ರಹ್ಮ ವಿಷ್ಣು ದೇವಾನುದೇವತೆಗಳು ಮೊದಲೋ, ಅವರು ಸಂಹರಿಸಿದ ರಕ್ಕಸರು ಮೊದಲೋ? ಅಥವಾ ಕತೆ ಪುರಾಣಗಳು ಅವುಗಳ ಹೆಸರಿನಲ್ಲಿ ಕಟ್ಟಿದ ಆಲಯಗಳು ಮೊದಲೊ ?

ಇವೆಲ್ಲವುಗಳನ್ನು ಸೃಷ್ಠಿ ಮಾಡಿ ಕತೆ ಪುರಾಣ ಬರೆದು ಇಂದಿಗೂ ವೈಭವೀಕರಿಸಿ ಹೇಳುವ ಮನ, ರಕ್ಕಸರ ಕತೆ ಪುರಾಣ ಬರೆದು, ಆಲಯಗಳನ್ನು ನಿರ್ಮಿಸಿ, ಅಂದಿನಿಂದ ಇಂದಿನವರೆಗೂ ಜೀವಂತವಾಗಿ ಇಟ್ಟು, ರಂಜನೀಯವಾಗಿ ಹೇಳುವ ಮನ ಹಳೆಯದಾಗಲಿಲ್ಲವೆ? ಆ ಮನಕ್ಕೆ ದೇವಾನು ದೇವತೆಗಳು ರಕ್ಕಸರು ಎಳೆಯರಾಗಲಿಲ್ಲವೆ?

ಲದ್ದೆಯ ಸೋಮಯ್ಯ : ಬಸವರಸ ಎಳೆಯ ನೀನು, ಹಳೆಯ ನಾನು ಎನ್ನುವ ಮಾತನ್ನು ತಾವು ಮನದ ಮೂಲಕ ಹೇಳಿಸಿರುವುರಿ ಎಂದಂತಾಯಿತಲ್ಲವೆ?

ಬಸವಣ್ಣ : ಹೌದು ಶರಣರೆ, ನಿಜವಾದುದನ್ನೇ ಊಹಿಸಿರುವಿರಿ. ನಾನಾದರೇನು ಇಲ್ಲಿ ಕುಳಿತು ಸತ್ಸಂಗ ಆಲಿಸುತ್ತಿರುವ ತಾವಾದರೇನು ? ಅಷ್ಟೇ ಏಕೆ, ಇಡೀ ಭೂ ಮಂಡಲದಲ್ಲಿರುವ ತನುಗಳನ್ನು ಆವರಿಸಿದ ಮನ ಒಂದೇ ಆಗಿದೆ. ಹೀಗಾಗಿ ಈ ಮಾತನ್ನು ಎಳೆಯ ನೀನು, ಹಳೆಯ ನಾನು ಎಂದು ಆರೋಪಿಸಿಕೊಂಡಿದ್ದೇನೆ. ತಾವು ಅರಿವಿನ ಆಲೋಚನೆಯಲ್ಲಿ ತೊಡಗಿದರೆ ಸಾಕು, ತಮ್ಮೆಲ್ಲರ ಅನುಭವಕ್ಕೆ ಬರುತ್ತದೆ.

ಲದ್ದೆಯ ಸೋಮಯ್ಯ : ದೇವರು ದೊಡ್ಡವರೊ ? ದೇವರನ್ನು ರಕ್ಕಸರನ್ನು ದೊಡ್ಡವರನ್ನು ಮಾಡಿದ ಮನ ದೊಡ್ಡದೊ ?

ಬಸವರಸ : ದೇವರು ಮತ್ತು ರಕ್ಕಸರ ಕತೆಗಳನ್ನು ಎಳೆ ಎಳೆಯಾಗಿ ವಿವರಿಸಿ ಬರೆದ ಮನವೆ ದೊಡ್ಡದು ಎಂದಂತಾಗಲಿಲ್ಲವೆ? ಆದರೂ ಮನದ ಮೈದಡವಿ, ತನುವಿನಲ್ಲಿಯೇ ತನ್ಮಯವಾದ ಅರಿವು ಎಂಬ ಗುರುದೇವ ಹೇಳುವ ಮಾತನ್ನು ತಾವು ಸರಿಯಾಗಿ ಆಲಿಸಿ.

ಎಲೆ ಮನವೇ, ನೀನು ದೊಡ್ಡವನಲ್ಲ; ನಿನ್ನಿಂದ ಸೃಷ್ಠಿಸಲ್ಪಟ್ಟ ದೇವರು ದೊಡ್ಡವನಲ್ಲ. ನೀವಿಬ್ಬರು ಮಹಾದಾನಿ ಕೂಡಲ ಸಂಗಮದೇವರಿಂದ ಸೃಷ್ಠಿಯಾದ ಕುನ್ನಿಗಳು. ಆ ಅರಿವಿನ ಬೆಳಕಿನಿಂದ ಹುಟ್ಟಿದ ಮನ ನೀನು. ಆ ಗುರುದೇವನ ದಾನದಿಂದ ಹುಟ್ಟಿದ ನೀನು, ದೇವರನ್ನು, ರಕ್ಕಸರನ್ನು ಸೃಷ್ಠಿಮಾಡಿ ಅವರ

ಪುರಾಣವನ್ನು ಬರೆದು, ಅವರನ್ನು ಹಾಡಿ ಹೊಗಳಿ ಕೊಂಡಾಡಿದೆ. ಹೀಗಾಗಿ ಮನಕ್ಕೆ ದೇವರು ಎಳೆಯ ; ಮನವೇ ಹಳೆಯದು ಎಂದು ಹೇಳಿದ ಕೂಡಲೇ ಅರಿವಿನಿಂದಲೆ ಸೃಷ್ಟಿಯಾದ ಮನ, ಆ ಅರಿವಿನ ಬೆಳಕಿನಲ್ಲಿ ಐಕ್ಯವಾಗಿ ಆ ಅರಿವೇ ತಾನಾಗುತ್ತದೆ. ಎಳೆಯ, ಹಳೆಯರಿಬ್ಬರು ಅಳಿದು ತನುವಿನಲ್ಲಿಯೇ ಸಂಗಮವಾಗುತ್ತಾರೆ.

ಲದ್ದೆಯ ಸೋಮಯ್ಯ : ದೇವರು ಮತ್ತು ರಕ್ಕಸರ ಕತೆಗಳನ್ನು ಎಳೆ ಎಳೆಯಾಗಿ ವಿವರಿಸಿ ನಮಗೆ ತಿಳಿಯುವಂತೆ ಹೇಳಿದ ತಮಗೆ ಶರಣು ಶರಣಾರ್ಥಿ.

ಅಕ್ಕಮ್ಮ:

ಅಯ್ಯಾ , ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ , ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ , ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ.
ಅಯ್ಯಾ , ನೀನೆನ್ನ ಭವವ ಕೊಂದೆಹೆನೆಂದು
ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ.
ಕೂಡಲಸಂಗಮದೇವಾ. ॥ 3 ॥

ದೇವರು ನಿರಾಕಾರನೋ ಅಥವಾ ಸಾಕಾರನೋ ? ಎಂಬುದನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ಅರಿವು ಎಂಬ ಗುರುದೇವ ನಿರಾಕಾರ. ಆ ಗುರುದೇವನಿಗೆ ವಾಹನವಾದ ದೇಹ, ಸಾಕಾರ. ಹೀಗಾಗಿ ನಿರಾಕಾರವಾದ ಗುರುದೇವನಿಗೆ, ದೇಹ, ಜ್ಞಾನವೆಂಬ ವಾಹನವಾಗಿದೆ. ಗುರುದೇವ ನಟರಾಜನಾಗಿ ನಾಟ್ಯಕ್ಕೆ ನಿಂದಲ್ಲಿ, ದೇಹ ಚೈತನ್ಯವೆಂಬ ವಾಹನವಾಗುತ್ತದೆ. ಗುರುದೇವನೆ ಮಹಾದೇವನಾಗಿ ಸಾಕಾರದಿಂದ ಕಾಣಿಸಿಕೊಂಡಾಗ, ಆ ಮಹಾದೇವನೆಂಬ ದೇವನಿಗೆ, ದೇಹ ವೃಷಭನೆಂಬ ವಾಹನವಾಗುತ್ತದೆ.

ಜನನ ಮರಣಗಳನ್ನು ಕೊಂದು ಹಾಕಬೇಕೆಂದು, ಗುರುದೇವ ಜಂಗಮ ಲಾಂಛನವಾಗಿ ಬಂದಾಗ, ದೇಹ ಭಕ್ತನೆಂಬ ವಾಹನವಾಗಿ, ಸೇವೆಗೆ ತೊಡಗಬೇಕು. ಹೀಗಾಗಿ ದೇವರು ಸಾಕಾರನು ಹೌದು, ನಿರಾಕಾರನೂ ಹೌದು. ಈ ಮಾತು ಮನ ಮತ್ತು ತನುವಿನ ಅನುಭವಕ್ಕೆ ಬರಬೇಕು.

ಅಕ್ಕಮ್ಮ: ನಿರಾಕಾರವಾದ ಗುರುದೇವನಿಗೆ, ದೇಹ, ಜ್ಞಾನವೆಂಬ

ವಾಹನವಾಗಿದೆ ಎಂದು ತಿಳಿಸಿಕೊಟ್ಟ ತಮಗೆ ಶರಣು ಶರಣಾರ್ಥಿ.

ಬಸವಣ್ಣ: ಅಕ್ಕ, ನೀವು ನನಗೆ ಗುರುದೇವನಾಗಿ ಸಕಲ ಕಲೆಗಳನ್ನು ಕಲಿಸಿರುವಿರಿ. ನನಗೆ ಶರಣು ಎಂದು ಹೇಳುವುದು ಅಪಚಾರ ತಾಯಿ. ಸಕಲ ಶರಣರಿಗೆ ನಿನಗೆ ಶರಣು ಶರಣಾರ್ಥಿ.

ಕಾಳವ್ವೆ:

ಅಯ್ಯಾ , ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ. ಪ್ರಥಮ ಭವಾಂತರದಲ್ಲಿ
ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು,
ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ. ಎರಡನೆಯ ಭವಾಂತರದಲ್ಲಿ
ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ. ಮೂರನೆಯ ಭವಾಂತರದಲ್ಲಿ
ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ. ನಾಲ್ಕನೆಯ ಭವಾಂತರದಲ್ಲಿ
ಮನೋಹರನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಮನಃ ಪ್ರೇರಕನಾಗಿರಿಸಿಕೊಂಡಿರ್ದಿರಯ್ಯಾ. ಐದನೆಯ ಭವಾಂತರದಲ್ಲಿ
ಕಾಲಲೋಚನನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ಸರ್ವಕಾಲ ಸಂಹಾರವ ಮಾಡಲೆಂದಿರಿಸಿಕೊಂಡಿರ್ದಿರಯ್ಯಾ. ಆರನೆಯ ಭವಾಂತರದಲ್ಲಿ
ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮಗೇರಲು ವಾಹನವಾಗಲೆಂದಿರಿಸಿ ಕೊಂಡಿರ್ದಿರಯ್ಯಾ. ಏಳನೆ ಭವಾಂತರದಲ್ಲಿ
ಬಸವನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗ ಲೆಂದಿರಿಸಿಕೊಂಡಿರ್ದಿರಯ್ಯಾ.
ಇದು ಕಾರಣ ಕೂಡಲ ಸಂಗಮದೇವಾ,
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ . ॥ 4 ॥

ಜನ್ಮಗಳು ಇವೆಯೇ ಬಸವಣ್ಣ ? ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ದೇಹ ಎಂಬುದು ದೇವಾಲಯ. ಇದರಲ್ಲಿ ಅರಿವಿನ ದೇವರು ಇದ್ದಾನೆ. ಈ ದೇವರನ್ನು ಕಾಣಲೇಬೇಕಾದ ಮನ ಕೂಡಾ ದೇಹದಲ್ಲಿಯೇ ಇದೆ. ಮನ ದೇವರಿದ್ದ ದೇಹವನ್ನು ತನ್ನದಾಗಿಸಿಕೊಂಡು, ಅಲ್ಲಿ ತನ್ನದೇ ಆದ ಮರೆವಿನ ಸಾಮ್ರಾಜ್ಯ ಕಟ್ಟಿಕೊಂಡಿದೆ. ಹೀಗಾಗಿ ಇದೊಂದು ಜನ್ಮವೇ ಆಗಿದೆ. ಈ ಜನ್ಮದಿಂದ ಮರೆವು ಎಂಬ ಮನ ಮುಕ್ತನಾಗಬೇಕಾದರೆ, ಅರಿವು ಎಂಬ ಗುರುದೇವನ ದರುಶನವು ಮನಕ್ಕೆ ಆಗಬೇಕು. ಆಗ ಮನದ ಅಜ್ಞಾನವನ್ನು ಗುರುದೇವ ಸುಟ್ಟು ಹಾಕುತ್ತಾನೆ. ಮತ್ತೆ ಮರೆವಿನ ಜನ್ಮದಲ್ಲಿ ಮನ ಪ್ರವೇಶ ಮಾಡುವುದಿಲ್ಲ.

ಕಾಳವ್ವೆ : ಶಿಲಾದ ಸ್ಕಂದ ನೀಲಲೋಹಿತ ಮನೋಹರ ಕಾಲಾಲೋಚನ ವೃಷಭಾರೂಢ ಎಂಬ ಹೆಸರುಗಳನ್ನು ತಮ್ಮ ವಚನದಲ್ಲಿ ಏಕೆ ಬಳಸಿರುವಿರಿ ಎಂಬುದನ್ನು ಶರಣ ಕುಲಕ್ಕೆ ತಿಳಿ ಹೇಳಿ ತಂದೆ.

ಬಸವಣ್ಣ : ಅರಿವು ಎಂಬ ಗುರುದೇವ, ಅಂಗವನ್ನೆ ಆಲಯ ಮಾಡಿಕೊಂಡು, ಲಿಂಗಯ್ಯನೆಂಬ ಹೆಸರಿನ ಮೂಲಕ, ಸದಾ ಅಂಗವನ್ನು ಅರಿವಿನಿಂದ ಬೆಳಗುತ್ತಿದ್ದಾನೆ. ಪುರಾತನರು, ಆ ಶಿವನಿಗೆ, ಶಿಲಾದ ಸ್ಕಂದ ನೀಲಲೋಹಿತ ಮನೋಹರ ಕಾಲಲೋಚನ ವೃಷಭಾರೂಢ ಎಂಬ ಹೆಸರುಗಳ ಮೂಲಕ ಆತನನ್ನು ಕೊಂಡಾಡಿದ್ದಾರೆ. ಪ್ರಾರ್ಥಿಸಿದ್ದಾರೆ. ಹೀಗಾಗಿ ಜಗದಲ್ಲಿರುವ ಸಕಲ ತನುಗಳು ಶಿವಮಯವಾಗಿವೆ. ಸಕಲ ತನುಗಳಿಗೂ ಅರಿವು ಎನ್ನುವ ಶಿವನ ಪರಿಚಯವಾಗಲೆಂದು, ಜ್ಞಾನಿಗಳು ಆಯಾ ಕಾಲ ಘಟ್ಟದಲ್ಲಿ ಪುರಾಣಗಳ ಮೂಲಕ ತನು ಮತ್ತು ಮನಕ್ಕೆ ಶಿವನ ಪರಿಚಯ ಮಾಡಿಸಿದರು.

ಕಾಳವ್ವೆ : ಆದರೆ ಪುರಾಣಗಳೇ ನಿಜವಾಗಿ ತನುವಿನಲ್ಲಿ ತನ್ಮಯವಾದ ಅರಿವು ಎನ್ನುವ ಶಿವನೆ ದೂರವಾಗಿರುವನಲ್ಲ ಬಸವರಸ. ಇದಕ್ಕೆ ಕಾರಣವಾದರೂ ಏನಿರಬೇಕು?

ಬಸವಣ್ಣ : ಸುಂದರವಾದ ಪ್ರಶ್ನೆಯನ್ನೆ ಕೇಳಿರುವಿರಿ ತಾಯಿ. ಇದು ತನುವನ್ನು ಆವರಿಸಿದ ಮನದ ಕೆಲಸ. ತನುವಿನಲ್ಲಿ ತನ್ಮಯವಾದ ಅರಿವು ಎಂಬ ಗುರುದೇವನು ನೀಡಿದ ಉಪದೇಶವನ್ನು, ಮನ ಸಂಗ್ರಹ ಮಾಡಿಕೊಂಡು, ತನುವಿನಲ್ಲಿ ತನ್ಮಯವಾದ ಗುರುದೇವನನ್ನು ಪಕ್ಕಕ್ಕೆ ತಳ್ಳಿ, ತನುವಿಗೆ ಗುರುವಿನ ವೇಷ ಹಾಕಿ, ಮನ ತನುವಿನ ಮೂಲಕ ಮತ್ತೊಂದು ತನುವಿಗೆ ಗುರುವಾಗಿ ಉಪದೇಶ ಮಾಡುವ ಚಾಳಿಯನ್ನು ಬೆಳಸಿಕೊಂಡಿದೆ. ಪುರಾಣದ ಕಥೆಗಳನ್ನೆ ತನ್ನ ವ್ಯವಹಾರಕ್ಕೆ ಬಳಸಿಕೊಂಡಿದೆ.

ಕಾಳವ್ವೆ : ಅಂಗದಲ್ಲಿ ಎಂತಹ ಅದ್ಭುತವಾದ ರಹಸ್ಯವು ಬಚ್ಚಿಟ್ಟುಕೊಂಡಿದೆಯಲ್ಲಾ ಬಸವರಸ? ಜ್ಞಾನಿಗಳು ಮಾಡಿದ ಪ್ರಯತ್ನಕ್ಕೆ ಮನ ತಣ್ಣೀರೆರಚಿ ತನುವಿನಲ್ಲಿ ಮರೆವಿನ ಸಾಮ್ರಾಜ್ಯವನ್ನೇ ಕಟ್ಟಿಕೊಂಡದ್ದು ಬಲು ಸೋಜಿಗದ ವಿಷಯವಾಗಿದೆ.

ದುಗ್ಗಳೆ : ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಸಕಲ ಶರಣರಿಗೂ ಶರಣು ಶರಣಾರ್ಥಿ. ಮತ್ತೆ ನಾಳೆ ಸತ್ಸಂಗದ ಸಭೆಯಲ್ಲಿ ಸೇರೋಣ.

ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವರಸ ಎಂದು ಕೈ ಮುಗಿದು ಸತ್ಸಂಗದ ಸವಿಯನ್ನು ಚರ್ಚಿಸುತ್ತಾ ತಮ್ಮ ತಮ್ಮ ಮನೆಗೆ ತೆರಳಿದರು.

□

೩

ಮಹಾಮನೆಯಲ್ಲಿ ಶಿವಶರಣರು ಸತ್ಸಂಗಕ್ಕಾಗಿ ಕಾದು ಕುಳಿತಿದ್ದಾರೆ. ಬಸವಣ್ಣ ಬರುವುದೊಂದೆ ತಡ ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವಣ್ಣ ಎಂದು ಕೈ ಮುಗಿಯುತ್ತಾ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

ಮಸಣಮ್ಮ :

ಅಯ್ಯಾ , ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ .
ಅದೇನು ಕಾರಣ ತಂದೆಯೆಂದರಿದೆನಯ್ಯಾ .
ಎನ್ನ ಕಾರಣ ತಂದೆಯೆಂದರಿದೆನಯ್ಯಾ .
ಅರಿದರಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು
ಕಣ್ದೆರೆದೆನಯ್ಯಾ, ಕೂಡಲಸಂಗಮದೇವಾ. ॥ 5 ॥

ಬಸವರಸ, ಮರ್ತ್ಯಕ್ಕೆ ತಂದೆಯಾಗಿ ನೆನೆ ನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ ಎಂದು ಹೇಳಿರುವಿರಿ . ಇದನ್ನು ಬಿಡಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಲೋಕ ತಿಳಿದುಕೊಂಡ ತಂದೆಯೇ ಬೇರೆ, ನಾನು ವಚನದ ಸೂತ್ರದಲ್ಲಿ ಹೇಳಿದ ತಂದೆಯೇ ಬೇರೆ.

ಮಸಣಮ್ಮ : ಇದೆಂಥಹ ರಹಸ್ಯ ಬಸವರಸ ಲೋಕ ತಿಳಿದುಕೊಂಡ ತಂದೆ ತಂದೆಯಲ್ಲವೆ?

ಬಸವಣ್ಣ : ಇಡೀ ಬ್ರಹ್ಮಾಂಡವನ್ನು ಜಲ ಬಿಂದುವೆಂಬ ಬೀಜದಲ್ಲಿ ಬಚ್ಚಿಟ್ಟು, ಅದರಲ್ಲಿ ಅರಿವಿನ ತಂದೆ ತನ್ಮಯವಾಗಿದ್ದಾನೆ. ಆತ ನೆಪ ಮಾತ್ರಕ್ಕೆ ತಂದೆಯ ಮುಖಾಂತರ, ತಾಯಿ ಗರ್ಭ ಪ್ರವೇಶ ಮಾಡಿ, ಆ ಜೀವಜಲಬಿಂದುವೇ ರಕ್ತ ಮೂಳೆ ಮಾಂಸ ಮಜ್ಜ ಮೇದಸ್ಸು ಆಗಿ, ಅವು ಸೋರದಂತೆ ಸುಂದರವಾದ ಚರ್ಮದ ಕವಚವಾಗಿ, ತನುವಾಗಿ ಆ ತನುವಿನಲ್ಲಿಯೇ ಇಡೀ ಬ್ರಹ್ಮಾಂಡದ ರಹಸ್ಯವನ್ನು ಇಟ್ಟು ಹೊಲಿದು ಮರ್ತ್ಯಕ್ಕೆ ಬಂದ ಅರಿವಿನ ತಂದೆ ಆತ.

ಆ ತಂದೆ, ತಂದೆಗೂ ತಂದೆ. ಇಡೀ ಬ್ರಹ್ಮಾಂಡಕ್ಕೆ ತಂದೆಯಾಗಿ, ತನುವಿನಲ್ಲಿ ಸಂಗಮವಾದ ತಂದೆ ಆತ. ಆ ತಂದೆಗೆ ಕಂದನಾದಾತನೆ ಜಾಣ. ಆತನನ್ನು ನೆನೆ ನೆನೆದು ಪರಮಸುಖಿಯಾಗಿ ಬದುಕಿದಾತನೆ ಜಾಣ.

ತನುವಿನಲ್ಲಿಯೇ ತಂದೆ ತಾಯಿ, ಬಂಧು ಬಳಗವನ್ನು ಸೃಷ್ಠಿಮಾಡಿದ ತಂದೆ ಆತ. ಕಂದನಾದವನು ಅರಿವಿನ ತಂದೆಗೆ ವಾರಸುದಾರನಾಗಬೇಕೆ ಹೊರತು, ಲೋಕದ ತಂದೆಗೆ ಅಲ್ಲ.

ತನುವನ್ನು ಆವರಿಸಿದ ಮನವನ್ನೆ ಕಂದನನ್ನಾಗಿಸಿಕೊಂಡು, ತನುವಿನಲ್ಲಿ ತನ್ಮಯವಾದ ಅರಿವಿನ ತಂದೆಯಾತ. ಕಂದ ಮಾಡಿದ ಅಪರಾಧಕ್ಕೆ ಮುನಿದು ಮೈದಡವಿದನಲ್ಲದೆ, ಕಂದನ ಪ್ರಾಣಕ್ಕೆ ಮುನಿಯಲಿಲ್ಲ. ಕಂದನಿಗೆ ಜನ್ಮ ಕೊಟ್ಟು, ಕೈ ಹಿಡಿದು ನಡೆಸುವ ತಂದೆಯಾದ. ಅರಿದರಿದು ಆ ಅರಿವೆ ತಾನೆಂದು ಕಂದನಾಗಿ ತಿಳಿದು, ಅರಿವಿನ ತಂದೆಗೆ ಶರಣು ಹೋಗಿ ಶರಣನಾದ. ಆ ಶರಣ ಆಚರಿಸುವ ಆಚರಣೆ ಅಗೋಚರದ ಆಚರಣೆ. ಅರಿವಿನ ತಂದೆ ಹೇಳಿದಂತೆ ಕಂದನ ಆಚರಣೆ.

ಮಸಣಮ್ಮ : ಅರಿದರಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು ಕಣ್ದೆರೆದೆನಯ್ಯಾ ಎನ್ನಲು ಕಾರಣವೇನು ಬಸವರಸ?

ಬಸವಣ್ಣ : ಲೋಕದ ಕಣ್ಣು ಬೇರೆ, ಅರಿವಿಗೆ ಶರಣು ಹೋದ ಶರಣನ ಕಣ್ಣು ಬೇರೆ . ಲೋಕದ ಕಣ್ಣು ಕುರುಡು; ಈ ಕಣ್ಣಿಗೆ ಹೆಣ್ಣು, ಗಂಡು, ಭೂಮಿ, ಆಭರಣ, ವಸ್ತು , ನಾಣ್ಯ, ಬಡವ, ಶ್ರೀಮಂತ , ರಾಜ, ಅಧಿಕಾರಿ , ದೇವಾಲಯಗಳು ಕಾಣುತ್ತವೆ. ಇದು ಗೋಚರದ ಆಚಾರದ ಕಣ್ಣು.

ಲೋಕದ ಕಣ್ಣಿಗೆ ಆಭರಣ ಗೋಚರಿಸುತ್ತದೆ. ಶ್ರಮಪಟ್ಟು ದುಡಿದು ಸಂಗ್ರಹಿಸುತ್ತದೆ. ಭ್ರಷ್ಟಾಚಾರ ಲಂಚಕ್ಕೆ ಕೈ ಒಡ್ಡಿ ಸಂಗ್ರಹಿಸುತ್ತದೆ. ಇಲ್ಲ ಕಳುವು ಕೊಲೆ ಸುಲಿಗೆ ದರೋಡೆ ಮಾಡಿ ಸಂಗ್ರಹಿಸುತ್ತದೆ. ಈ ವಿಷಯದಲ್ಲಿ ಲೋಕಕ್ಕೆ ತಂದೆ, ತಾಯಿ, ಮಗ, ಬಂಧು, ಬಳಗ ಎನ್ನುವುದೂ ಉಳಿಯುವುದಿಲ್ಲ. ಒಬ್ಬ ಮತ್ತೊಬ್ಬನನ್ನು ಕೊಲೆ ಮಾಡಿಯಾದರೂ ಆಭರಣ ಸಂಗ್ರಹಿಸುತ್ತಾನೆ. ಲೋಕದ ಕಣ್ಣಿಗೆ ಗೋಚರಿಸಿದ್ದು ಆಭರಣ ಮಾತ್ರ .

ಶರಣನ ಕಣ್ಣು, ಅರಿವಿನ ತಂದೆಯನ್ನು ಪೂಜಿಸುವ ಅಗೋಚರ ಆಚಾರದ ಕಣ್ಣು. ಈ ಕಣ್ಣು ಆಭರಣ ನೋಡುತ್ತದೆ. ಇದೊಂದು ಹಳದಿ ಬಣ್ಣದ ಲೋಹ! ಲೋಹದಲ್ಲಿ ಹಳದಿ ಬಣ್ಣ ಅಡಗಿದೆ. ಲೋಹದಲ್ಲಿ ಅಡಗಿದ ಬಣ್ಣ, ಮಾಟಕ್ಕೆ ಶರಣ ಶರಣು ಹೋಗಲಿಲ್ಲ. ಶರಣ ಅರಿವಿಗೆ ಶರಣು ಹೋದ; ಆ ಅರಿವಿನಿಂದ ಕಣ್ದೆರೆದು ನೋಡಿದ. ಬಣ್ಣಕ್ಕೆ ಕಣ್ಣು ಮರುಳಾಗಲಿಲ್ಲ. ಬಣ್ಣಕ್ಕೆ ಮರುಳಾದ ಲೋಕದ ಕಣ್ಣುಗಳನ್ನು ಕುರುಡು ಕಣ್ಣುಗಳೆಂದು ಕರೆದು ಮರುಗಿದ .

"ನೋಡೂದ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ; ನೋಡೂದ ನೋಡುವಡೆ ಕೂಡಲಿಲ್ಲ ಅಗಲಲಿಲ್ಲ. ಕೂಡದ ಅಗಲದ ಕೂಟದ ಸುಖವನ್ನು ಗುಹೇಶ್ವರ ನಿಮ್ಮ ಶರಣ ಮಾತ್ರ ಬಲ್ಲ". ಇದು ಅರಿವಿನ ಸುಖ! ತನು ಮರ್ತ್ಯಕ್ಕೆ ಬಂದ ಸುಖ, ತನುವಿನ ಅರಿವೇ ತಂದೆಯಾದ ಸುಖ. ತಿಳಿಯುವ ಮನವೇ ಕಂದನಾಗಿ; ಅರಿವಿನ ತಂದೆಯನ್ನು ನೆನೆನೆನೆದು ಸುಖಿಯಾಗಿ ಶರಣ ಬದುಕಿದ ಸುಖ ! ಗೋಚರದ ಆಚಾರಗಳನೆಲ್ಲ ಅರಿದರಿದು, ತನುವಿನ ಅರಿವಿನಲ್ಲಿ ಸಂಗಮ ಮಾಡಿ; ಕಣ್ದೆರೆದು ನೋಡುವ ಸಂಗಮನಾಥನ ಸುಖ !

ಕದಿರೆ ರೆಮ್ಮವ್ವೆ : ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು ಎಂದು ತಾವು ಕಂದನಾಗಿ ಹಾಡಿದ್ದು, ಅರಿವಿನ ತಂದೆಯ ಕುರಿತು ಅಲ್ಲವೇ ಬಸವರಸ?

ಬಸವಣ್ಣ : ಹೌದು ತಾಯಿ. ಸರಿಯಾಗಿ ಊಹಿಸಿರುವಿರಿ. ಆ ಅರಿವಿನ ತಂದೆಗೆ ಕಂದನಾಗಿ ಶರಣು ಹೋದಾತನೆ ಶರಣ. ಹೀಗಾಗಿ ನಾನು ತಮ್ಮೆಲ್ಲರನ್ನು ಶರಣ ಎಂದು ಕರೆಯುತ್ತೇನೆ.

ಕದಿರೆ ರೆಮ್ಮವ್ವೆ : ಅಂತಹ ಪರಿಪೂರ್ಣ ಅರಿವು ಎಂಬ ಗುರುದೇವನನ್ನು ತಿಳಿಯುವ ಶಕ್ತಿ ನಮ್ಮಲ್ಲಿದೆಯೇ ಬಸವರಸ?

ಬಸವಣ್ಣ : ಸತ್ಯವಾಗಿಯೂ ನಿಮ್ಮಲ್ಲಿ ಆ ಶಕ್ತಿ ಇದೆ. ನಿಮ್ಮಲ್ಲಿ ಅಷ್ಟೇ ಏಕೆ, ಇಡೀ ಜಗತ್ತಿನಲ್ಲಿರುವ ಸಕಲ ಅಂಗಗಳಲ್ಲಿಯೂ ಅರಿವಿನ ಶಕ್ತಿ ಸಂಗಮವಾಗಿದೆ. ಆ ಅರಿವು ಎಂಬ ಗುರುದೇವನನ್ನು ತಿಳಿಯುವ, ಮನವೆಂಬ ಕಂದನು ಕೂಡಾ ಸಕಲ ತನುಗಳನ್ನು ಆವರಿಸಿದ್ದಾನೆ. ಮನ ಮತ್ತು ತನುವಿನ ಮೂಲಕ ತನುವಿನಲ್ಲಿಯೆ ತನ್ಮಯವಾದ ಅರಿವಿನ ತಂದೆಯನ್ನು ಕಂಡುಕೊಳ್ಳ ಬೇಕಾಗಿದೆ.

ಕದಿರೆ ರೆಮ್ಮವ್ವೆ : ಜಗತ್ತಿನಲ್ಲಿರುವ ಸಕಲ ದೇಹಗಳಲ್ಲಿಯೂ ಅರಿವಿನ ಶಕ್ತಿ ಸಂಗಮವಾಗಿದೆ ಎಂದು ತಿಳಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ರೇಚವ್ವೆ :

ಕರಿ ಘನ : ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ.
ಗಿರಿ ಘನ: ವಜ್ರ ಕಿರಿದೆನ್ನಬಹುದೆ? ಬಾರದಯ್ಯಾ.
ತಮಂಧ ಘನ: ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ.
ಮರಹು ಘನ: ನಿಮ್ಮ ನೆನೆವ ಮನ ಕಿರಿದೆನ್ನಬಹುದೆ?
ಬಾರದಯ್ಯಾ, ಕೂಡಲಸಂಗಮದೇವಾ. ॥ 6 ॥

ಬಸವರಸ ತಮ್ಮ ಈ ವಚನವನ್ನು ಬಿಡಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಪ್ರಸಿದ್ಧಿ ಪಡೆದ ರಾಜ ಮಹಾರಾಜರು, ಈ ಪ್ರಪಂಚದಲ್ಲಿ ಬಹಳಷ್ಟು ಜನ ಸಿಕ್ಕುತ್ತಾರೆ. ಜನ ಸಮುದಾಯದ ಕಷ್ಟ ಕಾರ್ಪಣ್ಯಗಳನ್ನು ಬಾಚಿಕೊಂಡು, ಇಡೀ ಸಮುದಾಯವನ್ನೇ ಅರಳಿಸಬೇಕೆಂಬ ಪ್ರಾರಂಭದ ಆಶಯದಿಂದಲೇ ರಾಜನಾದ. ಅದು ಬರಬರುತ್ತಾ ಬತ್ತುತ್ತ ಹೋಗುತ್ತದೆ. ರಾಜನಾಗಿ ನೂರುಕಾಲ ಉಳಿಯಬೇಕೆಂಬ ಆಸೆ ಚಿಗಿಯುತ್ತದೆ. ಅಡ್ಡಿಪಡಿಸಿದವರ ರುಂಡ ಚೆಂಡಾಡಿ ರಕ್ತದ ಕಾಲುವೆ ಹರಿಯುತ್ತದೆ. ಸಂಪತ್ತು ಸಂಗ್ರಹವಾಗುತ್ತದೆ. ಸಾಮ್ರಾಜ್ಯ ಭೂಮಿ ವಿಸ್ತಾರವಾಗುತ್ತದೆ. ಸಮುದಾಯದ ಸಾವು ನೋವುಗಳು ಅಧಿಕವಾಗುತ್ತವೆ.

ರಾಜ ಮತ್ತು ಅಧಿಕಾರಿಗಳು ಇದಕ್ಕೆ ಹೊರತಲ್ಲ. ತನುವಿನ ಮಹದಾಶಯ

ಪುಸ್ತಕದಲ್ಲಿದೆ. ಜನ ಸಮುದಾಯವನ್ನು ಒಳಿತುಪಡಿಸುವ ಸದಾಶಯ ರಾಜನ ತನುವಿನಿಂದ ಹೊರಬಂದು ಪುಸ್ತಕ ಸೇರಿತು. ಅಲ್ಲಿಯೇ ಉಳಿಯಿತು. ತನುವಿನ ಆಶಯ ಸಮುದಾಯಕ್ಕೆ ಬಳಕೆಯಾಗಲಿಲ್ಲ. ಆಶಯ ತನುವಿನ ಗರ್ಭದಲ್ಲಿ ಉಳಿದು, ಅಧಿಕಾರದ ಆಸೆಯ ಬಲ ಅಧಿಕವಾಯಿತು. ಮತ್ತೆ ಮತ್ತೆ ರಾಜನಾಗಬೇಕೆಂಬ ಹಂಬಲಕ್ಕೆ ಮರುಳಾದ. ತನು, ಚಿನ್ನ ಭೂಮಿ ಸಂಗ್ರಹಿಸಲು ಮುಂದಾಯಿತು. ಸಮುದಾಯದ ಸಾಮಾನ್ಯ ಬೇಡಿಕೆಗಳಿಗೆ ಕತ್ತರಿ ಬಿತ್ತು . ಅಜ್ಞಾನಕ್ಕೆ ಆನೆ ಬಲ ಬಂತು.

ಅಧಿಕಾರ, ಚಿನ್ನ, ಭೂಮಿಗೆ ಮರುಳಾದ ರಾಜ ಮಹಾರಾಜರು, ಯುದ್ಧ ಮಾಡಿ, ರಕ್ತದ ಕಾಲುವೆ ಹರಿಸಿ, ಮಣ್ಣು ಸೇರಿದ್ದಾರೆ. ಅವರ ತನುವಿನಲ್ಲಿದ್ದ ಸದಾಶಯ ಒಂದಿಷ್ಟೂ ಬಳಕೆಯಾಗದೆ ಅವರ ಜೊತೆಗೆಯೇ ಮಣ್ಣು ಸೇರಿ ಹೊರಟುಹೋಯಿತು.

ಸಿದ್ಧಾರ್ಥ ಮಾತ್ರ ಯೋಚಿಸಿದ: ತಾನು ರಾಜನಾಗಿ ಸದಾಶಯವನ್ನು ಹೊಂದಿದ್ದೇನೆ. ಪಕ್ಕದ ರಾಜನೂ ಆ ಜನದ ಏಳ್ಗೆಗಾಗಿ ಸದಾಶಯವನ್ನು ಹೊಂದಿದ್ದಾನೆ. ನನ್ನಲ್ಲಿ ಚಿನ್ನದ ಕಿರೀಟವಿದೆ. ಹೆಂಡತಿ ಮಕ್ಕಳು ಇದ್ದಾರೆ, ಸಿಂಹಾಸನವಿದೆ. ಭೂಮಿ, ವಡವೆಗಳಿವೆ. ಕಿರೀಟಕ್ಕಾಗಿ ಭೂಮಿಯ ವಿಸ್ತಾರಕ್ಕಾಗಿ ರಕ್ತದ ಕಾಲುವೆ ಹರಿಸುವುದು ಮೂರ್ಖತನವಲ್ಲವೆ? ಸಮುದಾಯದ ಸದಾಶಯಕ್ಕಾಗಿ ಸಮುದಾಯವನ್ನೇ ಕೊಂದು ಚಿತ್ರಹಿಂಸೆಗೆ ಒಳಪಡಿ ಸುವುದು ಮೂರ್ಖತನವಲ್ಲವೆ ? ಸಿದ್ಧಾರ್ಥ ಹೀಗೆ ಯೋಚಿಸಿದ; ಸದಾಶಯದ ಅರಿವಿನ ಬುದ್ಧ ಚಿಗುರೊಡೆದ. ಸಿದ್ಧಾರ್ಥನ ಅಜ್ಞಾನಕ್ಕೆ ಬುದ್ಧನ ಅರಿವೇ ಅಂಕುಶವಾಯಿತು.

ಸಿದ್ಧಾರ್ಥ ಹಾಗೂ ವರ್ಧಮಾನ ರಾಜರಾಗಿದ್ದರೆ ಸರ್ವರಾಜರಂತೆ ಮಣ್ಣು ಸೇರುತ್ತಿದ್ದರು. ಬುದ್ಧ, ಮಹಾವೀರರಾಗಿ ಪ್ರಪಂಚಕ್ಕೆ ಬೆಳಗುತ್ತಿರಲಿಲ್ಲ. **ಅರಿವಿನ ಸದಾಶಯ** ಚಿಕ್ಕದಾದರೂ, ಆಸೆಯಿಂದ ಆನೆಯಂತೆ ಬೆಳೆದ ಅಜ್ಞಾನದ ತನುವಿಗೆ ಅಂಕುಶವಾಗುತ್ತದೆ. ತನ್ನ ತನುವಿನ ಅರಿವು ತನ್ನ ತನುವಿನ ಅಜ್ಞಾನಕ್ಕೆ ಅಂಕುಶವಾಗಿ; ಜಗದಗಲ ಮುಗಿಲಗಲ ಬೆಳಗುತ್ತದೆ. ಹಾಗೆಯೇ ಗಿರಿ ಘನವಾದರೂ ಅದನ್ನು ಕತ್ತರಿಸುವ ವಜ್ರದ ಉಳಿಯನ್ನು ಕಿರಿದೆನ್ನಲು ಬರುವುದಿಲ್ಲ. ಕತ್ತಲು ಘನವಾದರೂ ಅದನ್ನು ನುಂಗಿ ಬೆಳಗುವ ಜ್ಯೋತಿಯನ್ನು ಕಿರಿದೆನ್ನಲು ಬರುವುದಿಲ್ಲ. ಮರಹು ಘನವಾದರೂ ತನುವಿನ ಅರಿವಿನ ಮೂಲಕ ನೆನೆದು ಆ ಅರಿವೇ ತಾನಾಗುವ ಮನವನ್ನು ಕಿರಿದೆನ್ನಲು ಬರುವುದಿಲ್ಲ .

ತನುವಿನಲ್ಲಿ ಆನೆಯ ಬಲದ ಅಜ್ಞಾನವೂ ಇದೆ; ಅಂಕುಶ ಗಾತ್ರದ ಅರಿವೂ ಇದೆ. ಅಂಕುಶ ಆನೆಗೆ ಬಳಕೆಯಾಗಿ ಅರಿವು ಮಾತ್ರ ಉಳಿಯಬೇಕು. ಘನರೂಪದ ಗಿರಿ ವಜ್ರದ ಉಳಿಯಲ್ಲಿ ಸಂಗಮವಾದಂತೆ, ಬೃಹದಾಕಾರದ ಕತ್ತಲು ಜ್ಯೋತಿಯಲ್ಲಿ ಸಂಗಮವಾದಂತೆ; ಅರಿವು, ಮನ, ತನುವಿನಲ್ಲಿ ಸಂಗಮವಾಗಿ ಕೂಡಲಸಂಗಮನೇ ತಾನಾಗಬೇಕು.

ರೇಚವ್ವೆ : ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ಕಾಮಮ್ಮ :

ಭವಬಂಧನ ಭವಪಾಶವಾದ ಕಾರಣವೇನಯ್ಯಾ?
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ,
ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,
ಅರಿದಡೀ ಸಂಸಾರವ ಹೊದ್ದಲೀವೆನೆ, ಕೂಡಲಸಂಗಮದೇವಾ?
ಭವಬಂಧನ ಭವಪಾಶವಾದ ಕಾರಣವೇನಯ್ಯಾ ? : ॥ 7 ॥

ತಮ್ಮ ಈ ವಚನದ ಬೆಡಗನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ಹೌದು ತಾಯಿ. ಅರಿವಿನ ಸುಳುಹು ತಿಳಿಯುವ ಮತ್ತು ತಿಳಿಸುವ ಒಂದು ವ್ಯವಹಾರ ಈ ಭೂಮಂಡಲದಲ್ಲಿ ಪ್ರಾರಂಭವಾಗಿದೆ. ಹೀಗಾಗಿ ಓದಿ, ಕೇಳಿ, ಅರಿವಿನ ಸುಳುಹು ಹೇಳುವ ವ್ಯವಹಾರಿಕ ಕೆಲಸದಲ್ಲಿ ಮನ ಮತ್ತು ದೇಹ ತೊಡಗಿರುವುದರಿಂದ, ದೇಹದಲ್ಲಿ ಸಂಗಮವಾದ ಅರಿವು ದೇಹದಲ್ಲಿಯೇ ಉಳಿದಿದೆ. ಓದಿ ಕೇಳಿ ಸಂಗ್ರಹವಾದ ಅರಿವನ್ನೇ ಇತರರಿಗೆ ಹೇಳುವ ವ್ಯವಹಾರದಲ್ಲಿ ಮನ ತನುವಿನೊಂದಿಗೆ ತೊಡಗಿರುವುದರಿಂದ ಇದು ಕೂಡಾ ಉಪಜೀವನದ ಕೆಲಸವಾಗಿದೆ.

ಹುಟ್ಟಿದ ದಿನದಿಂದ ತನುವಿನ ಗರ್ಭದಲ್ಲಿದ್ದ ಅರಿವು, ತನು ಮತ್ತು ಮನಕ್ಕೆ ಬಳಕೆಯಾಗದೇ, ತನುವಿನ ಹುಟ್ಟೆ ತನುವಿಗೆ ಉರುಳು ಆಗುತ್ತದೆ. ತನುವಿನ ಆಯುಷ್ಯದ ಅವಧಿಯನ್ನು ತಿಳಿಯದ ಮನ, ಉಪಜೀವನಕ್ಕೆ ತನುವನ್ನು ಮೀಸಲಾಗಿಡುತ್ತದೆ. ಅರಿವು ತಿಳಿಯದ ಮನದ ತನುವಿನ ಹಿಂದಣ ಅವಧಿಯೇ, ಹಿಂದಣ ಜನ್ಮವಾಗಿ ಕಾಡುತ್ತದೆ. ತನುವಿನಲ್ಲಿಯೇ ತನ್ಮಯವಾದ ಅರಿವಿನ ಸಿರಿ, ಅರಿವು ಎಂಬ ಥಲಗಾರ ಜಂಗಮನಿಗೆ ಬಳಕೆಯಾಗದೆ, ಉಪ ಜೀವನಕ್ಕೆ ಬಳಕೆಯಾಗಿ, ತನುವಿನ ಹುಟ್ಟೇ ತನುವಿಗೆ ಉರುಳಾಗುತ್ತದೆ.

ಹುಟ್ಟು ಸಾವುಗಳ ಮಧ್ಯದ ಜೀವನಕ್ಕೆ ಅರಿವು ಬಳಕೆಯಾದರೆ, ಹುಟ್ಟಿಲ್ಲ ಸಾವಿಲ್ಲ. ಸಂಕಟ, ತುಮುಲ, ದುಗುಡಗಳು ಮೊದಲೆ ಇಲ್ಲ. ಉಪ ಜೀವನಕ್ಕಾಗಿ ಕ್ಷಣ ಕ್ಷಣಕ್ಕೂ ಕುದಿಯುವ ಅಜ್ಞಾನದ ಸಂಸಾರವನ್ನು ತನು ಹೊದಿಯುವುದಿಲ್ಲ. ಹುಟ್ಟು ಸಾವುಗಳೆಂಬ ಭವ ಪಾಶದ ಉರುಳು ಅರಿವು ಎಂಬ ಗುರುದೇವನ ಕೊರಳಿಗೆ ಹೂವಿನ ಹಾರವಾಗುತ್ತದೆ.

ಸತ್ಯಕ್ಕ : ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಮಂಗಲ ಹಾಡಿದರು.

ಸತ್ಸಂಗದ ಸವಿಯನು ಉಣ್ಣುತ್ತ ಶರಣರು ತಮ್ಮ ತಮ್ಮ ಮನೆಗೆ ನಡೆದರು.

೪

ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ ಸಕಲ ಶರಣರು ಶರಣು ಶರಣಾರ್ಥಿ ಎಂದು ಕುಳಿತುಕೊಳ್ಳುತ್ತಾರೆ.

ಲಕ್ಷಮಮ್ಮ :

ಸಂಸಾರಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆವುತ್ತಿದೆ.
ಸಂಸಾರಸಾಗರ ಉರದುದ್ದವೆ? ಹೇಳಾ!
ಸಂಸಾರಸಾಗರ ಕೊರಳುದ್ದವೆ? ಹೇಳಾ!
ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ !
ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ
ಕೂಡಲಸಂಗಮದೇವಾ ನಾನೇವೆನೇವೆನಯ್ಯಾ ! ॥ 8 ॥

ತಮ್ಮ ಈ ವಚನದ ಬೆಡಗಿನ ರಹಸ್ಯ ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಜಗತ್ತಿನಲ್ಲಿರುವ ಸಕಲ ಜೀವರಾಶಿಗಳ ಸೃಷ್ಟಿಗೆ ಜಲಬಿಂದುವೇ ಕಾರಣ. ಜೀವ ಜಲಬಿಂದು ಗರ್ಭಸೇರಿ ತನುವಾಗಿ ಹೊರ ಬಂದಿದೆ.

ಕಾಮಮ್ಮ : ಅದು ಹೇಗೆ ಬಸವರಸ? ವಿವರಿಸಿ ಹೇಳಿ ತಂದೆ.

ಬಸವಣ್ಣ : ಜಲಜನಕ ಮತ್ತು ಆಮ್ಲಜನಕ ಬಯಲೊಂದಿಗೆ ಬಯಲಲ್ಲಿ ಬೆರೆತು ಜೀವಜಲವಾಗಿದೆ. ಜಲಜನಕಕ್ಕೆ ಉರಿಯುವ ಗುಣವಿದೆ. ಜಲಜನಕ – ಆಮ್ಲಜನಕ ಇವೆರಡು ಕೂಡಿದ ಜಲಕ್ಕೆ ಅಗ್ನಿ ನಂದಿಸುವ ಗುಣವಿದೆ. ಸರ್ವವನ್ನು ತನ್ನ ಗರ್ಭದಲ್ಲಿಟ್ಟುಕೊಂಡು ಅವೆಲ್ಲವುಗಳನ್ನು ಬಯಲು ಮಾಡುವ ಶಕ್ತಿ ಬಯಲಿಗಿದೆ.

ಜಲ, ಜೀವರಾಶಿಗಳಿಗೆ ಜನ್ಮ ಕೊಡುವ ಜೀವಜಲ; ತನುವಿನ ಜಲವೆಲ್ಲ ಜೀವಜಲ! ಜಲಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ರುಚಿಯಿಲ್ಲ. ತನ್ನ ಮಟ್ಟ ತಾನು ಕಾಯ್ದುಕೊಂಡಿದೆ. ಆದರೆ ತನುವಿನಲ್ಲಿರುವ ಜಲದ ಬಣ್ಣ ಕೆಂಪು. ಆ ಜೀವ ಜಲವೇ ರಕ್ತ ಎಂದು ಹೆಸರು ಪಡೆದಿದೆ. ಮೂಳೆ ಮಾಂಸ ಮಜ್ಜೆ ಮೇದಸ್ಸು ಚರ್ಮ ಎಂದು ಹೆಸರು ಪಡೆದಿದೆ.

ತನುವಿನಲ್ಲಿರುವ ಬಯಲು, ಅರಿವು ಎನ್ನುವ ಗುರುದೇವನ ಪಾತ್ರವಹಿಸಿ ಇಡೀ ತನುವನ್ನು ಅರಿವಿನಿಂದ ಬೆಳಗುತ್ತದೆ. ಹೀಗೆ ಬೆಳಗುವ ಗುರುದೇವನ ಬೆಳಕಿನಿಂದ, ಮರೆವು ಎನ್ನುವ ನೆರಳು ಮನದ ಪಾತ್ರ ವಹಿಸಿ, ಇಡೀ ತನುವನ್ನು ತನ್ನ ಸ್ವಾಧೀನ ಪಡಿಸಿಕೊಂಡಿದೆ.

ಕಣ್ಣಿನಲ್ಲಿ ದೃಶ್ಯವಾಗಿ ಬೆರೆತ ಮನ, ತನ್ನ ಅಜ್ಞಾನದ ಸಂಸಾರ ಕಣ್ಣಿನಲ್ಲಿ ಹೂಡಿ, ನೋಡಿದ್ದನ್ನೆಲ್ಲಾ ಬೇಡಿ, ತನುವಿನ ಕೊರಳಿಗೆ ಉರುಳು ತರುತ್ತದೆ. ಕೇಳಿದ ಶಬ್ದ ಕಿವಿಯಲ್ಲಿ ಸೋಸಿ ಕೇಳದೆ, ತನುವಿಗೆ ಬಡಿದು, ಎದೆಯಲ್ಲಿ ಕಿಚ್ಚು ಹಚ್ಚುತ್ತದೆ. ತನ್ನಂತೆಯೇ ಇರುವ ಮತ್ತೊಂದು ತನುವಿನ ಸ್ಪರ್ಶ ಬಯಿಸಿ, ತನುವಿನ ಶಿರ ಉರುಳುವಂತೆ ಮಾಡುತ್ತದೆ. ಮನವೆಂಬ ಸಂಸಾರ ಸಾಗರದ ಅಲೆ ತನುವಿನಲ್ಲಿ ಕೊಬ್ಬಿ ಮುಖದ ಮೇಲೆ ಅಲೆಗಳು ಏಳುತ್ತವೆ.

ರೇಚವ್ವೆ : ಇದಕ್ಕೆ ಪರಿಹಾರ ಇಲ್ಲವೆ ಬಸವರಸ?

ಬಸವಣ್ಣ : ಪರಿಹಾರ ಇದೆಯಲ್ಲ ತಾಯಿ.

ಅಂಗದಲ್ಲಿ ಹುಟ್ಟಿದ ದುಗುಡ ದುಮ್ಮಾನಗಳನ್ನು, ಅಂಗದಲ್ಲಿಯೇ ಸಂಗಮವಾದ ಜಲದೊಡೆಯ, ಸಂಗಮನಾಥನಿಗೆ ಅರ್ಪಣೆ ಮಾಡಬೇಕು. ಸಂಗಮನಾಥನೆ, ಮನವೆಂಬ ಬಿಸಿಲು ಕುದುರೆಯನ್ನು ಹಿಡಿದು ನಿನ್ನೊಳಗೆ ಸಂಗಮ ಮಾಡಿಕೋ ತಂದೆ ; ಎನ್ನ ಮೊರೆಯನ್ನು ಆಲಿಸು, ಈ ದುರುಳ ಮನದಿಂದ ನನ್ನನ್ನು ರಕ್ಷಿಸು ತಂದೆ ಎಂದು ಅಂಗದ ಮೂಲಕ, ಅಂಗದಲ್ಲಿಯೇ ಸಂಗಮವಾದ ಸಂಗಯ್ಯನನ್ನು ಬೇಡಿಕೊಳ್ಳಬೇಕು.

ಲಕ್ಷಮಮ್ಮ : ಇದನ್ನು ತಿಳಿಯುವ ಬಗೆ ಹೇಗೆ ಬಸವರಸ?

ಬಸವಣ್ಣ : ಜಲವನ್ನು ಜಲವೆಂದು ತಿಳಿಯದಿದ್ದರೆ, ಅದು ಕೆರೆ, ಹಳ್ಳ, ನದಿ, ಸಾಗರ, ತೆರೆ, ಬಾವಿ ಮುಂತಾದ ಹೆಸರು ಪಡೆದು, ಸಂಸಾರ ಸಾಗರವೇ ಆಗುತ್ತದೆ. ಹಾಗೆಯೇ ಜಲವನ್ನು ಜಲವೆಂದು ತಿಳಿಯದಿದ್ದರೆ, ಆ ಜೀವ ಜಲವೇ ತನುವಾಗಿ , ಹೆಣ್ಣು ಗಂಡು ಜಾತಿ ಮತ ಪಂಥ, ಶ್ರೀಮಂತ ಬಡವ, ರಾಜ ಸೈನಿಕ ಪ್ರಧಾನಿ, ಭಿಕ್ಷುಕ, ಗುರು ಶಿಷ್ಯ ಎಂಬ ಸಂಸಾರ ನಿರ್ಮಾಣ ಮಾಡಿ, ಅಜ್ಞಾನದ ಸಂಸಾರವೇ ತನುವಿನಲ್ಲಿ ನಿರ್ಮಾಣವಾಗುತ್ತದೆ.

ಜಲದಿಂದಾದ ಹೆಸರು ಜಲದಲ್ಲಿ ಸಂಗಮ ; ಆ ಜಲವೇ ಆವಿಯಾಗಿ ಬಯಲಲ್ಲಿ ಸಂಗಮ ಎಂದು ತಿಳಿದರೆ ಬಯಲಿಂದಾದ ಜಲ, ಜಲದಿಂದಾದ ತನು. ತನುವಿನಿಂದಾದ ಶಬ್ದ ಸ್ಪರ್ಶ ರುಚಿ ದೃಶ್ಯ ವಾಸನೆ ತನುವಿನಲ್ಲಿಯೇ ಸಂಗಮವಾಗಿ, ತನು ತನಗೆ ತಾನೇ ಬಯಲಲ್ಲಿ ಸಂಗಮವಾಗುತ್ತದೆ. ಆ ಬಯಲೇ ತಾನಾಗುತ್ತದೆ.

ಲಕ್ಷಮಮ್ಮ : 'ಸಂಸಾರ ಸಾಗರದ ತೆರೆಕೊಬ್ಬಿ' ಎನ್ನುವ ವಚನದ ಒಂದು ಸಾಲಿನಲ್ಲಿ ಎಷ್ಟೊಂದು ರಹಸ್ಯ ಬಚ್ಚಿಟ್ಟುಕೊಂಡಿದೆಯಲ್ಲಾ ತಂದೆ. ತಮ್ಮಿಂದ ತನುವಿನ ಸಂಸಾರ ಸಾಗರದ ರಹಸ್ಯ ತಿಳಿದುಕೊಂಡ ನಾವು ಧನ್ಯರು ಬಸವರಸ!

ಅಂಬಿಗರ ಚೌಡಯ್ಯ :

> ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ;
> ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ !
> ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು ;
> ಇನ್ನೆಂದಿಂಗೆ ಮೋಕ್ಷವಹುದೊ, ಕೂಡಲಸಂಗಮದೇವಾ? ॥ 9 ॥

ಅಂಗಕ್ಕೆ ತಿಳಿಯುವ ಶಕ್ತಿ ಇದ್ದರೂ, ಅಜ್ಞಾನವೆಂಬ ಕತ್ತಲು ಮೆತ್ತಿಕೊಂಡಿದೆಯಲ್ಲ ಬಸವರಸ. ಅದನ್ನು ಕಳೆದುಕೊಳ್ಳುವ ಬಗೆ ಹೇಗೆ ?

ಬಸವಣ್ಣ : ಚಂದ್ರನ ಹುಣ್ಣಿಮೆಯ ಬೆಳದಿಂಗಳನ್ನು, ರಾಹು ನುಂಗಿ, ಹೇಗೆ ಗ್ರಹಣವಾಗುತ್ತದೆಯೋ ಹಾಗೆಯೇ ಅಂಗದಲ್ಲಿಯೇ ಸಂಗಮವಾದ ಮಹಾ ಜ್ಞಾನವೆಂಬ ಬೆಳಕನ್ನು, ಅಜ್ಞಾನದ ಕತ್ತಲು ನುಂಗಿ, ತನ್ನ ಕತ್ತಲು ಸಂಸಾರವನ್ನು ಅಂಗದಲ್ಲಿಯೇ ನಿರ್ಮಾಣ ಮಾಡಿಕೊಂಡಿದೆ. ಹೀಗಾಗಿ ಅಂಗ ರಣರಂಗವಾಗಿದೆ.

ಸೂರ್ಯ, ಚಂದ್ರ, ಭೂಮಿ ಈ ಮೂರು ಗ್ರಹಗಳು ಬಯಲ ಗರ್ಭದಲ್ಲಿಯೇ ಬಂಧಿಯಾಗಿ, ತಮ್ಮ ಕತ್ತಲು ಬೆಳಕಿನ ಆಟ ಬಯಲಲ್ಲಿಯೇ ನಡೆಸಿವೆ. ಅಂತೆಯೇ ಸ್ಥೂಲದೇಹ, ಸೂಕ್ಷ್ಮದೇಹ, ಕಾರಣದೇಹವೆಂದು ಮೂರು ದೇಹಗಳಿವೆ. ತೋರಿಕೆಗೆ ದೇಹ ಒಂದಾಗಿ ಕಂಡರೂ ಆ ದೇಹದಲ್ಲಿ ಸ್ಥೂಲ ದೇಹದ ಅನುಭವಕ್ಕೆ ಬರುವ ಇನ್ನೆರೆಡು ದೇಹಗಳಿವೆ. ಕಾರಣದೇಹ ಸ್ಥೂಲದೇಹಕ್ಕೆ ಜನ್ಮಕೊಟ್ಟು ಸ್ಥೂಲ ದೇಹದಲ್ಲಿಯೆ ವಾಸ ಮಾಡಿದೆ. ಈ ಕಾರಣದೇಹ ಮನೋಮಯವಾದ ಸೂಕ್ಷ್ಮದೇಹಕ್ಕೆ ಜನ್ಮ ನೀಡಿ, ಅದನ್ನು ಕೂಡಾ ಸ್ಥೂಲ ದೇಹದಲ್ಲಿಯೇ ಇಟ್ಟಿದೆ. ಸೂಕ್ಷ್ಮದೇಹ ಕಾರಣ ದೇಹಗಳೆರಡು ಕಾಣುವುದಿಲ್ಲ. ಇವು ಬಯಲು.

ಬಯಲೇ ಅರಿವಾಗಿ, ಗುರುವಾಗಿ, ಮನ ಮತ್ತು ದೇಹವನ್ನು ಅರಿವಿನ ಮೂಲಕ ದೇಹದ ಕಣ ಕಣದಲ್ಲಿ ಬೆರೆತು, ಸದಾ ದೇಹವನ್ನು ಬೆಳಗುತ್ತಲಿದೆ. ಆ ಬೆಳಕಿನ ನೆರಳೆ ಸೂಕ್ಷ್ಮ ದೇಹ.

ಈ ಸೂಕ್ಷ್ಮ ದೇಹವೆ ಮನವಾಗಿ, ಚಂದ್ರನಂತೆ ಬೆಳಗುವ ದೇಹವನ್ನು, ರಾಹುವಿನಂತೆ ಆವರಿಸಿ, ಗ್ರಹಣ ಹಿಡಿಸಿದೆ. ಮನವೆಂಬ ಮೋಡ ಸರಿದಾಗ, ಅರಿವು ದೇಹವನ್ನು ಬೆಳಗುತ್ತದೆ. ಮನ ಆವರಿಸಿದಾಗ, ದೇಹ ಅಜ್ಞಾನದಿಂದ ಕತ್ತಲಾಗುತ್ತದೆ. ಈ ಸೂಕ್ಷ್ಮ ಮನ ಕಣ್ಣಲ್ಲಿ ಬೆರೆತು, ಕಾಣದಂತೆ ಮಾಡಿದೆ. ಕಿವಿಯಲ್ಲಿ ಬೆರೆತು ಕಿವುಡನನ್ನಾಗಿಸಿದೆ. ಚರ್ಮ, ನಾಲಿಗೆ, ಮೂಗಿನಲ್ಲಿ ಬೆರೆತು ಸಂಸಾರವೆಂಬ ರಾಹುವಾಗಿ, ಸದಾ ಕಾಡುತ್ತದೆ. ಅರಿವಾಗದಿದ್ದರೆ, ಇಡೀ ದೇಹವನ್ನೆ ಮನ, ರಾಹು ಆಗಿ ನುಂಗುತ್ತದೆ.

ಅಂಬಿಗರ ಚೌಡಯ್ಯ : ಅಜ್ಞಾನದ ಕತ್ತಲೆಯನ್ನು ಕಳೆದುಕೊಳ್ಳುವುದು ಹೇಗೆ ಬಸವರಸ?

ಬಸವಣ್ಣ : ಕಾರಣ ದೇಹವೆಂಬ ಚಿತ್ಸೂರ್ಯ, ಇಡೀ ದೇಹದೊಂದಿಗೆ ಮಾತನಾಡುವ ಮೂಲಕ, ಗುರುದೇವನಾಗಿ ಸ್ಥೂಲ ದೇಹವನ್ನು ಬೆಳಗುತ್ತಾನೆ. ಈತನ ಬೆಳಕಿನಿಂದ ಉಂಟಾದ ನೆರಳು ಎಂಬ ಮನವೇ, ಬೆಳಗುವ ದೇಹವನ್ನು ಕಾಣದಂತೆ ಮಾಡಿ ತನ್ನ ಅಜ್ಞಾನದ ಸಂಸಾರವನ್ನು ದೇಹದಲ್ಲಿ ಹೂಡಿದೆ. ರಾಹು ಎನ್ನುವ ಮನವೆಂಬ ಕತ್ತಲು, ಜ್ಞಾನವೆಂಬ ಬೆಳಕಿನಲ್ಲಿ ಸರಿದರೆ, ಆ ಜ್ಞಾನವೇ ತಾನಾಗುತ್ತದೆ. ದೇಹದಲ್ಲಿಯೆ ಹುಟ್ಟಿದ ಮನ, ಅರಿವಿನ ದೇಹದಲ್ಲಿ ಸರಿಯಬೇಕಲ್ಲ. ಇದು ಸಾಧ್ಯವಾಗದ ಮಾತು.

ಬೆಳಕಿದ್ದಲ್ಲಿ ಕತ್ತಲಿಲ್ಲ, ಕತ್ತಲಿದ್ದಲ್ಲಿ ಬೆಳಕಿಲ್ಲ. ಇವೆರಡು ಕಡು ವೈರಿಗಳು. ಆದರೆ ದೇಹದಲ್ಲಿ ಅರಿವು ಎಂಬ ಬೆಳಕು ಇದೆ. ಅಜ್ಞಾನವೆಂಬ ಕತ್ತಲ ಮನವೂ ಇದೆ. ಇವೆರಡು ಕೂಡಿ ದೇಹವೆಂಬ ಒಂದೇ ತಟ್ಟೆಯಲ್ಲಿ ಉಣ್ಣುತ್ತಿವೆ. ಇನ್ನೆಂದಿಗೆ ಕತ್ತಲ ದೇಹ, ನನ್ನ ದೇಹವನ್ನು ಬಿಟ್ಟು ಹೋಗುವುದೋ ಎಂದು, ದೇಹದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಿಗೆ ಶರಣು ಹೋಗಿ, ತವಕಿಸುವ ಅವಶ್ಯಕತೆ ಸ್ಥೂಲದೇಹಕ್ಕೆ ಬರಲೇಬೇಕು. ಮನವೆಂಬ ಕತ್ತಲ ದೇಹದ ಮಾತು ಸ್ಥೂಲ ದೇಹ ಕೇಳದೆ ಇದ್ದರೆ ಸಾಕು, ತನಗೆ ತಾನೇ ಮನವೆಂಬ ಕತ್ತಲ ದೇಹ ಹೆಳವನಾಗುತ್ತದೆ. ಸ್ಥೂಲ ದೇಹದಲ್ಲಿಯೇ ಸಂಗಮವಾದ ಅರಿವಿನ ಪ್ರಕಾಶ ಮನ ಮತ್ತು ದೇಹಗಳ ಮೇಲೆ ಬಿದ್ದು ಬೆಳಗಿಂಗೆ ಬೆಳಗಾಗಿ ಬೆಳಗುತ್ತದೆ.

ಅಂಬಿಗರ ಚೌಡಯ್ಯ : ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ ಎನ್ನುವ ತಮ್ಮ ವಚನದ ಬೆಳಕಿನ ರಹಸ್ಯ ನಮ್ಮೆಲ್ಲಾ ಶರಣರ ದೇಹದ ಕತ್ತಲನ್ನು ಬೆಳಗಿ, ಬೆಳಗಿಂಗೆ ಬೆಳಗಾಗಿ ಬೆಳಗುವಂತೆ ಮಾಡಿತು ಬಸವರಸ, ತಮಗೆ ಶರಣು ಶರಣಾರ್ಥಿ.

ಆದಯ್ಯ :

ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ
ಎನ್ನ ಸಂಸಾರ ತನು ಕೆಡುವನ್ನಕ್ಕ ಮಾಣದು.
ಹೆರರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು.
ಹೆರರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು.
ಅಕಟಕಟಾ, ಸಂಸಾರಕ್ಕೆ ಆಸತ್ತೆ
ಕೂಡಲಸಂಗಮದೇವಾ || 10 ||

ಮಾನವ ಕಲ್ಯಾಣಕ್ಕಾಗಿ ದಾಖಲಿಸಿದ ತಮ್ಮ ಈ ವಚನದ ರಹಸ್ಯವನ್ನು ಶರಣರಿಗೆ ತಿಳಿಯುವಂತೆ ಬಿಡಿಸಿ ಹೇಳಿ ಬಸವರಸ.

ಬಸವಣ್ಣ : ಬೋನಿನಲ್ಲಿ ರುಚಿಕರ ಪದಾರ್ಥ ಇಟ್ಟಾಗ, ಇಲಿಗೆ ಪದಾರ್ಥ ಕಾಣುತ್ತದೆಯೇ ಹೊರತು, ಬೋನು ಕಾಣುವುದಿಲ್ಲ. ತಿನ್ನಲು ಹೋದರೆ ಇಲಿ ಉಳಿಯುವುದಿಲ್ಲ. ತಿನ್ನದಿದ್ದರೆ ನಾಲಿಗೆ ಕೇಳುವುದಿಲ್ಲ. ಪರರ ಪದಾರ್ಥ ಮುಟ್ಟದಿದ್ದರೆ

ಬೋನು ಇಟ್ಟು ಇಲಿಯನ್ನು ಸಾಯಿಸುತ್ತಿರಲಿಲ್ಲ. ಪರರನ್ನು ಬಾಧಿಸುವುದು ತನು ಇರುವವರೆಗೆ ನಿಲ್ಲುವುದಿಲ್ಲ. ಇದು ಇಲಿಯ ಉದಾಹರಣೆಯಷ್ಟೆ. ಅರಿವಿದ್ದ ತನುವಿನ ಕತೆಯೂ ಇಲಿಯಂತೆಯೇ ಇದೆ.

ತನು ಆಭರಣ ನೋಡಿ, ಹಗಲಿರುಳು ದುಡಿದು ಆಭರಣ ಧರಿಸಿ, ಅದನ್ನು ಸಂಗ್ರಹಿಸಿ ಆನಂದ ಪಡುತ್ತದೆ. ತನುವಿನ ಸಂಸಾರ ಕೂಡಾ ಆಭರಣಕ್ಕಾಗಿ ವ್ಯಯವಾಗುತ್ತದೆ. ಕಣ್ಣಿಗೆ ಲೋಹದ ಬಣ್ಣ ಶ್ರೇಷ್ಟವೆನಿಸುತ್ತದೆ. ಮನ ತನುವನ್ನು ಅಜ್ಞಾನದ ಬೋನಿಗೆ ತಳ್ಳುತ್ತದೆ.

ಆಭರಣ ನೋಡಿದ ಕಣ್ಣು, ಕುದಿಯುವಂತೆ ತನುವಿಗೆ ಆದೇಶ ಮಾಡುತ್ತದೆ. ಅದು ತನಗೆ ದಕ್ಕದಿದ್ದರೆ ಮತ್ತೊಂದು ತನುವನ್ನು ಕೊಂದಾದರೂ ಪಡೆಯುತ್ತದೆ. ಲೋಹದ ಬಣ್ಣಕ್ಕಾಗಿ, ಮಾಟಕ್ಕಾಗಿ, ತನುವಿಗೆ ಕಳ್ಳನ ಪಟ್ಟ, ಹತ್ಯಾಚಾರಿಯ ಪಟ್ಟ ಕಟ್ಟಿಕೊಂಡು ಬೋನು ಸೇರುತ್ತದೆ.

ಆಭರಣಕ್ಕೆ ಮಾರುಹೋದ ತಂದೆ ತಾಯಿಗಳು, ಮಕ್ಕಳಿಗೆ ಪಾಲು ಕೊಡುವುದಿಲ್ಲ. ಬಣ್ಣದ ಲೋಹಕ್ಕಾಗಿ ; ಜನ್ಮ ಕೊಟ್ಟವರನ್ನೇ ಕೊಂದು ಮಕ್ಕಳು ಕಡುಪಾಪಿಗಳೆನಿಸಿಕೊಂಡು ಬೋನು ಸೇರುತ್ತಾರೆ.

ಪೀಠಾಧಿಪತಿಗಳು, ಗುರುಗಳು, ನ್ಯಾಯಮೂರ್ತಿಗಳು, ರಾಜ, ಪ್ರಧಾನಿ ಇದಕ್ಕೆ ಹೊರತಾಗಿಲ್ಲ. ತನುಗಳೆಲ್ಲಾ ಒಂದೇ. ಅರಿವು ತನುವಿನಲ್ಲಿದೆ. ಅರಿವಿನ ಪಾಠ ಪುಸ್ತಕದಲ್ಲಿದೆ. ಅರಿವು ಬಳಕೆಯಾಗದಿದ್ದರೆ ತನುವಿಗೆ ಕೇಡು ತಪ್ಪಿದ್ದಲ್ಲ. ಬೋನು ತಪ್ಪಿದ್ದಲ್ಲ.

ಚಿನ್ನಕ್ಕೆ ಜನ್ಮ ಕೊಟ್ಟ ಹಿಡಿ ಮಣ್ಣು, ತನು ಮತ್ತು ಮನಕ್ಕೆ ಯಾವ ಲೆಕ್ಕಕ್ಕಿಲ್ಲ. ಆ ಮಣ್ಣಿನ ಪಾತ್ರೆಯಲ್ಲಿಯೇ ಕುದ್ದು, ಬಣ್ಣ ತಳೆದ ಲೋಹ ಚಿನ್ನ! ಈ ಲೋಹದ ಬಣ್ಣಕ್ಕೆ ಮರುಳಾದ ಕಣ್ಣಿನ ಅಜ್ಞಾನಕ್ಕೆ ಯಾವ ಶಿಕ್ಷೆಯೂ ಇಲ್ಲ. ಆ ಕಣ್ಣಿಗೆ ಯಾರೂ ಪಾಠ ಮಾಡುವುದಿಲ್ಲ.

ಕಣ್ಣಿನ ಅಜ್ಞಾನ ಹೆರರ ಬಾಧಿಸುವುದು. ಹೆರರ ಛಿದ್ರಿಸುವುದು. ತನು ಕೆಡುವವರೆಗೆ ತನುವಿನಲ್ಲಿ ಇದ್ದ ಈ ಅಜ್ಞಾನ ಅಳಿಯದು. ಅಕಟಕಟಾ, ಕಣ್ಣಿನ ಅಜ್ಞಾನದ ಸಂಸಾರಕ್ಕೆ ನಿರಪರಾಧಿ ತನು ವ್ಯರ್ಥ ಸಾಯುವುದಲ್ಲ ಕೂಡಲಸಂಗಮದೇವಾ.

ಆದಯ್ಯ : ತನು ಕೆಡುವವರೆಗೆ ತನುವಿನಲ್ಲಿಯೇ ತನ್ಮಯವಾದ ಅರಿವು ಎನ್ನುವ ಗುರುದೇವನನ್ನು, ತನು ಮತ್ತು ಮನ ತಿಳಿಯದಿದ್ದರೆ ಹೇಗೆ ಎನ್ನುವುದನ್ನು, ತನು ಲೋಕಕ್ಕೆ ಸುಂದರವಾಗಿ ವಿವರಿಸಿದಿರಿ ಬಸವಣ್ಣ ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಸಕಲ ಶರಣರಿಗೂ ಶರಣು ಶರಣಾರ್ಥಿ, ಮತ್ತೆ ನಾಳೆ ಸೇರೋಣ.

ಸತ್ಸಂಗದ ಸವಿಯನು ಉಣ್ಣುತ್ತ ಶರಣರು ತಮ್ಮ ತಮ್ಮ ಮನೆಗೆ ನಡೆದರು.

ಶ್ರೀ

ಮಹಾಮನೆಯಲ್ಲಿ ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವಣ್ಣ ಎಂದು ಹೇಳುತ್ತಾ ಪುನಃ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

ಉರಿಲಿಂಗದೇವ :

ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ !
ಅಕಟಕಟಾ, ಸಂಸಾರ ವೃಥಾ ಹೋಯಿತ್ತಯ್ಯಾ !
ಕರ್ತುವೆ ಕೂಡಲಸಂಗಮದೇವಾ,
ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ ॥ 11 ॥

ಮನುಕುಲದ ಏಳಿಗೆಗಾಗಿ ದಾಖಲಿಸಿದ ತಮ್ಮ ಈ ವಚನದ ರಹಸ್ಯವನ್ನು ಶರಣರಿಗೆ ತಿಳಿಯುವಂತೆ ಬಿಡಿಸಿ ಹೇಳಿ ಬಸವರಸ.

ಬಸವಣ್ಣ : ತನು ಮತ್ತು ತನುವಿನ ವಿಷಯ ವಾಸನೆ ಕಪ್ಪೆ ಮತ್ತು ಸರ್ಪ ಇದ್ದಂತೆ. ಒಂದನ್ನು ಒಂದು ತಿಳಿಯದು. ತನುವಿನ ಚರ್ಮದ ಸ್ಪರ್ಶ ಶಕ್ತಿಯೇ, ವಿಷಯಸುಖವಾಗಿ ಸರ್ಪವಾಗಿ ಮಾರ್ಪಟ್ಟಿದೆ.

ಸ್ಪರ್ಶ ಬಯಸಿ, ಸುಖ ಅನುಭವಿಸಲು ಹೋದ ಚರ್ಮವನ್ನು ಕೆರಳಿಸಿ, ಸರ್ಪವಾಗಿ ಕುಕ್ಕುತ್ತದೆ ಚರ್ಮ! ಸರ್ಪವಾಗಿ ಕೆರಳಿ ಕುಕ್ಕುವ ಚರ್ಮವೂ ಚರ್ಮವೇ; ಆ ಚರ್ಮವನ್ನು ಸುಖಿಸಲು ಹೋದ ಚರ್ಮವೂ ಚರ್ಮವೇ! ಅಕಟಕಟಾ ಒಂದನ್ನು ಮತ್ತೊಂದು ತಿಳಿಯದೆ, ತನುವಿನ ಸಂಸಾರ ವೃಥಾ ಹೋಯಿತ್ತಲ್ಲ!

ಚರ್ಮದೊಳಗೆ, ಇದು ಚರ್ಮ ಎಂದು ತಿಳಿಯುವ ಅರಿವಿನ ಚರ್ಮವೊಂದು ಇದೆ. ಚರ್ಮವನ್ನು ಬಯಕೆ ಮಾಡಿ, ಸ್ಪರ್ಶಿಸಿ ಸುಖಿಸುವ ಅಜ್ಞಾನಿ ಚರ್ಮವು, ಚರ್ಮದಲ್ಲಿಯೇ ಇದೆ. ಅಜ್ಞಾನದ ಚರ್ಮ ಬಳಕೆಯಾದರೆ, ತನು ಸರ್ಪ ಕಚ್ಚಿಸಿಕೊಂಡು ಸಾಯುತ್ತದೆ. ಅರಿವು ಬಳಕೆಯಾದರೆ ಅರಿವಿನ ತನು ಎನ್ನಿಸಿಕೊಂಡು ಸರ್ಪದೋಷದಿಂದ ಮುಕ್ತವಾಗುತ್ತದೆ.

ಚರ್ಮ ಚರ್ಮವನ್ನೇ ಸ್ಪರ್ಶಿಸಿ, ಸುಖಿಸುವ ಅಜ್ಞಾನದ ರಸಾಯನಿಕ ದ್ರವ್ಯವನ್ನು ತನುವಿನಲ್ಲಿ ಉಂಟು ಮಾಡುತ್ತದೆ. ತಡವಾದರೆ, ಚರ್ಮ, ಚರ್ಮವನ್ನು ಸ್ಪರ್ಶಿಸದಿದ್ದರೂ ಕಾಮದ್ರವ್ಯ ನಷ್ಟವಾಗುತ್ತದೆ. ತನುವಿಗೆ ಸುಖವಾಗುತ್ತದೆ. ಚರ್ಮ ಮತ್ತೆ ಸ್ಪರ್ಶಸುಖ ಬಯಸುವುದಿಲ್ಲ. ಸುಖ ಎನ್ನುವುದು ತನ್ನ ಚರ್ಮದಲ್ಲಿತ್ತೋ, ಅನ್ಯ ಚರ್ಮದಲ್ಲಿತ್ತೋ ಎನ್ನುವುದು ಚರ್ಮಕ್ಕೆ ತಿಳಿಯುವುದಿಲ್ಲ.

ಚರ್ಮದಲ್ಲಿದ್ದ ಸುಖದ ದ್ರವ್ಯ ಚರ್ಮವೇ ಚೆಲ್ಲಿ ಸುಖಿಸಿ, ಅನ್ಯ ಚರ್ಮದಲ್ಲಿಯೇ ಸುಖ ಇದೆ ಎಂದು ಬಯಸುವ ಅಜ್ಞಾನದ ತನುವಿನ ಸಂಸಾರ ಸರ್ಪ ಕಚ್ಚಿಸಿಕೊಂಡು ವೃಥಾ ಹೋಯಿತ್ತಲ್ಲ!

ಚರ್ಮ ಹೆಣ್ಣು ಅಲ್ಲ ಗಂಡೂ ಅಲ್ಲ! ಅದು ಸ್ಪರ್ಶ ಶಕ್ತಿ ತಿಳಿಯುವ ಅರಿವು! ತನುವಿನ ರಕ್ತ, ಮೂಳೆ, ಮಾಂಸ, ಮಜ್ಜೆ, ಮೇದಸ್ಸು ಹೊರಚೆಲ್ಲದಂತೆ ರಕ್ಷಿಸುವ ರಕ್ಷಾಕವಚ! ರೋಮಗಳಿಂದ ಸುಂದರವಾಗಿ ಕಾಣುವ ಸಸ್ಯಕಾಶಿ, ಬೇರಿಲ್ಲದ ಮರ. ನುಡಿಯುತ್ತಾ ನಡೆದಾಡುವ ಬೋಧಿವೃಕ್ಷ! ಅರಿವೆಂಬ ಕರ್ತೃ ಮರವನ್ನು ಸೃಷ್ಟಿಸಿ ಮರದಲ್ಲಿಯೇ ಸಂಗಮವಾಗಿದ್ದಾನೆ. ನೆನೆದರೆ ಅಜ್ಞಾನದ ಸರ್ಪ ಕೊಂದು ; ತನು ಎಂಬ ಜ್ಞಾನದ ಮರವನ್ನು ರಕ್ಷಿಸುತ್ತಾನೆ.

ಬಾಲಬೊಮ್ಮಣ್ಣ : ತಮ್ಮ ಈ ವಚನದ ಅರಿವಿನ ಸವಿಯನುಂಡ ನಾವೇ ಧನ್ಯರು. ತಮಗೆ ಶರಣು ಶರಣಾರ್ಥಿ ಬಸವರಸ.

ಮಂಚಣ್ಣ :

ಶೂಲದ ಮೇಲಣ ವಿಭೋಗವೇನಾದಡೇನೊ?
ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ!
ತನ್ನಾತ್ಮ ತನಗೆ ಹಗೆಯಾದ ಬಳಿಕ
ಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ? ॥ 12 ॥

ಬಸವರಸ, ನಾನಾ ವರ್ಣದ ಸಂಸಾರ, ಹಾವು ಹಾವಾಡಿಗನ ಸ್ನೇಹದಂತೆ ಎಂದು ಹೇಳಿರುವಿರಲ್ಲ . ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಆಗಲಿ ಶರಣರೇ, ಸತ್ಸಂಗ ಮುಂದುವರಿಯಲು ಯಾವುದಾದರೂ ಒಂದು ವಿಷಯ ಬೇಕು. ಅದನ್ನೆ ತಾವು ಪ್ರಸ್ತಾಪಿಸಿರುವಿರಿ.

ನೋಡಿದ ಕಣ್ಣು ಭೋಗಿಸಲು ಅರಿಯದು. ಭೋಗಿಸುವ ದೇಹ ನೋಡಲು ಅರಿಯದು. ನಾಲಿಗೆ ಮೂಗು ಕಿವಿ ಚರ್ಮ ಮತ್ತು ಕಣ್ಣಿನಲ್ಲಿ ವಾಸ ಮಾಡಿದ ಮನವೆಂಬ ಹಾವು, ಇಡೀ ದೇಹವನ್ನೆ ಹುತ್ತವನ್ನಾಗಿಸಿ, ದೇಹದಲ್ಲಿಯೇ ಸಂಸಾರ ಹೂಡಿದೆ. ಹಾವಾಡಿಗನೊಂದಿಗೆ ಸ್ನೇಹ ಮಾಡಿದೆ.

ಮಂಚಣ್ಣ : ಇಲ್ಲಿ ಹಾವಾಡಿಗನೆಂದರೆ ಯಾರು ಬಸವರಸ ?

ಬಸವಣ್ಣ : ಅಂಗದಲ್ಲಿಯೇ ಸಂಗಮವಾದ ಅರಿವು ಎಂಬ ಗುರುದೇವನೇ ಹಾವಾಡಿಗ. ಮನವೇ ಹಾವು. ಐದು ಜ್ಞಾನೇಂದ್ರಿಯಗಳಲ್ಲಿ ಮನವೆಂಬ ಹಾವು ಹರಿದಾಡುತ್ತಾ ಜ್ಞಾನೇಂದ್ರಿಯಗಳನ್ನೆ ಇಂದ್ರಿಯಗಳನ್ನಾಗಿಸಿದೆ. ಅಲ್ಲಿ ತನ್ನ ಸುಳ್ಳು ಸಾಮ್ರಾಜ್ಯವನ್ನು ಕಟ್ಟಿಕೊಂಡು ತನುವನ್ನೇ ಹುತ್ತವನ್ನಾಗಿಸಿಕೊಂಡಿದೆ. ಮನ ಹಾವಾಗಿ ತನುವಿನಲ್ಲಿಯೇ ತನ್ನ ಅಜ್ಞಾನದ ಸಂಸಾರವನ್ನು ಹೂಡಿದೆ.

ಮನ ತನುವಿನೊಂದಿಗೆ ಭೋಗಿಸುವಾಗ, ಅಲ್ಲಿಯೇ ಇದ್ದ ಅರಿವು ಎನ್ನುವ ಗುರುದೇವ, ಬೇಡವೆಂದು ಪಾಠ ಮಾಡುತ್ತಾನೆ. ಮನ ಮತ್ತು ತನು, ಭೋಗಿಸುವ ಅಜ್ಞಾನದ ಭೋಗದ ಸುಖದಲ್ಲಿ ಗುರುದೇವ ಭಾಗಿಯಾಗುವುದಿಲ್ಲ. ಇದೇ ನಾನಾ ವರ್ಣದ ಸಂಸಾರ!

ಮಂಚಣ್ಣ : ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಪಾಂಡವರು ಐದು ಜನ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ. ಈ ಐದು ಜನರಿಗೆ ಮನವೆಂಬ ದ್ರೌಪದಿ ಒಬ್ಬಳೆ ಹೆಂಡತಿ! ದೇಹವೆಂಬುದನ್ನೆ ರಥ ಮಾಡಿಕೊಂಡು ಈ ರಥಕ್ಕೆ ಕೃಷ್ಣನೊಬ್ಬನೆ ಸಾರಥಿಯಾಗಿದ್ದಾನೆ. ಮನ ಪಗಡೆಯಾಡಲು, ಪಾಂಡವರನ್ನು ಕರೆದುಕೊಂಡು ಹೋದರೆ, ಕೃಷ್ಣನಾದರೂ ಏನು ಮಾಡಿಯಾನು ? ಅವರಿಗೆ ಸಾರಥಿಯಾದ! ಮನ ಹೇಳಿದಂತೆ ಪಾಂಡವರು ಕೇಳಿ ಪಗಡೆ ಆಡಿದರು. ರಾಜ್ಯವನ್ನು ಸೋತರು, ತಮ್ಮನ್ನೂ ಸೋತರು. ಮನವೆಂಬ ದ್ರೌಪದಿ ವಿವಸ್ತ್ರಗೊಳ್ಳುವಾಗ ಅರಿವೆಂಬ ಕೃಷ್ಣನ ಮೊರೆಹೊಕ್ಕಳು, ಕೃಷ್ಣ ಆಕೆಗೆ ವಸ್ತ್ರದಾನ ಮಾಡಿ, ತನ್ನ ಬುಟ್ಟಿಯಲ್ಲಿ ಹಾಕಿಕೊಂಡು, ಗಾರುಡಿಗನಾದ.

ವ್ಯಾಸ ಮಹರ್ಷಿಗಳ ಮಹಾಭಾರತದ ಅರಿವಿನ ಈ ಸೂತ್ರ, ಜ್ಞಾನಕ್ಕೆ ಬಳಕೆಯಾಗಲಿಲ್ಲ. ಕಥೆಯಾಗಿ ಅಜ್ಞಾನದ ನಾಲಿಗೆ ತುಳಿದರೆ, ಋಷಿಗಳಾದರೂ ಏನು ಮಾಡಿಯಾರು?

ಮಂಚಣ್ಣ : ಇದಕ್ಕೆ ಉಪಾಯವಿಲ್ಲವೇ ಬಸವರಸ?

ಬಸವಣ್ಣ : ಏಕಿಲ್ಲ, ಇದೆ. ತನುವನ್ನು ಅರಿವಿನೆಡೆಗೆ ಕರೆದುಕೊಂಡು ಹೋಗುವ ಆತ್ಮ ತನುವಿನಲ್ಲಿಯೇ ಇದೆ. ಈತನನ್ನೆ ಪರಮಾತ್ಮ ಎಂದು ಕರೆದಿದ್ದಾರೆ ಪುರಾತನರು. ಹಾಗೆಯೆ ತನುವನ್ನು ಅಜ್ಞಾನದೆಡೆಗೆ ಕರೆದುಕೊಂಡು ಹೋಗುವ ಮನ ಕೂಡ ತನುವಿನಲ್ಲಿಯೇ ಇದೆ.

ತನು ಮತ್ತು ಮನವನ್ನು ಅಪ್ಪಿಕೊಂಡು ಅರಿವಿನೆಡೆಗೆ ನಡೆಯಬೇಕಾದ, ಆತ್ಮವೇ ತನುವಿಗೆ ಹಗೆಯಾದರೆ, ಮತ್ತಾರಿಗೆ ದೂರುವುದು?

ಮಂಚಣ್ಣ : ತನುವಿನಲ್ಲಿರುವ ಆತ್ಮವೆಂಬ ಪರಮಾತ್ಮನು ತನು ಮತ್ತು ಮನಕ್ಕೆ ವೈರಿಯೆ ಹೇಗೆ ಎಂಬುದು ನಮಗೆ ತಿಳಿಯಲಿಲ್ಲ ಬಸವರಸ.

ಬಸವಣ್ಣ : ಅದು ಹಾಗಲ್ಲ, ಆತ್ಮವೆಂಬ ಪರಮಾತ್ಮನು, ತನುವಿಗೆ ಅರಿವನ್ನು ದಯಪಾಲಿಸಿದ್ದಾನೆ. ಆ ಅರಿವೆಂಬ ಗುರುದೇವನೆ ತಾನಾಗಿ, ತನುವಿನಲ್ಲಿಯೇ ತನ್ಮಯವಾಗಿದ್ದಾನೆ. ಆ ಗುರುದೇವ ತನ್ನ ಅರಿವಿನ ಬೆಳಕಿನಿಂದ ಮರೆವು ಎಂಬ ಮನವನ್ನು ಸೃಷ್ಟಿ ಮಾಡಿ, ತನುವಿನಲ್ಲಿಯೇ ಇಟ್ಟಿದ್ದಾನೆ.

ತನುವನ್ನು, ತನುವಿನಲ್ಲಿಯೇ ತನ್ಮಯವಾದ ಮನವನ್ನು, ದಾನ ಮಾಡಿದ ಮಹಾದಾನಿ ಕೂಡಲ ಸಂಗಯ್ಯ ನೀನು. ನೀನೇ ನನಗೆ ಹಗೆಯಾದ ಬಳಿಕ ಬಿನ್ನಾಣ

ಉಂಟೆ? ಎಂದು ಬೇಡುವ ಸುಳುಹು, ತನು ಮತ್ತು ಮನಕ್ಕೆ ಹೊಳೆದಾಗ, ತನು ಮತ್ತು ಮನಗಳೆರಡು ಸೇರಿ, ತನುವಿನಲ್ಲಿಯೇ ಸಂಗಮವಾದ ಕೂಡಲ ಸಂಗಯ್ಯನನ್ನು ನೆನೆಯುತ್ತವೆ. ಆಗ ತನು ಮತ್ತು ಮನದ ಮೈ ದಡವಿ, ಅರಿವೆಂಬ ಗುರುದೇವ ಅಪ್ಪಿಕೊಳ್ಳುತ್ತಾನೆ; ಕೂಡಲ ಸಂಗಯ್ಯ ತನ್ನಂತೆ ಮಾಡಿಕೊಳ್ಳುತ್ತಾನೆ.

ಮಂಚಣ್ಣ : ಆತ್ಮವೆಂಬ ಪರಮಾತ್ಮನು ತನುವಿಗೆ ಅರಿವನ್ನು ದಯಪಾಲಿಸಿದ್ದಾನೆ ಎಂದು ನಮಗೆ ತಿಳಿಯುವಂತೆ ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಆದಯ್ಯ :

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ
ಎನ್ನುವನು ಕಾಯಯ್ಯಾ , ಕಾಯಯ್ಯಾ .
ಹುರುಳಿಲ್ಲ! ಹುರುಳಿಲ್ಲ!
ಕೂಡಲಸಂಗಮದೇವಾ, ಶಿವಧೋ! ಶಿವಧೋ! ॥ 13 ॥

ಮನ ತಾನೇ ನಿರ್ಮಿಸಿಕೊಂಡ ಅಜ್ಞಾನದ ಸಂಸಾರದ ಬಲೆಯಲ್ಲಿ, ತನುವನ್ನು ಬಂಧಿಸಿ, ಆ ತನುವಿನೊಂದಿಗೆ ಸುಖಿಸುತ್ತದೆ ಎಂದಂತಾಗಲಿಲ್ಲವೇ ಬಸವರಸ? ದಯವಿಟ್ಟು ವಿವರಿಸಿ.

ಬಸವಣ್ಣ : ಸರಿಯಾಗಿ ಹೇಳಿದಿರಿ ಆದಯ್ಯ ಶರಣರೆ. ಬರೀ ಸುಖಿಸುವುದಷ್ಟೇ ಅಲ್ಲ, ತನುವನ್ನು ದುಃಖಕ್ಕೂ ಈಡುಮಾಡುತ್ತದೆ. ಮನ ತನುವಿನಲ್ಲಿ ಹೂಡುವ ಸಂಸಾರಗಳು ಒಂದೆರಡಲ್ಲ, ಸಾವಿರಾರು! ರಾಜಕೀಯ, ಮಠ, ಪೀಠ, ಹೋರಾಟ, ವಿಷಯಲಂಪಟ, ಜಾತಿ, ಮತ, ಪಂಥ, ಧರ್ಮ ಮನದ ಈ ಸೋಗುಗಳೆಲ್ಲಾ ಉಪ ಜೀವನಕ್ಕಾಗಿ ಮಾರ್ಪಟ್ಟು; ಜೀವನದ ಸತ್ಯ ದರ್ಶನವಾಗದೇ; ಮನ ತನುವನ್ನು ತೊಳಲಿ ಬಳಲಿಸುತ್ತದೆ. ಈ ಎಲ್ಲ ಅಜ್ಞಾನದ ಸಂಸಾರದ ಬಲೆಯಲ್ಲಿ, ತನುವನ್ನು ಸಿಲುಕಿಸಿ, ಆ ತನುವಿನಲ್ಲಿಯೇ ವಾಸ ಮಾಡುವುದು ಮನಕ್ಕೆ ಬಲು ಸುಖ!

ಆದಯ್ಯ : ಮನ ಮಾಡುವ ಅವಿವೇಕಿ ಕೆಲಸಕ್ಕೆ ಜನ ತನುವನ್ನು ನಿಂದಿಸುತ್ತಾರಲ್ಲ ಬಸವರಸ?

ಬಸವಣ್ಣ : ಹೌದು ಶರಣರೆ, ಸರಿಯಾಗಿ ಹೇಳಿದಿರಿ. ಜನಕ್ಕೆ ಮನ ಕಾಣುವುದಿಲ್ಲ; ತನುವನ್ನು ನಿಂದಿಸುವ ಜನ ಕೂಡಾ, ಮನದ ಸಂಸಾರದ ಬಲೆಯಲ್ಲಿ ಬಂಧಿಯಾದ ಕಾರಣ; ತನುಗಳೇ ತನುವನ್ನು ನಿಂದಿಸುವುದು ನಿಂದನೆಗೆ ಒಳಗಾಗುವುದು ಸಹಜ!

ಸಂಸಾರ ಎಂದರೆ ಹೆಂಡತಿ ಮಕ್ಕಳು ಬಂಧು ಬಳಗವೆಂದಲ್ಲ. ದೇಹ ಒಂದು ಅದ್ಭುತವಾದ ಅರಿವಿನ ಮನೆ. ಈ ಮನೆಯಲ್ಲಿ ಮನವು ಇದೆ. ಮನ ಅರಿವಿಗೆ ಶರಣುಹೋಗಿ, ಆ ಅರಿವಿನಲ್ಲಿ ಬಂಧಿಯಾದರೆ, ತನು ಅರಿವಿನ ಮನೆ. ಮನ ವಿಷಯದಲ್ಲಿ ಬಂಧಿಯಾದರೆ, ತನು ಅಜ್ಞಾನದ ಮನೆ. ಮನ ತಾನೇ ನಿರ್ಮಾಣ

ಮಾಡಿಕೊಂಡ ಸ್ವಯಂಕೃತ ಅಪರಾಧ!

ಸಕಲ ದೇಹಗಳೆಲ್ಲ ಒಂದೇ; ಆದರೂ ಮನ ಹಲವಾರು ಹಣೆಪಟ್ಟಿಗಳನ್ನು ಕಟ್ಟಿಕೊಂಡಿದೆ. ತಾನು ಕಟ್ಟಿಕೊಂಡ ಹಣೆಪಟ್ಟಿಯಲ್ಲಿ ತಾನೇ ಸಿಲುಕಿ, ಮನ ತನುವಿನಲ್ಲಿ, ತನುವಿನ ಮೂಲಕ ಹುರುಳಿಲ್ಲದ ಸಂಸಾರ ಮಾಡುತ್ತಾ, ಕ್ಷಣ ಕ್ಷಣಕ್ಕೂ ತನುವನ್ನು ಸಾಯಿಸುತ್ತದೆ. ಅರಿವು ತನುವಿನ ಸಂಪತ್ತು, ಮನ ತನುವಿನ ಆಪತ್ತು. ಮನಕ್ಕೆ ಕ್ಷಣಿಕ ಸುಖದ ಅವಶ್ಯಕತೆ ಇದೆ. ತನ್ನ ಸುಖಕ್ಕಾಗಿ ತನುವನ್ನು ಆಪತ್ತಿಗೆ ಒಡ್ಡಿ, ಸಂಕಷ್ಟಕ್ಕೆ ತಳ್ಳುತ್ತದೆ. ಅರಿವು ತನುವನ್ನು ತನ್ನತ್ತ ಸೆಳೆದರೆ ; ಮನ ತನುವನ್ನು ತನ್ನೆಡೆಗೆ ಸೆಳೆಯುತ್ತದೆ. ಎತ್ತು ಏರಿಗೆ ಎಳೆದರೆ, ಕೋಣ ಕೆರೆಗೆ ಎಳೆಯುವ ನಾಣ್ಣುಡಿಯಂತೆ!

ಆದಯ್ಯ : ಆಹಾ. ಧನ್ಯರಾದೆವು ಬಸವಣ್ಣ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ಸತ್ಸಂಗದಲ್ಲಿ ಭಾಗಿಯಾಗೋಣ.

ಶರಣರು ಎದ್ದು ನಿಂತು ಕೈ ಮುಗಿದು, ತಮ್ಮ ತಮ್ಮ ಮನೆಗೆ ನಡೆದರು.

□

೬

ಮಹಾಮನೆಯಲ್ಲಿ ಸತ್ಸಂಗಕ್ಕಾಗಿ ಶರಣರು ಕಾದು ಕುಳಿತಿದ್ದಾರೆ. ಬಸವಣ್ಣ ಬರುವುದೊಂದೆ ತಡ ಎದ್ದು ನಿಂತು ಶರಣು ಶರಣಾರ್ಥಿ ಎಂದು ಹೇಳುತ್ತಾ ಕೈ ಮುಗಿದು ಕುಳಿತುಕೊಳ್ಳುತ್ತಾರೆ.

ಕರುಳ ಕೇತಯ್ಯ :

ನಾನೊಂದ ನೆನೆದಡೆ ತಾನೊಂದ ನೆನೆವುದು
ನಾನಿತ್ತಲೆಳೆದಡೆ ತಾನತ್ತಲೆಳೆವುದು
ತಾ ಬೇರೆ ಎನ್ನನಳಲಿಸಿ ಕಾಡಿತ್ತು
ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು
ಕೂಡಲಸಂಗನ ಕೂಡಿಹೆನೆಂದಡೆ,
ತಾನೆನ್ನ ಮುಂದುಗೆಡಿಸಿತ್ತು ಮಾಯೆ ! ॥ 14 ॥

ತಾವು ದಾಖಲಿಸಿದ ಈ ವಚನದ ರಹಸ್ಯವನ್ನು ಬಿಡಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ತನುವಿನಲ್ಲಿರುವ ಅರಿವು, ತನುವಿನಲ್ಲಿಯೆ ಇರುವ ಮನಕ್ಕೆ ತಿಳಿದರೂ ಕೂಡಾ, ಮನ ಅರಿವೆಂಬ ಗುರುದೇವನ ಮಾತಿಗೆ, ಅಷ್ಟು ಬೇಗ ಸೋಲುವುದಿಲ್ಲ. ಗುರುದೇವನು ವಾಸ ಮಾಡಿದ ತನುವನ್ನು, ಮನ ವಾಹನವನ್ನಾಗಿ ಮಾಡಿಕೊಂಡು ಸವಾರಿ ಮಾಡುತ್ತದೆ. ಅಷ್ಟೇ ಏಕೆ? ಮನ ನೂರಾಒಂದು ಭಾಗಗಳಲ್ಲಿ ತನ್ನನ್ನು ಸೀಳಿಕೊಂಡು, ತನುವಿಗೆ ಘಾಸಿಗೊಳಿಸುತ್ತದೆ. ಮನದ ಈ ಪ್ರಯೋಗವನ್ನು, ವ್ಯಾಸ ಮಹರ್ಷಿಗಳು ಮಹಾಭಾರತದಲ್ಲಿ, ಕೌರವರ ಪಾತ್ರದಲ್ಲಿ, ಬಹಳ ಸುಂದರವಾಗಿ ಹೆಣೆದಿದ್ದಾರೆ.

ಕರುಳ ಕೇತಯ್ಯ : ಅದು ಹೇಗೆ ? ಶರಣರಿಗೆ ವಿವರಿಸಿ ಹೇಳಿ ಎನ್ನೊಡೆಯಾ?

ಬಸವಣ್ಣ : ಸಕಲ ತನುಗಳು ಬ್ರಹ್ಮಜ್ಞಾನವನ್ನು ಹೊಂದಿವೆ. ಆದರೂ ಕೂಡಾ ಮನದ ತೊಡಕಿನಲ್ಲಿ ತನು ಸಿಲುಕಿ, ಕ್ಷಣ ಕ್ಷಣಕ್ಕೂ ಘಾಸಿಗೊಳ್ಳುತ್ತಲಿದೆ.

ಸತ್ಯಕ್ಕ : ಅದು ಹೇಗೆ ಬಸವರಸ?

ಬಸವಣ್ಣ : ಮನದಲ್ಲಿ ಎರಡು ಭಾಗಗಳು, ಒಂದು ಅರಿವಿನಡೆಗೆ ಎಳೆದರೆ ಮತ್ತೊಂದು ಅಜ್ಞಾನದೆಡೆಗೆ ಎಳೆದು, ತನುವನ್ನು ಘಾಸಿ ಮಾಡುತ್ತದೆ. ಮನ ತಾನು ಬೇರೆಯೆ ಆಗಿ ತನುವನ್ನು ಅಳಲಿಸಿ ಬಳಲಿಸಿ ಕಾಡುತ್ತದೆ.

ಕರುಳ ಕೇತಯ್ಯ : ಉದಾಹರಣೆಯೊಂದಿಗೆ ಹೇಳಿ ಎನ್ನೊಡೆಯಾ?

ಬಸವಣ್ಣ : ಹಳದಿ ಲೋಹಕ್ಕೆ ಮಾರು ಹೋದ ಮನ, ತನುವಿಗೆ ಚಿನ್ನಾಭರಣದ ಸವಿಯನ್ನು ಉಣ್ಣಿಸಿ, ತನುವನ್ನು ಕಳುವಿಗೆ ಅಣಿಗೊಳಿಸುತ್ತದೆ. ದಕ್ಕದಿದ್ದರೆ ಅಡ್ಡಿ

ಪಡಿಸಿದ ತನುವನ್ನು ಕೊಲೆ ಮಾಡುತ್ತದೆ. ತನುವಿಗೆ ಮನ ಕಳ್ಳ ಕೊಲೆಗಡುಕನೆಂಬ ಹಣೆಪಟ್ಟಿ ಕಟ್ಟಿ, ತನುವನ್ನು ಸೆರೆಮನೆಗೆ ತಳ್ಳುತ್ತದೆ. ತೊಳಲಿ ಬಳಲುವಂತೆ ಮಾಡುತ್ತದೆ.

ಆಭರಣಕ್ಕೆ ಮಾರು ಹೋದ ಮನವೆ, ಅರಿವಿನ ಮೂಲಕ ಆಭರಣ ನೋಡಿದರೆ, ಅದು ಹಳದಿ ಬಣ್ಣದ ಲೋಹ! ಬಣ್ಣ ಇಲ್ಲದ ಲೋಹವನ್ನು ಯಾರೂ ಖರೀದಿಸುವುದಿಲ್ಲ, ಕಳುವು ಮಾಡುವುದಿಲ್ಲ. ತನು ಸಾವು ನೋವುಗಳಿಗೆ ಒಳಗಾಗುವುದಿಲ್ಲ. ತನು ಸೆರೆಮನೆಗೆ ಹೋಗುವುದಿಲ್ಲ. ತನು ತೊಳಲಿ ಬಳಲುವುದಿಲ್ಲ. ಇಂತಹ ಅರಿವಿಗೆ ಸಂಗಮನಾಥ ಎಂದು ಕರೆದಿದ್ದೇನೆ. ಮನಕ್ಕೆ ಈ ಸಂಗಮನಾಥನ ಪರಿಚಯವಾದರೆ ಸಾಕು, ಸಂಗಯ್ಯನೊಂದಿಗೆ ಮನ ಸೇರಿ, ತನ್ನ ಹೆಸರು ಕಳೆದುಕೊಂಡು ಘನ ಮನವಾಗುತ್ತದೆ.

ಆದಯ್ಯ : ತನುವಿನಲ್ಲಿ ಎಷ್ಟೊಂದು ರಹಸ್ಯ ಬಚ್ಚಿಟ್ಟುಕೊಂಡಿದೆಯಲ್ಲ ಬಸವರಸ.

ಕಾಳಿಂಗದೇವ :

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೆ ಬಲ್ಲಿರಿ ಕೂಡಲಸಂಗಮದೇವಾ ! ॥ 15 ॥

ಕಾಳಿಂಗದೇವ : ಇಂತಹ ಮನವನ್ನು ಮಾಯೆ ಎಂದು ಕರೆಯಬಹುದೇ ಬಸವರಸ?

ಬಸವಣ್ಣ : ಸರಿಯಾಗಿ ಹೇಳಿದಿರಿ ಶರಣರೆ. ಮನವೆಂಬ ಮಾಯೆ ತಾನು ನಿರ್ಧರಿಸಿದ ಶಬ್ದಗಳನ್ನು ಅರಿವಿನಿಂದ ಕೇಳಲು ಹೋದರೆ ಅರ್ಥ ಕಳೆದುಕೊಳ್ಳುತ್ತವೆ.

ದೇಹ ಒಂದೆ, ದೇಹದಲ್ಲಿರುವ ಪದಾರ್ಥ ಕೂಡಾ ಒಂದೆ. ದೇಹದಲ್ಲಿರುವ ಅರಿವು ಕೂಡಾ ಒಂದೆ ಆಗಿದೆ. ಹಾಗೆಯೇ ದೇಹಕ್ಕೆ ಹೆಮ್ಮಾರಿಯಂತೆ ಆವರಿಸಿದ ಮನವೆಂಬ ಮಾಯೆ ಕೂಡಾ ಒಂದೆ ಆಗಿದೆ. ಮನ, ದೇಹವನ್ನು ನೋಡಿ, ಹೆಣ್ಣು ಗಂಡು ಎಂದು ಅಜ್ಞಾನದಿಂದ ನಿರ್ಧರಿಸುತ್ತದೆ.

ಜನಿತಕ್ಕೆ ತಾಯಿಯಾಗಿ, ಮೋಹಕ್ಕೆ ಮಗುವಾಗಿ, ಕೂಟಕ್ಕೆ ಸ್ತ್ರೀಯಾಗಿ, ಮನವೆಂಬ ಮಾಯೆ ದೇಹವನ್ನು ನಿರಂತರ ಕಾಡುತ್ತಲೇ ಇರುತ್ತದೆ. ಈ ಮಾಯೆಯನ್ನು ಕಳೆಯುವುದು ಮನದಿಂದ ಸಾಧ್ಯವಿಲ್ಲ. ದೇಹದಲ್ಲಿಯೇ ಸಂಗಮವಾದ ಅರಿವು ಎನ್ನುವ ಗುರುದೇವನಿಂದ ಮಾತ್ರ ಸಾಧ್ಯ.

ಜ್ಞಾನಿಗಳು ದೇಹದ ಶಾಶ್ವತ ಸುಖಕ್ಕಾಗಿ, ವೈಜ್ಞಾನಿಕವಾಗಿ ಕೆಲಸ ಮಾಡುತ್ತಲೇ ಬಂದಿದ್ದಾರೆ. ಮದಿರೆ ಪಾತ್ರೆಯಲ್ಲಿದ್ದರೆ ಹೊಯ್ದಾಡುವುದಿಲ್ಲ. ದೇಹಕ್ಕೆ ಇಳಿದರೆ ಸಕಲ ಸಂಬಂಧಗಳನ್ನು ಕಳೆದುಕೊಂಡು ಮರ್ಕಟನಂತೆ ಆಗುತ್ತದೆ. ಇಂತಹ ಮನವೆಂಬ ಮಾಯೆಯನ್ನು ಸತಿಯನ್ನಾಗಿಸಿ, ದೇಹದಲ್ಲಿಯೇ ಸಂಗಮವಾದ ಅರಿವಿನ ಲಿಂಗಯ್ಯನನ್ನೆ ಪತಿಯನ್ನಾಗಿ ಮಾಡಿಕೊಂಡು, ಅರಿವಿನ ಶಾಶ್ವತ ಪರಮಸುಖವನ್ನು ಮನುಕುಲ ಅನುಭವಿಸಲೇಬೇಕಾಗಿದೆ. ಈ ಒಪ್ಪಂದಕ್ಕೆ ಮಾರು ಹೋಗಿ ಹದಿನಾರು ಸಾವಿರ ಜನ ಶ್ರೀಕೃಷ್ಣನನ್ನು ಗಂಡನನ್ನಾಗಿ ಮಾಡಿಕೊಂಡರು. ತಾವು ಹೆಂಡತಿಯರಾದರು, ಗೋಪಿಕಾಸ್ತ್ರೀಯರಾದರು. ಅರಿವೆಂಬ ಶ್ರೀಕೃಷ್ಣ, ಗುರುವಾಗಿ ಕಾಯದಲ್ಲಿಯೇ ತಿಳಿ ಹೇಳಿದ. ಗೋಪಿಕಾ ಸ್ತ್ರೀಯರಿಗೆ ಸಖನಾದ. ಸಖ ಹೇಳಿದ ಮಾತು ಸಖಿ ಕೇಳಲೇಬೇಕು. ಇದು ದೇಹದಲ್ಲಿಯೇ ಘಟಿಸಬೇಕು. ಅರಿವು ಎಂಬ ಗುರುದೇವನೊಂದಿಗೆ ಮನದ ಒಪ್ಪಂದವಾಗಬೇಕು.

ಕಾಳಿಂಗದೇವ : ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ ಎಂಬ ವಚನದ ಸೂತ್ರದ ತಿರುಳು ಇದೇ ಆಗಿರಬೇಕಲ್ಲ ಬಸವರಸ?

ಬಸವಣ್ಣ : ಹೌದು ಶರಣರೆ, ತಾವು ಸರಿಯಾಗಿಯೇ ಊಹಿಸಿರುವಿರಿ.

ಕಾಳಿಂಗದೇವ : ಹಾಗಾದರೆ, ಹೆಣ್ಣು ಗಂಡು ಎನ್ನುವುದು ಸುಳ್ಳೇ ಬಸವರಸ?

ಬಸವಣ್ಣ : ಸುಳ್ಳು. ಚರ್ಮ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಕಣ್ಣು ಕಿವಿ ಮೂಗು ನಾಲಿಗೆ ರೋಮ ನಖ, ಇವು ಯಾವು ಹೆಣ್ಣು ಅಲ್ಲ, ಗಂಡು ಅಲ್ಲ, ಎಂದು ಅರಿವಿನಿಂದ ನೋಡಿದಾಗ ಗೊತ್ತಾಗುತ್ತದೆ. ಆದರೆ ಮನವೆಂಬ ಮಾಯೆ, ತಾನು ಗಂಡು ಎನ್ನುವ ಅಜ್ಞಾನ ಆಮಂತ್ರಣ ಮಾಡಿಕೊಂಡು ಹೆಣ್ಣನ್ನು ನೋಡುತ್ತದೆ. ಹೆಣ್ಣು ಎನ್ನುವ ಅಜ್ಞಾನ ಆಮಂತ್ರಣ ಮಾಡಿಕೊಂಡು, ಗಂಡನ್ನು ನೋಡುತ್ತದೆ. ಎರಡು ದೇಹಗಳಲ್ಲಿರುವ ಪದಾರ್ಥ, ಹೆಣ್ಣು ಅಲ್ಲ ಗಂಡೂ ಅಲ್ಲ ಎಂಬುದು ಮನಕ್ಕೆ ಗೊತ್ತಾಗುವುದಿಲ್ಲ. ಅರಿವಿಗೆ ಮಾತ್ರ ಗೊತ್ತಾಗುತ್ತದೆ. ಆಗ ಪ್ರತಿ ದೇಹದಲ್ಲಿರುವ ಅರಿವು, ವಿರಾಟ ಸ್ವರೂಪವಾಗಿ ನಿಲ್ಲುತ್ತದೆ.

ಕಾಳಿಂಗದೇವ : ಧನ್ಯರಾದೆವು ಬಸವರಸ! ತಮಗೆ ಶರಣು ಶರಣಾರ್ಥಿ.

ಕಾಳಿಂಗದೇವ :

ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇರಿ
ಕೊಡೆ ಕೋಟಿ ಶೂರರು ಹನ್ನಿಬ್ಬರಯ್ಯಾ !
ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ
ಅರಿದು ಕೊಲುವಡೆ ರಿಪುಗಳ ಕಲಿತನವ ನೋಡಾ !
ಆವಿಗೆಯಲೊದಗಿದ ಪುತ್ಥಳಿಯ ರೂಹಿನಂತಾಯಿತ್ತು
ಕೂಡಲಸಂಗಮದೇವಾ, ನಿಮ್ಮ ಹೆಸರಿಲ್ಲದ ಹೆಸರು ! ॥ 16 ॥

ಈ ವಚನವನ್ನು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಆಗಲಿ ಶರಣರೆ. ದೇಹ ಎನ್ನುವುದು ಒಂದು ಕುದುರೆ. ಈ ಕುದುರೆಯಲ್ಲಿ ಅರಿವೆಂಬ ಗುರುದೇವನು ಇದ್ದಾನೆ. ಈ ಗುರುದೇವನನ್ನು ತಿಳಿಯುವ ಮನವೆಂಬ ಶಿಷ್ಯನು ಇದ್ದಾನೆ. ಆ ಗುರುದೇವನೆ ಲಿಂಗಯ್ಯ, ಆ ಲಿಂಗಯ್ಯನನ್ನೆ ಗಂಡನನ್ನಾಗಿಸಿಕೊಂಡು ಮನವೆಂಬ ಹೆಣ್ಣು ಆತನಿಗೆ ಸತಿಯಾಗಬೇಕು. ಇವರಿಬ್ಬರೂ ಒಂದಾಗಿ, ದೇಹವೆಂಬ ಕುದುರೆಯನ್ನು ಏರಿ, ಜ್ಞಾನ ಯುದ್ಧಕ್ಕೆ ಹೋದಾಗ, ಅಂಗದಲ್ಲಿಯೇ ಎದುರಾದ ಅರಿಷಡ್ವರ್ಗಗಳೆಂಬ ಅಜ್ಞಾನದ ಸೈನ್ಯವೆಲ್ಲಾ, ತನಗೆ ತಾನೆ ನಷ್ಟವಾಗುತ್ತದೆ.

ಆನೆ, ಅಮೃತ ಶಿಲೆಯಲ್ಲಿಯ ತನ್ನ ಪ್ರತಿರೂಪ ನೋಡಿ, ವೈರಿಯೆಂದೇ ತಿಳಿದು ಯುದ್ಧ ಮಾಡಿ ಸಾಯುತ್ತದೆ. ತನ್ನಂತೆಯೇ ಇರುವ ಆನೆಯನ್ನು ಅಮೃತ ಶಿಲೆಯಲ್ಲಿ ನೋಡಿ ಆನೆಗೆ ಸಿಟ್ಟು ಬರುತ್ತದೆ. ಇದು ಸಹಜ. ಆನೆಗೆ ತಿಳಿಯುವುದಿಲ್ಲ. ಇದು ಮದ್ದಾನೆ. ಆದರೆ ಮನುಷ್ಯನಿಗೆ ಮನುಷ್ಯನೆಂದು ತಿಳಿಯಬೇಡವೆ! ದೇಹದಲ್ಲಿಯೇ ಇರುವ, ಅರಿವು ಎಂಬ ಗುರುದೇವ ಮನವೆಂಬ ಅಹಂಕಾರಿಗೆ ಪರಿಚಯವಾಗುವುದಿಲ್ಲ. ದೇಹವೆಂಬ ಕುದುರೆಯನ್ನೇರಿದ ಮನ, ಕುದುರೆಯೆಂಬ ದೇಹಗಳನ್ನೆ ಕೊಲ್ಲುತ್ತದೆ. ಕೋಟಿ ಕೋಟಿ ಕುದುರೆಗಳು ಸಾಯುತ್ತವೆ. ಶೂರರಿಬ್ಬರು ದೇಹವೆಂಬ ಕುದುರೆಯಲ್ಲಿ ಹಾಗೆಯೆ ಉಳಿಯುತ್ತಾರೆ. ಅವರೇನು ಮಾಡಿಯಾರು? ಕುದುರೆ ಇದ್ದಾಗ ಹತ್ತಲಿಲ್ಲ, ಕುದುರೆ ಇದ್ದಾಗಲೇ ಸವಾರಿ ಮಾಡಲು ಬರುವುದಿಲ್ಲ. ದೇಹವಿದ್ದಾಗಲೆ ದೇಹದಲ್ಲಿ ಇರುವ, ಅರಿವೆಂಬ ಗುರುದೇವನನ್ನು, ಮನ ತಿಳಿದು, ಸವಾರಿ ಮಾಡಲೇಬೇಕು. ಆ ಸವಾರನ ಗೆಳೆತನ, ಕುದುರೆಯ ಜ್ಞಾನದ ಬಲ, ಅರಿವಿನೊಂದಿಗೆ ಸಂಗಮವಾಗಿ, ತನಗೆದುರಾದ ಅಜ್ಞಾನದ ಸೈನ್ಯವನ್ನು ಅರಿದರಿದು ನಾಶ ಮಾಡುತ್ತಾನೆ.

ಕುಂಬಾರ, ಮಣ್ಣುನೀರು ಕಲಿಸಿ, ಹದಮಾಡಿ, ಒಂದು ರೂಪ ಮಾಡುತ್ತಾನೆ. ಆ ರೂಪ, ಆವಿಗೆಯಲ್ಲಿ ಬೆಂದು, ಮಣ್ಣು ಮತ್ತು ಜಲದ ಹೆಸರನ್ನು ಕಳೆದುಕೊಂಡು, ಹೆಸರಲ್ಲದ ಹೆಸರಾಗುತ್ತದೆ. ಅಂಗ ಲಿಂಗಾಂಗವೆಂದು ಕರೆಯಿಸಿಕೊಳ್ಳುತ್ತದೆ.

ಸತ್ಯಕ್ಕ : ನಮ್ಮ ಜೀವನ ಪಾವನವಾಯಿತು ಬಸವಣ್ಣ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿನ ಸತ್ಸಂಗದ ಕಾರ್ಯಕ್ರಮವನ್ನು ಮಂಗಲಗೊಳಿಸೋಣ. ಸಕಲರಿಗೂ ಶರಣು ಶರಣಾರ್ಥಿ ಎಂದು ಬಸವಣ್ಣ ಸಕಲರನ್ನು ಬೀಳ್ಕೊಟ್ಟರು.

ಸಕಲ ಶರಣರು ಶರಣು ಶರಣಾರ್ಥಿ ಎಂದು ಕೈಮುಗಿದು ಸತ್ಸಂಗದ ಸವಿಯನುಂಡ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

೭

ಮಹಾಮನೆಯಲ್ಲಿ ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಎಂದು ಹೇಳುತ್ತಾ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

ಕಾಳಿಂಗದೇವ :

ಇಂದಿಂಗೆಂತು ನಾಳಿಂಗೆಂತು ಎಂದು
ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ !
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ!
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ!
ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ
ಕೊಂದುದಯ್ಯಾ ಈ ಮಾಯೆ, ಕೂಡಲಸಂಗಮದೇವಾ ! ॥ 17 ॥

ಈ ವಚನದ ಬೆಡಗಿನ ರಹಸ್ಯವನ್ನು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ದೇಹ ಎಂಬುದು ಎಂದೆಂದೂ ಸವೆಯದ ಸದಾಶಿವನ ನವನಿಧಿ. ಈ ಸಂಪತ್ತನ್ನು ಮನವೆಂಬ ಮಾಯೆ, ನೆನೆಯಲು ಅವಕಾಶ ಮಾಡಿಕೊಡುವುದಿಲ್ಲ. ಇಂದಿಗೆ ಎಂತೋ ನಾಳೆಗೆ ಎಂತೋ ಎಂದು, ಮಾಯೆ, ಭೌತಿಕ ವಸ್ತುಗಳಾದ ಹೇಮ ಮತ್ತು ಭೂಮಿಯನ್ನು ಸಾಯುವವರೆಗೂ ಸಂಗ್ರಹಿಸುತ್ತದೆ. ಸಾವಿರಾರು ವರ್ಷಕ್ಕೆ ಆಗುವಷ್ಟು ದೋಚಿ, ತನುವನ್ನು ದುಃಖಕ್ಕೆ ಈಡು ಮಾಡುತ್ತದೆ. ಇದು ತನ್ನದೇ ಆದ ಸೃಷ್ಟಿಯಿಂದ ಆದದ್ದು ಎಂದು ಮನವೆಂಬ ಮಾಯೆಗೆ ತಿಳಿಯುವುದಿಲ್ಲ.

ಕಾಳಿಂಗದೇವ : ಲೋಕ, ಭೂಮಿ ಹೇಮ ವಿಷಯ ವಸ್ತುವನ್ನು ಸಂಪತ್ತೆಂದು ತಿಳಿದಿದೆ. ಆದರೆ ತಾವು ದೇಹವನ್ನೆ ಸವೆಯದ ಸಂಪತ್ತೆಂದು ಹೇಳಿದಿರಿ ಬಸವರಸ ಅದು ಹೇಗೆ?

ಬಸವಣ್ಣ : ದೇಹದಲ್ಲಿರುವ ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊರಳೆಗಳು, ನಾಲಿಗೆ, ಚರ್ಮ, ದೇವಾಂಗ. ಇವು ದೇಹದ ನವನಿಧಿಗಳು. ಇದು ಸದಾಶಿವನ ವಾಸಸ್ಥಾನವು ಹೌದು. ಎಂದೆಂದೂ ತೀರದ ಕುಬೇರನ ಸಂಪತ್ತು ಹೌದು. ದೇವಾನು ದೇವತೆಗಳು, ರಕ್ಕಸರು ಎಂದೆಂದೂ ಕೊಳ್ಳೆ ಹೊಡೆಯಲು ಬಾರದ, ಸದಾಶಿವನ ಸಂಪತ್ತು ಹೌದು. ಇದು ದೇಹದಲ್ಲಿಯೇ ಸಂಗಮವಾಗಿದೆ. ಈ ಸದಾಶಿವನನ್ನು ನೆನೆದು ಬಗೆದರೆ ಬೊಗಸೆ ತುಂಬ ಅಮೃತ, ಬಗೆದು ಉಂಡಷ್ಟು ಬರಿದಾಗದ ಅಮೃತ!

ಕಾಳಿಂಗದೇವ : ಇದು ಹೇಗೆ ಬಸವರಸ? ವಿವರಿಸಿ ಹೇಳಿ ಎನ್ನೊಡೆಯಾ;

ತಮ್ಮ ಮಾತಿನಲ್ಲಿ ಅರಿವಿನ ಸಂಪತ್ತು ಬಚ್ಚಿಟ್ಟುಕೊಂಡಂತೆ ನಮಗೆ ಭಾಸವಾಗುತ್ತಲಿದೆ.

ಬಸವಣ್ಣ : ಮಣ್ಣಿನ ಗರ್ಭದಲ್ಲಿ ಬಚ್ಚಿಟ್ಟುಕೊಂಡ ಹಳದಿ ಲೋಹಕ್ಕೆ; ಚಿನ್ನ ಎಂದು ನಾಮಕರಣ ಮಾಡಿದ ಕಣ್ಣು, ಸದಾಶಿವನ ಕಣ್ಣು, ಅರಿವಿನ ಕಣ್ಣು. ತಾನೇ ಸೃಷ್ಟಿಸಿ ಭೋಗಿಸಲು ಅರಿಯದ ಕಣ್ಣು. ಈ ಅರಿವಿನ ಕಣ್ಣಿಗೆ ಮಾಯೆ ಆವರಿಸಿರುವುದರಿಂದ, ಸದಾಶಿವನನ್ನು ನೆನೆಯಲು ಮಾಯೆಗೆ ಸಾಧ್ಯವಾಗುತ್ತಿಲ್ಲ. ಇಂದಿಂಗೆ ನಾಳಿಂಗೆ ಎಂದು ಹಗಲಿರುಳು ದುಡಿದು, ಚಿನ್ನ ಭೂಮಿ ಸಂಗ್ರಹಿಸಿ, ದೇಹಕ್ಕೆ ಧನಿಕನ ಪಟ್ಟ, ಜಿಪುಣನ ಪಟ್ಟ ಕಟ್ಟುತ್ತದೆ. ಕಳ್ಳ ಕೊಲೆಗಡುಕ ದರೋಡೆಕೋರನ ಪಟ್ಟ ಕಟ್ಟಿ, ಸದಾಶಿವನು ವಾಸ ಮಾಡಿದ ದೇಹವನ್ನು, ಮನವೆಂಬ ಮಾಯೆ ಸೆರೆಮನೆಗೆ ತಳ್ಳುತ್ತದೆ.

ಸದಾ ಶಿವನೆಂಬ ಅರಿವಿನ ಸಂಗಯ್ಯನನ್ನು ಕೂಡಿ, ಮುಕ್ತನಾಗಬೇಕೆಂಬ ಯುಕ್ತಿ ಇಲ್ಲದ ಮನವೆಂಬ ಮಾಯೆ, ತಾನಿದ್ದ ತನುವಿನ ಅರಿವಿನ ಸಂಪತ್ತನ್ನು, ತಾನೆ ಅರಿಯದೇ, ತನುವನ್ನು ತನುವಿನ ಒಡೆಯನನ್ನು ಕೊಂದು ಹಾಕುತ್ತದೆ; ಈ ಮನವೆಂಬ ಮಾಯೆ!

ಕಾಳಿಂಗದೇವ : ಕಣ್ಣುಗಳಲ್ಲಿ ಅರಿವಿನ ರಹಸ್ಯ ಬಚ್ಚಿಟ್ಟುಕೊಂಡಿರುವುದನ್ನು ತಿಳಿ ಹೇಳಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದಿರಿ ಬಸವರಸ.

ಬಸವಣ್ಣ : ಹಾಗೆಯೇ ಎರಡು ಕಿವಿಗಳಲ್ಲಿಯೂ ಕೂಡಾ ಅರಿವೆಂಬ ಗುರುದೇವ ಸಂಗಮವಾಗಿದ್ದಾನೆ. ಬಾಯಿಯ ಮೂಲಕ ಧ್ವನಿಸಿದ ಸಕಲ ಶಬ್ದಗಳಲ್ಲಿ ಅರಿವು ಬಚ್ಚಿಟ್ಟುಕೊಂಡಿದೆ. ಶಬ್ದ ಬರೆದರೆ ನಪುಂಸಕವಾಗುತ್ತದೆ. ಓದಿದರೆ ಅರಿವಾಗುತ್ತದೆ. ಶಬ್ದವನ್ನು ಅರಿಯದೇ ಸ್ವೀಕರಿಸಿದರೆ ಸಂತೋಷವಾಗುತ್ತದೆ ಇಲ್ಲ ದುಃಖವಾಗುತ್ತದೆ. ದೇಹ ಶಬ್ದ ಕೇಳಿ, ಹೊಗಳಿಕೆಗೆ ಹಿಗ್ಗುತ್ತದೆ. ತೆಗಳಿಕೆಗೆ ಕುಗ್ಗುತ್ತದೆ. ನುಡಿದ ದೇಹವನ್ನು ಕೊಲ್ಲುತ್ತದೆ. ಇಲ್ಲ ತನಗೆ ತಾನೇ ಆತ್ಮಹತ್ಯೆ ಮಾಡಿಕೊಳ್ಳುತ್ತದೆ.

ಶಬ್ದದಲ್ಲಿ ಕುಶಬ್ದ ಸುಶಬ್ದ ಎನ್ನುವುದು ಇಲ್ಲವೆ ಇಲ್ಲ. ಕಿವಿಯಲ್ಲಿ ವಾಸ ಮಾಡಿದ ಸದಾಶಿವನೆಂಬ ಅರಿವಿನಿಂದ ಕೇಳಿದರೆ ಶಬ್ದ ನಿಶಬ್ದವಾಗುತ್ತದೆ. ಶಬ್ದ ಅರಿವಾಗಿ ದೇಹಕ್ಕೆ ಪ್ರಸಾದವಾಗುತ್ತದೆ. ನುಡಿದ ಎದುರಾಳಿ ಮರು ನುಡಿಯುವುದಿಲ್ಲ. ವೈಷಮ್ಯ, ವೈರತ್ವ ಬೆಳೆಯುವುದಿಲ್ಲ. ಕೊಲ್ಲುವುದಿಲ್ಲ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಎಂದೆಂದೂ ಸದಾಶಿವನ ನವನಿಧಿಯ ಶಬ್ದಸಂಪತ್ತನ್ನು ಉಂಡು; ಆತನನ್ನು ನೆನೆ ನೆನೆದು, ಮಾಯೆ ನಿರ್ಮಾಯೆ ಆಗುವುದು. ಇದು ನಿಶಬ್ದವೇದಿ ಸೂತ್ರ.

ಕಾಳಿಂಗದೇವ : ಎಂದೆಂದೂ ಸದಾಶಿವನ ಕುಂದದೇ ನೆನೆಯಲಿಯದೇ ಕೊಂದುದಯ್ಯ ಈ ಮಾಯೆ ಕೂಡಲ ಸಂಗಮದೇವಾ. ಎಂದು ಹೇಳಿರುವಿರಲ್ಲ ಬಸವರಸ? ಇಲ್ಲಿ ಬಚ್ಚಿಟ್ಟುಕೊಂಡ ರಹಸ್ಯವನ್ನು ಶರಣ ಕುಲಕ್ಕೆ ತಿಳಿಸಿ ಎನ್ನೊಡೆಯಾ.

ಬಸವಣ್ಣ : ದೇಹದಲ್ಲಿ ಸದಾಶಿವ ವಾಸಮಾಡಿದ್ದಾನೆ. ಆತ ವಾಸ ಮಾಡಿದ ದೇಹ ನವನಿಧಿಯ ಸಂಪತ್ತುಗಳಿಂದ ಭರಿತವಾಗಿದೆ. ಮನವೆಂಬ ಮಾಯೆ ಸದಾಶಿವ ಬಚ್ಚಿಟ್ಟುಕೊಂಡ ನವನಿಧಿಗಳನ್ನು ಆವರಿಸಿ; ತಾನು ವಾಸ ಮಾಡಿದ ಒಡಲನ್ನೆ ಕಾಮು, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳ ಮೂಲಕ; ಸಪ್ತ ವ್ಯಸನ, ಅಷ್ಟಮದಗಳ ಮೂಲಕ. ಸಾತ್ವಿಕ, ರಾಜಸ, ತಾಮಸ ಎಂಬ ಮೂರು ಗುಣಗಳ ಮೂಲಕ; ಆವರಿಸಿ ಸದಾ ಇಂದಿಂಗೆ ನಾಳಿಂಗೆ ಎಂದು ಹಸಿದ ಒಡಲು ತುಂಬುವುದರಲ್ಲಿಯೇ; ಒಡಲಿನ ಆಯುಷ್ಯವನ್ನು ಪೂರ್ಣಗೊಳಿಸುತ್ತದೆ. ಒಡಲಲ್ಲಿರುವ ಸದಾಶಿವನ ಅರಿವಿನ ಸಂಪತ್ತು, ಒಡಲಿಗೆ ಮತ್ತು ಮನವೆಂಬ ಮಾಯೆಗೆ ಬಳಕೆಯಾಗದೆ, ಒಡಲಿನ ಆಯುಷ್ಯ ವ್ಯರ್ಥ ಕಳೆದು ಹೋಗುತ್ತದೆ.

ಕಾಳಿಂಗದೇವ : ಒಡಲಲ್ಲಿರುವ ಸಂಪತ್ತು ಒಡಲು ಮತ್ತು ಮನಕ್ಕೆ ದೊರಕದಿರುವುದು ಇದೊಂದು ವಿಚಿತ್ರವಲ್ಲವೆ ಬಸವರಸ?

ಬಸವಣ್ಣ : ಸದಾಶಿವನು ವಾಸ ಮಾಡಿದ ಒಡಲಿಗೆ ಮನವೆಂಬ ಮಾಯೆ ಆಸೆ ಆಮಿಷಗಳ ಅನ್ನ, ಕಾಮ ಕ್ರೋಧಗಳ ಅನ್ನ, ಮದ-ಮತ್ಸರಗಳ ಅನ್ನ, ಲೋಭ ಮೋಹಗಳ ಅನ್ನ, ರುಚಿ-ಅರುಚಿ ಎನ್ನುವ ಅನ್ನದ ವಿಷವ ಹಾಕಿ; ಸದಾಶಿವನು ಇದ್ದ ಒಡಲನ್ನೇ ಕತ ಕತನೆ ಕುದಿಯುವಂತೆ ಮಾಡುತ್ತದೆ ಮನವೆಂಬ ಮಾಯೆ!

ಕಾಳಿಂಗದೇವ : ಸದಾಶಿವನಿಂದ ಸೃಷ್ಠಿಯಾದ ತೃಣವೆಂಬ ಮಾಯೆ ಆತನಿದ್ದ ಒಡಲನ್ನೇ ಕೊಲ್ಲುವುದೆಂದರೆ ವಿಚಿತ್ರವಲ್ಲವೇ ಬಸವರಸ?

ಬಸವಣ್ಣ : ಕಣ್ಣಿನಲ್ಲಿ ಬೆರೆತ ಮಾಯೆ, ವಸ್ತುವಿನ ಸತ್ಯ ನೋಡದಂತೆ ಮಾಡಿದೆ. ಕಿವಿಯಲ್ಲಿ ಬೆರೆತು ಶಬ್ದ ಕೇಳದಂತೆ ಮಾಡಿದೆ. ಮನವೆಂಬ ಮಾಯೆ, ಸದಾಶಿವನೊಂದಿಗೆ ಒಪ್ಪಂದ ಮಾಡಿಕೊಂಡಿಲ್ಲ, ಕಾಮ ಕ್ರೋಧ ಮದ ಮತ್ಸರಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ತನಗೆ ಬೇಕಾದ ರುಚಿಯನ್ನು ಸದಾಶಿವನು ವಾಸ ಮಾಡಿದ ತನುವಿನೊಂದಿಗೆ ಭೋಗ ಮಾಡುತ್ತದೆ. ಜನ ಒಡಲನ್ನು ಹಿಡಿದು ದಂಡಿಸುತ್ತಾರೆ. ಮನವೆಂಬ ಮಾಯೆಗೆ ಒಳಗಾದ ಜನರಿಗೇನು ಗೊತ್ತು ಇದು ಸದಾಶಿವನ ಒಡಲೆಂಬುದು!

ಪುರದನಾಗಣ್ಣ : ಮಾಯೆಯನ್ನು ಕಳೆದುಕೊಳ್ಳುವ ಬಗೆ ಹೇಗೆ ಬಸವರಸ?

ಬಸವಣ್ಣ : ಮಾಯೆಯನ್ನು ಕಳೆದುಕೊಳ್ಳಲು ಮನವೆಂಬ ಮಾಯೆಗೆ ಇಷ್ಟವಾಗಬೇಕು. ಇಲ್ಲ ಮನದ ಸಂಗ ಮಾಡಿದ ಅಂಗಕ್ಕಾದರು ಇಷ್ಟವಾಗಬೇಕು. ಅಂಗ, ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗಯ್ಯನದು. ಈ ಅಂಗದಲ್ಲಿಯೆ ಮನವೆಂಬ ಮಾಯೆ ವಾಸವಾಗಿದೆ. ಮನಕ್ಕೆ ಅಂಗವೆಂದರೆ ಇಷ್ಟ. ಮನದ ಚೇಷ್ಠೆ ಎಂದರೆ ಅಂಗಕ್ಕೆ ಬಲು ಇಷ್ಟ. ಹೀಗಾಗಿ ಮನವೆಂಬ ಮಾಯೆಯನ್ನು ಕಳೆದುಕೊಳ್ಳುವುದು; ಅಂಗ ಮತ್ತು ಮನಕ್ಕೆ ಕಷ್ಟವಾಗಿದೆ.

ಪುರದನಾಗಣ್ಣ : ಇನ್ನು ಚರ್ಮದ ಬಗ್ಗೆ ವಿವರಿಸಿ ಹೇಳಿ ಎನ್ನೊಡೆಯಾ?

ಬಸವಣ್ಣ : ಆಗಲಿ ಶರಣರೆ.

ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಹೊರ ಚೆಲ್ಲದಂತೆ ಸುಂದರವಾಗಿ ಹೊಲಿದುಕೊಂಡ ರಕ್ಷಾ ಕವಚವೇ ಚರ್ಮ. ಚರ್ಮ ತನ್ನ ಮೂಲಕ ಕಣ್ಣನ್ನು ನೋಡುವಂತೆ ಕಿವಿಯನ್ನು ಕೇಳುವಂತೆ ಮೂಗನ್ನು ಮೂಸಿಸುವಂತೆ ಹದವಾಗಿ ಅಪ್ಪಿಕೊಂಡಿದೆ. ಚರ್ಮದ ಕಣ ಕಣದ ರಂಧ್ರಗಳಲ್ಲಿ, ಅರಿವು ಎನ್ನುವ ಸದಾಶಿವ ವಾಸ ಮಾಡಿದ್ದಾನೆ. ಹಾಗೆಯೇ ಆತನ ಬೆಳಕಿನ ನೆರಳಾಗಿ, ಚರ್ಮದಲ್ಲಿ, ಮನವೆಂಬ ಮಾಯೆ ಕೂಡ ವಾಸ ಮಾಡಿದೆ.

ಚರ್ಮದಲ್ಲಿ ವಾಸ ಮಾಡಿದ ಮನವೆಂಬ ಮಾಯೆಗೆ, ಮತ್ತೊಂದು ಚರ್ಮವನ್ನು ಸ್ಪರ್ಶಿಸಿ, ಘಾಸಿಗೊಳಿಸಿ, ಸುಖಿಸಬೇಕೆಂಬ ವಿಕೃತ ಬಯಕೆ ಅದಕ್ಕೆ, ಹರಿದು ತಿನ್ನುವ ರಕ್ಕಸ ಪ್ರವೃತ್ತಿ; ಮನಕ್ಕೆ ಕರಗತವಾಗಿದೆ. ದಕ್ಕದಿದ್ದರೆ ಕೊಂದಾದರು ಭೋಗಿಸಬೇಕು ಎಂಬ ಪೈಶಾಚಿಕ ಹಂಬಲವನ್ನು ಮನ ಹೊಂದಿದೆ. ತಾನು ಚರ್ಮ, ಅನ್ಯ ಚರ್ಮವು ಚರ್ಮವೆ ಎಂಬ ಸಾಮಾನ್ಯ ತಿಳುವಳಿಕೆಯು ಚರ್ಮದಲ್ಲಿ ವಾಸ ಮಾಡಿದ ಮನವೆಂಬ ಮಾಯೆಗೆ ಇಲ್ಲವಾಗಿದೆ. ಎಡಗೈ ಚರ್ಮ ಬಲಗೈಗೆ ತಾಗಿದರೆ ಅಥವಾ ತನುವಿನ ಯಾವ ಭಾಗಕ್ಕೆ ತಾಗಿದರೂ; ಉದ್ರೇಕ ಉಂಟಾಗುವುದಿಲ್ಲ. ಕಾಮದ್ರವ್ಯ ತನ್ನ ಚರ್ಮದಲ್ಲಿದೆಯೋ ಅನ್ಯ ಚರ್ಮದಲ್ಲಿದೆಯೋ ಎಂದು ಮನವೆಂಬ ಮಾಯೆಗೆ ತಿಳಿಯುವುದಿಲ್ಲ.

ಚರ್ಮ ಚರ್ಮವನ್ನು ಸ್ಪರ್ಷಿಸುವ ಮುನ್ನ; ಕಾಮದ್ರವ್ಯ ನಷ್ಟವಾದರೆ, ಮತ್ತೆ ಕಾಮದ ಬಯಕೆ ಚರ್ಮಕ್ಕೆ ಆಗುವುದಿಲ್ಲ ; ಎಂಬುದು ಚರ್ಮವನ್ನು ಆವರಿಸಿದ ಮಾಯೆ ಎಂಬ ಮನಕ್ಕೆ ತಿಳಿಯುವುದಿಲ್ಲ. ತನ್ನ ಕಾಮದ್ರವ್ಯ ತನ್ನಿಂದಲೆ ನಷ್ಟವಾಗಿ, ತನಗೆ ಸುಖವಾದದ್ದನ್ನು, ಮನವೆಂಬ ಮಾಯೆ ಅರಿಯುವುದಿಲ್ಲ.

ಪುರದನಾಗಣ್ಣ : ಚರ್ಮದಲ್ಲಿ ಎಷ್ಟೊಂದು ರಹಸ್ಯ ಅಡಗಿದೆಯಲ್ಲ ಬಸವರಸ ಮತ್ತಷ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಆಗಲಿ ಶರಣರೆ. ರಾವಣನ ಚರ್ಮದಲ್ಲಿ ಬಚ್ಚಿಟ್ಟುಕೊಂಡ ಕಾಮದ ಬಯಕೆ, ರಾವಣನ ಮೃತ್ಯುವಿಗೆ ಕಾರಣವಾಯಿತು. ಆದರೂ ಮನವೆಂಬ ಮಾಯೆ; ಈ ಕೃತ್ಯ ತನ್ನಿಂದಲೇ ಆಯಿತು ಎಂದು ತಿಳಿಯಲಿಲ್ಲ. ಚರ್ಮ ಉಳ್ಳ ಯಾವ ತನು ಕೂಡಾ ತಿಳಿಯಲಿಲ್ಲ. ರಾಮಾಯಣದ ಕತೆ ಹೇಳುವ ಕೇಳುವ ತವಕದಲ್ಲಿ, ರಾಮನನ್ನು ಪೂಜಿಸುವ ಸಂಭ್ರಮದಲ್ಲಿ, ಮನವೆಂಬ ಮಾಯೆ, ಸಕಲ ತನುಗಳಲ್ಲಿ ಅತಿಥಿಯಾಗಿ ಬಚ್ಚಿಟ್ಟುಕೊಂಡಿದೆ. ಇರಲು ಅವಕಾಶ ಮಾಡಿಕೊಟ್ಟ ಚರ್ಮವನ್ನೇ ಕ್ಷಣ ಕ್ಷಣಕ್ಕೂ ಘಾಸಿಗೊಳಿಸುತ್ತದೆ. ಮಾಯೆ ಎಂಬ ಕಾಮದ ಬಯಕೆಯಿಂದಾಗಿ; ರಕ್ತ, ಮೂಳೆ, ಮಾಂಸ, ಮಜ್ಜೆ, ಮೇದಸ್ಸು ಕತಕತನೆ ಕುದಿಯುತ್ತವೆ. ಮನವೆಂಬ ಮಾಯೆ,

ಅರಿವೆಂಬ ಸದಾಶಿವನನ್ನು ತಿಳಿದರೆ ಶಾಂತವಾಗುತ್ತದೆ. ತನು ಶಾಂತಸಾಗರವಾಗುತ್ತದೆ.

ಗುರುಪುರದ ಮಲ್ಲಯ್ಯ : ತಮಗೆ ಕೋಟಿ ಕೋಟಿ ನಮನಗಳು. ಹೊತ್ತಿಗೊಂದು ಪರಿಯಾಗುವ ಮನ ಮೂಗಿನಲ್ಲಿ ಬಚ್ಚಿಟ್ಟಿಕೊಂಡು, ತನುವನ್ನು ಹೇಗೆ ಯಾಮಾರಿಸುತ್ತಲಿದೆ ಎನ್ನುವ ವಿಷಯದ ಬಗ್ಗೆ ವಿವರಿಸಿ ಬಸರವಸ.

ಬಸವಣ್ಣ : ಆಗಲಿ ಶರಣರೆ.

ಮೂಗಿನಲ್ಲಿ, ಮನವೆಂಬ ಮಾಯೆ ಆವರಿಸಿರುವುದರಿಂದ, ಮೂಗಿನ ಪರಿಚಯ ಮನವೆಂಬ ಮಾಯೆಗೆ ಆಗುವುದೇ ಇಲ್ಲ. ಪದಾರ್ಥದಲ್ಲಿರುವ ಸುಗಂಧ ದುರ್ಗಂಧದ ಪರಿಚಯ, ಮನವೆಂಬ ಮಾಯೆಗೆ ಇದೆಯೇ ಹೊರತು; ಪದಾರ್ಥದಲ್ಲಿಯೇ ಬಚ್ಚಿಟ್ಟುಕೊಂಡ ಮರಿಮಳದ ಪರಿಚಯ ಮಾಯೆ ಎಂಬ ಮೂಗಿಗೆ ಆಗುವುದೇ ಇಲ್ಲ.

ಜಲಜನಕ ಆಮ್ಲಜನಕದಿಂದಲೇ ಜಲ ಆಗಿದೆ. ಜಲ ಹರಿದು ಮಲ್ಲಿಗೆ ಪರಿಮಳ ಬೀರಿತು. ಜಲದಲ್ಲಿ ಜನಿಸಿದ ಮೀನಿಗೆ ಜಲವೇ ಆಹಾರವಾಯಿತು. ಜಲ ಕುಡಿದು ಅರಳಿದ ಮಲ್ಲಿಗೆ ಪರಿಮಳ ; ಮೀನು ದುರ್ಗಂಧ ಎನ್ನಲು ಸಾಧ್ಯವೆ? ಬೆಳಿಗ್ಗೆ ಉಣ್ಣುವ ಪ್ರಸಾದ ಮೂಗಿಗೆ ಘಮಘಮಿಸುತ್ತದೆ. ಅದು ಜೀರ್ಣವಾಗಿ ಹೊರಬಂದಾಗ ಮೂಗಿಗೆ ದುರ್ಗಂಧ. ಇದು ಮನದ ಮಾಯೆಯೇ ಹೊರತು ಮತ್ತೇನೂ ಅಲ್ಲ.

ಗುರುಪುರದ ಮಲ್ಲಯ್ಯ : ಇಲ್ಲಿ ಮಾಯೆಯೇನು ಬಸವಣ್ಣ ? ಸತ್ಯವೇ ಇದೆಯಲ್ಲ.

ಬಸವಣ್ಣ : ನೀವಷ್ಟೇ ಅಲ್ಲ ಶರಣರೆ ಇಡೀ ಜಗತ್ತೇ ಹಾಗೆ ತಿಳಿದುಕೊಂಡಿದೆ. ಮಲ್ಲಿಗೆಯ ಸಸಿ ಉಣ್ಣುವುದು ಜಲ. ಜಲದಲ್ಲಿ ವಾಸಮಾಡಿದ ಮೀನು ಉಣ್ಣುವುದು ಕೂಡಾ ಜಲವೇ ಆಗಿದೆ. ನಾವು ಉಣ್ಣುವ ಸಕಲ ಪದಾರ್ಥಗಳು ಕೂಡಾ ಜಲದಿಂದಲೇ ಜನ್ಮ ತಳೆದಿವೆ. ಜಲಕ್ಕೆ ವಾಸನೆಯಿಲ್ಲ, ಜಲಕ್ಕೆ ರುಚಿಯೂ ಇಲ್ಲ. ಜಲಕ್ಕೆ ಬಣ್ಣವೂ ಇಲ್ಲ. ಆದರೂ ಜಲವನ್ನೇ ಕುಡಿದು ಅರಳಿದ ಮಲ್ಲಿಗೆ ಹೂವಿಗೆ ಬಣ್ಣ ಬಂದಿದೆ. ಸುಗಂಧ ವಾಸನೆಯೂ ಇದೆ. ಅದು ಕೊಳೆತಾಗ ದುರ್ಗಂಧವೂ ಆಗುತ್ತದೆ. ಹಾಗೆಯೇ ಮೀನು ಜಲದಿಂದ ಹೊರಬಂದಾಗ ದುರ್ಗಂಧವಾಗುತ್ತದೆ. ಹಾಗೆಯೇ ಅದನ್ನು ಆಹಾರವಾಗಿ ಬಳಕೆ ಮಾಡುವ ಮೂಗಿಗೆ ಸುಗಂಧವಾಗುತ್ತದೆ.

ಉಣ್ಣುವ ಆಹಾರ, ಮೂಗಿಗೆ ಘಮಘಮಿಸಿದರೆ, ಜೀರ್ಣವಾಗಿ ಹೊರಬರುವ ಮಲ ಮೂಗಿಗೆ ದುರ್ಗಂಧವಾಗುತ್ತದೆ. ಹಸು ನಾಯಿ ಹಂದಿಗೆ ಮಲವೇ ಮೃಷ್ಟಾನ್ನವಾಗುತ್ತದೆ. ಇದೆಲ್ಲ ಮೂಗಿನಲ್ಲಿಯೇ ಬಚ್ಚಿಟ್ಟುಕೊಂಡ ಮನವೆಂಬ ಮಾಯೆಯ ಕೆಲಸ.

ಗುರುಪುರದ ಮಲ್ಲಯ್ಯ : ಅದು ಹೇಗೆ ಬಸವರಸ ?

ಬಸವಣ್ಣ : ಲೋಕಕ್ಕೆ ಮನವೆಂಬ ಮಾಯೆ ಕಾಣುವುದಿಲ್ಲ. ಏಕೆಂದರೆ ಅದು ಸರ್ವ ತನುಗಳನ್ನು ವ್ಯಾಪಿಸಿಕೊಂಡಿದೆ.

ಜಲಕ್ಕೆ ವಾಸನೆಯಿಲ್ಲ. ಜಲ ಹರಿದ ಮಲ್ಲಿಗೆಯ ಸಸಿಗೂ ಕಾಂಡ ಬೇರು ಚಿಗುರು ಎಲೆಗಳಿಗೂ ಮಲ್ಲಿಗೆಯ ಮೊಗ್ಗಿಗೂ ವಾಸನೆ ಇಲ್ಲ. ಮೊಗ್ಗು ಅರಳಿ ಹೂ ಆದಾಗ ಅದು ಸುಗಂಧ ಬೀರುತ್ತದೆ. ಹೂ ಕೊಳೆತಾಗ ದುರ್ಗಂಧ ಬೀರುತ್ತದೆ. ಅರಳಿ ಸುಗಂಧ ಬೀರಲು ಕೊಳೆತು ದುರ್ಗಂಧ ಬೀರಲು ಕಾರಣವಾದ ಜಲ ಸುಗಂಧವೂ ಅಲ್ಲ, ದುರ್ಗಂಧವೂ ಅಲ್ಲ. ಜಲಕ್ಕೆ ವಾಸನೆ ಇಲ್ಲ, ರುಚಿ ಇಲ್ಲ, ಬಣ್ಣ ಇಲ್ಲ ಎನ್ನುವುದು ತನುವಿಗೆ ಮಾತ್ರ ತಿಳಿದಿದೆ. ಪಶು ಪಕ್ಷಿ ಪ್ರಾಣಿಗಳಿಗೆ ಇದು ತಿಳಿಯುವುದಿಲ್ಲ. ಹೀಗಾಗಿ ಅವು ಸಹಜ; ಪದಾರ್ಥದ ಮೂಲ ಗುರುತಿಸಿ ತಿನ್ನುತ್ತವೆ.

ನಾವು ಉಣ್ಣುವ ಅನ್ನವನ್ನು ತಿನ್ನುತ್ತವೆ. ನಾವು ಉಂಡು ಹೊರ ಚೆಲ್ಲಿದ ಮಲವನ್ನು ಇನ್ನೂ ಚೆನ್ನಾಗಿ ತಿನ್ನುತ್ತವೆ. ನಮಗೆ ಮಲ ; ಹಸು ನಾಯಿ ಹಂದಿಗೆ ಮೃಷ್ಟಾನ್ನ! ಇದು ಮೂಗಿನಲ್ಲಿ ಬಚ್ಚಿಟ್ಟುಕೊಂಡ ಮನವೆಂಬ ಮಾಯೆಯ ಆಟ! ಅದು ಆಡುವ ಆಟವನ್ನ ಅರಿವಿನ ಮೂಗು ಮಾತ್ರ ತಿಳಿಯುತ್ತದೆ. ಸ್ಥೂಲ ಮೂಗು ಸೂಕ್ಷ್ಮ ಮೂಗು ಆಡಿಸಿದಂತೆ ಆಡುತ್ತದೆ.

ಗುರುಪುರದ ಮಲ್ಲಯ್ಯ : ಸುಳ್ಳು ಸುಖದೊಂದಿಗೆ ಸದಾ ಭೋಗಿಸಬೇಕೆಂಬ ಇಚ್ಛೆ ಹೊಂದಿದ ಮರುಳ ಮನವನ್ನು ಕಂಡು ಭಯವಾಗುತ್ತದೆಯಲ್ಲ ಬಸವರಸ ! ಇದಕ್ಕೆ ಪರಿಹಾರವಿಲ್ಲವೆ ?

ಬಸವಣ್ಣ : ಎಲ್ಲವೂ ಸಹಜವಾಗಿಯೇ ಇವೆ. ಮನುಷ್ಯ ಮಾತ್ರ ಮನದಿಂದಾಗಿ ವಿಚಲಿತನಾಗಿದ್ದಾನೆ. ಹೀಗಾಗಿ ಮನವನ್ನು ಮನುಷ್ಯ ಎಂದು ತನಗೆ ತಾನೆ ಕರೆದುಕೊಂಡಿದ್ದಾನೆ.

ಸ್ಥೂಲ ಮೂಗನ್ನು ಆವರಿಸಿಕೊಂಡ ಮನೋಮಯವಾದ ಮೂಗು, ಮೂಗಿನಲ್ಲಿಯೇ ಸಂಗಮವಾದ ಅರಿವಿನ ಮೂಗಿಗೆ ಶರಣು ಹೋಗಬೇಕು. ಇಲ್ಲ ಸ್ಥೂಲ ಮೂಗು ಮನೋಮಯವಾದ ಮೂಗಿನ ಸಂಗ ಬಿಟ್ಟು ಅರಿವಿನ ಮೂಗಿನೊಂದಿಗೆ ಸದಾ ಬೆರೆಯಬೇಕು. ಪದಾರ್ಥದ ಮೂಲ ಕಂಡುಹಿಡಿಯುವ ಶಕ್ತಿ ಅರಿವಿನ ಮೂಗಿಗೆ ಮಾತ್ರ ಇದೆ. ಸುಗಂಧ ದುರ್ಗಂಧ ಕಂಡು ಹಿಡಿಯುವ ಸುಳ್ಳು ಶಕ್ತಿ ಮನೋಮಯವಾದ ಮೂಗಿಗೆ ಮಾತ್ರ ಇದೆ.

ಗುರುಪುರದ ಮಲ್ಲಯ್ಯ : ತಮ್ಮಿಂದ ಮೂಗಿನ ಸೂತ್ರ ತಿಳಿದು ಧನ್ಯರಾದೆವು ಬಸವರಸ.

ಘಟ್ಟಿವಾಳಯ್ಯ : ನಾಲಿಗೆಯಲ್ಲಿ ಬಚ್ಚಿಟ್ಟುಕೊಂಡ ಮನವೆಂಬ ಮಾಯೆಯ ರಹಸ್ಯವನ್ನು ತಿಳಿಹೇಳಿ ಬಸವರಸ.

ಬಸವಣ್ಣ : ನಾಲಿಗೆಯನ್ನು ಆವರಿಸಿದ ಮನವೆಂಬ ಮಾಯೆ, ತನಗೆ ಬೇಕಾದ ರುಚಿಕರವಾದ ಪದಾರ್ಥಗಳನ್ನು ಮತ್ತೆ ಮತ್ತೆ ಬೇಡಿ, ಇಡೀ ತನುವನ್ನು

ಘಾಸಿಗೊಳಿಸುತ್ತದೆ. ನಾಲಿಗೆ ಅರಿವಿನ ಸಂಪತ್ತು ಎಂದು ಮಾಯೆಗೆ ತಿಳಿಯುವುದಿಲ್ಲ.

ತಿನ್ನುವ ಪ್ರತಿ ಪದಾರ್ಥ ಜಲದಿಂದಲೇ ನಿರ್ಮಾಣವಾಗಿದೆ. ಪದಾರ್ಥದ ರುಚಿ ಕೂಡಾ ಜಲವೇ ಆಗಿದೆ. ಮೊದಲ ತುತ್ತಿಗೆ ರುಚಿ, ಎರಡನೇ ತುತ್ತು ಮೂರನೇ ತುತ್ತಿಗೆ ರುಚಿ ಕಡಿಮೆಯಾಗುತ್ತಾ ಹೋಗುತ್ತದೆ. ನಂತರದ ತುತ್ತುಗಳು ರುಚಿ ಕಳೆದುಕೊಳ್ಳುತ್ತವೆ. ಯಾಕೆ ಎಂದು ಯೋಚಿಸುವ ಶಕ್ತಿ, ಮನವೆಂಬ ಮಾಯೆ ಆವರಿಸಿದ ನಾಲಿಗೆಗೆ ಇಲ್ಲ. ಅರಿವಿನ ನಾಲಿಗೆಗೆ ಆ ಶಕ್ತಿ ಇದೆ.

ಪದಾರ್ಥದಲ್ಲಿದ್ದ ಜಲ, ಇಡೀ ತನುವಿನಲ್ಲಿದ್ದ ಜಲ, ನಾಲಿಗೆಯ ತುದಿಗೆ ಬರಲು ಮೂರು ನಾಲ್ಕು ತುತ್ತುಗಳಷ್ಟು ಸಮಯ ಬೇಕಾಗುತ್ತದೆ. ಆಗ ಖಾರ ಉಪ್ಪು ಹುಳಿ ಎಲ್ಲವೂ ಜಲಮಯವಾಗುತ್ತದೆ. ಜಲಕ್ಕೆ ರುಚಿಯಿಲ್ಲ ಎಂಬುದು ಅರಿವಿನ ನಾಲಿಗೆಗೆ ಗೊತ್ತಿದೆ . ಮನವೆಂಬ ಮಾಯಾಮಯವಾದ ನಾಲಿಗೆಗೆ ಗೊತ್ತಿಲ್ಲ. ಮನೋಮಯವಾದ ನಾಲಿಗೆ ಅರಿವಿನ ನಾಲಿಗೆಯಲ್ಲಿ ಸಂಗಮವಾದಾಗ; ನಾಲಿಗೆ ರುಚಿ ಅರುಚಿ ಎಂಬ ಅಜ್ಞಾನ ಕಳೆದುಕೊಳ್ಳುತ್ತದೆ.

ಘಟ್ಟಿವಾಳಯ್ಯ : ನಾಲಿಗೆಯ ರಹಸ್ಯವನ್ನು ಭೇದಿಸಿ ನಮ್ಮೆಲ್ಲ ಶರಣರಿಗೆ ತಿಳಿಯುವಂತೆ ಹೇಳಿದಿರಿ ಬಸವರಸ. ತಮಗೆ ಶರಣು ಶರಣಾರ್ಥಿ.

ಸತ್ಯಕ್ಕ : ದೇವಾಂಗದ ಬಗ್ಗೆ ಪರಿಚಯ ಮಾಡಿಕೊಡಿ ತಂದೆ ನಾವೆಲ್ಲ ಕಾತುರದಿಂದ ಕಾದು ಕುಳಿತಿದ್ದೇವೆ .

ಬಸವಣ್ಣ : ಆಗಲಿ ತಾಯಿ ನಿಮ್ಮ ಕುತೂಹಲಕ್ಕೆ ನಾನು ಚಿರಋಣಿ.

ದೇವಾಂಗ; ಇದು ಸದಾಶಿವನು ವಾಸಮಾಡುತ್ತಿರುವ ಕಾಯವೆಂಬ ಕೈಲಾಸಕ್ಕೆ ಜನ್ಮ ನೀಡಿದ ದಿವ್ಯಾಂಗ ! ಇದಕ್ಕೆ ಜನ; ಜನನಾಂಗವೆಂದೂ ಕರೆಯುತ್ತಾರೆ. ಈ ಅಂಗದಿಂದ ಹೊರಚೆಲ್ಲುವ ಪ್ರತಿ ಕಣ ಕಣದಲ್ಲಿ ಸದಾಶಿವ ಬೀಜ ರೂಪದಲ್ಲಿ ಬಚ್ಚಿಟ್ಟುಕೊಂಡಿದ್ದಾನೆ. ಸದಾಶಿವ ಬಚ್ಚಿಟ್ಟುಕೊಂಡ; ಕಾಯವೆಂಬ ಕೈಲಾಸಕ್ಕೆ ಜನ್ಮ ಕೊಡಬೇಕು; ಎಂಬ ಬಯಕೆ ಹೊಂದಿ; ಒಪ್ಪಂದ ಮಾಡಿಕೊಂಡ ಎರಡು ಕಾಯಗಳಿಗೆ ಮಾತ್ರ ದೇವಕಣ ರೂಪದ ಬೀಜ ಬಳಕೆಯಾಗುತ್ತದೆ.

ಪಶು ಪಕ್ಷಿ ಪ್ರಾಣಿ ಗಿಡ ಮರ ಬಳ್ಳಿಗಳಲ್ಲಿ ಸಹಜವಾಗಿ ಬಳಕೆಯಾಗುತ್ತದೆ. ಪಶುಗಳು ಬೆತ್ತಲಿದ್ದರು ಯಾವ ಗದ್ದಲವಿಲ್ಲದೆ ಸಾಲಾಗಿ ಹೋಗುತ್ತವೆ. ಸಂತಾನ ಬೇಕೆನಿಸಿದರೆ ಮಾತ್ರ; ಒಂದು ಪಶು ಮತ್ತೊಂದು ಪಶುವಿನೊಂದಿಗೆ ಒಪ್ಪಂದ ಮಾಡಿಕೊಂಡು; ದೇವಕಣ ಬಳಕೆ ಮಾಡಿಕೊಂಡು ಸಂತಾನ ಪಡೆಯುತ್ತವೆ. ಇದು ಸಹಜ. ನಿಸರ್ಗ ನಿಯಮ. ಮತ್ತೆ ಸಂತಾನ ಪಡೆಯುವ ಬಯಕೆ ಆಗುವವರೆಗೆ ಎರಡು ಪಶುಗಳು ಮಾಡಿಕೊಂಡ ಒಪ್ಪಂದವನ್ನು ಎಂದೂ ಮುರಿಯುವುದಿಲ್ಲ. ಅವು ಸಂತಾನಕ್ಕಾಗಿ ಕೂಡುತ್ತವೆಯೇ ಹೊರತು ಕಾಮದ ರುಚಿಗಾಗಿ ಅಲ್ಲ.

ಹಿಂದೆ ಋಷಿ ದಂಪತಿಗಳು ಕೂಡಾ; ಜ್ಞಾನಾಂಗ ಪಡೆಯಬೇಕೆಂಬ ಹಿರಿಯ

ಬಯಕೆಯಿಂದ; ದೇವಕಣ ಬಳಕೆ ಮಾಡುತ್ತಿದ್ದರು. ಸದಾಶಿವನು ಸಂಗಮವಾದ ಈ ಅಂಗ ನವನಿಧಿಯ ಒಂದು ಅಂಗ. ಇದು ಸಂಪೂರ್ಣ ದೇವಾಂಗವೇ ಆಗಿದೆ. ಅಂಗದ ಅರಿವು, ಕಣ ಕಣದಲ್ಲಿ ಬೆರೆತಿದ್ದರೂ, ದೇವಾಂಗವನ್ನು ಮಾಯೆ ಆವರಿಸಿರುವುದರಿಂದ, ರುಚಿ ಎಂಬ ಅಜ್ಞಾನ ದೇವಾಂಗದಲ್ಲಿ ಸಂಗ್ರಹವಾಗಿ ; ಮತ್ತೆ ಮತ್ತೆ ಬಳಕೆ ಮಾಡುವ ತವಕ ವ್ಯಕ್ತಪಡಿಸುತ್ತದೆ.

ಸದಾಶಿವ ಅರಿವಿನೆಡೆಗೆ ಜಗ್ಗುತ್ತಾನೆ; ಮಾಯೆ ಅಜ್ಞಾನದೆಡೆಗೆ ಜಗ್ಗಿ ಹಾದರ ಮಾಡುತ್ತದೆ. ತನ್ನ ಹಾದರದ ಸುಖಕ್ಕಾಗಿ; ಸದಾಶಿವನು ವಾಸ ಮಾಡಿದ ಎರಡು ಕಣ್ಣು , ಎರಡು ಕಿವಿ, ಮೂಗಿನ ಎರಡು ಹೊರಳೆಗಳು, ಚರ್ಮ, ನಾಲಿಗೆ ಹಾಗೂ ದೇವಾಂಗ ದುರ್ಬಳಕೆ ಆಗುತ್ತದೆ. ಇವು ಸದಾಶಿವನು ವಾಸ ಮಾಡಿದ ಜ್ಞಾನಾಂಗದ ನವನಿಧಿಗಳು!

ಸದಾಶಿವನೆಂಬ ಮಹಾಜ್ಞಾನದ ನವನಿಧಿಗೆ; ಮನ ಶರಣು ಹೋಗಿ ಶರಣಾಗತನಾದರೆ ಸಾಕು; ಸದಾಶಿವ ಮನವೆಂಬ ಮಾಯೆಯನ್ನು ತನ್ನಂತೆ ಮಾಡಿಕೊಳ್ಳುತ್ತಾನೆ. ಮನವೆಂಬ ಮಾಯೆ ಸದಾಶಿವನ ಸತಿಯಾಗುತ್ತಾಳೆ; ಅರ್ಧಾಂಗಿ ಆಗುತ್ತಾಳೆ, ಅರ್ಧನಾರೀಶ್ವರಳಾಗುತ್ತಾಳೆ. ಆಗ ಕಾಯ ನವನಿಧಿಯುಳ್ಳ ಕುಬೇರ ಎಂದು ಕರೆಯಿಸಿಕೊಳ್ಳುತ್ತದೆ. ಇದು ಅರಿವಿನ ಸ್ವಯಂ ಕ್ರಾಂತಿ. ಈ ಕ್ರಾಂತಿಗಾಗಿ ಸಕಲ ತನುಗಳಲ್ಲಿರುವ ಮನ; ತವಕ ಪಡುವಂತೆ ಆಗಬೇಕು. ಸಕಲ ತನುಗಳಲ್ಲಿ ಹೂತಿಟ್ಟ ನವನಿಧಿಗಳ ಸಂಪತ್ತನ್ನು ತನು ಮತ್ತು ಮನ ಪಡೆಯುವಂತೆ ಆಗಬೇಕು. ಈ ಸತ್ಸಂಗದಲ್ಲಿ ಭಾಗಿಯಾದ ಸಕಲ ಶರಣರ ಹಂಬಲವು ಇದೇ ಆಗಬೇಕು.

ಕಾಳವ್ವೆ : ತನುವಿನಲ್ಲಿಯೇ ತನ್ಮಯವಾದ ನವನಿಧಿಯ ಅರಿವಿನ ಸಂಪತ್ತನ್ನು ತಮ್ಮಿಂದ ಕೇಳಿ ಪಾವನರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಸಕಲ ಶರಣರಿಗೂ ಶರಣು ಶರಣಾರ್ಥಿ ಎಂದು ಕೈಮುಗಿದು ಸಭೆಗೆ ಮಂಗಲ ಹಾಡಿದರು.

ಸತ್ಸಂಗದ ಸವಿಯನುಂಡ ಅಮಲಿನಲ್ಲಿ ತೇಲಾಡುತ್ತ ಶರಣರು ತಮ್ಮ ತಮ್ಮ ಮನೆಗೆ ನಡೆದರು.

☐

೮

ಸತ್ಸಂಗಕ್ಕಾಗಿ ಶರಣರು ಮಹಾಮನೆಗೆ ನಡೆದಿದ್ದಾರೆ. ಬಸವಣ್ಣನವರಿಗೆ ಶರಣು ಶರಣಾರ್ಥಿ ಎನ್ನುತ್ತಾ ಕೈ ಮುಗಿದು ಕುಳಿತುಕೊಳ್ಳುತ್ತಾರೆ.

ಮಡಿವಾಳ ಮಾಚಿದೇವ :

ದಿಟಪುಟ ಭಕುತಿಸಂಪುಟ ನೆಲೆಗೊಳ್ಳದಾಗಿ
ಟಿಂಬಕನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ;
ಟೀವಕ ಟಿಂಬಕನನಾಡಿಸುತ್ತಿದ್ದಿತ್ತಯ್ಯಾ ನಿನ್ನ ಮಾಯೆ
ಕೂಡಲಸಂಗಮದೇವಯ್ಯಾ ,
ಹೊನ್ನು , ಹೆಣ್ಣು, ಮಣ್ಣು ತೋರಿ ! ॥ 18 ॥

ದಿಟಪುಟ ಭಕುತಿ ಸಂಪುಟ ನೆಲೆಗೊಳ್ಳದಾಗಿ ಎಂಬ ಸೂತ್ರ ದಾಖಲಿಸಿರುವಿರಿ. ಈ ಬಗ್ಗೆ ವಿವರಿಸಿ ಎನ್ನೊಡೆಯಾ.

ಬಸವಣ್ಣ : ದೇಹ ಎಂಬುದು ದಿಟದ ಪುಟಗಳುಳ್ಳ ಭಕ್ತಿಯ ಸಂಪುಟ! ಈ ದೇಹದಲ್ಲಿ ಅರಿವು ಎಂಬ ಗುರುದೇವ ವಾಸ ಮಾಡಿದ್ದಾನೆ. ಆತನ ವಿಸ್ತಾರ ಜಗದಗಲ ಮುಗಿಲಗಲ ; ಆತನ ಶ್ರೀಚರಣ ಪಾತಾಳದಿಂದಲೂ ಅತ್ತತ್ತ ವ್ಯಾಪಿಸಿಕೊಂಡಿದೆ. ಆತ ಅಪ್ರಮಾಣ, ಅಗಮ್ಯ, ಅಗೋಚರನಾಗಿದ್ದಾನೆ. ಅಪ್ರತಿಮ ಲಿಂಗವೇ ತಾನಾಗಿ ಸರ್ವಾಂಗದಲ್ಲಿ ಬಂದು ಚುಳುಕಾಗಿದ್ದಾನೆ. ಆತನ ದಿಟದ ಶಕ್ತಿ ದೇಹದ ಪುಟ ಪುಟದಲ್ಲಿ ಬಂದು ಸೇರಿದೆ. ಪಾತಾಳದಿಂದತ್ತತ್ತ ವ್ಯಾಪಿಸಿದ ಆತನ ದಿಟದ ಪಾದ; ಬ್ರಹ್ಮಾಂಡದಿಂದತ್ತತ್ತ ವ್ಯಾಪಿಸಿದ ಆತನ ಶ್ರೀಮುಕುಟ, ದೇಹದ ಪುಟ ಪುಟಗಳಲ್ಲಿ ಬಂದು ಚುಳುಕಾಗಿದೆ.

ದೇಹವೆಂಬುದು ದಿವ್ಯ ಜ್ಞಾನ ಗ್ರಂಥ, ಈ ಸತ್ಯದ ಸಂಪುಟದಿಂದಲೇ ವೇದ, ಆಗಮ, ಉಪನಿಷತ್ತುಗಳು ಹೊರಬಂದಿವೆ. ದೇಹದಲ್ಲಿ ಎಂದೆಂದೂ ರಂಜನೆಗೆ ಒಳಗಾಗದ, ನಿರಂಜನ ವಾಸ ಮಾಡಿದ್ದಾನೆ. ಹಾಗೆಯೇ ಸದಾ ರಂಜನೆಗೆ ಒಳಗಾಗುವ ಮನವು ಕೂಡಾ ವಾಸವಾಗಿದೆ.

ಈ ಮನವೆಂಬ ಮಾಯೆ ಹೊರಗಿನಿಂದ ಬಂದು ದೇಹದ ಒಳಗೆ ಸೇರಿಲ್ಲ. ಅದು ಸತ್ಯದ ಪುಟಗಳಿಂದಲೇ ಬಂದು ; ಸತ್ಯ ಕಾಣದಂತೆ ; ಸತ್ಯದ ಪುಟ ಪುಟಗಳನ್ನು ಆವರಿಸಿದೆ. ಮನವೆಂಬ ಮಾಯೆ ದೇಹವೆಂಬ ದೇಗುಲದಲ್ಲಿದ್ದ ಸತ್ಯದ ಪುಟ ಪುಟಗಳನ್ನು ಓದದೇ ದೇಹದಿಂದಲೇ ಹೊರಬಂದ ಪುಸ್ತಕಗಳನ್ನು ಓದುತ್ತದೆ. ಪುಸ್ತಕಗಳ ಓದಿನಲ್ಲಿಯೇ ನೆಲೆಗೊಳ್ಳುತ್ತದೆ. ಹೊನ್ನು ಹೆಣ್ಣು ಮಣ್ಣಿಗಾಗಿ ಓದುತ್ತದೆ. ಅದನ್ನೆ ನೋಡಿ, ಅದನ್ನೆ ಕೇಳಿ, ದೇಹವನ್ನು ಮನ ಮಾಯೆಯ ಮೂಲಕ ಮುಸುಕಿ,

ಸತ್ಯವನ್ನೆ ಕಾಣದಂತೆ ಮಾಡಿದೆ.

ಮನವೆಂಬ ಮಾಯೆ ಇವುಗಳನ್ನೆ ದೇಹಕ್ಕೆ ಎಲುಬಿನಂತೆ ತೋರಿ, ಇಡೀ ದೇಹವನ್ನೆ, ಮನವೆಂಬ ಮಾಯೆ ದುರ್ಬಳಕೆ ಮಾಡಿಕೊಳ್ಳುತ್ತದೆ. ಅರಿವಿನಿಂದಲೇ ಜನ್ಮ ಪಡೆದು ದೇಹದಲ್ಲಿಯೇ ವಾಸ ಮಾಡಿದ ಮನವೆಂಬ ಮಾಯೆ, ಕ್ಷಣ ಕ್ಷಣಕ್ಕೂ ದೇಹವನ್ನೆ ಮೋಸ ಮಾಡುತ್ತಲಿದೆ. ಮನ ಮತ್ತು ತನು ತನಗೆ ತಾನೆ ತಿಳಿದುಕೊಂಡರೆ ಸಾಕು ಅರಿವೆಂಬ ಗುರುದೇವನಿದ್ದ ದೇಹ ದೇವಾಲಯವಾಗುತ್ತದೆ.

ಮಡಿವಾಳ ಮಾಚಿದೇವ : ಹೊನ್ನು, ಹೆಣ್ಣು, ಮಣ್ಣು ಕುರಿತು ಮನಕ್ಕೆ ಯಾಕೆ ಮನವರಿಕೆ ಆಗುತ್ತಿಲ್ಲ ಬಸವರಸ ?

ಬಸವಣ್ಣ : ಹೊನ್ನು ಮಣ್ಣಿನ ಗರ್ಭದಿಂದ ಜನ್ಮ ಪಡೆದ ಹಳದಿ ಲೋಹ. ಇದನ್ನು ಹೊನ್ನು ಎಂದು ದೇಹದಿಂದಲೇ ಗುರುತಿಸಿ, ಮಾಯೆ ಅದಕ್ಕೆ ಹೊನ್ನು ಎಂದು ನಾಮಕರಣ ಮಾಡಿದೆ. ಹೊನ್ನಿನ ಬೆನ್ನು ಹತ್ತಿದ ಮನವೆಂಬ ಮಾಯೆ, ದಿಟ ಪುಟವೆಂಬ ಸಂಪುಟದಲ್ಲಿ ನೆಲೆಗೊಂಡಿದೆ. ಮನವೆಂಬ ಮಾಯೆಗೆ ಅರಿವಿನ ಪರಿಚಯವಾದರೆ ಹೊನ್ನಿನ ಬೆನ್ನು ಹತ್ತುವುದಿಲ್ಲ. ಹಳದಿ ಲೋಹವೆಂದು ಉದಾಸೀನ ಮಾಡುತ್ತದೆ.

ದೇಹವೆಂಬುದು ಹೆಣ್ಣು ಅಲ್ಲ. ಅದು ಅರಿವಿನ ಪುಟಗಳುಳ್ಳ, ಪುಟ ಪುಟದ ಮಹಾ ಸಂಪುಟ. ದೇಹವನ್ನು ಆವರಿಸಿದ ಮನವೆಂಬ ಮಾಯೆಯೆ ಹೆಣ್ಣು. ಈ ಹೆಣ್ಣು ಎಂಬ ಮನ, ಅಂಗದಲ್ಲಿಯೇ ಸಂಗಮವಾದ ಅರಿವು ಎನ್ನುವ ಮಹಾಪುರುಷನಾದ, ಸಂಗಯ್ಯನೊಂದಿಗೆ ಸಂಗ ಮಾಡಿದಾಗ, ದೇಹವೆಂಬ ದಿಟದ ಪುಟ ಪುಟಗಳಲ್ಲಿ ನೆಲೆಗೊಂಡ ಸತ್ಯ; ದೇಹಕ್ಕೆ ಮತ್ತು ಮನಕ್ಕೆ ಗೋಚರವಾಗುತ್ತದೆ. ಆಗ ದೇಹ, ಶಿವ ಶಿವೆಯರು ವಾಸ ಮಾಡಿದ ಆಲಯವಾಗುತ್ತದೆ.

ಮಡಿವಾಳ ಮಾಚಿದೇವ : ಮಣ್ಣಿನ ಬಗ್ಗೆ ಸ್ವಲ್ಪ ವಿವರಿಸಿ ಹೇಳಿ ಬಸವಣ್ಣ?

ಬಸವಣ್ಣ : ಜಲ ಕುದ್ದು ಪಾಕವಾಗಿ ಗಟ್ಟಿಯಾದದ್ದೆ ಮಣ್ಣು; ಜಲ ಕುದ್ದು ಪಿಂಡವಾದದ್ದೆ ದೇಹ. ಮನವೆಂಬ ಮಾಯೆಗೆ ಗೋಚರವಾದದ್ದು ಮಣ್ಣು. ಅದರಲ್ಲಿ ಬಚ್ಚಿಟ್ಟುಕೊಂಡ ಹೊನ್ನು. ದೇಹದ ಸತ್ಯಕ್ಕೆ ಗೋಚರವಾದದ್ದು ತನ್ನ ಸ್ವಸ್ವರೂಪ. ಜೀವ ಜಲಬಿಂದುವಿನಿಂದ ದೇಹವಾಯಿತು. ಜೀವ ಜಲಬಿಂದುವಿನಿಂದಲೇ ಮಣ್ಣಾಯಿತು. ದೇಹಕ್ಕೆ, ದೇಹವನ್ನು ಆವರಿಸಿದ ಮನಕ್ಕೆ, ಹೆಣ್ಣು ಮಣ್ಣು ಕಾಣಿಸಿಕೊಂಡಿತು; ದೇಹಕ್ಕೆ ಸಂಕಟವನ್ನೊಡ್ಡಿತು. ದೇಹದಲ್ಲಿಯೇ ಸಂಗಮವಾದ, ಅರಿವಿನ ಮೂಲಕ ಹೊನ್ನು ಹೆಣ್ಣು ಮಣ್ಣು ನೋಡಿದರೆ, ಅದು ತನ್ನಂತಯೇ ಇರುವ ತನ್ನ ಸ್ವ ಸ್ವರೂಪವಾಗಿ ಕಂಡಿತು. ದೇಹವೆಂಬ ದೇವಾಲಯದಲ್ಲಿ ಸತ್ಯದ ಪುಸ್ತಕವು ಇದೆ. ಅದರ ಪುಟ ಪುಟದ ಸಂಪುಟದಲ್ಲಿ ಬರೆದ ಸತ್ಯದ ಅರಿವು ಇದೆ. ಈ ಸತ್ಯದಿಂದಲೇ ಜನ್ಮ ತಳೆದ ಮನವೆಂಬ ಮಾಯೆಯ ನೆರಳು ಕೂಡಾ ಇದೆ. ಹೊರಗಿನ ಪುಸ್ತಕಗಳಿಗೆ, ವಸ್ತುಗಳಿಗೆ ಬಲಿಯಾದ

ಮಾಯೆ, ತನ್ನದೇ ಆದ ಪುಸ್ತಕದ ಪುಟ ಪುಟದಲ್ಲಿ ನೆಲೆಗೊಂಡು ಕೂಡಿದರೆ, ಕೂಡಲ ಸಂಗಮದೇವನೆ ತಾನಾಗುತ್ತದೆ. ಮನವೆಂಬ ಮಾಯೆ ಮಹಾದೇವಿಯಾಗುತ್ತಾಳೆ, ಮಹಾದೇವನ ಒಡತಿಯಾಗುತ್ತಾಳೆ.

ಮಡಿವಾಳ ಮಾಚಿದೇವ : ದೇಹದ ಸತ್ಯಕ್ಕೆ ಗೋಚರವಾದದ್ದು ತನ್ನ ಸ್ವ ಸ್ವರೂಪ ಎಂದು ತಿಳಿಸಿಕೊಟ್ಟ ತಮಗೆ ಶರಣು ಶರಣಾರ್ಥಿ.

ರೇಚದ ಬಂಕಣ್ಣ:

ಆಸತ್ತೆ ಅಲಸಿದೆನೆಂದಡೆ ಮಾಣದು;
ಬೇಸತ್ತೆ ಬೆಂಬಿದ್ದೆನೆಂದಡೆ ಮಾಣದು;
ಏವೆನೇವೆನೆಂದಡೆ ಮಾಣದು
ಕಾಯದ ಕರ್ಮದ ಫಲಭೋಗವು !
ಕೂಡಲಸಂಗನ ಶರಣರು ಬಂದು
ಹೋ ಹೋ, ಅಂಜದಿರೆಂದಡಾನು ಬದುಕುವೆನು ! ॥ 19 ॥

ಕಾಯದ ಕರ್ಮದ ಫಲ ಭೋಗದ ಬಗ್ಗೆ ಈ ವಚನದಲ್ಲಿ ಹೇಳುತ್ತಾ ಆಸತ್ತೆ ಆಲಿಸಿದೆನೆಂದಡೆ ಮಾಣದು ಎಂದಿರುವಿರಿ ಬಸವರಸ ಹಾಗೆ ಹೇಳಲು ಕಾರಣವೇನು?

ಬಸವಣ್ಣ : ಒಂದು ಕಾಯಕ್ಕೆ ರಾಜ ಭೋಗ; ಮತ್ತೊಂದು ಕಾಯಕ್ಕೆ ಬಡತನ. ಒಂದು ಕಾಯಕ್ಕೆ ಕಳ್ಳನ ಪಟ್ಟವಾದರೆ, ಮತ್ತೊಂದು ಕಾಯಕ್ಕೆ ಶ್ರೀಮಂತಿಕೆಯ ಪಟ್ಟ, ಮಠ ಪೀಠದ ಪಟ್ಟ. ಹೀಗೆ ಕಾಯದ ಕರ್ಮದ ಫಲಭೋಗ ಕಾಯ ಅನುಭವಿಸಲೇಬೇಕು.

ಕಾಯ ಒಂದೇ. ನೋಡುವ ಕಣ್ಣು, ಕೇಳುವ ಕಿವಿ, ರುಚಿಸುವ ನಾಲಿಗೆ, ಸ್ಪರ್ಶಿಸುವ ಚರ್ಮ, ಮೂಸಿಸುವ ಮೂಗು ಇಡೀ ಪ್ರಪಂಚದಾದ್ಯಂತ ಒಂದೇ ಆಗಿದ್ದರೂ ಕೂಡಾ; ಅದರ ಫಲ ಭೋಗಗಳು, ಫಲ ಸುಖಿಸುವ ತವಕ ; ದುಃಖದಿಂದ ಬಿಡುಗಡೆ ಆಗುವ ನರಕಯಾತನೆ ಕ್ಷಣ ಕ್ಷಣಕ್ಕೂ ಬೆಂಬಿಡದಂತೆ ಕಾಡುವುದು.

ಕಾಯ ಆಸತ್ತು ಹಲವಾರು ಪುಣ್ಯಕ್ಷೇತ್ರಗಳಿಗೆ ಅಲೆದರೂ ಸಿಕ್ಕದು. ಬೇಸತ್ತು ಬೆನ್ನು ಬಿಡಬೇಕೆಂದರೂ ಬಿಡದು. ಒಂದು ಕ್ಷಣ ಸುಖ, ಮತ್ತೊಂದು ಕ್ಷಣ ದುಃಖ.

ಮರ ಹೀಗಲ್ಲ; ಸಿಹಿ ಫಲವೆಂದು ಬಿತ್ತಿದ ಬೀಜ ಹುಳಿ ಫಲ ನೀಡಬಹುದು. ಆದರೆ ಅದು ಎಂದೂ ಕಹಿ ಆಗುವುದೇ ಇಲ್ಲ.

ಕಾಯ ಹೀಗಲ್ಲ; ಮನ ಇಚ್ಛಿಸಿದರೆ ಕಾಯದ ಕರ್ಮದ ಫಲ ಭೋಗವನ್ನು ಅಳಿಸಿ ಹಾಕಬಹುದು. ಆದರೆ ಹಲವಾರು ಕರ್ಮದಲ್ಲಿ ಕಾಯದೊಂದಿಗೆ ಮನ ತಾನೇ ತೊಡಗಿಸಿಕೊಂಡು ಕಾಯ ಮತ್ತು ತಾನು ಮುಕ್ತನಾಗಲು ಮನ ಇಚ್ಛಿಸುವುದಿಲ್ಲ. ಕಾಯವನ್ನು ಮತ್ತಷ್ಟು ಸಂಕಷ್ಟಗಳಿಗೆ ಸಿಲುಕಿಸಿ, ನರಕಯಾತನೆ ಅನುಭವಿಸುವಂತೆ

ಕಾಯಕ್ಕೆ ಮಾಡುತ್ತದೆಯೇ ಹೊರತು; ಕಾಯವನ್ನು ಮುಕ್ತನಾಗಲು ಮನ ಬಿಡುವುದಿಲ್ಲ. ತಾನು ಕೂಡ ಮುಕ್ತನಾಗುವುದಿಲ್ಲ. ಮನವೇ ಕಾಯದ ಕರ್ಮದ ಫಲ ಭೋಗದ ಸೂತ್ರಧಾರಿ. ಕಾಯದೊಂದಿಗೆ ಸಂಗ ಮಾಡಿದ ಮನ, ಒಮ್ಮೆ ಕಾಯವನ್ನು ಸಂಕಟಕ್ಕೆ ಒಡ್ಡಿ, ಮತ್ತೊಮ್ಮೆ ಕಾಯವನ್ನು ಸುಖಕ್ಕೆ ಕರೆದುಕೊಂಡು ಹೋಗುವುದು. ಇದು ಮನದ ಕೆಲಸ. ಮನ ತಾನು ಮಾಡುವ ಕೆಲಸ ತಾನೇ ಬಿಡಬೇಕೆಂದರೆ ಹೇಗೆ ಸಾಧ್ಯ? ಕೂಡಲ ಸಂಗನ ಶರಣರು ಮಾತ್ರ ಮನಕ್ಕೆ ಅರಿವಿನ ಮದ್ದನ್ನು ಅರೆಯಬಲ್ಲರು.

ರೇಚದ ಬಂಕಣ್ಣ : ನಮ್ಮ ನಮ್ಮ ಕರ್ಮದ ಫಲಭೋಗ ನಾವು ಅನುಭವಿಸಲೆಬೇಕು ಎಂದುಕೊಂಡಿದ್ದೆವು. ನೀವು ಹೇಳಿದ ಮಹಾಸೂತ್ರ ನಮ್ಮನ್ನು ಕಾಯದ ಕರ್ಮದ ಫಲ ಭೋಗದಿಂದ ಪಾರಾಗುವಂತೆ ಮಾಡಿತು. ಈ ಬಗ್ಗೆ ಮತ್ತಷ್ಟು ಹೇಳಿ ಬಸವರಸ.

ಬಸವಣ್ಣ : ಕೂಡಲ ಸಂಗನ ಶರಣರು ಸಾಮಾನ್ಯರಲ್ಲ. ಅವರು ಅರಿವು ಎಂಬ ಗುರುದೇವನಿಗೆ ಶರಣು ಹೋಗಿ, ಸಂಪೂರ್ಣ ಶರಣಾಗತರಾಗಿ ಶರಣರೇ ತಾವಾದವರು. ಅವರು ಕರ್ಮದ ಫಲಭೋಗದಿಂದ ನರಳುತ್ತಿರುವ ಕಾಯವನ್ನು ಹಿಡಿದು, ಅದರ ಕರ್ಮದ ಮೈದಡವಿ, ಹೋ ಹೋ ಅಂಜದಿರು ಎಂದು ಕಾಯಕ್ಕೆ, ಕಾಯವನ್ನು ಆವರಿಸಿದ ಮನಕ್ಕೆ ಅರಿವಿನ ಮದ್ದು ಅರೆದು, ಅದನ್ನು ಲೇಪಿಸುವುದೊಂದೆ ತಡ, ಬೆಳಕಿಗೆ ಅಂಜಿದ ಕತ್ತಲ ಮನ, ಆ ಅರಿವಿನ ಬೆಳಕಿನಲ್ಲಿ ಕರಗಿ, ಬೆಳಕಾಗಿ ಬೆಳಗುವುದು. ಕಾಯದ ಕರ್ಮದ ಫಲ ಭೋಗದಿಂದ ಉದುರಿ ಬೀಳುವುದು!

ಆಗ ಆಸತ್ತು ಅಳಲಿದ ಕಾಯ, ಬೇಸತ್ತು ಬಳಲಿದ ಕಾಯದ ಕರ್ಮಗಳೆಲ್ಲ ಶರಣರ ಅರಿವಿನ ಧ್ವನಿಯಿಂದ ಮಾದು, ಕಾಯ ಅರಿವಿನಿಂದ ಥಳ ಥಳನೆ ಹೊಳೆಯುವುದು. ಶರಣರು ಕಾಯವನ್ನು ಹಿಡಿದು ಅದರ ಮೈದಡವಿ ಕಾಯದ ಚೈತನ್ಯವನ್ನು ಕಾಯಕ್ಕೆ ತೋರಿ, ಸಮತೆಯ ಜಲ ಸಿಂಪಡಿಸಿ, ಕಾಯದಲ್ಲಿಯೇ ಸಂಗಮವಾದ ಜ್ಞಾನವೆಂಬ ಅಗ್ನಿಯನ್ನು ಪುಟವಿಕ್ಕಿ, ಸುಳುವಿನ ಪಾಕಕ್ಕೆ ತಂದು, ಮನವನ್ನು ಆ ಅರಿವಿನ ಪಾಕದಲ್ಲಿ ಬೆರೆಸುತ್ತಾರೆ. ಅದರಿಂದ ಉಂಟಾದ ಪರಿಣಾಮದ ಅನ್ನವನ್ನು ಕಾಯಕ್ಕೆ ಉಣಿಸುತ್ತಾರೆ. ಕಾಯ ಮತ್ತೆಂದು ಕರ್ಮಗಳಿಗೆ ಅಂಜದಂತೆ ಅಕಾಯವನ್ನಾಗಿಸುತ್ತದೆ. ಆಸತ್ತು ಬೇಸತ್ತು ಮತ್ತೆ ಮತ್ತೆ ಸತ್ತು ಬದುಕುವ ಕಾಯವನ್ನು, ಎಂದೆಂದೂ ಸಾಯದಂತೆ ಮಾಡುತ್ತದೆ. ಶರಣರ ಬರುವಿಕೆಗಾಗಿ ಕಾಯ ಕಾಯಲೇಬೇಕು. ಆಸತ್ತು ಬೇಸತ್ತು ಬಳಲಬೇಕು. ಅಂತಹ ಕಾಯಕ್ಕೆ ಮಾತ್ರ ಈ ಸೌಭಾಗ್ಯ ದೊರೆಯುತ್ತದೆ.

ರೇಚದ ಬಂಕಣ್ಣ: ತಮ್ಮ ಈ ವಚನದ ಬೆಡಗನ್ನು ನಮಗೆ ತಿಳಿಯುವಂತೆ ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಹೆಂಡದ ಮಾರಯ್ಯ :

ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯ ವಿಷಯವೆಂಬ ವಿಷದಿಂದ
ಆನು ಮುಂದುಗೆಟ್ಟೆನಯ್ಯ;
ಆನು ಹೊರಳಿ ಬೀಳುತ್ತಿದ್ದೆನಯ್ಯಾ !
ಓಂ ನಮಃ ಶಿವಾಯ ಎಂಬ ಮಂತ್ರವ ಜಪಿಸುತ್ತಿದ್ದೆನಯ್ಯಾ
ಕೂಡಲಸಂಗಮದೇವಾ ॥ 20 ॥

ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಸಂಸಾರವೆಂದರೆ ಹೆಂಡಿರು ಮಕ್ಕಳಲ್ಲ! ದೇಹಕ್ಕೆ ಅಂಟಿದ ಅಜ್ಞಾನವೇ ಸಂಸಾರ. ಇದು ಗಂಡ ಹೆಂಡತಿಗೆ ಉಂಟು, ಮಕ್ಕಳು ಮೊಮ್ಮಕ್ಕಳಿಗೂ ಉಂಟು. ಅಷ್ಟೇ ಏಕೆ ಇಡೀ ಪ್ರಪಂಚದ ಸಕಲ ಕಾಯಗಳಿಗೂ ಉಂಟು.

ಬೇಕು ಬೇಡ ಎನ್ನುವ, ಸದಾ ಭೋಗಿಸಬೇಕೆನ್ನುವ, ನೋಡಿದ್ದನ್ನೆಲ್ಲಾ ಬೇಡುವ, ದಕ್ಕದಿದ್ದರೆ ಕೊಂದು ಪಡೆಯುವ ; ಮನವೆಂಬ ವಿಷದ ಸರ್ಪ, ದೇಹದಲ್ಲಿ ತನ್ನದೇ ಆದ ಅಜ್ಞಾನದ ಸಂಸಾರ ಹೂಡಿದೆ. ಕಣ್ಣು , ವಸ್ತುವನ್ನು ನೋಡಿ ಆನಂದ ಪಡುವ ಸದ್ಗುಣಕ್ಕೆ ಸರ್ಪ ನೆರಳಾಗಿ ಕಾಣದಂತೆ ಮಾಡಿದೆ. ಕೇಳುವ ಕಿವಿಯಲ್ಲಿ, ವಿಷಯವೆಂಬ ವಿಷದ ಸರ್ಪ ಹೆಡೆ ಎತ್ತಿ ಆಡುತ್ತಲಿದೆ. ಕೇಳಿದ ಶಬ್ದಗಳನ್ನು ಬುಸುಗುಟ್ಟಿ ಕುಕ್ಕುತ್ತಾ ಅದರ ನಂಜು ಇಡೀ ತನುವನ್ನು ವ್ಯಾಪಿಸಿ, ಕುದಿಯುವಂತೆ ಮಾಡಿದೆ. ಮೂಸಿಸುವ ಮೂಗಿನಲ್ಲಿ ವಿಷಯವೆಂಬ ವಿಷದ ಸರ್ಪ ಸಂಸಾರ ಹೂಡಿ, ಪರಿಮಳ ಹೀರುವ ಸುಂದರವಾದ ಮೂಗನ್ನು ಘಾಸಿಗೊಳಿಸಿದೆ. ಹೊರಳಿ ಹೊರಳಿ ಮೂಗಿನಲ್ಲಿದ್ದ ವಿಷದ ಸರ್ಪ ಸುಗಂಧ ದುರ್ಗಂಧದ ತೆವಲಿಗಾಗಿ ಮೂಗನ್ನು ಕಚ್ಚಿ ಇಡೀ ತನುವಿಗೆ ಸಂಕಟವನ್ನು ಒಡ್ಡಿದೆ.

ರುಚಿಸುವ ನಾಲಿಗೆಯಲ್ಲಿ, ರುಚಿ ಅರುಚಿ ಎಂಬ ವಿಷ ಚೆಲ್ಲಿ, ನಾಲಿಗೆಯಲ್ಲಿ ಸರ್ಪ ತನ್ನ ಸಂಸಾರ ಹೂಡಿದೆ. ಪದಾರ್ಥ ರುಚಿಸದಿದ್ದರೆ ಕತ ಕತನೆ ಕುದಿಯುತ್ತದೆ. ಅಡಿಗೆ ಮಾಡಿದ ತನುವನ್ನು ಕೊಲ್ಲುತ್ತದೆ. ಖಾರ ಉಪ್ಪು ಹುಳಿ ಸಿಹಿ ತನುವಿನಿಂದ ಆದದ್ದು ಅಲ್ಲ ಎಂದು ಮನವೆಂಬ ಸರ್ಪಕ್ಕೆ ತಿಳಿಯುವುದಿಲ್ಲ. ಆಶ್ರಯ ಪಡೆದ ನಾಲಿಗೆಯನ್ನು ಕಚ್ಚಿ ಇಡೀ ತನುವನ್ನೆ ಕೊಂದು ಹಾಕುವ ದುರ್ಗುಣವು ಮನಕ್ಕೆ ಇದೆ.

ಚರ್ಮದಲ್ಲಿ ವಿಷಯವೆಂಬ ವಿಷಸರ್ಪ ಸಂಸಾರ ಹೂಡಿದೆ. ಚರ್ಮಕ್ಕೆ ಚರ್ಮ ತಾಗಿದರೆ ಸಾಕು ಬುಸುಗುಡುತ್ತದೆ. ಸ್ಪರ್ಶದ ನಂಜು ತಾಗಿದ ತನು, ಮನವೆಂಬ ಸರ್ಪದಿಂದ ವಿಷಯವೆಂಬ ವಿಷವ ತಾಗಿ ವಿಕೃತವಾಗುತ್ತದೆ, ರಕ್ಕಸನಾಗುತ್ತದೆ, ಹಿಂದು ಮುಂದು ಅರಿಯದೆ ತನು ತನುವನ್ನು ಹರಿದು ತಿನ್ನುತ್ತದೆ. ಮನವೆಂಬ ಸರ್ಪದ ಸಂಸಾರವೆ ವಿಚಿತ್ರ ! ಸರ್ಪ ಕಾಣುವುದಿಲ್ಲ; ಕಾಯ ಕಾಣುತ್ತದೆ. ಕಾಯ ಸರ್ಪವಲ್ಲ; ಅದು ಈಶ್ವರನು ವಾಸ ಮಾಡಿದ ಕೈಲಾಸ.

ಹೆಂಡದ ಮಾರಯ್ಯ : ಅಜ್ಞಾನದ ಸಂಸಾರವನ್ನು ನಾಶ ಮಾಡುವ ಬಗೆ ಹೇಗೆ ಬಸವರಸ?

ಬಸವಣ್ಣ : ಕಣ್ಣು ಕಿವಿ ಮೂಗು ನಾಲಿಗೆ ಚರ್ಮ, ಇವು ಕಾಯವೆಂಬ ಕೈಲಾಸದ ಜ್ಞಾನದ ಐದು ಮಹಾದ್ವಾರಗಳು. ಈ ಐದು ಮಹಾದ್ವಾರಗಳಲ್ಲಿ, ಐದು ಹೆಡೆಯ ವಿಷಯವೆಂಬ ವಿಷದ ಸರ್ಪ ಸಂಸಾರ ಹೂಡಿದೆ. ಬೇಕು ಬೇಡಗಳ ಬಯಕೆ ಸೃಷ್ಠಿ ಮಾಡಿ, ಮನಕ್ಕೆ ಆಶ್ರಯ ಕೊಟ್ಟ ಕಾಯವನ್ನೆ, ಕುಕ್ಕಿ ಕುಕ್ಕಿ ಕೊಲ್ಲುತ್ತದೆ. ಕಾಯ ಇತ್ತ ಸಾಯುವುದಿಲ್ಲ ಅತ್ತ ಬದುಕುವುದಿಲ್ಲ. ಮನ ನಿರ್ಮಾಣ ಮಾಡಿದ ವಿಷಯವೆಂಬ ಸಂಸಾರದಲ್ಲಿಯೇ ನರಳಿ ನರಳಿ ಒಮ್ಮೆ ಇಲ್ಲವಾಗುತ್ತದೆ.

ಹೆಂಡದ ಮಾರಯ್ಯ : ಈ ಹಾವು ಸಾಯುವದಾದರೂ ಯಾವಾಗ ಬಸವಣ್ಣ?

ಬಸವಣ್ಣ : ಓಂ ನಮಃ ಶಿವಾಯ, ಇದು ಮೃತ್ಯುಂಜಯ ಮಂತ್ರ. ಸರ್ಪ ಬಿಟ್ಟ ವಿಷವನ್ನು ಕಂಠದಲ್ಲಿ ಧರಿಸಿದ ನೀಲಕಂಠನ ಮಂತ್ರ. ಮತ್ತೆ ಮತ್ತೆ ಕಚ್ಚುವ ಸರ್ಪದ ವಿಷದ ಹಲ್ಲು ಕಿತ್ತಿ ಕೊರಳಲ್ಲಿ ಧರಿಸಿಕೊಂಡ ನಾಗಭೂಷಣನ ಮಂತ್ರ. ಈ ಷಡಕ್ಷರಗಳೇ ಜ್ಞಾನದ ತನುವಾಗಿ, ತನುವನ್ನು ಆವರಿಸಿದ ಮನವೆಂಬ ಹಾವನ್ನು ಅರಿವಿನಿಂದ ಹಿಡಿದು, ಹೊಸೆದು ನಾರಿ ಮಾಡಿ, ಆ ನಾರಿಯನ್ನೆ ತನುವಿನಲ್ಲಿ ಧರಿಸಿದ ಅರ್ಧನಾರೀಶ್ವರನ ಮಂತ್ರ. ಮನವೆಂಬ ಈ ಹಾವು, ತನುವಿನಲ್ಲಿ ಚೆಲ್ಲಿದ ವಿಷವೆಂಬ ವಿಷಯವನ್ನೆ, ಗಂಗೆಯನ್ನಾಗಿಸಿ ಜಟೆಯಲ್ಲಿ ಧರಿಸಿದ ಗಂಗಾಧರನ ಮಂತ್ರ. ಈ ಮಂತ್ರ ಜಪಿಸಿದರೆ ಸಾಲದು, ತನುವಿನಲ್ಲಿ ಸಂಗಮವಾಗಬೇಕು. ಜಪಿಸುತ್ತಾ ಜಪಿಸುತ್ತಾ ಕೂಡಲ ಸಂಗಮದೇವಯ್ಯನೆ ತಾನಾಗಬೇಕು. ಮೃತ್ಯುಂಜಯ, ನೀಲಕಂಠ, ನಾಗಭೂಷಣ, ಅರ್ಧನಾರೀಶ್ವರ, ಗಂಗಾಧರನೆ ತಾನಾಗಬೇಕು.

ಹೆಂಡದ ಮಾರಯ್ಯ : ಆಹಾ ಎಂತಹ ಅದ್ಭುತವಾದ ಅರಿವಿನ ಸೂತ್ರ ಹೇಳಿದಿರಿ ಬಸವರಸ. ನಮ್ಮ ಅಜ್ಞಾನದ ಸಂಸಾರ ನಷ್ಟ ಮಾಡಿಕೊಳ್ಳಲು ತಮ್ಮ ಈ ಜ್ಞಾನದ ಸೂತ್ರ ನಮಗೆ ನೆರವಾಗುವುದರಲ್ಲಿ ಸಂದೇಹವೆ ಇಲ್ಲ. ತಾವು ಹೇಳಿದ ಈ ಸೂತ್ರ ಬಳಸಿಕೊಂಡು ನಮ್ಮ ಅಜ್ಞಾನದ ಸಂಸಾರವನ್ನು ನಷ್ಟ ಮಾಡಿಕೊಳ್ಳುವ ಪ್ರಯೋಗಕ್ಕೆ ನಮ್ಮನ್ನು ನಾವೇ ಒಡ್ಡಿಕೊಳ್ಳಬೇಕು ಅಷ್ಟೇ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸಭೆಯಲ್ಲಿ ಸೇರೋಣ.

ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಎಂದು ಕೈ ಮುಗಿದು ತಮ್ಮ ತಮ್ಮ ಮನೆಗೆ ತೆರಳಿದರು.

೯

ಲಗು ಬಗೆಯಿಂದ ಶರಣರು ಸತ್ಸಂಗಕ್ಕಾಗಿ ಮಹಾ ಮನೆಗೆ ನಡೆದು ಬಸವಣ್ಣನವರಿಗೆ ಶರಣು ಶರಣಾರ್ಥಿ ಎನ್ನುತ್ತಾ ಕೈ ಮುಗಿದು ಕುಳಿತುಕೊಳ್ಳುತ್ತಾರೆ.

ಹುಂಜಿನ ಕಾಳಗದ ದಾಸಯ್ಯ:

ಅರಿಯದೆ ಜನನಿಯ ಜಠರದಲ್ಲಿ
ಬಾರದ ಭವಂಗಳಲ್ಲಿ ಬರಿಸಿದೆ ತಂದೆ!
ಹುಟ್ಟಿತ್ತೆ ತಪ್ಪಾಯಿತ್ತೆ ಎಲೆ ಲಿಂಗವೆ ?
ಮುನ್ನ ಹುಟ್ಟಿದುದಕ್ಕೆ ಕೃಪೆ ಮಾಡು ಲಿಂಗವೆ !
ಇನ್ನು ಹುಟ್ಟಿದೆನಾದಡೆ
ಕೂಡಲಸಂಗಮದೇವಾ ಏ, ನಿಮ್ಮಾಣೆ ! ॥ 21 ॥

ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ಶರಣರೇ, ನಾನು ನನ್ನ ಅರಿವಿನ ತಂದೆಯೊಂದಿಗೆ, ಮಾತನಾಡುವ ಸನ್ನಿವೇಶ ಅದು. ಆ ತಂದೆ, ನನಗೂ ತಂದೆ ಸತ್ಸಂಗಕ್ಕಾಗಿ ಬಂದಿರುವ ತಮ್ಮೆಲ್ಲರಿಗೂ ತಂದೆ! ಅಷ್ಟೇ ಏಕೆ, ಇಡೀ ಬ್ರಹ್ಮಾಂಡದಲ್ಲಿರುವ ಸಕಲ ಕಾಯಗಳಿಗೂ, ಕಾಯದಲ್ಲಿಯೇ ಸಂಗಮವಾದ ಆ ತಂದೆಯೇ ತಂದೆಯಾಗಿದ್ದಾನೆ. ಕಾಯ ತನ್ನ ಗರ್ಭದಲ್ಲಿಯೇ ಇಟ್ಟುಕೊಂಡ, ಆ ತಂದೆಯನ್ನ ಅರಿಯದಿದ್ದಕ್ಕಾಗಿ, ಆ ತಂದೆ ತಾನಿದ್ದ ಕಾಯವನ್ನೇ ಬಾರದ ಭವಂಗಳಲ್ಲಿ ಬರಿಸಿದ್ದಾನೆ. ಕಾಯಕ್ಕೆ ಜನನ ಮರಣಂಗಳ ಸಂಕಷ್ಟವನ್ನು ತಂದೊಡ್ಡಿದ್ದಾನೆ. ಕ್ಷಣ ಕ್ಷಣಕ್ಕೂ ಹುಟ್ಟುವ ಸಾಯುವ ಸಂಕಷ್ಟವನ್ನು ಕಾಯಕ್ಕೆ ನೀಡಿದ್ದಾನೆ. ಇದು ನಿನಗೆ ನ್ಯಾಯವೇ ? ಎಂದು ಕೇಳುವ ಶಕ್ತಿ ಕೂಡಾ ಕಾಯದಲ್ಲಿಯೇ ಇದ್ದರೂ, ಆ ಕಾಯದ ಶಕ್ತಿಯನ್ನು ಆತ ಕಸಿದುಕೊಂಡಿದ್ದಾನೆ.

ಕಾಯ, ಕಾಯವನ್ನು ಆವರಿಸಿದ ಮನ, ಕಾಯಕ್ಕೆ ಮತ್ತು ಮನಕ್ಕೆ ಜನ್ಮ ನೀಡಿ, ಕಾಯದಲ್ಲಿಯೇ ವಾಸ ಮಾಡಿದ ಅರಿವಿನ ತಂದೆಯನ್ನು ಅರಿತರಿತು : ನಿನ್ನನ್ನು ಅರಿಯದಿದ್ದಕ್ಕಾಗಿ ನನಗೆ ಸಾವು ನೋವುಗಳನ್ನು ತಂದೆಯಾ ತಂದೆ ? ಹುಟ್ಟಿದ್ದು ತಪ್ಪಾಯಿತ್ತೆ ಎಲೆ ಲಿಂಗವೇ? ಸಂಗಮನಾಥನೆ? ತಿಳಿಯದೇ ಹುಟ್ಟಿದುದಕ್ಕಾಗಿ ಕೃಪೆ ಮಾಡು ತಂದೆಯೇ. ನೀನು ಸೃಷ್ಠಿ ಮಾಡಿದ ಕಂದ ನಾನು ; ನಿನ್ನನ್ನೆ ಅರಿಯದ ಅಪರಾಧಿ ನಾನು! ನಾನು ನಿನ್ನ ವಾರಸುದಾರ ; ನಿನ್ನನ್ನು ಅರಿಯದಿದ್ದರೇನಾಯಿತು ? ನೀನು ನನ್ನನ್ನು ಬರಸೆಳೆದು ಕಂದ ಮಾಡಿದ ಅಪರಾಧವನ್ನು ಮನ್ನಿಸಿ ಅಪ್ಪಿಕೊಳ್ಳಬಾರದೆ.

ಕೃಪೆ ಮಾಡು ತಂದೆಯೆ, ನಿನ್ನನ್ನು ನಾನು ಅರಿತ ಮೇಲೆ ಮತ್ತೆ ಹುಟ್ಟಿದೆನಾದಡೆ ನಿಮ್ಮಾಣೆ ಸಂಗಮನಾಥನೆ. ಬೇಡಿದರೆ ನಿನ್ನನ್ನೆ ಬೇಡುವೆ, ಮಹಾದಾನಿ ನೀನು. ಒಡಲ

ಒಡೆಯ ನೀನು, ಎಂದು ಗೋಗರೆದು, ಆತನೊಂದಿಗೆ ಮಾತನಾಡುವ ಸುಳಿವನ್ನು ನಿಮ್ಮೆಲ್ಲರಿಗೂ ನೀಡಿದ್ದೇನೆ. ಈ ಸೂತ್ರ ನಿಮ್ಮ ಅನುಭವಕ್ಕೆ ತಂದು ಕೊಂಡು, ತಾವೆಲ್ಲರು ಪ್ರಯೋಗಕ್ಕೆ ಹೋಗಿ, ಕೃಷಿ ಮಾಡಬೇಕೆನ್ನುವ ಕಳಕಳಿ ನನ್ನದಾಗಿದೆ.

ಭೋಗಣ್ಣ : ಆಹಾ ! ಅದ್ಭುತವಾದ ಸೂತ್ರ ಬಸವರಸ . ಮನವೆಂಬ ನಾನು ಅರಿವಿನ ತಂದೆಯ ವಾರಸುದಾರನಾಗಿ, ಆ ತಂದೆ ಅರಿವಿನ ಲೋಕಕ್ಕೆ ನನ್ನನ್ನು ಕರೆದುಕೊಂಡು ಹೋಗುವಂತೆ, ಬೇಡಿಕೊಳ್ಳುವ ಸರಳವಾದ ಸೂತ್ರವನ್ನು, ನಮ್ಮ ಶರಣ ಕುಲಕ್ಕೆ ವಿವರಿಸಿದಿರಿ ಬಸವರಸ ಧನ್ಯರಾದೆವು . ತಮಗೆ ಶರಣು ಶರಣಾರ್ಥಿ.

ಮಡಿವಾಳ ಮಾಚಿದೇವ :

ಎಂದೊ, ಸಂಸಾರದಂದುಗ ಹಿಂಗುವುದು ?
ಎಂದೊ, ಮನದಲ್ಲಿ ಪರಿಣಾಮವಹುದೆನಗೆಂದೊ ಎಂದೊ ?
ಕೂಡಲಸಂಗಮದೇವಾ,
ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೋ? ।। 22 ।।

ತಮ್ಮ ಈ ವಚನದ ರಹಸ್ಯ ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಹಾಗೇ ಆಗಲಿ ಶರಣರೆ . ಈ ದೇಹ ಸುಖ ದುಃಖ ದುಮ್ಮಾನಗಳ ಸಾಗರವೇ ಆಗಿದೆ . ಸುಖ ಬಯಸಿ ದುಃಖ ಪಡುತ್ತದೆ . ಬಯಸಿದ ಸುಖ ಸಿಕ್ಕರೂ ಮತ್ತೊಂದು ಸುಖ ಬಯಸಿ ದುಃಖ ಪಡುತ್ತದೆ . ದೇವಾಲಯವೆ ಆಗಬೇಕಾದ ದೇಹದ ಸಂಸಾರದ ದಂದುಗವು ಹಿಂಗುವುದೆ ಇಲ್ಲ .

ಹೀಗೆ ಸುಖ ದುಃಖಗಳನ್ನು ಬಯಸಿ, ಸದಾ ತನುವನ್ನು ಸಂಕಟಕ್ಕೆ ಈಡು ಮಾಡುವ ಮನಕ್ಕೆ, ಶಾಶ್ವತ ಸುಖದ ಪರಿಣಾಮ ಆಗುವುದು ಬಲು ಜಟಿಲ . ಕಾಯದ ಕಣ ಕಣದಲ್ಲಿ ಸಂಗಮವಾದ ಅರಿವಿನ ಸಂಗಯ್ಯನನ್ನು, ಮನ ಸೇರುವುದೇ ಇಲ್ಲ . ಬ್ರಹ್ಮಾಂಡದಲ್ಲಿರುವ ತನು ಮತ್ತು ಮನ, ಇವು ಅರಿವಿನಲ್ಲಿ ಒಂದಾಗುವುದು ಎಂದೋ ಏನೋ ? ಅರಿವಿನಿಂದ ಇಡೀ ಬ್ರಹ್ಮಾಂಡವನ್ನು ನೋಡುವುದು, ತನು ಮತ್ತು ಮನಕ್ಕೆ ಸಾಧ್ಯವಾಗುವುದೇ ಇಲ್ಲ. ಅರಿವಿನ ತಂದೆಯನ್ನು ಬಿಗಿದಪ್ಪಿ, ಆತ ತನ್ನ ಅಪ್ಪುಗೆಯಲ್ಲಿ ಬಂಧಿಸುವುದು ಎಂದೊ ಏನೋ ಎನ್ನುವ ಚಿಂತೆ ಅತಿಯಾದಾಗ ಮನ ಅಂಗದಲ್ಲಿಯೇ ಸಂಗಮವಾದ ಅರಿವಿನ ತಂದೆಯೊಂದಿಗೆ ಸಂಗಮವಾಗಿ, ಪರಮ ಸಂತೋಷದಿಂದ ವಿರಮಿಸುತ್ತದೆ.

ಮನದ ಮಹಾರೋಗ ಕಳೆದುಕೊಳ್ಳಬೇಕೆಂಬ ಇಚ್ಛೆ ಮನಕ್ಕೆ ಇಲ್ಲದಿದ್ದರೆ, ಪರಮ ಸಂತೋಷ ಹೊಂದುವುದು ಬಹು ದೂರವಾಗುತ್ತದೆ .

ಭೋಗಣ್ಣ : ತಾವು ಹೇಳಿದ ಈ ಸರಳ ಸೂತ್ರದಿಂದ ಅರಿವಿನ ತಂದೆಯನ್ನು ಮನ ಸೇರುವ ದಾರಿ ಸುಗಮವಾಯಿತು ಬಸವರಸ. ತಮಗೆ ಶರಣು ಶರಣಾರ್ಥಿ.

ಭೋಗಣ್ಣ :

ಲೇಸು ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದಡಿಲ್ಲ ಕಂಡಯ್ಯ,
ತಾಳಮರಕ್ಕೆ ಕೈಯ ನೀಡಿ
ಮೇಲೆ ನೋಡಿ ಗೋಣ ನೊಂದುದಯ್ಯಾ ,
ಕೂಡಲಸಂಗಮದೇವಾ ಕೇಳಯ್ಯಾ ,
ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ ! ॥ 23 ॥

ತಮ್ಮ ವಚನದ ಸೂತ್ರ ಬಿಡಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಭೂಮಿ, ಹೇಮ, ವಿಷಯಗಳ ಮೇಲೆ ಸದಾ ಆಶೆ ಮಾಡಿ ಸುಖಿಸುವ ಇಲ್ಲ ದುಃಖಿಸುವ ಮನಕ್ಕೆ ಒಮ್ಮೆ ಅಂತರಾಳದ ಅರಿವಿನ ಸುಖ ಉಣ್ಣುವ ಆಸೆ ಆಗುತ್ತದೆ. ಶ್ರೀ ಗುರುವಿನ ಮೂಲಕ ಅರಿವೆಂಬ ಸದ್ಗುರುವಿನ ದರ್ಶನವಾಗುತ್ತದೆ.

ಬಾಹ್ಯ ವಿಷಯದ ಸುಖ ಉಣ್ಣುವ ಆಸೆ ಒಂದೆಡೆಯಾದರೆ ಗುರುದೇವ ಪರಿಚಯಿಸಿದ ಅರಿವಿನ ಆಸೆ ಸೂಜಿಗಲ್ಲಿನಂತೆ ಸೆಳೆಯುತ್ತದೆ. ಆಗ ಮನ ಎರಡು ದಡಗಳಲ್ಲಿ ಹೊಯ್ದಾಡುತ್ತದೆ. ಶ್ರೀಗುರುವಿನ ಸಂಗ ಅಧಿಕವಾಗಿ, ಬಾಹ್ಯ ವಿಷಯ ಸುಖದಿಂದ ಮನ ವಿಮುಕ್ತನಾಗಲು ಬಯಸಿ, ಶ್ರೀಗುರು ವಿವರಿಸಿ ಹೇಳುವ ಸತ್ಯದ ಸುಖಕ್ಕೆ ಸೆರೆಯಾಳಾಗುತ್ತದೆ. ಕುಳಿತರು ನಿಂತರೂ ಶ್ರೀಗುರುವಿನ ಧ್ಯಾನ ! ತಾಯಿ ಮಗುವಿನ ಪ್ರೇಮ, ಸಖ ಸಖಿಯ ಪ್ರೇಮದಂತೆ ಸುಖಿಸುತ್ತಾ ಕಾಲ ಕಳೆಯುತ್ತದೆ. ಭೂಮಿ ಹೇಮ ವಿಷಯ ಸುಖ ಬಿಟ್ಟ ಮನ ಗುರುವಿನ ಅದ್ಭುತ ಮಾತುಗಳ ಸುಖದ ನುಡಿಗಳನ್ನು ನುಡಿಯುತ್ತದೆ. ಶ್ರೀಗುರು ಜಾಣನಾದರೆ ಮನದ ಈ ಬಾಂಧವ್ಯ ಕಳಚಿಕೊಳ್ಳುತ್ತಾನೆ. ಶಿಷ್ಯನ ಶಿಷ್ಯತ್ವ ಕೆಡಿಸಿ, ಗುರುವಿನ ಗುರುತನ ಕೂಡಾ ಕೆಡಿಸಿಕೊಳ್ಳುತ್ತಾನೆ. ಸುಖದ ಸುಖವನ್ನು ತಿಳಿಯಲು ಬಂದ ಮನಕ್ಕೆ ತನುವಿನಲ್ಲಿಯೇ ತನ್ಮಯವಾದ ಸದ್ಗುರುವಿನ ದರುಶನ ಮಾಡಿಸುತ್ತಾನೆ.

ತನುವನ್ನು ಆವರಿಸಿದ ಮನ ಒಮ್ಮೆ ಭೌತಿಕ ವಿಷಯಗಳಿಗೆ ಸೆರೆಯಾಳಾಗಿತ್ತು. ಮತ್ತೊಮ್ಮೆ ಶ್ರೀಗುರುವಿನ ಅಮೃತ ನುಡಿಗಳಿಗೆ ಸೆರೆಯಾಳಾಯಿತು, ಮಗದೊಮ್ಮೆ ತನ್ನ ತನುವಿನಲ್ಲಿಯೇ ತನ್ಮಯವಾದ ಸದ್ಗುರುವಿನ ಅರಿವಿಗೆ ಸೆರೆಯಾಳಾಯಿತು. ಇದು ಶ್ರೀ ಗುರುವಿನ ಕೃಪೆಯಿಂದ ತಿಳಿಯುತ್ತದೆ.

ಭೋಗಣ್ಣ : ತಮ್ಮ ವಚನದ ರಹಸ್ಯ ತಿಳಿಹೇಳಿದ ತಮಗೆ ಶರಣು ಶರಣಾರ್ಥಿ.

ಸಿದ್ಧಾಂತಿ ಬೀರಸಂಗಯ್ಯ:

ಮುನ್ನ ಮಾಡಿದ ಪಾಪ ಬೆನ್ನಬಿಡದನ್ನಕ್ಕ
ಇನ್ನು ಬಯಸಿದಡುಂಟೆ ?
ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದಡುಂಟೆ,
ಕೂಡಲಸಂಗಮದೇವರಲ್ಲಿ ಮುನ್ನ ವರವ ಪಡೆಯದನ್ನಕ್ಕ ? ॥ 24 ॥

ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ ಇನ್ನು ಬಯಸಿದಡುಂಟೆ ಎಂದು ತಮ್ಮ ವಚನದಲ್ಲಿ ಹೇಳಿರುವಿರಿ; ದಯವಿಟ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಜ್ಞಾನಿಗಳನ್ನ ನೋಡಿ, ಅವರಂತಾಗಬೇಕು ಎಂದು ಬಯಸಿದರೆ, ಮನಕ್ಕೆ ಸಾಧ್ಯವಾಗದು. ಅವರ ನುಡಿ ಕೇಳಿ, ಅವರು ಬರೆದುದನ್ನ ಓದಿ, ಅವರಂತೆ ನುಡಿಯಬೇಕು ಬರೆಯಬೇಕು ಎಂದರೆ ಸಾಧ್ಯವಾಗದು . ನುಡಿಯಬಹುದು, ಬರೆಯಬಹುದು ಆದರೆ ಅವರಂತೆ ಜ್ಞಾನದಿಂದ ಇರಲು ಬರುವುದಿಲ್ಲ. ಜ್ಞಾನಿಯ ಮಾತು ಕೇಳಿ ಜ್ಞಾನ ಬರುವುದಿಲ್ಲ. ಜ್ಞಾನಿಯ ಬರಹ ಓದಿ ಜ್ಞಾನ ಬರುವುದಿಲ್ಲ, ಏನಿದ್ದರೂ ಅದು ಸಂಗ್ರಹವಾಗುತ್ತದೆ. ಓದಿದಾಗ ಕೇಳಿದಾಗ ಸಂತೋಷವಾಗುತ್ತದೆ. ಆ ಸಂತೋಷ ಸದಾ ದೇಹದಲ್ಲಿ ಉಳಿಯುವುದಿಲ್ಲ. ದೇಹ ಆಪತ್ಕಾಲಕ್ಕೆ ಸಿಲುಕಿದಾಗ ಓದಿದ ಕೇಳಿದ ಜ್ಞಾನ ನೆರವಾಗುವುದಿಲ್ಲ.

ಜ್ಞಾನ ಎನ್ನುವುದು ದೇಹದ ಸಂಪತ್ತು. ಜ್ಞಾನಿಗೆ ಅದು ಪುಸ್ತಕದಿಂದ ಬಂದದ್ದು ಅಲ್ಲ, ಮತ್ತೊಬ್ಬರಿಂದ ಎರವಲು ಪಡೆದದ್ದು ಅಲ್ಲ. ದೇಹದ ಕಣ ಕಣದಲ್ಲಿರುವ ಜ್ಞಾನವನ್ನು ಮನದಿಂದ ನಿರಂತರ ಕೃಷಿ ಮಾಡಿ ಪಡೆದದ್ದು ! ಮನ ದೇಹದಲ್ಲಿರುವ ಆ ಜ್ಞಾನಕ್ಕೆ ಭಕ್ತಿ ಮಾಡಿ ಪಡೆದದ್ದು.

ಬೀರಸಂಗಯ್ಯ : ಓದಿದರೆ ಜ್ಞಾನಿಯಾಗಲು ಸಾಧ್ಯವಿಲ್ಲವೇ ಬಸವರಸ?

ಬಸವಣ್ಣ : ಓದಿ, ಕೇಳಿ ಜ್ಞಾನ ಪಡೆಯಬೇಕೆನ್ನುವ ಛಲ ಮನಕ್ಕೆ ಇರುತ್ತದೆ. ಆದರೆ ಓದಿ ಕೆಟ್ಟ ಕೂಚು ಭಟ್ಟ ಎನ್ನುವ ಗಾದೆ ಮನಕ್ಕೆ ಮನದಟ್ಟಾದಾಗದಿದ್ದರೆ, ಮನ ದೇಹವನ್ನು ಅಲ್ಲಿ ಇಲ್ಲಿ ಸುತ್ತಾಡಿಸಿ, ಅನೇಕ ಗ್ರಂಥಗಳನ್ನು ಓದಿ, ಪಂಡಿತ ಪಾಮರ ಎನ್ನುವ ಪಟ್ಟ ದೇಹಕ್ಕೆ ಕಟ್ಟಿ, ಮನ ದೇಹವನ್ನು ಮರ್ತ್ಯಕ್ಕೆ ತಳ್ಳುತ್ತದೆ.

ಜ್ಞಾನ ಎನ್ನುವುದು ಹೊರಗಿಲ್ಲ ; ಅದು ಸಕಲ ದೇಹಗಳಲ್ಲಿಯೂ ಇದೆ. ಮನ ಜ್ಞಾನೇಶ್ವರನಿಗೆ ಭಕ್ತಿ ಮಾಡಿದರೆ, ಆ ಜ್ಞಾನವೇ ತಾನಾಗಬಹುದಾಗಿದೆ.

ಬೀರಸಂಗಯ್ಯ : ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ವೀರಬಲ್ಲಾಳ :

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ ,
ಚಂದ್ರ ಕುಂದೆ, ಕುಂದುವುದಯ್ಯಾ ,
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ , ಅಯ್ಯಾ ?
ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ; ಅಯ್ಯಾ ?
ಆರಿಗಾರೂ ಇಲ್ಲ; ಕೆಟ್ಟವಂಗೆ ಕೆಳೆಯಿಲ್ಲ!
ಜಗದ ನಂಟ ನೀನೆ ಅಯ್ಯಾ , ಕೂಡಲಸಂಗಮದೇವಾ! ॥ 25 ॥

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ ಎಂದು ತಾವು ದಾಖಲಿಸಿದ ವಚನದ ಸೂತ್ರವನ್ನು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಚಂದ್ರನಿಗೂ ಸಮುದ್ರಕ್ಕೂ ಅವಿನಾಭಾವ ಸಂಬಂಧ. ಚಂದ್ರ ಕೃಷವಾದಂತೆಲ್ಲಾ ಸಮುದ್ರವು ಕೃಷವಾಗುವುದು. ಚಂದ್ರ ಬೆಳೆಯುತ್ತಾ ಬೆಳೆಯುತ್ತಾ ಪೂರ್ಣಚಂದ್ರನಾದಾಗ, ಸಮುದ್ರ ಚಂದ್ರನನ್ನು ಅಪ್ಪಿಕೊಳ್ಳಲು ಉಕ್ಕಿ ಉಕ್ಕಿ ಆತನೆತ್ತರಕ್ಕು ಚಿಮ್ಮುವುದು. ಚಂದ್ರನಿಗೆ ಗ್ರಹಣವಾಗಿ ರಾಹು ನುಂಗಲು ಅಣಿಯಾದಾಗ, ಗ್ರಹಣ ರೂಪದಲ್ಲಿ ನುಂಗಿದಾಗ, ಚಂದ್ರ ಮತ್ತು ಸಮುದ್ರದ ಸಂಬಂಧ ಉಳಿಯುವುದಿಲ್ಲ. ತನ್ನ ಪ್ರಿಯತಮ ಚಂದ್ರ ಸಾಯುತ್ತಾನೆಂದು ಸಮುದ್ರ ಭೋರ್ಗರೆದು ರಂಪ ಮಾಡುವುದಿಲ್ಲ.

ಹಾಗೆಯೇ ಅಗಸ್ತ್ಯಋಷಿ ಇಡೀ ಸಮುದ್ರವನ್ನು ಒಂದು ಬೊಗಸೆಯಲ್ಲಿ ಹಾಕಿ ಕುಡಿದಾಗ, ಚಂದ್ರನೇನಾದರು ಅಡ್ಡ ಬಂದನೆ ? ಆರಿಗಾರು ಇಲ್ಲ ಕೆಟ್ಟವಂಗೆ ಕಳೆಯಿಲ್ಲ ; ಇದು ಜಗದ ನಂಟು ; ಅಜ್ಞಾನದ ನಂಟು. ಯಾರಿಗೆ ಯಾರೂ ಇಲ್ಲದ ನಂಟು.

ವೀರಬಲ್ಲಾಳ : ಹಾಗಾದರೆ ಮನುಷ್ಯ ಒಬ್ಬಂಟಿಯಾಗಿಯೇ ಉಳಿಯಬೇಕೆ ಬಸವರಸ?

ಬಸವಣ್ಣ : ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನ ನಂಟು ಹಾಗಲ್ಲ. ಕೂಡದ ಅಗಲದ ಕೂಟದ ನಂಟನು ಆತ. ಅಂಗದೊಂದಿಗೆ ಬಂದು ಅಂಗದಲ್ಲಿಯೆ ಸಂಗಮವಾಗಿ ಅಂಗದಲ್ಲಿಯೇ ನಂಟನನ್ನು ಮಾಡಿಕೊಂಡವನು ಆತ. ಅಂಗವನ್ನು ಆವರಿಸಿದ ಮನವನ್ನು ಸತಿಯನ್ನಾಗಿಸಿಕೊಂಡು ಆ ಮನಕ್ಕೆ ಪತಿಯಾದವನು ಆತ. ಸತಿ ಸತ್ತರೆ ಸತಿಯೊಂದಿಗೆ ಸಹಗಮನವಾಗಿ, ಬಯಲಲ್ಲಿ ಬಯಲಾಗುವ ನಿಜ ನಂಟನು ಆತ. ಅಂಗ ಮತ್ತು ಮನ ಆತನೊಂದಿಗೆ ಕೂಡಿದರೆ, ಆತ ಇವರಿಬ್ಬರನ್ನು ತನ್ನಂತೆ ಮಾಡಿಕೊಳ್ಳುತ್ತಾನೆ. ಆಗ ಅಂಗ ಲಿಂಗಾಂಗವಾಗುತ್ತದೆ. ಈ ಅಂಗ ಬ್ರಹ್ಮಾಂಡದಲ್ಲಿರುವ ಸಕಲ ಅಂಗಗಳನ್ನು ಲಿಂಗಾಂಗಗಳಂತೆಯೆ ನೋಡುತ್ತದೆ.

ವೀರಬಲ್ಲಾಳ : ಧನ್ಯರಾದೆವು ಬಸವರಸ ; ಅಂಗ ಮತ್ತು ಮನ ಲಿಂಗಯ್ಯನೊಂದಿಗೆ ಒಂದಾಗುವ ಮಹಾ ಸೂತ್ರವನ್ನು ಸಕಲ ಶರಣರಿಗೂ ತಿಳಿಯುವಂತೆ ಹೇಳಿದಿರಿ, ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು, ನಾಳೆ ಮತ್ತೆ ಸತ್ಸಂಗದಲ್ಲಿ ಸೇರೋಣ ಎನ್ನುತ್ತ ಸಭೆಗೆ ಮಂಗಲ ಹಾಡಿದರು.

ಸತ್ಸಂಗದ ಅಮಲಿನಲ್ಲಿ ತೇಲಾಡುತ್ತಾ ಶರಣರು ತಮ್ಮ ತಮ್ಮ ಮನೆಗೆ ನಡೆದರು.

□

೧೦

ಸೂರ್ಯ ನಿಧಾನವಾಗಿ ಕತ್ತಲು ನುಂಗುವ ದೃಶ್ಯ ಗೋಚರಕ್ಕೆ ಬರುತ್ತಲಿದೆ. ಶರಣರು ತಮ್ಮ ತಮ್ಮ ಪ್ರಾತಃ ಕಾಲದ ಕೆಲಸಗಳನ್ನು ಮುಗಿಸಿಕೊಂಡು ಮಹಾಮನೆಗೆ ನಡೆದು ಕುಳಿತುಕೊಳ್ಳುತ್ತಾರೆ. ಬಸವಣ್ಣ ಸಭೆಗೆ ಆಗಮಿಸಿ ಸಕಲ ಶರಣರಿಗೆ ಕೈ ಮುಗಿದು ಶರಣು ಶರಣಾರ್ಥಿ ಎಂದು ಹೇಳುತ್ತಾ ಕುಳಿತುಕೊಳ್ಳುತ್ತಾರೆ.

ಅಮ್ಮಿದೇವಯ್ಯ :

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ನೆಲ ಹತ್ತಿ ಉರಿದಡೆ ನಿಲಲುಬಹುದೆ?
ಏರಿ ನೀರುಂಬಡೆ ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ? ॥ 26 ॥

ತನು ಮನ ಅರಿವು ಒಂದೇ ಜಾಗದಲ್ಲಿದ್ದರೂ ಮೂರು ಒಂದಾಗಿ ಏಕೆ ಬೆಳಗಲು ಸಾಧ್ಯವಾಗುತ್ತಿಲ್ಲ ಬಸವರಸ?

ಬಸವಣ್ಣ : ಸುಂದರವಾದ ಪ್ರಶ್ನೆಯನ್ನೆ ಕೇಳಿರುವಿರಿ ಅಮ್ಮಿದೇವಯ್ಯ. ಅಡಿಗೆಗೆ ಬಳಕೆಯಾಗುವ ಅಗ್ನಿ ಧರೆಗೆ ಬಳಕೆಯಾದರೆ, ಭೂಮಿಗೆ ನೀರುಣಿಸುವ ಏರಿ ತಾನೆ ಆ ನೀರನ್ನುಂಡರೆ, ಬೆಳೆಗೆ ಆಸರೆಯಾದ ಬೇಲಿ ಬೆಳೆಯನ್ನು ಕಿತ್ತು ತಿಂದರೆ, ಮನೆಗೆ ಬೆಳಗಾಗಿ ಬೆಳಗಬೇಕಾದ ನಾರಿ, ಮನೆಯ ಸಂಪತ್ತನ್ನು ಕಳುವು ಮಾಡ ತೊಡಗಿದರೆ, ಮಗುವಿಗೆ ಪ್ರಾಣಾನ್ನ ಆಗಬೇಕಾದ ತಾಯಿಯ ಎದೆ ಹಾಲು ಮಗುವಿಗೆ ನಂಜಾಗಿ ಕೊಲ್ಲುವುದಾದರೆ ಇನ್ನಾರಿಗೆ ದೂರುವುದು?

ಈ ಐದು ಉಪಮೆಗಳು, ತನುವಿನಲ್ಲಿಯೇ ತನ್ಮಯವಾದ ಮಹಾಜ್ಞಾನಕ್ಕೆ ಹೋಗುವ ಸೋಪಾನಗಳು. ಅರಿವು ತನುವಿನಲ್ಲಿಯೇ ತನ್ಮಯವಾಗಿದೆ. ಅಜ್ಞಾನದಿಂದ ಸುಳಿದಾಡುವ ಮನವನ್ನು ಹಿಡಿದು ಅದನ್ನು ಪಳಗಿಸಲು ಸಾಧ್ಯವಾಗುತ್ತಿಲ್ಲ. ತನುವಿಗೆ ಮನ ಒಲೆಯಾಗಿ ಪ್ರಸಾದವಾಗಬೇಕಿತ್ತು. ಬಾವಿಗೆ ಏರಿಯಾಗಿ ಭೂಮಿಗೆ ನೀರುಣಿಸಬೇಕಿತ್ತು. ತನುವಿನಲ್ಲಿ ತನ್ಮಯವಾದ ಅರಿವಿಗೆ, ಮನ ನಾರಿಯಾಗಿ ತನುವನ್ನು ಬೆಳಗಬೇಕಿತ್ತು. ಮಗುವಿನ ಅರಿವಿನ ಹಸಿವಿಗೆ ತಾಯಿಯ ಹಾಲೇ ಪ್ರಸಾದವಾಗಬೇಕಿತ್ತು. ಆದರೆ ತನುವಿನಲ್ಲಿ ಆಶ್ರಯ ಪಡೆದ ಮನ ತನುವಿಗೆ ಕಡು ವೈರಿಯಾಗಿದೆ.

ಮನ ಅರಿವಿನ ಸಂಬಂಧ ಮಾಡಿ ಅರಿವೇ ತಾನಾಗಿ ಅರಿವಿನ

ತನುವಾಗಬೇಕಿತ್ತು. ಆದರೆ ಮನ ತನುವಿನೊಂದಿಗೆ ಅಜ್ಞಾನದ ಸಂಬಂಧ ಬೆಳೆಸಿ ತನುವಿಗೆ ಹಾದರದ ಪಟ್ಟ ಕಟ್ಟುತ್ತದೆ. ಕಳ್ಳ, ಭ್ರಷ್ಟ ಕೊಲೆಗಡುಕನ ಪಟ್ಟ ಕಟ್ಟುತ್ತದೆ. ಮನ ತನುವಿನಲ್ಲಿಯೇ ಇದ್ದು ತಾನಿದ್ದ ತನುವನ್ನೆ ದ್ವೇಷ ಮಾಡುತ್ತ, ತನು ತನುವನ್ನೆ ಕೊಲ್ಲುವಂತೆ ಮಾಡುತ್ತದೆ. ಇನ್ನಾರಿಗೆ ದೂರುವುದು.

ಅರಿವು ಮತ್ತು ಮನ ತನುವಿನಲ್ಲಿಯೆ ಸಂಗಮವಾಗಿದ್ದರೂ ಮನವೆಂಬ ನಾಯಿಗೆ ಅರಿವು ಎನ್ನುವ ಸಂಗಮನಾಥನ ಪರಿಚಯವಿಲ್ಲ. ಮನ ತನುವಿನಲ್ಲಿಯೇ ವಾಸ ಮಾಡಿದೆ. ತಾನಿದ್ದ ತನುವನ್ನೆ ಕಚ್ಚಿ ಕಚ್ಚಿ ಕೊಲ್ಲುತ್ತದೆ. ಮನ ತಾಯಿಯಾಗಿ ಮಗನಿಗೆ ನ್ಯಾಯ ಒದಗಿಸಲಿಲ್ಲ; ನಾರಿಯಾಗಿ ಅರಿವು ಎನ್ನುವ ಗಂಡನಿಗೆ ನ್ಯಾಯ ಒದಗಿಸಲಿಲ್ಲ, ಏರಿಯಾಗಿ ಭೂಮಿಗೆ ನ್ಯಾಯ ಒದಗಿಸಲಿಲ್ಲ. ಹೊಲಕ್ಕೆ ಬೇಲಿಯಾಗಿ ನ್ಯಾಯ ಒದಗಿಸಲಿಲ್ಲ, ಒಲೆಗೆ ಅಗ್ನಿಯಾಗಿ ಉಣ್ಣುವ ಅನ್ನಕ್ಕೆ ನ್ಯಾಯ ಒದಗಿಸಲಿಲ್ಲ. ಮನ ಮತ್ತು ತನು ಸೋಪಾನಗಳನ್ನು ಹತ್ತಿ ಹತ್ತಿ ಅರಿವಿನಲ್ಲಿ ವಿರಮಿಸಬೇಕು. ಆ ಅರಿವಿನ ಕಾಯಕದಲ್ಲಿ ತನು ಮನಗಳೆರಡೂ ಸಿದ್ಧವಾದಾಗಲೆ ಅರಿವಿನ ಸಂಗಯ್ಯ ಕಾಯ ಮತ್ತು ಮನಕ್ಕೆ ದರುಶನ ನೀಡಿ ಅವರಿಬ್ಬರನ್ನು ತನ್ನಂತೆ ಮಾಡಿಕೊಳ್ಳುತ್ತಾನೆ.

ಅಮ್ಮಿದೇವಯ್ಯ : ಮನ ಮತ್ತು ತನು ಸೋಪಾನಗಳನ್ನು ಹತ್ತಿ ಹತ್ತಿ ಅರಿವಿನಲ್ಲಿ ವಿರಮಿಸಬೇಕು ಎಂದು ತಿಳಿಹೇಳಿದ ತಮಗೆ ಶರಣು ಶರಣಾರ್ಥಿ.

ಡೋಹರ ಕಕ್ಕಯ್ಯ :

ಎನ್ನ ಗುಣಾವಗುಣವ ಸಂಪಾದಿಸುವೆ ಅಯ್ಯಾ !
ಪ್ರತಿಯೆ; ಅಪ್ರತಿಮ ಮಹಿಮಾ, ನಿಮಗಾನು ಪ್ರತಿಯೆ?
ಕೂಡಲಸಂಗಮದೇವಾ, ನೀವು ಮಾಡಲಾನಾದೆನು ! ॥ 27 ॥

ಎನ್ನ ಗುಣವ ಅವಗುಣವ ಸಂಪಾದಿಸುವೆ ಅಯ್ಯ ಪ್ರತಿಯೆ ಅಪ್ರತಿಮ ಮಹಿಮಾ, ನಿಮಗಾನು ಪ್ರತಿಯೆ ಎಂದು ತಮ್ಮ ವಚನದಲ್ಲಿ ಹೇಳಿರುವಿರಿ ಇದನ್ನು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಕಕ್ಕಯ್ಯ ಶರಣರೆ, ತನುವಿನಲ್ಲಿಯೇ ತನ್ಮಯವಾದ ಗುರುದೇವನೊಂದಿಗೆ ಗುಣ ಅವಗುಣಗಳನ್ನು ಸಂಪಾದಿಸಿ ಪಂಡಿತನಾದ ಮನ, ತಾನು ನಿಮಗಾನು ಸರಿಯೆ? ಅಪ್ರತಿಮ ಮಹಾ ಮಹಿಮರು ನೀವು. ನೀವು ಮಾಡಲು ನಾನು ಆದೆನು ಎಂದು ಮನ ಅರಿವೆಂಬ ಗುರುದೇವನಿಗೆ ಶರಣಾಗತನಾಗಿ ಮಾತನಾಡುವ ಪ್ರಸಂಗವಿದು.

ಮನವೆಂಬ ನಾಯಿಯ ಗುಣವೇ ಹೀಗೆ. ಪಲ್ಲಕ್ಕಿಯಲ್ಲಿ ಕೂಡಿಸಿ ಮೆರವಣಿಗೆ ಮಾಡಿದರು ಕೂಡಾ ತುಂಡು ಎಲುಬಿಗಾಗಿ ಟಣ್ಣನೆ ಹಾರಿ, ತನ್ನನ್ನು ಹೊತ್ತುಕೊಂಡ

ತನುವಿನ ಪಲ್ಲಕ್ಕಿಯನ್ನು ನಿಂದಿಸುವುದು. ತನುವೆಂಬುದು ಅರಿವಿನ ಪಲ್ಲಕ್ಕಿ. ಅದು ಅರಿವಿನ ದೇವರು ವಾಸ ಮಾಡಿದ ತೇರು. ತನುವಿನ ಆಶ್ರಯ ಪಡೆದು ದೇವರ ನೆರಳಾಗಿ ಬದುಕಬೇಕಾದ ಮನ, ತೇರು ನೋಡಿ ಬೊಗಳುತ್ತದೆ. ತಾನು ವಾಸ ಮಾಡಿದ ತನುವಾದರೇನು? ಅನ್ಯ ತನುವಾದರೇನು? ಅದು ಅರಿವಿನ ದೇವರು ಒತ್ತಿದ ಅಚ್ಚು ಎಂದು ಮನ ಅರಿಯಬೇಡವೆ? ತಾನು ಅಚ್ಚುಗನು ಒತ್ತಿದ ಮೆಚ್ಚಿನ ಅಚ್ಚು, ಆತ ಮಾಡಲಾದ ಮನ ಆತನಿಗೆ ಸರಿಯೆ?

ಅಚ್ಚುಗನಿದ್ದ ತನುಗಳೆಲ್ಲ ಅಚ್ಚುಗನ ಸ್ವತ್ತು. ಮನದ ಗುಣಾವಗುಣಗಳಿಂದಾದ ತನು ಕಳ್ಳ ಸುಳ್ಳ ಕೊಲೆಗಡುಕ ವಿಷಯ ಲಂಪಟ ಭ್ರಷ್ಟ ಧನಿಕ ಗುರು ಸ್ವಾಮಿ ಹೀಗೆ ತನುವಿನ ಮೂಲಕ ತನುವನ್ನು ಗುರುತಿಸಿಕೊಳ್ಳುವಂತೆ ಮನ ಮಾಡುತ್ತದೆ. ಮನ ತನುವಿನ ಸೂತ್ರಧಾರಿಯನ್ನು ಅರಿಯದು. ತನು, ಮನದಿಂದಾಗಿ ಹಲವಾರು ಪಾತ್ರಗಳನ್ನು ಹಾಕಿಕೊಂಡಿದೆ. ತನು ಹಾಕಿದ ಪಾತ್ರದ ಗುಣಾವಗುಣಗಳನ್ನು ನಿಂದಿಸುವುದೆಂದರೆ ಅದರ ಸೂತ್ರಧಾರಿಯನ್ನು ನಿಂದಿಸಿದಂತಾಗಲಿಲ್ಲವೆ ? ಅರಿವಿನ ಸೂತ್ರಧಾರಿ ನಿರ್ಮಿಸಿದ ಮನ ಆತನಿಗೆ ಸರಿಸಾಟಿಯೆ? ಆತ ಮಾಡಲಾಗಿ ಮನ ಮತ್ತು ತನು ಆಯಿತು.

ಡೋಹರ ಕಕ್ಕಯ್ಯ : ಬಸವರಸ ಈ ಬ್ರಹ್ಮಾಂಡದಲ್ಲಿರುವ ತನುಗಳೆಲ್ಲ ಒಂದೆ ಎಂದಂತೆ ಆಗಲಿಲ್ಲವೆ?

ಬಸವಣ್ಣ : ಹೌದು ಶರಣರೆ, ತಾವು ಊಹಿಸಿದ್ದು ಸರಿಯಾಗಿಯೇ ಇದೆ. ತನುಗಳೆಲ್ಲ ಒಂದೆ. ತನುವನ್ನು ಆವರಿಸಿದ ಮನ ಒಂದೆ. ತನು ಮಹಾದೇವ ನಿರ್ಮಾಣ ಮಾಡಿದ ಅರಿವಿನ ಕುಲುಮೆ. ಮನದಿಂದ ಆದ ತನುವಿನ ಗುಣಾವಗುಣಗಳನ್ನು ಅರಿವಿನ ಕುಲುಮೆಯಲ್ಲಿ ಸುಟ್ಟು ತನುವಿನಲ್ಲಿಯೇ ತನ್ಮಯವಾದ ಮಹಾದೇವನನ್ನು ಕೂಡಿ ಮನ ಮಾಹಾದೇವಿಯೇ ತಾನಾಗಬೇಕಿದೆ.

ಡೋಹರ ಕಕ್ಕಯ್ಯ : ತನು ಮಹಾದೇವ ನಿರ್ಮಾಣ ಮಾಡಿದ ಅರಿವಿನ ಕುಲುಮೆ ಎಂದು ನಮಗೆ ತಿಳಿಯುವಂತೆ ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಕಾಳಿಂಗದೇವ :

ಬೆದಕದಿರು ಬೆದಕದಿರು; ಬೆದಕಿದಡೆ ಹುರುಳಿಲ್ಲ !
ಚಿತ್ತ ರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ ?
ನಿಮ್ಮ ಉತ್ತಮಿಕೆಯ ಪೂರೈಸುವುದು
ಕೂಡಲಸಂಗಮದೇವಾ, ॥ 28 ॥

ಬೆದಕದಿರು ಬೆದಕದಿರು ಬೆದಕಿದಡೆ ಹುರಳಿಲ್ಲ ಎನ್ನುವ ತಮ್ಮ ವಚನ ಸೂತ್ರದ ಬಗ್ಗೆ ಶರಣರಿಗೆ ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಆಗಲಿ ಶರಣರೆ. ದೇಹ ಒಂದು ಜ್ಞಾನದ ಮರ. ಈ ಮರದ ತುಂಬ ಹುಡುಕಿದರೂ ಹಣ್ಣಿಲ್ಲ, ಕಾಯಿಲ್ಲ, ಆದರೂ ತನು ಸದಾ ಹಸಿರು. ಇದರ ತುಂಬ ರೋಮುಗಳ ಸಸ್ಯಕಾಸಿ ! ಬೇರಿದ್ದ ಮರ ನಡೆಯುವುದಿಲ್ಲ, ಬೇರಿಲ್ಲದ ತನು ನಡೆದಾಡುತ್ತದೆ. ಇದು ಜ್ಞಾನದ ಮರವು ಹೌದು, ಬೆದಕಿದರೆ ಹುರಳಿಲ್ಲ, ಹುಡುಕಿದರೆ ಹಣ್ಣಿಲ್ಲ ಕಾಯಿಲ್ಲ, ಬಿಚ್ಚಿ ನೋಡಿದರೆ ಹತ್ತಿಯ ಹಣ್ಣು. ಇದರ ತುಂಬ ರಕ್ತ ಮೂಳೆ ಮಾಂಸ ಮಜ್ಜ ಮೇದಸ್ಸು. ಮನದ ಚಿತ್ತ ಅಜ್ಞಾನದಲ್ಲಿ ನೆಟ್ಟರೆ ಅಜ್ಞಾನದ ಕಾಯ. ಜ್ಞಾನದಲ್ಲಿ ನೆಟ್ಟರೆ ಕಾಯ ಜ್ಞಾನದ ನುಡಿಗಳನ್ನೆ ನುಡಿಯುತ್ತಾ ನಡೆದಾಡುವ ಬೋಧೀವೃಕ್ಷ.

ಅರಿವಿನ ಸಂಗಯ್ಯನೆ, ಕಾಯದಲ್ಲಿ ಮಹಾಜ್ಞಾನವೆಂಬ ತಮ್ಮ ಉತ್ತಮಿಕೆಯನ್ನು ಸದಾ ಪೂರೈಸಿ, ಮನ ಅರಿವಿನಲ್ಲಿ ಸಂಗಮುವಾಗಿ, ಮನದ ಚಿತ್ತ ನಿನ್ನ ಅರಿವಿನ ಸ್ವತ್ತಾಗಲಿ! ನೋಡುವ ಕಣ್ಣಿನಲ್ಲಿ ನಿಮ್ಮ ಉತ್ತಮಿಕೆಯ ಅರಿವಿನ ಚಿತ್ತ ನೆಟ್ಟು, ಆ ಅರಿವಿನ ಮಹಾಸುಖವನ್ನು ಅನುಭವಿಸಲಿ. ಇಡೀ ಕಾಯ ನೀನು ವಾಸ ಮಾಡಿದ ಕೈಲಾಸವೇ ಆಗಲಿ ಎಂದು ತನುವನ್ನು ಆವರಿಸಿದ ಮನದ ಮೂಲಕ; ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನೊಂದಿಗೆ ಮಾತನಾಡುವ ಮಹಾಸೂತ್ರವಿದು. ತಾವು ಈ ಸೂತ್ರದ ಜಾಡು ಹಿಡಿದು ತನುವಿನಲ್ಲಿಯೇ ತನ್ಮಯವಾದ ಗುರುದೇವನೊಂದಿಗೆ ಮನದ ಮೂಲಕ ಮಾತನಾಡುತ್ತಾ ಮನದ ಅಜ್ಞಾನವನ್ನು ಕಳೆದುಕೊಳ್ಳಬಹುದಾಗಿದೆ.

ಕಾಳಿಂಗದೇವ : ಈ ವಚನದಲ್ಲಿ ಬಚ್ಚಿಟ್ಟುಕೊಂಡ ರಹಸ್ಯವನ್ನು ನಮಗೆ ತಿಳೀಯುವಂತೆ ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಎಲೆಗಾರ ಕಾಮಣ್ಣ :

ಎನ್ನ ಚಿತ್ತವು ಹತ್ತಿಯ ಹಣ್ಣು, ನೋಡಯ್ಯಾ ;
ವಿಚಾರಿಸಿದಡೆ ಏನೂ ಹುರುಳಿಲ್ಲವಯ್ಯಾ !
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪು ಮಾಡಿ
ನೀವಿರಿಸಿದಿರಿ ಕೂಡಲಸಂಗಮದೇವಾ ! ॥ 29 ॥

ಎನ್ನ ಚಿತ್ತವು ಹತ್ತಿಯ ಹಣ್ಣು ನೋಡಯ್ಯ ಎಂದು ಹೇಳಿರುವಿರಲ್ಲ ಬಸವರಸ ಈ ಸೂತ್ರದ ಬಗ್ಗೆ ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಆಗಲಿ ಶರಣರೆ. ಹಿಂದಿನ ಸೂತ್ರ ಪ್ರಧಾನವಾದ ವಚನದ

ಮುಂದಿನ ಭಾಗವೆ ಇದಾಗಿದೆ. ರೂಪ ಉಳ್ಳ ಮನುಷ್ಯ ಬಹು ವಿಚಿತ್ರ. ಆತನಲ್ಲಿ ಬಚ್ಚಿಟ್ಟುಕೊಂಡ ಜ್ಞಾನ ಆತನಿಗೆ ಬಳಕೆಯಾಗದೆ ಆತನ ತನುವಿನಲ್ಲಿಯೇ ಉಳಿದಿದೆ. ತನುವನ್ನು ಆವರಿಸಿದ ಮನದ ಮೂಲಕ ಮತ್ತೊಂದು ತನುವನ್ನು ನೋಡಿದರೆ ಹತ್ತಿಯ ಹಣ್ಣಿನಂತೆ ಸುಂದರವಾಗಿ ಕಾಣುತ್ತದೆ. ಬಿಚ್ಚಿ ನೋಡಿದರೆ ಅದರ ತುಂಬ ನರಕ. ಕಾಯ ಕಾಯವನ್ನು ಕಾಯದಿಂದಲೇ ಹರಿದು ತಿನ್ನುವಂತೆ ನೋಡುತ್ತದೆ. ಕಲ್ಲು ಮಣ್ಣು ಚಿನ್ನಕ್ಕಾಗಿ ಜಗಳ, ಹರಿವ ನೀರಿಗಾಗಿ ಜಗಳ, ಬೆಳೆದ ಬೆಳೆಗಾಗಿ ಜಗಳ. ಮಲಗಿ ನಿದ್ರಿಸುವುದಕ್ಕು ಜಗಳ. ವಿಚಾರಿಸಿ ನೋಡಿದಡೆ ಹುರುಳಿಲ್ಲದ ಸಂಸಾರ, ಡಾಂಭಿಕ ಸಂಸಾರ.

ಕಾಯ ಒಂದೇ. ಆದರೂ ಕಾಯವೇ ನಾಯಕನಾಗಿದೆ. ಸೇವಕ ಮುಖಂಡನಾಗಿದೆ. ಕಳ್ಳ ಶ್ರೀಮಂತನಾಗಿದೆ. ಕಾಯವೆ ಭಿಕ್ಷುಕನೆಂದು ಧನಿಕನೆಂದು ಕರೆಸಿಕೊಂಡಿದೆ. ವಿಚಾರಿಸಿ ನೋಡಿದಡೆ ಹುರುಳಿಲ್ಲದ ಸಂಸಾರ.

ಚಿತ್ತದಲ್ಲಿ ಮನ ನೆಟ್ಟರೆ ತನು ಹತ್ತಿ ಹಣ್ಣು; ಬಿಚ್ಚಿ ನೋಡಿದರೆ ಹುರಳಿಲ್ಲ. ಚಿತ್ತ ಅರಿವಿನಲ್ಲಿ ನೆಟ್ಟು ಅರಿವಿನಿಂದ ನೋಡಿದರೆ ಅದು ಕೂಡಲ ಸಂಗಯ್ಯ ವಾಸ ಮಾಡಿದ ಕಾಯ; ಮಹಾದೇವನು ವಾಸ ಮಾಡಿದ ಕಾಯ. ವಿಚಾರಿಸಿ ನೋಡಿದರೆ ಅರಿವು ಭರಿತ ಕಾಯ.

ಎಲೆಗಾರ ಕಾಮಣ್ಣ : ಧನ್ಯರಾದೆವು ಬಸವರಸ. ತಮ್ಮ ಪ್ರತಿಯೊಂದು ವಚನದ ಸೂತ್ರವು ನಮ್ಮೆಲ್ಲರ ಕಣ್ಣು ತೆರಸುತ್ತದೆ. ಈ ಸತ್ಸಂಗದಲ್ಲಿ ಭಾಗಿಯಾಗಿದ್ದು ನಮ್ಮೆಲ್ಲರ ಅದೃಷ್ಟ; ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸತ್ಸಂಗದಲ್ಲಿ ಸೇರೋಣ. ಸಕಲ ಶರಣರಿಗೂ ಶರಣು ಶರಣಾರ್ಥಿ ಎಂದು ಸಭೆಗೆ ಮಂಗಲ ಹಾಡಿದರು.

□

೧೧

ಸಕಲ ಶರಣರು ಲಗುಬಗೆಯಿಂದ ಮಹಾಮನೆಗೆ ತೆರಳಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ. ಸಭೆಗೆ ಆಗಮಿಸಿದ ಬಸವಣ್ಣ ಸಕಲರಿಗೂ ಕೈ ಮುಗಿಯುತ್ತಾ ತಮ್ಮ ಆಸನದಲ್ಲಿ ಕುಳಿತುಕೊಳ್ಳುತ್ತಾರೆ.

ಕಾಮಟದ ಭೀಮಣ್ಣ :

ಎನ್ನ ನಡೆಯೊಂದು ಪರಿ; ಎನ್ನ ನುಡಿಯೊಂದು ಪರಿ;
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ .
ನುಡಿಗೆ ತಕ್ಕ ನಡೆಯ ಕಂಡಡೆ
ಕೂಡಲಸಂಗಮದೇವನೊಳಗಿಪ್ಪನಯ್ಯಾ . ॥ 30 ॥

ಎನ್ನ ನಡೆಯೊಂದು ಪರಿ ನುಡಿಯೊಂದು ಪರಿ ಎಂದು ತಮ್ಮ ವಚನದ ಸೂತ್ರದಲ್ಲಿ ಹೇಳಿರುವಿರಿ ಬಸವರಸ. ಅದನ್ನು ಶರಣ ಕುಲಕ್ಕೆ ವಿವರಿಸಿ ಹೇಳಿ ತಂದೆ.

ಬಸವಣ್ಣ : ಕಾಯ ಮನದ ಮೂಲಕ ನುಡಿಯುತ್ತದೆ. ನುಡಿದಂತೆ ನಡೆಯಲು ಸಾಧ್ಯವಾಗುವುದಿಲ್ಲ. ಕಾಯ ಕಣ್ಣಿನ ಮೂಲಕ ನೋಡಿ, ಬಾಯಿಯ ಮೂಲಕ ನಾನು ನೋಡಿದೆನೆಂದು ನುಡಿಯುತ್ತದೆ. ನೋಡಿದ್ದು ಕಣ್ಣು; ಇದಕ್ಕೆ ನುಡಿಯಲು ಬರುವುದಿಲ್ಲ. ನುಡಿದದ್ದು ಬಾಯಿ ; ಇದಕ್ಕೆ ನೋಡಲು ಬರುವುದಿಲ್ಲ. ಇದನ್ನು ಸತ್ಯದ ನುಡಿಯೆಂದು ಕರೆಯಲು ಸಾಧ್ಯವೆ?

ಹಾದರದಿಂದ ನೋಡಿ ಅಕ್ಕ-ತಂಗಿ ಎಂದು ನುಡಿದರೆ ಇದು ಸತ್ಯದ ನುಡಿಯೆಂದು, ಪರಿಶುದ್ಧವಾದ ನುಡಿಯೆಂದು ಹೇಳಲು ಸಾಧ್ಯವೆ? ಇದು ಕಾಯವನ್ನು ಆವರಿಸಿದ ಮನದ ಕೆಲಸ. ಮನ ಕಣ್ಣಿನ ಮೂಲಕ ನೋಡಿ ಇಡೀ ತನುವಿನ ಮೂಲಕ ಹಾದರದ ಸುಖವನ್ನು ಅನುಭವಿಸುತ್ತದೆ. ಹಾಗೆಯೇ ಬಾಯಿಯ ಮೂಲಕ ಮನ ಸುಂದರವಾದ ಮಾತುಗಳನ್ನು ಆಡಿ ತನ್ನ ಅಜ್ಞಾನದ ಮುಖವಾಡವನ್ನು ಮರೆಮಾಚುತ್ತದೆ. ಬಾಯಿ ಮುಂದುವರೆದು, ಕೇಳಲು ಬಾರದಿದ್ದರೂ ಕೇಳಿದೆನೆಂದು, ಮುಟ್ಟಲು ಬಾರದಿದ್ದರು ಮುಟ್ಟಿದೆನೆಂದು, ರುಚಿಸಲು ಬಾರದಿದ್ದರು ರುಚಿಸಿದೆನೆಂದು; ಮನ, ಬಾಯಿಯ ಮೂಲಕ ಬೊಗಳಿ ತನ್ನ ನುಡಿಯೊಂದು ಪರಿ ನಡೆಯೊಂದು ಪರಿ ಎಂದು ತನುವಿನ ಮೂಲಕ ಅಜ್ಞಾನವನ್ನು ತನಗೆ ತಾನೆ ಪ್ರದರ್ಶನ ಮಾಡಿಕೊಳ್ಳುತ್ತದೆ.

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಮನದ ಹಾದರ ಗೊತ್ತಾಗುತ್ತದೆ. ಆತ ಮನಕ್ಕೆ ಅರಿವಿನ ಪಾಠ ಮಾಡಿದರೂ; ಮನ ಗುರುದೇವ ಹೇಳಿದ ಮಾತುಗಳನ್ನು ಲಕ್ಷಕ್ಕೆ ತೆಗೆದುಕೊಳ್ಳುವುದಿಲ್ಲ. ತನ್ನ ಈ ಎಲ್ಲಾ ಕೆಲಸಗಳು, ಮನದ

ಗಮನಕ್ಕೆ ಬಂದು, ಮನವೇ ಗುರುದೇವನಿಗೆ ಶರಣು ಹೋಗಿ ಶರಣಾಗತನಾಗಿ; ನನ್ನನ್ನು ಹಡೆದ ಅರಿವಿನ ತಂದೆಯೆ; ಎನ್ನ ನಡೆಯೊಂದು ಪರಿ, ನುಡಿಯೊಂದು ಪರಿ. ಎನ್ನೊಳಗೆ ಏನೂ ಶುದ್ಧವಿಲ್ಲ ನೋಡಯ್ಯ; ನುಡಿಗೆ ತಕ್ಕ ನಡೆಯನ್ನು ಕೈ ಹಿಡಿದು ನಡೆಸು ತಂದೆ ಎಂದು ಅಂಗದೊಳಗೆ ಸಂಗಮವಾದ ಅರಿವಿನ ಸಂಗಯ್ಯನನ್ನು ಬೇಡಿಕೊಳ್ಳಬೇಕು. ಈ ಪ್ರಯೋಗ, ನೋಡಿದಾಗ ಕೇಳಿದಾಗ ಮುಟ್ಟಿದಾಗ ರುಚಿಸಿದಾಗ ಮೂಸಿಸಿದಾಗ ಕಾಯದ ಮೂಲಕ ಮತ್ತೆ ಮತ್ತೆ ನಡೆಯಲೇಬೇಕು. ಮನ ಮತ್ತೆ ಮತ್ತೆ ಅರಿವಿಗೆ ಹೋಗಿ ತನ್ನ ಅಜ್ಞಾನದ ನಡೆಯನ್ನು ಕಳೆದುಕೊಂಡು ಅರಿವೇ ತಾನಾಗಬೇಕು.

ಕಾಮಟದ ಭೀಮಣ್ಣ : ಧನ್ಯರಾದೆವು ಬಸವರಸ. ಮನದ ಅಜ್ಞಾನವನ್ನು ಅರಿವೆಂಬ ಗುರುದೇವನ ಪಾದಕ್ಕೆ ಹಾಕಿ, ಜ್ಞಾನಿಯೇ ತಾನಾಗುವ ಮಹಾ ಸೂತ್ರವನ್ನು ನಮಗೆ ವಿವರಿಸಿ ಹೇಳಿದಿರಿ; ತಮಗೆ ಶರಣು ಶರಣಾರ್ಥಿ.

ಆಯ್ದಕ್ಕಿ ಮಾರಯ್ಯ:

ಮುಂಗೈಯ ಕಂಕಣಕ್ಕೆ ಕನ್ನಡಿಯ ತೋರುವಂತೆ
ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ !
ನಾಯಿಗೆ ನಾರಿವಾಣವಕ್ಕುವುದೆ,
ಕೂಡಲಸಂಗಮದೇವಾ ? ॥ 31 ॥

ಮುಂಗೈಯ ಕಂಕಣಕ್ಕೆ ಕನ್ನಡಿಯು ತೋರವಂತೆ ಎನ್ನ ಮನವು ನಿಧಾನವ ತೋರದೆ ಜಲಗವ ಮಚ್ಚಿತ್ತು ನೋಡಾ. ಎಂದು ತಮ್ಮ ವಚನದ ಸೂತ್ರ ಹೇಳುತ್ತದೆ ಬಸವರಸ, ಅದನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ಕಂಕಣ ಕಟ್ಟಿಕೊಂಡ ಕೈ ಕಣ್ಣಿಗೆ ಕಾಣುತ್ತದೆ, ಆದರೂ ಮನ ಕನ್ನಡಿಯ ಮೂಲಕ ಕಂಕಣ ನೋಡಲು ಹೊರಟಿದೆ.

ಆಯ್ದಕ್ಕಿ ಮಾರಯ್ಯ : ಅದು ಹೇಗೆ ಬಸವರಸ ?

ಬಸವಣ್ಣ : ತನುವಿನಲ್ಲಿ ಹೇರಳವಾದ ಅರಿವಿನ ಸಂಪತ್ತು ಇದ್ದರೂ ಕೂಡಾ; ಆ ಸಂಪದ್ಭರಿತವಾದ ಗುರುದೇವ, ತನುವಿನಲ್ಲಿಯೇ ಸಂಗಮವಾಗಿ, ಕ್ಷಣ ಕ್ಷಣಕ್ಕೂ ತನುವಿಗೂ ಮತ್ತು ಮನಕ್ಕೂ ಪಾಠ ಮಾಡಿದರು ಕೂಡಾ, ಅರಿವು ತನುವಿನಲ್ಲಿಯೇ ತನ್ಮಯವಾಗಿದೆ ಎಂದು ಮನಕ್ಕೆ ಹೊಳೆಯುವುದಿಲ್ಲ. ಅರಿವಿನ ಸಂಪತ್ತನ್ನು ವೇದ ಆಗಮ ಉಪನಿಷತ್ತುಗಳಲ್ಲಿ, ಮಾಹಾಭಾರತ ರಾಮಾಯಣ ಭಗವದ್ಗೀತದಲ್ಲಿ ಮನ ಹುಡುಕಲು ಹೋಗುತ್ತದೆ. ಅರಿವಿನ ಚಿನ್ನವನ್ನು ವಲ್ಲದ ಮನ, ಚರಂಡಿಯಲ್ಲಿದ್ದ ಮಣ್ಣು ಸಂಗ್ರಹ ಮಾಡಿ, ಜಲ್ಲಡಿಯಲ್ಲಿ ಜಾಲಾಡಿಸಿ, ಚೂರು ಪಾರು ಚಿನ್ನಕ್ಕೆ ಜೊಲ್ಲು ಸುರಿಸುತ್ತಲಿದೆ.

ತನುವಿನಲ್ಲಿ ಅರಿವು ಎಂಬ ಗುರುದೇವನು ಸಂಗಮವಾಗಿದ್ದಾನೆ. ನಾಯಿ ಎಂಬ ಮನವು ತನುವನ್ನು ಆವರಿಸಿದೆ. ತನುವಿನಲ್ಲಿಯೇ ತನ್ಮಯವಾದ ಗುರುದೇವನ ಪಾಠ ತನುವಿಗೂ ಮನಕ್ಕೂ ಹಿಡಿಸುತ್ತಿಲ್ಲ.

ಆಯ್ದಕ್ಕಿ ಮಾರಯ್ಯ : ನಾಯಿಗೆ ನಾರಿವಾಣವಕ್ಕುವುದೇ ಕೂಡಲ ಸಂಗಮದೇವಾ ಎನ್ನಲು ಕಾರಣವೇನು ಬಸವಣ್ಣ?

ಬಸವಣ್ಣ : ಅಮೃತ ಪ್ರಧಾನವಾದ ಜಲ ತೆಂಗಿನ ಕಾಯಿಯಲ್ಲಿ ಇದ್ದರೂ, ನಾರು ಸುಲಿದು ಚಿಪ್ಪು ಒಡೆದು ತಿರಿಳಿನೊಂದಿಗೆ ಅಮೃತ ಸೇವಿಸುವ ಕೆಲಸ ನಾಯಿ ಎಂಬ ಮನಕ್ಕೆ ಗೊತ್ತಿಲ್ಲದ ನಿಮಿತ್ತ ; ಮನ ತನುವಿನೊಂದಿಗೆ ಅಜ್ಞಾನದ ವಿಷಯ ಸುಖ ಉಣ್ಣುವುದರಲ್ಲಿ ತನ್ಮಯವಾಗಿದೆ. ಮನ, ತನ್ನ ಅರಿವಿನಿಂದಲೇ ಅಜ್ಞಾನದ ಪೊರೆ ಸರಿಸಿಕೊಂಡು ಗೊರಟ ಹೊಡೆದು, ಅರಿವಿನ ಅಮೃತ ಉಣ್ಣುವ ಬಯಕೆ ಎಂದಾದರೂ ಸಾಧ್ಯವಾಗುವುದು ಎಂದು ಮನ ಅರಿವೆಂಬ ಗುರುದೇವನನ್ನು ಕೇಳುತ್ತಾ ಗೋಗರೆಯಲೇ ಬೇಕು.

ಆಯ್ದಕ್ಕಿ ಮಾರಯ್ಯ : ತಮ್ಮ ಈ ವಚನದ ಬೆಡಗನ್ನು ತಿಳಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ವೀರಬಲ್ಲಾಳ :

ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು
ನಿಂದಲ್ಲಿ ನಿಲಲೀಯದೆನ್ನ ಮನವು
ಹೊಂದಿದಲ್ಲಿ ಹೊಂದಲೀಯದೆನ್ನ ಮನವು !
ಕೂಡಲಸಂಗಮದೇವಾ, ॥ 32 ॥

ಅರಿವೆಂಬ ಗುರುದೇವನಿಗೆ ಚಲನೆಯಿಲ್ಲ. ಈತನ ಬೆಳಕಿನಿಂದಲೇ ಹುಟ್ಟಿದ ಮನ ನಿಂದಲ್ಲಿ ನಿಲ್ಲುವುದೇ ಇಲ್ಲ. ಇದಕ್ಕೆ ಕಾರಣವೇನು ಬಸವರಸ?

ಬಸವಣ್ಣ : ಸುಂದರವಾದ ಪ್ರಶ್ನೆಯನ್ನೆ ಕೇಳಿರುವಿರಿ ಶರಣರೆ. ಮನ ಕೊಂಬೆಯ ಮೇಲಣ ಮರ್ಕಟದಂತೆ. ಕೊಂಬೆಯಿಂದ ಕೊಂಬೆಗೆ ಹಾರುವುದೇ ಮರ್ಕಟದ ಕೆಲಸ. ಅದು ನಿಂತಲ್ಲಿ ನಿಲ್ಲುವುದಿಲ್ಲ, ಅರಿವಿನ ದರುಶನವಾದಾಗಲೆ ಅದು ತನ್ನ ಚಲನೆಯನ್ನು ಕಳೆದುಕೊಳ್ಳುವುದು. ದೇಹವೆಂಬುದು ಕಮಲ, ಅದು ಬ್ರಹ್ಮನ ವಾಸಸ್ಥಾನ. ಬ್ರಹ್ಮಕಮಲದ ಅರಿವಿನ ಪರಿಮಳ ಸವೆದು ಬದುಕಬೇಕಾದ ಮನ, ತನಗೆ ತೋಚಿದತ್ತ ದೇಹದೊಂದಿಗೆ ಅಜ್ಞಾನದ ಸುಖ ಅನುಭವಿಸುತ್ತದೆ. ಹರಿದಾಡುವ ಮನ ಬ್ರಮರದಂತೆ. ಕಮಲವಿದ್ದಲ್ಲಿಗೆ ಬ್ರಮರ ಹೋಗುವುದೋ ಅಥವಾ ಬ್ರಮರವಿದ್ದ ಜಾಗಕ್ಕೆ ಕಮಲ ಬರುವುದೊ? ಕಮಲ ತನ್ನ ಪರಿಮಳವನ್ನು ಬ್ರಮರವಿದ್ದೆಡೆಗೆ

ಕೊಂಡೊಯ್ದು; ಬ್ರಮರವನ್ನು ತನ್ನಡೆಗೆ ಸೆಳೆದು ತಂದು, ಕಮಲದ ಪರಿಮಳ ಉಣ್ಣುತ್ತ ತನಗರಿಯದಂತೆ ಬ್ರಮರ ಆ ಪರಿಮಳದಲ್ಲಿಯೇ ಸಂಗಮವಾಗುತ್ತದೆ.

ವೀರಬಲ್ಲಾಳ : ಮನ ಕೊಂಬೆಯ ಮೇಲಣ ಮರ್ಕಟದಂತೆ ಎಂದು ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ವೀರಬಲ್ಲಾಳ :

ಮರನನೇರಿದ ಮರ್ಕಟನಂತೆ
ಹಲವು ಕೊಂಬಿಂಗೆ ಹಾಯುತ್ತಲಿದೆ;
ಬೆಂದ ಮನವ ನಾನೆಂತು ನಂಬುವೆನಯ್ಯಾ?
ಎಂತು ನಚ್ಚುವೆನಯ್ಯಾ ?
ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ
ಹೋಗಲೀಯದಯ್ಯಾ! ॥ 33 ॥

ಭ್ರಮೆಯಿಂದ ಭರಿತವಾದ ಮನ ಬ್ರಮರನಂತೆ ಆಗುವುದಾದರೂ ಯಾವಾಗ ಬಸವರಸ ?

ಬಸವಣ್ಣ : ಕೊಂಬೆಯಿಂದ ಕೊಂಬೆಗೆ ಹಾರುವ ಮನ, ತನಗೆ ಬೇಸರವಾಗಿ ಒಮ್ಮೆ ತನ್ನ ಚಲನೆ ಕಳೆದುಕೊಂಡು, ಅರಿವಿನ ತಂದೆಯಂತೆ ನಿಶ್ಚಲ ಬ್ರಹ್ಮನಾಗಬೇಕೆಂದು ಮನಕ್ಕೆ ಬಯಕೆಯಾದಾಗ ; ತನಗೆ ತಾನೆ ಕೊಂಬೆಯಿಂದ ಕೊಂಬೆಗೆ ಹಾರುವುದು ಬಿಟ್ಟುಬಿಡುತ್ತದೆ. ಕಾಯ ಕೂಡ ಮನದ ಸಂಗದಿಂದ ದೂರ ಸರಿದು, ಕೊಂಬೆಯಿಂದ ಕೊಂಬೆಗೆ ಹಾರುವ ಈ ಬೆಂದ ಮನವನ್ನು, ನಾನು ನಂಬಿದರೆ ಫಲವಿಲ್ಲ, ಇದನ್ನು ನಚ್ಚಿದರು ಫಲವಿಲ್ಲ. ಏಕೆಂದರೆ ಎನ್ನ ತಂದೆ ಕೂಡಲ ಸಂಗಮ ದೇವನಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಲಿಕ್ಕೆ ಈ ಮನಕ್ಕೆ ಸಾಧ್ಯವಾಗುವುದೇ ಇಲ್ಲ. ಇನ್ನು ಇದರ ಸಹವಾಸವೇ ಸಾಕು ಎಂದು ಕಾಯ ; ಕಾಯದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ನೆನೆದಾಗಲೇ, ಮನದ ಮರ್ಕಟತನ ಸುಟ್ಟು, ತನು ಮನಗಳೆರಡನ್ನು ತನ್ನಂತೆ ಮಾಡಿಕೊಳ್ಳುವನು.

ವೀರಬಲ್ಲಾಳ : ಪರಮಾನಂದವಾಯಿತು ಬಸವರಸ.

ಬಸವಣ್ಣ :ಇಂದಿಗೆ ಇಷ್ಟು ಸಾಕು. ಸಕಲ ಶರಣರಿಗೂ ಶರಣು ಶರಣಾರ್ಥಿ ಎಂದು ಸಭೆಗೆ ಮಂಗಲ ಹಾಡಿದರು.

ಅರಿವಿನ ಆನಂದದಿಂದ ಶರಣರು ಓಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

೧೨

ಲಗು ಬಗೆಯಿಂದ ಶರಣರು ಸತ್ಸಂಗಕ್ಕಾಗಿ ಮಹಾ ಮನೆಗೆ ನಡೆದು ಬಸವಣ್ಣನವರಿಗೆ ಶರಣು ಶರಣಾರ್ಥಿ ಎನ್ನುತ್ತಾ ಕೈ ಮುಗಿದು ಕುಳಿತುಕೊಳ್ಳುತ್ತಾರೆ.

ಬಾಲಬೊಮ್ಮಣ್ಣ :

ಅಂದಣವನೇರಿದ ಸೊಣಗನಂತೆ–
ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು
ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು
ಮೃಡ, ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಕೂಡಲಸಂಗಮದೇವಾ,
ನಿಮ್ಮ ಚರಣವ ನೆನೆವಂತೆ ಕರುಣಿಸು
ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ. ॥ 34 ॥

ಪಲ್ಲಕ್ಕಿಯಲ್ಲಿ ನಾಯಿಯನ್ನು ಕೂಡಿಸಿ ಮೆರವಣಿಗೆ ಮಾಡಿದರೆ ಕೂಡ ಎಲವು ಕಂಡಡೆ ಜಿಗಿಯುವ ನಾಯಿಗೆ ಮನವನ್ನು ಹೋಲಿಸ ಬಹುದೇ ಬಸವರಸ?

ಬಸವಣ್ಣ : ಹೌದು ಶರಣರೆ. ತಾವು ಸರಿಯಾಗಿ ಊಹಿಸಿರುವಿರಿ. ಅಂದಣವನ್ನು ಏರಿದ ಸೊಣಗದಂತೆ ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು, ಸುಡು ಸುಡು ಮನವಿದು ವಿಷಯಕ್ಕೆ ಹರಿಯುವುದು, ಎನ್ನುವ ಸೂತ್ರದ ಈ ವಚನವು ಕೂಡಾ ಅದೇ ಹೇಳುತ್ತದೆ ಶರಣರೆ. ಕಾಯಕ್ಕೆ ಗುರುವೇಷ ಹಾಕಿದ ಮನ ಪಲ್ಲಕ್ಕಿಯಲ್ಲಿ ಕುಳಿತರೇನು ? ಅದು ಹೊತ್ತುಕೊಂಡ ಗುರುದೇವರನ್ನೆ ಕಚ್ಚಿ ತಿನ್ನಲು ಬಯಸುತ್ತದೆ. ಹೊತ್ತುಕೊಂಡು ಹೋಗುವವರನ್ನೇ ಭೋಗಕ್ಕೆಳೆಸುವ ಮನವೆಂಬ ನಾಯಿಯನ್ನು; ಹೊತ್ತುಕೊಂಡು ಹೋಗುವವರೇ ಒಮ್ಮೆ ಚೆನ್ನಾಗಿ ಥಳಿಸುತ್ತಾರೆ.

ಎನಗೆ ಜನ್ಮ ಕೊಟ್ಟ ತಂದೆಯೆ, ಮನವೆಂಬ ನಾಯಿ, ಕಾಯವೆಂಬ ನನ್ನನ್ನು ಅನುದಿನವು ನಿಮ್ಮನ್ನು ನೆನಯಲೀಯದು. ಸುಡು ಸುಡು ಮನವಿದು ಸದಾ ನನ್ನನ್ನು ವಿಷಯಕ್ಕೆ ಹರಿಸುವುದು. ಅಂದಣವನ್ನು ಏರಿದ ಸೊಣಗದಂತೆ ಎಲುಬು ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು. ಎನ್ನೊಡೆಯಾ ಕೂಡಲ ಸಂಗಮದೇವ, ಸದಾ ನಿಮ್ಮ ಚರಣ ಕಮಲವ ನೆನೆವಂತೆ ಕರುಣಿಸು ತಂದೆ, ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ, ಎಂದು ಕಾಯ ಮನದ ಮಾತು ನಿರಾಕರಿಸಿ, ಅರಿವಿನ ತಂದೆಯನ್ನು ಬೇಡುವಂತಾಗಬೇಕು.

ವೀರಬಲ್ಲಾಳ : ತಮ್ಮ ಈ ವಚನದ ಬೆಡಗನ್ನು ನಮಗೆ ತಿಳಿಯುವಂತೆ ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಕಲಕೇತಯ್ಯ :

ತುಪ್ಪದ ಸವಿಗೆ ಅಲಗ ನೆಕ್ಕುವ ನಾಯಿಯಂತೆ ಎನ್ನ ಬಾಳುವೆ !
ಸಂಸಾರ ಸಂಗವ ಬಿಡದು ನೋಡೆನ್ನ ಮನವು;
ಈ ನಾಯಿತನವ ಮಾಣಿಸು,
ಕೂಡಲಸಂಗಮದೇವಯ್ಯಾ , ನಿಮ್ಮ ಧರ್ಮ. ॥ 35 ॥

ಈ ನಾಯಿತನವ ಮಾಣಿಸುವುದಾದರು ಹೇಗೆ ಬಸವರಸ?

ಬಸವಣ್ಣ : ಶರಣರೆ ನೋಡಲು ಕಾಯ ಒಂದೇ ಆಗಿ ಕಂಡರೂ; ನಾಯಿಯಂತಹ ಮನೋಮಯವಾದ ಕಾಯ ಸ್ಥೂಲ ಕಾಯದ ಬೆನ್ನು ಬಿದ್ದಿದೆ. ಸ್ಥೂಲ ಕಾಯದಲ್ಲಿಯೇ ಅರಿವು ಎಂಬ ಗುರುದೇವನ ಕಾಯವೊಂದು ಇದೆ. ಸ್ಥೂಲಕಾಯಕ್ಕೆ ಜನ್ಮ ನೀಡಿದ ಅರಿವಿನ ಕಾಯಕ್ಕೆ ಎರಗಿ, ಅರಿವಿನ ಕಾಯವೇ ತಾನಾಗುವ ಭಾಗ್ಯವನ್ನು ಮನೋಮಯವಾದ ಕಾಯ ಕಸಿದುಕೊಂಡಿದೆ. ಹೀಗಾಗಿ ತುಪ್ಪದ ಸವಿಗೆ ಅಲಗ ನೆಕ್ಕುವ ನಾಯಿಯಂತೆ ಎನ್ನ ಬಾಳುವೆ.

ಮನೋಮಯವಾದ ಕಾಯ, ತನ್ನದೇ ಆದ ನಾಯಿ ಸಂಸಾರವನ್ನು, ಸ್ಥೂಲ ಕಾಯದಲ್ಲಿ ಹೂಡಿ, ಸುಳ್ಳು ಸಾಮ್ರಾಜ್ಯವನ್ನು ಸ್ಥೂಲ ಕಾಯದಲ್ಲಿ ನಿರ್ಮಾಣ ಮಾಡಿದೆ. ಹೀಗಾಗಿ ಈ ಸಂಸಾರ ಸಂಗವು ಬಿಡದು ನೋಡೆನ್ನ ಮನವು. ಈ ಮನದ ನಾಯಿತನವನ್ನು ಮಾಣಿಸು ತಂದೆಯೆ, ಇದು ನಿಮ್ಮ ಧರ್ಮ; ನೀವು ಮಾಡುವುದಕ್ಕಾಗಿ ತಾನಾಯಿತು ಎಂದು ಸಂಗಯ್ಯನನ್ನು ಗೋಗರೆದು ಕೇಳುವ ಇಚ್ಛೆ ಸ್ಥೂಲಕಾಯಕ್ಕೆ ಆಗಲೇಬೇಕು.

ಕಲಕೇತಯ್ಯ : ತಮ್ಮ ಈ ವಚನದ ಗುಟ್ಟನ್ನು ರಟ್ಟುಮಾಡಿ ಹೇಳಿದ ತಮಗೆ ಶರಣು ಶರಣಾರ್ಥಿ.

ವೈದ್ಯ ಸಂಗಣ್ಣ :

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ
ಎನ್ನ ಬಿಡು, ತನ್ನ ಬಿಡು ಎಂಬುದು ಕಾಯವಿಕಾರ
ಎನ್ನ ಬಿಡು, ತನ್ನ ಬಿಡು ಎಂಬುದು ಮನೋವಿಕಾರ
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನ್ನೈದುಗೆ, ಕೂಡಲಸಂಗಮದೇವಾ! ॥ 36 ॥

ಬಸವರಸ, ಈ ವಚನದ ರಹಸ್ಯವನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ದೇಹವೆಂಬುದು ಜ್ಞಾನದ ಮೊಲವಿದ್ದಂತೆ. ಅದಕ್ಕೆ ಮಹಾ ಜ್ಞಾನದ ಒಂಭತ್ತು ದ್ವಾರಗಳಿವೆ. ಅದನ್ನು ಕಾಯಲು ದ್ವಾರ ಪಾಲಕರು ಇದ್ದಾರೆ.

ಆದರೂ ಕೂಡ ಮನ ತನ್ನ ಒಂಭತ್ತು ರಕ್ಕಸ ಅವತಾರಗಳನ್ನು ಎತ್ತಿ, ಆಯಾ ದ್ವಾರದ ಬಾಗಿಲುಗಳ ಮೂಲಕ, ತನಗೆ ಬೇಕಾದ ಸುಖವನ್ನು ಉಣ್ಣಲು ಕಾದು ನಿಂತಿದೆ. ಆಯಾ ಜಾಗದಲ್ಲಿ ವಾಸ ಮಾಡಿದ ದ್ವಾರಪಾಲಕನನ್ನು ತಳ್ಳಿ, ಮನ ತನ್ನ ವಿಷಯ ಸುಖವನ್ನು ಉಣ್ಣುತ್ತದೆ. ಎರಡು ಕಣ್ಣುಗಳು ಎರಡು ಜ್ಞಾನದ ಬಾಗಿಲುಗಳಾದರೂ, ಮನವೆಂಬ ನಾಯಿಯಿಂದಾಗಿ ಅವು ಕುರುಡಾಗಿ ತನ್ನಂತೆಯೇ ಇರುವ ಕಾಯವನ್ನು ಹರಿದು ತಿನ್ನುವಂತೆ ನೋಡುತ್ತವೆ. ಎರಡು ಕಿವಿಗಳು ಎರಡು ಮೂಗಿನ ಹೊರಳೆಗಳು ನಾಲಿಗೆ ಚರ್ಮ ದೇವಾಂಗ ಇವು ಕೂಡ ಮನವೆಂಬ ನಾಯಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದೇ ವಿಲ ವಿಲ ಒದ್ದಾಡುತ್ತವೆ.

ಮನವೆಂಬ ನಾಯಿ ಸಿಕ್ಕುವುದಿಲ್ಲ. ಜನ, ದೇಹವೆಂಬ ಮೊಲವನ್ನು ಹೊಡೆಯುತ್ತಾರೆಯೆ ಹೊರತು ನಾಯಿಯನ್ನಲ್ಲ. ಎನ್ನ ಬಿಡು ತನ್ನ ಬಿಡು ಎನ್ನುವುದು ಮನೋವಿಕಾರ, ಕಾಯವಿಕಾರ ಕಾಯಕ್ಕೂ ಅರಿವಾಗಬೇಕು, ಮನಕ್ಕೂ ಅರಿವಾಗಬೇಕು. ಕರಣೇಂದ್ರಿಯಗಳೆಂಬ ಸೊಣಗ ಮುಟ್ಟದ ಮುನ್ನ, ನನ್ನನ್ನು ನಿಮ್ಮ ಉಡಿಯಲ್ಲಿ ಹಾಕಿಕೋ ತಂದೆ ಎಂದು ಗೋಗರೆದು ಹಾಡುವ ಇಚ್ಚೆಯಾದಾಗಲೆ ಮನ ಘನಮನವಾಗುವುದು. ಕಾಯ ಕೈಲಾಸವಾಗುವುದು.

ವೈದ್ಯ ಸಂಗಣ್ಣ : ತಮ್ಮ ಈ ವಚನದ ಬೆಡಗನ್ನು ನಮಗೆ ತಿಳಿಯುವಂತೆ ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ವೈದ್ಯ ಸಂಗಣ್ಣ :

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ;
ಮುಂದೆ ಲಿಂಗವ ಕಂಡಿಹೆನೆಂಬ ಹುಸಿ ನೋಡಾ!
ಬೆಂದ ಕರಣಾದಿಗಳು ಒಂದೆ ಪಥವನರಿಯವು.
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ ?
ಎನ್ನ ತಂದೆ ಕೂಡಲಸಂಗಮದೇವಾ, ॥ 37 ॥

ಬಸವರಸ, ತಮ್ಮ ಈ ವಚನದ ಸೂತ್ರವನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ಮನ ತನಗೆ ತಾನೆ ತಾನಿದ್ದ ದೇಹದೊಂದಿಗೆ ಹಲವಾರು ತೊಂದರೆಗಳನ್ನು ಒಡ್ಡಿಕೊಂಡು ತೊಳಲಾಡುತ್ತಲಿದೆ. ಜಾತಿ, ಮತ, ಪಂಥ, ಧರ್ಮ, ಪಂಗಡ, ಶ್ರೀಮಂತ, ಬಡವ, ಗಂಡು, ಹೆಣ್ಣು, ಶಿಷ್ಯ, ಗುರು, ರಾಜ, ಸೇನಾಧಿಪತಿ ಎಂದು ಮನ ನಿರ್ಮಾಣ ಮಾಡಿಕೊಂಡ ಅಜ್ಞಾನದ ಸುಳಿಯಲ್ಲಿ ದೇಹ ಬಿದ್ದು ತೊಳಲಾಡುತ್ತಲಿದೆ. ಈ ತೊಳಲಾಟದಲ್ಲಿ ದೇಹದಲ್ಲಿ ಸಂಗಮವಾದ ಅರಿವು ಎಂಬ ಗುರುದೇವನು ಮನಕ್ಕೆ ಪಾಠ ಮಾಡಿದರೂ ಕೂಡಾ, ಮನ ಗುರುದೇವನನ್ನು ಮರೆತು ಹೋಗಿದೆ. ಹೀಗಾಗಿ ಮನ ದೇಹದಲ್ಲಿ ತನ್ನ ಸುಖಕ್ಕೆ ಬೇಕಾದ ಸಹಚರರನ್ನು

ನಿರ್ಮಾಣ ಮಾಡಿ, ಕರಣಾದಿಗಳೊಂದಿಗೆ ಅಜ್ಞಾನದ ಸುಖ ಉಣ್ಣುತ್ತ ದೇಹ ತನ್ನ ಜ್ಞಾನ ಪಥವನ್ನೆ ಅರಿಯದಂತಾಗಿದೆ. ದೇಹದಲ್ಲಿರುವ ಜ್ಞಾನದ ಸುಳುಹು ದೇಹಕ್ಕು ಸಿಗಲಿಲ್ಲ, ಮನಕ್ಕೂ ಸಿಕ್ಕುತ್ತಿಲ್ಲ. ಮನದಿಂದಾಗಿ ದೇಹ ಸಂದೇಹದ ಸುಳಿಯಲ್ಲಿ ಸಿಲುಕಿ ತೊಳಲಿ ಬಳಲುತ್ತದೆಯೇ ಹೊರತು, ಮನ ಅದರ ದಂದುಗ ಬಿಡುವುದಿಲ್ಲ. ಸಂದೇಹವು ಇಂಗಲಿಲ್ಲ.

ಶಿವಪಥವೆಂದರೆ ಅರಿವಿನ ಪಥ. ದೇಹವನ್ನು ಅಜ್ಞಾನಕ್ಕೆ ಕರೆದುಕೊಂಡು ಹೋಗುವ ಮನದಿಂದಲೇ ಜ್ಞಾನ ಸಿದ್ಧವಾಗಬೇಕು ಎಂಬುದನ್ನು ಮನ ಮರೆತು ಹೋಗಿದೆ, ಎಂತು ನನಗೆ ಸುಕೃತ ಸಾಧ್ಯವಾಗುವುದು ಎಂದು ಮನ ಜ್ಞಾನಕ್ಕೆ ಮೊರೆ ಹೋದಾಗಲೆ, ಆ ಜ್ಞಾನೇಶ್ವರನೆ ಎನ್ನ ತಂದೆ ಎಂದು ಮನ ತಿಳಿದು, ಆ ತಂದೆಗೆ ಮೊರೆ ಹೋದಾಗಲೆ, ಕಾಯಕ್ಕು ಮನಕ್ಕು ಶಿವಪಥವು ದೊರೆಯುವುದು ಸಾಧ್ಯವಾಗುವುದು.

ವೈದ್ಯ ಸಂಗಣ್ಣ : ಶಿವಪಥವೆಂದರೆ ಅರಿವಿನ ಪಥ ಎಂದು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಹಡಪದ ರೇಚಣ್ಣ :

ತನ್ನ ವಿಚಾರಿಸಲೊಲ್ಲದು; ಇದಿರ ವಿಚಾರಿಸ ಹೋಹುದೀಮನವು!
ಏನ ಮಾಡುವೆನೀ ಮನವನು! ಎಂತು ಮಾಡುವೆನೀ ಮನವನು!
ಕೂಡಲಸಂಗಮದೇವನ ಶರಣರ
ನಚ್ಚದ ಮಚ್ಚದ ಮನವನು, ಕಿಚ್ಚಿನೊಳಗಿಕ್ಕು! ॥ 38 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ಜಗತ್ತು ಕೆಟ್ಟಿದೆ. ಜನ ಕೆಟ್ಟಿದ್ದಾರೆ. ಜನಕ್ಕೆ ಬುದ್ಧಿ ಇಲ್ಲ. ಇದು ಪ್ರತಿ ಕಾಯದಿಂದ ಬರುವ ಪದ. ತನುವನ್ನು ಆವರಿಸಿದ ಮನವೇ ಈ ಶಬ್ದಗಳ ಜನಕ. ಮನಕ್ಕೆ ತನ್ನನ್ನು ತಾನು ನೋಡುವ, ತನ್ನನ್ನು ತಾನು ಕೇಳುವ ಬಯಕೆ ಇಲ್ಲ. ಬೆಳಕು ಹರಿದರೆ ಸಾಕು ಇತರರ ವಿಚಾರಗಳ ಸುಖವೇ ಮನಕ್ಕೆ.

ಹಡಪದ ರೇಚಣ್ಣ : ಇನ್ನಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ: ಆಗಲಿ ಶರಣರೇ. ರಾತ್ರಿ ಮಲಗಿದಾಗ ತಾನು ತಾನಲ್ಲ. ತಾನು ಶ್ರೀಮಂತನಲ್ಲ. ಬಡವನಲ್ಲ, ತಾನು ಹೆಣ್ಣಲ್ಲ, ಗಂಡಲ್ಲ, ಶಾಸಕ, ಸಚಿವ, ಅಧಿಕಾರಿಯಂತು ಮೊದಲೇ ಅಲ್ಲ. ಹೆಂಡತಿಗೆ ಗಂಡನಲ್ಲ, ಗಂಡನಿಗೆ ಹೆಂಡತಿಯಲ್ಲ. ಮಕ್ಕಳು ಮೊದಲೇ ಇಲ್ಲ. ರಾತ್ರಿ ಮಲಗಿದ್ದಾಗ ತಾನು ತಾನಾಗಿದ್ದಿಲ್ಲ. ಬೆಳಕಾದರೆ ಸಾಕು ತನ್ನ ಹೆಗ್ಗಳಿಕೆಯ ಪುರಾಣ ಇತರರನ್ನು ನಿಂದಿಸಿ, ಹೊಗಳಿಕೆಗೆ ಜಗಳ ಕಾಯುವುದೇ ಮನದ ಕೆಲಸ. ರಾತ್ರಿ ತನ್ನದೇ ಎನ್ನುವ ಎಲ್ಲವು ಕಳೆದು ಹೋಗುತ್ತದೆ. ಹಗಲಿನಲ್ಲಿಯೂ ಕೂಡಾ ಕಳೆದು

ಹೋಗಬಾರದೆ ಎನ್ನುವ ಚಿಂತೆ ಕಾಯಕ್ಕು ಇಲ್ಲ, ಕಾಯವನ್ನು ಆವರಿಸಿದ ಮನಕ್ಕು ಇಲ್ಲ.

ಹೆಂಡದ ಮಾರಯ್ಯ : ತನು, ಮನ, ಅರಿವು ಒಂದಾಗಲು ಸಾಧ್ಯವಿಲ್ಲವೇ ಬಸವರಸ?

ಬಸವಣ್ಣ: ತನುವನ್ನು ಮನ ಆವರಿಸಿದೆ. ತನುವಿನಲ್ಲಿಯೇ ಅರಿವು ಸಂಗಮವಾಗಿದೆ. ಮನ ರಾತ್ರಿ ಅರಿವಿನ ಸಂಗ ಮಾಡುವುದರಿಂದ; ತನು ತನಗೆ ಅರಿವಿಲ್ಲದಂತೆ ತನ್ನನ್ನು ತಾನು ಕಳೆದುಕೊಂಡು ಹಾಯಾಗಿ ನಿದ್ರಿಸುತ್ತದೆ. ಹಗಲಿನಲ್ಲಿ ಕೂಡಾ ತನು ಮನದ ಸಂಗ ಕಳಚಿಕೊಂಡು ಅರಿವಿಗೆ ಶರಣು ಹೋಗಿ ಶರಣಾಗತನಾದರೆ, ರಾತ್ರಿ ಕಳೆದುಹೋದಂತೆ ಹಗಲು ಕೂಡಾ ಹಾಗೆಯೇ ಪರಮಾನಂದದಿಂದ ಇರಲು ಸಾಧ್ಯವಾಗುತ್ತದೆ. ತನಗೆ ತಾನೆ ಮನ ಅರಿವಿನ ಬೆಳಕಿನೊಳಗೆ ಹೊಕ್ಕು ಆ ಅರಿವೇ ತಾನಾಗುತ್ತದೆ. ನೆಚ್ಚದ, ಮೆಚ್ಚದ ಮನವನ್ನು ಅರಿವಿನ ಸಂಗ ಮಾಡಲು ತನು ಮೆಚ್ಚಿಸಲೇಬೇಕು. ತನ್ನ ತಾನು ವಿಚಾರಿಸುವಂತೆ ಮಾಡಲೇಬೇಕು.

ಎಲೆಗಾರ ಕಾಮಣ್ಣ : ಧನ್ಯರಾದೆವು ಬಸವರಸ. ತಮ್ಮ ಪ್ರತಿಯೊಂದು ವಚನದ ಸೂತ್ರವು ನಮ್ಮೆಲ್ಲರ ಕಣ್ಣು ತೆರಸುತ್ತದೆ. ಈ ಸತ್ಸಂಗದಲ್ಲಿ ಭಾಗಿಯಾಗಿದ್ದು ನಮ್ಮೆಲ್ಲರ ಅದೃಷ್ಟ ; ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸತ್ಸಂಗದಲ್ಲಿ ಸೇರೋಣ. ಸಕಲ ಶರಣರಿಗೂ ಶರಣು ಶರಣಾರ್ಥಿ ಎಂದು ಸಭೆಗೆ ಮಂಗಲ ಹಾಡಿದರು.

□

೧೩

ಸಕಲ ಶರಣರು ಲಗುಬಗೆಯಿಂದ ಮಹಾಮನೆಗೆ ತೆರಳಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ. ಸಭೆಗೆ ಆಗಮಿಸಿದ ಬಸವಣ್ಣ ಸಕಲರಿಗೂ ಕೈ ಮುಗಿಯುತ್ತಾ ತಮ್ಮ ಆಸನದಲ್ಲಿ ಕುಳಿತುಕೊಳ್ಳುತ್ತಾರೆ.

ಹುಂಜಿನ ಕಾಳಗದ ದಾಸಯ್ಯ :

ತನ್ನಿಚ್ಛೆಯ ನುಡಿದಡೆ ಮಚ್ಚುವುದೀ ಮನವು;
ಇದಿರಿಚ್ಛೆಯ ನುಡಿದಡೆ ಮಚ್ಚದೀ ಮನವು;
ಕೂಡಲಸಂಗನ ಶರಣರ
ನಚ್ಚದ ಮಚ್ಚದ ಮನವ ಕಿಚ್ಚಿನೊಳಗಿಕ್ಕು. ॥ 39 ॥

ಬಸವರಸ, ತಮ್ಮ ಈ ವಚನವನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ: ಹೌದು ದಾಸಯ್ಯ ಶರಣರೆ, ಇದು ಮನದ ಕೆಲಸ. ತನ್ನನ್ನು ಪರರು ಬಣ್ಣಿಸಬೇಕು. ತನ್ನಿಚ್ಛೆಯಂತೆ ನುಡಿಯಬೇಕು. ತನಗಾಗುವ ಮಾತುಗಳನ್ನು ಆಡಬೇಕು. ಇದಿರು ನುಡಿದರೆ ಮನ ಮೆಚ್ಚುವುದಿಲ್ಲ. ಹಾಗೆ ನುಡಿದವರನ್ನು ವೈರಿಗಳಂತೆ ನೋಡುತ್ತದೆ. ತನ್ನ ಬಣ್ಣನೆಯು ಮನಕ್ಕೆ ಬಲು ಪ್ರೀತಿ. ತೆಗಳಿಕೆ ಬಲು ಕಷ್ಟ. ಇದು ಮನದ ಕೆಲಸ. ತನುವಿಗೆ ಮನದ ಈ ಕೆಲಸ ತಿಳಿಯುವುದಿಲ್ಲ. ಹೊಗಳಿದಾಗ ಸಂತೋಷ ಪಡುತ್ತದೆ. ತೆಗಳಿದಾಗ ಕೆರಳುತ್ತದೆ; ಕೆಂಡದಂತಾಗಿ ಇತರರ ಮೇಲೆ ಜಿಗಿಯುತ್ತದೆ. ಇತರರು ತನಗೆ ಗಾಯ ಮಾಡಿದರೆಂದು ಕೊಲ್ಲುವುದಕ್ಕೂ ಹೇಸುವುದಿಲ್ಲ.

ಹಡಪದ ರೇಚಣ್ಣ : ಇದು ಸಹಜವಲ್ಲವೇ ಬಸವರಸ.

ಬಸವಣ್ಣ: ಲೋಕ ತಮ್ಮಂತೆಯೇ ತಿಳಿದಿದೆ. ಇದು ಲೋಕಾನುಭವ. ಇತರರಿಂದ ತನುವಿಗೆ ದುಃಖವಾಗಿಲ್ಲ. ದುಃಖವಾಗುವುದಿಲ್ಲ, ಸುಖವು ಆಗುವುದಿಲ್ಲ. ಇದು ಮನದ ಕೆಲಸವೆಂದು ಕಾಯಕ್ಕೆ ತಿಳಿಯುವುದಿಲ್ಲ.

ಹಡಪದ ರೇಚಣ್ಣ: ಅದು ಹೇಗೆ ಬಸವರಸ?

ಬಸವಣ್ಣ: ಒಂದು ಕಾಯ, ಮತ್ತೊಂದು ಕಾಯವನ್ನು ಹೊಗಳಲು, ತೆಗಳಲು ಮನವೇ ಕಾರಣ. ಕಾಯದೊಳಗೆ ಸಂಗಮವಾದ ಅರಿವು ಮಾತ್ರ ಶಬ್ದಗಳನ್ನು ಅರಿವಿನಿಂದ ಕೇಳಿ ಪ್ರಸಾದ ಮಾಡಿಕೊಳ್ಳುತ್ತದೆ. ಆಗ ತೆಗಳಿದ ಕಾಯಕ್ಕೆ ಮಾತ್ರ ಗಾಯವಾಗುತ್ತದೆಯೇ ಹೊರತು, ತೆಗಳಿಕೆಗೆ ಒಳಗಾದ ಕಾಯಕ್ಕೆ ಗಾಯವಾಗುವುದಿಲ್ಲ. ಈ ಶಕ್ತಿ ಮನ ಮತ್ತು ಕಾಯಕ್ಕೆ ಇರುವುದಿಲ್ಲ. ಹೀಗಾಗಿ ತನ್ನಿಚ್ಛೆಯಂತೆ ನುಡಿದಡೆ ಮನಕ್ಕೆ ಸುಖವಾಗುವುದು. ಇದಿರಿಚ್ಛೆಯಂತೆ ನುಡಿದಡೆ

ಮನಕ್ಕೆ ದುಃಖವಾಗುವುದು. ನೆಚ್ಚದ, ಮೆಚ್ಚದ ಮನವನ್ನು ಅರಿವಿನ ಕಿಚ್ಚಿನೊಳಗೆ ಇಕ್ಕಿದಾಗಲೇ ಅದು ಸುಟ್ಟು ಭಸ್ಮವಾಗುವುದು.

ಹಡಪದ ರೇಚಣ್ಣ : ಈ ಎಲ್ಲಾ ಅಜ್ಞಾನಕ್ಕೆ ಮನವೇ ಕಾರಣ ಎಂದು ಹೇಳಿದ ತಮಗೆ ಶರಣು ಶರಣಾರ್ಥಿ.

ಅಶ್ವಥರಾಮು :

ಸುಡಲೀಮನವೆನ್ನ ನುಡುಹನ ಮಾಡಿತ್ತು .
ನಡೆವಲ್ಲಿ ನುಡಿವಲ್ಲಿ ಅಧಿಕನೆಂದೆನಿಸಿತ್ತು .
ಬೆಡಗಿನ ಕೀಲು ಕಳೆದು ಕೆಡೆದ ಬಳಿಕ
ಕಡುಗೂರ್ಪಮಡದಿ ತಾ ಮುಟ್ಟಲಮ್ಮಳು.
ಒಡಲನುರಿಕೊಂಬುದು; ಒಡವೆಯನರಸ ಕೊಂಬ;
ಕಡುಗೂರ್ಪಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ!
ಮುನ್ನ ಮಾಡಿದ ಪಾಪ ತನ್ನ ಬೆನ್ನಬಿಡದನ್ನಕ್ಕ
ಇನ್ನು ಮಾಡಿದಡಳವೆ, ಕೂಡಲಸಂಗಮದೇವಾ? ॥ 40 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ : ದೇಹದ ಸಂಸಾರವೇ ಉಡದಂತೆ. ಮನ ಅರಿವೆಂಬ ಗುರುದೇವನಿಗೆ ಶರಣು ಹೋಗಿ, ಆ ಗುರು ದೇವನಪಾದ ಹಿಡಿದಿದ್ದರೆ, ದೇಹಕ್ಕೆ ಪರಮ ಸುಖವಿತ್ತು . ಆದರೆ ಮನ ದೇಹವನ್ನು ಬಿಡದಂತೆ ಉಡದ ಹಾಗೆ ಹಿಡಿದಿದೆ. ಹೀಗಾಗಿ ಒಡಲು ಮಡದಿಗಾಗಿ, ಒಡವೆಗಾಗಿ, ವ್ಯರ್ಥ ಸತ್ತು ಹೋಗುತ್ತದೆ. ದೇಹ ಸತ್ತ ಮೇಲೆ ಮಡದಿ ಮತ್ತೊಬ್ಬ ಚೆನ್ನಿಗನ ಪಾಲಾಗುತ್ತಾಳೆ. ದೇಹದ ಮೇಲಿದ್ದ ಒಡವೆಯನ್ನು ಅರಸ ತೆಗೆದುಕೊಳ್ಳತ್ತಾನೆ. ಮನದ ಮಾತು ಕೇಳಿದ ದೇಹ ; ದೇಹದಲ್ಲಿಯೇ ಸಂಗಮವಾದ ಅರಿವಿನ ದೇವರನ್ನು ಕಾಣದೇ ವ್ಯರ್ಥ ಸತ್ತು ಹೋಗುತ್ತದೆ.

ಒಡವೆ ಮಡದಿಗೆ ಆಸೆ ಪಟ್ಟು, ಒಡಲು ಮಾಡಿದ ಪಾಪ, ಒಡಲ ಬೆನ್ನು ಬಿಡದೆ ಒಡಲನ್ನೆ ಕರೆದುಕೊಂಡು ಹೋಗುತ್ತದೆ. ಒಡಲು ಒಡಲ ಒಡೆಯನನ್ನು ಕಾಣದೆ ವ್ಯರ್ಥ ಸತ್ತು ಹೋಗುತ್ತದೆ. ಇದು ದೇಹದ ಸಂಸಾರ. ಮನ ದೇಹದೊಂದಿಗೆ ಮಾಡಿದ ಹಾದರದ ಫಲ. ಒಡಲ ಒಡೆಯ ಎಂಬ ಚೆಲುವ ಚೆನ್ನಿಗನ ಮಾತು, ಮನವೆಂಬ ಚೆಲುವ ಹೆಂಡತಿಗೆ ಹಿಡಿಸುವುದಿಲ್ಲ. ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆದಂತೆ, ದೇಹದ ಆಯುಷ್ಯ ಮುಗಿದು ಕೆಟ್ಟು ಮಲಗಿದಾಗ, ಮನವೆಂಬ ಚೆಲುವ ಹೆಂಡತಿ ಮುಟ್ಟಲು ಹೇಸಿಕೊಳ್ಳುತ್ತಾಳೆ.

ಅಶ್ವಥರಾಮು: ತಮ್ಮ ಈ ವಚನದ ಬೆಡಗನ್ನು ನಮಗೆ ತಿಳಿಯುವಂತೆ ಹೇಳಿದ ತಮಗೆ ಶರಣು ಶರಣಾರ್ಥಿ.

ಆನಂದ ಸಿದ್ದೇಶ್ವರ :

ವಚನದ ಹುಸಿನುಸುಳೆಂತು ಮಾಬುದೆನ್ನ ?
ಮನದ ಮರ್ಕಟತನವೆಂತು ಮಾಬುದೆನ್ನ?
ಹೃದಯದ ಕಲ್ಮಷವೆಂತು ಮಾಬುದೆನ್ನ ?
ಕಾಯವಿಕಾರಕ್ಕೆ ತರಿಸಲುವೋದೆನು.
ಎನಗಿದು ವಿಧಿಯೆ ಕೂಡಲಸಂಗಮದೇವಾ? ॥ 41 ॥

ತಮ್ಮ ಈ ವಚನದ ಬೆಡಗನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ: ಕಾಯ ಒಂದೇ, ಕಾಯವನ್ನು ಆವರಿಸಿದ ಮನ ಕೈಲಾಸವೇ ತಾನಾಗಬೇಕಾದ ಕಾಯಕ್ಕೆ ಸುಳ್ಳ, ಕಳ್ಳ, ಲಂಚಕೋರ, ಭ್ರಷ್ಟ, ರಾಜ, ಸೈನಿಕ, ಗುರು, ಶಿಷ್ಯ, ಪ್ರಧಾನಿ ಎಂದು ವೇಷ ಹಾಕಿ ಮನ ಕಾಯದ ಮೂಲಕ ಸುಖಿಸುತ್ತದೆ. ಹುಸಿ ನುಡಿಯುವುದು ಮನವೆಂಬ ಮರ್ಕಟಕ್ಕೆ ಬಲು ಸುಖ.

ಮನವೆಂಬ ಮರ್ಕಟ, ತನಗೆ ಈ ವೇಶ ಹಾಕಿದೆ ಎಂದು ಕಾಯಕ್ಕೆ ತಿಳಿಯುವುದೇ ಇಲ್ಲ. ಅಂಗದಲ್ಲಿಯೇ ಅರಿವಿನ ಲಿಂಗಯ್ಯ ಸಂಗಮವಾಗಿದ್ದಾನೆ. ಅಂಗದ ಮೈದಡವಿ ಮನಕ್ಕು, ಅಂಗಕ್ಕು ಅರಿವಿನ ಪಾಠ ಮಾಡುತ್ತಾನೆ. ಅರಿವೆಂಬುದು ಲಿಂಗಯ್ಯನ ಅರಿವಿನ ಕ್ಷೇತ್ರ. ಕೈಲಾಸವೇ ಆಗಬೇಕಾದ ಕಾಯ, ಮನದಿಂದಾಗಿ ಹುಸಿ ಹೆಸರನ್ನು ಪಡೆದುಕೊಂಡಿದೆ. ಮನದಿಂದಾಗಿ ಕಾಯ ವಿಕೃತವಾಗಿದೆ. ಎನಗಿದು ವಿಧಿಯೇ ಎಂದು ಕಾಯದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ನೆನೆಯಲೇ ಬೇಕಾಗಿದೆ.

ಆನಂದ ಸಿದ್ದೇಶ್ವರ : ಮಾತಿನ ಮೂಲಕ, ನೋಟದ ಮೂಲಕ ಮತ್ತೆ ಮತ್ತೆ ಸುಳಿಯುವ ಹುಸಿಯನು ಕಳೆಯುವ ಬಗೆ ಹೇಗೆ ಬಸವರಸ?

ಬಸವಣ್ಣ: ಮನದಿಂದಾಗಿ ಕಾಯದಲ್ಲಿ ಉಂಟಾಗುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗೆ ಕಾಯ ಮರುಳಾಗದೆ ಪ್ರತಿಭಟಿಸಬೇಕು. ಕೂಡಲೇ ಕಾಯ ಅರಿವಿಗೆ ಶರಣು ಹೋಗಿ ಕಾಯದಲ್ಲಿ ಉಂಟಾದ ಕಾಮದ ಬಗ್ಗೆ ನೋಡಿದಾಗ ಕಾಯ ತನಗೆ ತಾನೆ ನಾಚಿ ನೀರಾಗುತ್ತದೆ,

ಆನಂದ ಸಿದ್ದೇಶ್ವರ : ಅದು ಹೇಗೆ ಬಸವರಸ?

ಬಸವಣ್ಣ : ತನು, ತನುವಿನಲ್ಲಿಯೇ ತನ್ಮಯವಾದ ಅರಿವಿನ ಮೂಲಕ ಮತ್ತೊಂದು ತನುವನ್ನು ನೋಡಿದಾಗ ಅದು ಹೆಣ್ಣಲ್ಲ, ಗಂಡು ಕೂಡಾ ಅಲ್ಲ. ಮನ ತಾನು ಗಂಡು ಎನ್ನುವ ಅಜ್ಞಾನವನ್ನು ಕಾಯದ ಮೂಲಕ ಆಮಂತ್ರಣ ಮಾಡಿಕೊಂಡು, ಮತ್ತೊಂದು ಕಾಯವನ್ನು ಹೆಣ್ಣೆಂದು ನೋಡಿದಾಗ, ಕಾಯದಲ್ಲಿ ಕಾಮದ ಹುಸಿ ನುಸುಳುತ್ತದೆ. ಕಾಮ ದ್ರವ್ಯ ಕಾಯದ ತುತ್ತ ತುದಿಗೆ ತಲುಪಿ, ಕಾಯ ಮತ್ತೊಂದು ಕಾಯದ ಮೂಲಕ ಭೋಗಿಸಿ ಸುಖಿಸುವ ಸುಳ್ಳು ಆಸೆ ಕಾಯದಲ್ಲಿ ಹುಟ್ಟುತ್ತದೆ.

ಸತ್ಯಕ್ಕ : ಇದನ್ನು ಸುಳ್ಳು ಆಸೆ ಎಂದು ಹೇಗೆ ಹೇಳುವುದು ಬಸವರಸ?

ಬಸವಣ್ಣ : ಕಾಯದಲ್ಲಿ ಕಾಮದ ಆಸೆ ಹುಟ್ಟಿಸಿದ ಮನ, ಮನದಿಂದಾಗಿ ಕಾಮ ಸುಖಕ್ಕೆ ಅಣಿಯಾದ ಕಾಯ, ಇವೆರಡೂ ಕಾಯದಲ್ಲಿಯೇ ಸಂಗಮವಾದ ಅರಿವಿನ ಮೂಲಕ ನೋಡಿದಾಗ ನಾಚಿ ನೀರಾಗುತ್ತವೆ.

ಸತ್ಯಕ್ಕ : ಅದು ಹೇಗೆ ಬಸವರಸ?

ಬಸವಣ್ಣ : ಕಾಯಕ್ಕೆ ಮತ್ತೊಂದು ಜ್ಞಾನಕಾಯದ ಅವಶ್ಯಕತೆಯಿದೆ ಎಂಬ ಆಸೆ ಉಂಟಾದಾಗ, ಒಪ್ಪಂದ ಮಾಡಿಕೊಂಡ ಕಾಯದೊಂದಿಗೆ ಕಾಯ ಕೂಡಿ, ಮತ್ತೊಂದು ಕಾಯವನ್ನು ಪಡೆಯಬೇಕು. ಆದರೆ ಕಾಯದ ಸೌಂದರ್ಯ ನೋಡಿ, ಮನ ಕಾಯಕ್ಕೆ ಕಾಮದ ಪ್ರೇರಣೆ ನೀಡಿ, ಹಾದರದ ಸುಖ ಅನುಭವಿಸುತ್ತದೆ. ಇದು ತಪ್ಪು ಎಂದು ನುಡಿದು ಹೇಳುವ ಅರಿವಿನ ಧ್ವನಿ, ಮನ ಮತ್ತು ಕಾಯದ ಕಿವಿಗೆ ಬೀಳುವುದೇ ಇಲ್ಲ. ನಂತರ ಎರಡೂ ಕಾಯಗಳಿಗೆ ಅರಿವಿನ ಮಾತು ನೆನಪಾಗಿ, ನಾವು ತಪ್ಪು ಮಾಡಿದೆವಲ್ಲ ಎನ್ನುವ ಪಶ್ಚಾತ್ತಾಪ, ಕಾಯಗಳಲ್ಲಿ ಕಾಯ ಇರುವವರೆಗೆ ಉಳಿಯುತ್ತದೆ. ಪುನಃ ಮನ ಹಾದರದ ಸುಖಕ್ಕಾಗಿ ಕಾಯವನ್ನು ಮತ್ತೆ ಸಜ್ಜುಗೊಳಿಸುತ್ತದೆ. ಇದು ಸುಖವಲ್ಲ ಸಂತಾನಕ್ಕಾಗಿ ಕೂಟ ಎಂದು ಕಾಯಕ್ಕೂ ತಿಳಿಯುವುದಿಲ್ಲ, ಮನಕ್ಕೂ ತಿಳಿಯುವುದಿಲ್ಲ.

ಸತ್ಯಕ್ಕ: ಕಾಮ ಸುಖ, ಸುಖ ಅಲ್ಲವೆ ಬಸವಣ್ಣ?

ಬಸವಣ್ಣ : ಕಾಮ, ಸುಖ ಅಲ್ಲವೆಂದು ಮನುಷ್ಯನ ಹೊರತಾಗಿ ಸಕಲ ಪ್ರಾಣಿಗಳೂ ತಿಳಿದಿವೆ. ಪ್ರಾಣಿಗಳಿಗೆ ಸಂತಾನದ ಬಯಕೆ ಆದಾಗ ಮಾತ್ರ ಕೂಡುತ್ತವೆ. ಬಯಕೆ ಈಡೇರಿದಾಗ ಅವೆರಡು ಪ್ರಾಣಿಗಳು ಯಾವ ಪ್ರಾಣಿಗಳೊಂದಿಗೂ ಕೂಡುವುದಿಲ್ಲ. ಆದರೆ ಮನುಷ್ಯ ಮಾತ್ರ ಹಾಗಲ್ಲ. ಮನವೆಂಬ ಮರ್ಕಟದಿಂದಾಗಿ ಕೈಲಾಸವೆ ಆಗಬೇಕಾದ ಕಾಯ ಮತ್ತೆ ಮತ್ತೆ ಕಾಮ ವಿಕಾರಕ್ಕೆ ಒಳಗಾಗುತ್ತದೆ.

ಕಾಳವ್ವೆ : ವಚನದ ಹುಸಿ ನುಸುಳೆಂತು ಮಾಬುದೆನ್ನ ಅಂದರೆ?

ಬಸವಣ್ಣ : ವಚನ ಎಂದರೆ ಮಾತು. ಪ್ರತಿ ಮಾತಿನಲ್ಲಿ ಸತ್ಯದ ಅಮೃತವಿದೆ. ಮನದ ಮಾತು ಕೇಳಿ ಕಾಯ ಹುಸಿ ನುಡಿದರೆ, ನುಡಿದ ಕಾಯವನ್ನು, ಕೇಳಿದ ಕಾಯವನ್ನು ಕಾಯ ಇರುವವರೆಗೂ ವಚನ ಬಾಧಿಸುತ್ತದೆ. ಹೀಗೆ ನಾನು ನುಡಿಯಬಾರದಿತ್ತು ಎಂದು ನುಡಿದ ಕಾಯವನ್ನು; ಹೀಗೆ ನುಡಿದನಲ್ಲಾ ಎಂದು ಕೇಳಿದ ಕಾಯವನ್ನು ಬಾಧಿಸುತ್ತದೆ.

ಮನವೆಂಬ ಮರ್ಕಟದಿಂದಾಗಿ, ನುಡಿದ ಹೃದಯ, ಕೇಳಿದ ಹೃದಯ ಕಲ್ಮಷವಾಗುತ್ತದೆ. ಪ್ರತಿ ನುಡಿಯಲ್ಲಿ ಅರಿವಿನ ಅಮೃತವಿದೆ ಎಂದು ಅರಿವಾಗುವವರೆಗೆ ಕಾಯ ನಿರ್ಮಲವಾಗುವುದಿಲ್ಲ.

ಕಾಳವ್ವೆ : ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಕಾಯ, ಮನದ ಮೂಲಕ ಮಾತು ಕೇಳಿದರೆ, ಕಾಯಕ್ಕೆ

ಸುಖವಾಗುತ್ತದೆ ಇಲ್ಲ ದುಃಖವಾಗುತ್ತದೆ ; ಅರಿವಾಗುವುದಿಲ್ಲ. ಕಾಯ ಅರಿವಿನ ಮೂಲಕ ಮಾತು ಕೇಳಿದರೆ ಸುಖವೂ ಆಗುವುದಿಲ್ಲ ದುಃಖವೂ ಆಗುವುದಿಲ್ಲ. ಕೇವಲ ಅರಿವಾಗುತ್ತದೆ.

ಕಾಳವ್ವೆ : ಮಾತಿನ ಮೂಲಕ ಸುಖವಾಗುವುದು ತಪ್ಪೆ ಬಸವಣ್ಣ?

ಬಸವಣ್ಣ : ಕಾಯವನ್ನು ಮತ್ತೊಂದು ಕಾಯ ಹೊಗಳಿದರೆ ಸುಳ್ಳು ಸುಖವಾಗುತ್ತದೆ. ಹೊಗಳಿದ ಕಾಯದ ಬಯಕೆ ಈಡೇರದಿದ್ದರೆ, ಹೊಗಳಿದ ಕಾಯವನ್ನೇ ತೆಗಳುತ್ತದೆ. ಆಗ ಕಾಯಕ್ಕೆ ದುಃಖವಾಗುತ್ತದೆ. ಆಗ ತನ್ನ ಬಯಕೆ ಈಡೇರುವುದಕ್ಕಾಗಿ ಹೊಗಳಿರಬೇಕು ಎಂದು ಅರಿವಾಗುತ್ತದೆ. ಈ ಅರಿವು ಹೊಗಳುವಾಗ ಅರಿವಾದರೆ ಹೊಗಳಿಕೆಗೆ ಹಿಗ್ಗುವುದಿಲ್ಲ, ತೆಗಳಿಕೆಗೆ ಕುಗ್ಗುವುದಿಲ್ಲ. ಸಕಲ ನುಡಿಗಳೂ ವಚನವಾಗುತ್ತವೆ. ಆಗ ಮನವೆಂಬ ಮರ್ಕಟವು ಅಳಿದು ಘನ ಮನವಾಗುತ್ತದೆ. ಕಾಯ ಎಂದೆಂದೂ ವಿಕಾರವಾಗದೆ ಕೂಡಲಸಂಗಯ್ಯನೇ ತಾನಾಗುತ್ತದೆ.

ಸತ್ಯಕ್ಕ : ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಮಂಗಲ ಹಾಡಿದರು.

ಸತ್ಸಂಗದ ಸವಿಯನುಂಡ ಅಮಲಿನಲ್ಲಿ ತೇಲಾಡುತ್ತ ಶರಣರು ತಮ್ಮ ತಮ್ಮ ಮನೆಗೆ ನಡೆದರು.

□

೧೪

ಮಹಾಮನೆಯಲ್ಲಿ ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವಣ್ಣ ಎಂದು ಹೇಳುತ್ತಾ ಕುಳಿತುಕೊಳ್ಳುತ್ತಾರೆ.

ದುಗ್ಗಳೆ:

ಅಂಗದ ನೋಟವು ಸಿಂಗದ ಗಾತ್ರವು;
ಹಿಂಗದು ಮನದಲ್ಲಿ ನಾನಾ ವಿಕಾರವು.
ಬಂದೆನೆಂದರಿಯೆಲಿಕ್ಕಿಲ್ಲಾಗಿ ಸಂದೇಹ ಬಿಡದು;
ಮುಂದುಗಾಣದು ಲೋಕ.
ಬೆಂದ ಮಾಯಕ್ಕಂಜಿ ನಿಮ್ಮ ಮರೆವೊಕ್ಕೆ
ಕೂಡಲಸಂಗಮದೇವಾ. ॥ 42 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಅಂಗ ಸಿಂಹದ ಗಾತ್ರವೂ ಇಲ್ಲ; ಆನೆಯ ಗಾತ್ರವೂ ಇಲ್ಲ. ಆದರೆ ಇದರ ನೋಟ ಇವೆಲ್ಲವುಗಳನ್ನೂ ಮೀರುತ್ತದೆ. ಮನ ನೋಟದಲ್ಲಿ ಬೆರೆತು, ಮದ ತುಂಬಿದ ಆನೆಯಂತೆ, ಅಂಗವನ್ನು ವಿಕಾರಗೊಳಿಸುತ್ತದೆ. ಸಿಂಹದಂತೆ ಕಚ್ಚಿ ತಿನ್ನುತ್ತದೆ. ಬೃಹದಾಕಾರದ ತಿಮಿಂಗಲವನ್ನು ಪಳಗಿಸುತ್ತದೆ. ಆದರೆ ಮನ ದೇಹದಲ್ಲಿ ಯಾಕೆ ಪ್ರವೇಶವಾಯಿತು; ಮಾಡಬೇಕಾದ ಕರ್ತವ್ಯವೇನು? ದೇಹವನ್ನು ಯಾಕೆ ಸದಾ ಸಂಕಟಕ್ಕೆ ಈಡು ಮಾಡುತ್ತದೆ? ಕ್ಷಣ ಕ್ಷಣಕ್ಕೂ ಬೆಂದು ತನುವಿನಲ್ಲಿ ಬಂದುದನ್ನು ತಿಳಿಯದೇ ತನುವನ್ನು ಬೇಯಿಸುತ್ತಿದೆ.

ತನುವಿನ ಮೂಲಕ ಮನ ಸಂದೇಹ ಮಾಡುವುದನ್ನು ಬಿಡದಿದ್ದರೆ, ತನು ಮುಂದುಗಾಣುವುದಾದರೂ ಹೇಗೆ? ಲೋಕ ಮುಂದುಗಾಣುವುದಾದರೂ ಹೇಗೆ? ಮನ ಮಾಡುವ ಅಪರಾಧವನ್ನು ಯಾರಾದರೂ ನಿಲ್ಲಿಸಲು ಸಾಧ್ಯವೇ?

ದೇಶ ದೇಹಗಳಿಂದ ಕೂಡಿದೆ. ದೇಹಗಳಿಲ್ಲದ ದೇಶವನ್ನು ದೇಶ ಅನ್ನುವಂತಿಲ್ಲ. ರಕ್ಕಸ ಮನಗಳಿಂದ ಕೂಡಿದ ದೇಹಗಳ ದೇಶ ಮುಂದುಗಾಣಲು ಸಾಧ್ಯವೇ? ಯಾರಿಂದಲೂ ಸರಿ ಮಾಡಲು ಸಾಧ್ಯವಿಲ್ಲ.

ದುಗ್ಗಳೆ : ಗುರುದೇವನಿಂದ ಸರಿ ಮಾಡಲು ಬರುವುದಿಲ್ಲವೆ ಬಸವಣ್ಣ?

ಬಸವಣ್ಣ : ದೇಶದಲ್ಲಿರುವ ಸಕಲ ಅಂಗಗಳಲ್ಲಿಯೂ ಅರಿವು ಎನ್ನುವ ಗುರುದೇವ ಸಂಗಮವಾಗಿದ್ದಾನೆ. ಆ ಅರಿವು ಎನ್ನುವ ಗುರುದೇವನಿಗೆ ಯಾರಾದರೂ ಗುರುವು ಆಗಿ ಬೋಧೆ ಮಾಡಲು ಸಾಧ್ಯವೆ?

ದುಗ್ಗಳೆ : ಗುರುದೇವ ಮನಕ್ಕಾದರೂ ಪಾಠ ಮಾಡಬಹುದಲ್ಲ?

ಬಸವಣ್ಣ : ಅಂಗವನ್ನು ಆವರಿಸಿದ ಮನ ಸದಾ ಸಿಂಹದಂತೆ ಘರ್ಜಿಸುತ್ತದೆ. ಗುರುದೇವ ಮಾಡಿದ ಪಾಠ ಇದಕ್ಕೆ ನಿಲ್ಲುವುದಿಲ್ಲ. ಮನ ಊಸರವಳ್ಳಿಯಂತೆ. ಗುರುದೇವ ಮಾಡಿದ ಪಾಠ ಮನ ಕೇಳಿ, ದೇಹಕ್ಕೆ ಗುರುದೇವನ ವೇಷ ಹಾಕಿ, ಗುರುದೇವನೆ ತಾನಾಗುತ್ತದೆ.

ಭೋಗಣ್ಣ : ಇದು ಸರಿ ಅಲ್ಲವೆ ಬಸವಣ್ಣ?

ಬಸವಣ್ಣ : ಸರಿ ಅಲ್ಲ ಶರಣರೆ. ಗುರುದೇವ ವೇಷಧಾರಿ ಅಲ್ಲ. ಸಕಲ ಕಾಯಗಳಲ್ಲಿಯೂ ಅರಿವು ಎನ್ನುವ ಗುರುದೇವನು ಇದ್ದಾನೆ. ಗುರುದೇವ ಕಾಯ ವೇಷ ಧರಿಸಿ, ಕಾಯದ ಗರ್ಭದ ಮೂಲಕ ಭೂಮಿಗೆ ಬಂದಿದ್ದಾನೆ. ಅಂದಮೇಲೆ ಗುರುದೇವನು ಇದ್ದ ಕಾಯಕ್ಕೆ ಖಾವಿ ಧರಿಸಿದರೆ, ಮನ ತನ್ನ ವ್ಯವಹಾರಕ್ಕಾಗಿ ಕಾಯಕ್ಕೆ ಧರಿಸಿದ ವೇಷ ಆಗಲಿಲ್ಲವೆ? ಕಾಯದಲ್ಲಿದ್ದ ಗುರುದೇವ ಕಾಯದಲ್ಲಿಯೇ ಉಳಿದಂತಾಗಲಿಲ್ಲವೆ? ಮನ ಕಾಯವನ್ನು ವಿಕಾರಗೊಳಿಸಿದಂತಾಗಲಿಲ್ಲವೆ?

ಮಂಚಣ್ಣ : ಮತ್ತೇನು ಮಾಡಿದರೆ ಕಾಯದಲ್ಲಿದ್ದ ಅರಿವು ಎನ್ನುವ ಗುರುದೇವ ಕಾಯಕ್ಕೆ ಒಲಿಯಲು ಸಾಧ್ಯ ಬಸವಣ್ಣ?

ಬಸವಣ್ಣ : ಸುಂದರವಾದ ಪ್ರಶ್ನೆ ಕೇಳಿದಿರಿ ಶರಣರೆ. ತನು ಮನ ಧನವನ್ನು ತನುವಿನಲ್ಲಿಯೇ ತನ್ಮಯವಾದ ಅರಿವು ಎನ್ನುವ ಗುರುದೇವನಿಗೆ ಅರ್ಪಣೆ ಮಾಡಬೇಕು. ಆ ಗುರುದೇವನು ಮಾಡಿದ ಆದೇಶವನ್ನು, ತನು ಮತ್ತು ಮನ ಪಾಲಿಸಬೇಕು. ಮನದಿಂದಾಗಿ ಕಾಯದಲ್ಲಿಯೇ ಸೃಷ್ಟಿಯಾದ ಮಾಯೆಗೆ ಅಂಜಿ, ತನುವಿನಲ್ಲಿಯೇ ತನ್ಮಯವಾದ ಅರಿವು ಎಂಬ ಗುರು ದೇವನಿಗೆ ತನು ಮತ್ತು ಮನಗಳೆರಡು ಮೊರೆ ಹೋಗಬೇಕು. ಆಗ ಗುರುದೇವ ಅವೆರಡನ್ನು ತನ್ನಂತೆ ಮಾಡಿಕೊಳ್ಳುವನು.

ಪುರದ ನಾಗಣ್ಣ: ತನು ಮನಗಳೆರಡು ತನುವಿನಲ್ಲಿಯೇ ತನ್ಮಯವಾದ ಗುರು ದೇವನಿಗೆ ಅರ್ಪಣೆ ಮಾಡಬಹುದು. ಧನ ಅರ್ಪಣೆ ಮಾಡುವುದು ಹೇಗೆ ತಂದೆ?

ಬಸವಣ್ಣ : ನಾಗಣ್ಣ ಶರಣರು ಸುಂದರವಾದ ಪ್ರಶ್ನೆ ಕೇಳಿದ್ದಾರೆ. ಧನವೆಂದರೆ ಚಿನ್ನ ಭೂಮಿ ಮತ್ತು ತನುವಿನ ಮೂಲಕ ಸಂಗ್ರಹ ಮಾಡಿದ ಪದಾರ್ಥಗಳಲ್ಲ.

ಪುರದ ನಾಗಣ್ಣ : ಹಾಗಾದರೆ ಗುರುದೇವನಿಗೆ ಯಾವ ಧನವನ್ನು ಅರ್ಪಣೆ ಮಾಡಬೇಕು ಬಸವಣ್ಣ?

ಬಸವಣ್ಣ: ಕಾಯ ಉಳ್ಳ ಗುರುದೇವ, ಭೂಮಿ ಹೇಮ ಮುಂತಾದ ಪದಾರ್ಥಗಳನ್ನು ಸ್ವೀಕರಿಸುತ್ತಾನೆ. ಈ ಪದಾರ್ಥಗಳ ಆಸೆಗಾಗಿ ಮನ ಕಾಯಕ್ಕೆ ಖಾವಿ ಧಾರಣೆ ಮಾಡಿ, ಕಾಯವನ್ನು ಗುರುವನ್ನಾಗಿ ಮಾಡಿದೆ. ಗುರುವೇಷ ಧರಿಸಿದ ಕಾಯ ಈ ಪದಾರ್ಥಗಳನ್ನು ಸಂಗ್ರಹ ಮಾಡಿ ಮಾಡಿ, ಕಾಯದಲ್ಲಿಯೇ ಇದ್ದ

ಅರಿವೆಂಬ ಗುರುದೇವನ ದರುಶನ ಭಾಗ್ಯ ಪಡೆಯದೆ, ಒಮ್ಮೆ ಸತ್ತು ಹೋಗುತ್ತದೆ. ಪದಾರ್ಥಗಳನ್ನು ನೀಡಿದ ಶಿಷ್ಯ ಕಾಯಗಳು ಕೂಡಾ ಗುರುದರ್ಶನವಿಲ್ಲದೆ ವ್ಯರ್ಥ ಸತ್ತು ಹೋಗುತ್ತವೆ.

ದುಗ್ಗಳೆ: ಹಾಗಾದರೆ ಅರಿವೆಂಬ ಗುರುದೇವನಿಗೆ ತನು ಮತ್ತು ಮನ ಯಾವ ಧನವನ್ನು ದಾನ ಮಾಡಬೇಕು ತಂದೆ?

ಬಸವಣ್ಣ: ವೇದ, ಆಗಮ, ಉಪನಿಷತ್, ಭಗವದ್ಗೀತೆ, ಭಾಗವತ, ವಚನಶಾಸ್ತ್ರ, ತತ್ವ ಪದಗಳನ್ನು ಮನ ಉರು ಹೊಡೆದು ತನುವಿನಲ್ಲಿ ಸಂಗ್ರಹ ಮಾಡಿಕೊಂಡಿದೆ. ಅದೆ ತನ್ನ ಸಂಪತ್ತೆಂದು ತಿಳಿದು, ಮನ ತನುವಿಗೆ ಗುರುದೇವನ ವೇಷ ಹಾಕಿ, ಮತ್ತೊಂದು ಕಾಯವನ್ನು ಶಿಷ್ಯನನ್ನಾಗಿ ಮಾಡಿಕೊಂಡು ವ್ಯವಹಾರ ಮಾಡುತ್ತದೆ.

ದುಗ್ಗಳೆ: ಗ್ರಂಥಗಳ ಅಧ್ಯಯನ ಮಾಡುವುದು, ಅಧ್ಯಯನ ಮಾಡಿದವರ ಮಾತುಗಳನ್ನು ಆಲಿಸುವುದು ಸರಿಯಲ್ಲವೆ ಬಸವರಸ?

ಬಸವಣ್ಣ: ಗ್ರಂಥಗಳು ಸರಿಯಾಗಿವೆ. ಸಕಲ ಕಾಯಗಳು ಅರಿವು ಎನ್ನುವ ಗುರುದೇವನ ದರುಶನ ಪಡೆದು, ಧನ್ಯರಾಗಲಿ ಎಂದು, ಜ್ಞಾನಿಗಳು ರಚನೆ ಮಾಡಿದ ಸೂತ್ರಗಳು! ಮನ ಇವುಗಳನ್ನು ತನುವಿನ ಮೂಲಕ ಓದಿ, ಕೇಳಿ ತನುವುನಲ್ಲಿಯೇ ತನ್ಮಯವಾದ ಗುರುದೇವನ ದರುಶನ ಪಡೆದು ಘನ ಮನವಾಗಬೇಕಿತ್ತು . ಆದರೆ ಮನವೆಂಬ ಮಾಯೆ ಹಾಗೆ ಮಾಡದೆ, ಗ್ರಂಥಗಳನ್ನು ತನುವಿನಲ್ಲಿ ಸಂಗ್ರಹ ಮಾಡಿಕೊಂಡು, ತನುವಿಗೆ ಗುರುದೇವನ ವೇಷ ಹಾಕಿ, ಓದಿದ್ದನ್ನೆ ಬೊಗಳಿ ವ್ಯವಹಾರ ಮಾಡುತ್ತಲಿದೆ. ಇದು ತನಗೆ ತಾನೆ ಮಾಡಿಕೊಳ್ಳುವ ಮೋಸವೆಂದು ಮನವೆಂಬ ಮಾಯೆಗೆ ತಿಳಿಯುತ್ತಿಲ್ಲ. ಮನಕ್ಕೆ ಆಶ್ರಯ ಕೊಟ್ಟ ತನುವಿಗೂ ತಿಳಿಯುತ್ತಿಲ್ಲ. ಮನದ ವಿಕಾರದಿಂದಾಗಿ ತನುವಿಗೆ ಮುಂದುಗಾಣಲು ಸಾಧ್ಯವಾಗುತ್ತಿಲ್ಲ.

ದುಗ್ಗಳೆ : ಓದಿ,ಕೇಳಿ ಸಂಗ್ರಹ ಮಾಡಿಕೊಂಡ ಅರಿವು ಅರಿವಲ್ಲವೆ ಬಸವಣ್ಣ ?

ಬಸವಣ್ಣ: ರಾವಣ ಪಂಡಿತ. ಸಕಲ ಗ್ರಂಥಗಳನ್ನು ಅಧ್ಯಯನ ಮಾಡಿದಾತ. ಆದರೂ ಸೀತಾಮಾತೆಯ ಸೌಂದರ್ಯ ನೋಡಿ ಉದ್ರಿಕ್ತನಾದ. ತಾನು ಓದಿದ ಗ್ರಂಥಗಳು ತನಗೆ ನೆರವಾಗಲಿಲ್ಲ. ತನ್ನ ಅಂಗದ ಮೂಲಕ ನೋಡಿದ ನೋಟವು ಸಿಂಹದ ಗಾತ್ರದಂತೆ ಇದ್ದರೂ ಕೂಡಾ, ಅದು ಅಜ್ಞಾನದ ನೋಟ. ತನ್ನ ನೋಟ ತನ್ನನ್ನೇ ಬಲಿ ಪಡೆಯಿತು.

ದುಗ್ಗಳೆ : ಮತ್ತಷ್ಟು ಹೇಳಲು ಸಾಧ್ಯವೆ ಬಸವಣ್ಣ ?

ಬಸವಣ್ಣ : ಸೀತಾಮಾತೆ ಪವಿತ್ರ ಎಂದು ಶ್ರೀರಾಮನಿಗೆ ಗೊತ್ತಿದ್ದರೂ ಕೂಡಾ, ಮಡಿವಾಳನು ಆಡಿದ ನುಡಿ ಕಿಡಿಯಾಗಿ, ಶ್ರೀರಾಮನ ಕಿವಿಗೆ ತೂತು ಹಾಕಿತು. ತುಂಬು ಗರ್ಭಿಣಿ ಸೀತಾಮಾತೆಯನ್ನು ಕಾಡಿಗೆ ಕಳುಹಿಸಿದ. ಈತ ಓದಿದ ಗ್ರಂಥಗಳು ಕೂಡಾ ಈತನಿಗೆ ನೆರವಾಗಲಿಲ್ಲ.

ದುಗ್ಗಳೆ : ತನು ಮತ್ತು ಮನ ಗಳಿಕೆ ಮಾಡಿದ ಅರಿವನ್ನು ದಾನ ಮಾಡುವುದು ಹೇಗೆ ಬಸವಣ್ಣ ?

ಬಸವಣ್ಣ : ತನುವಿನಲ್ಲಿಯೇ ತನ್ಮಯವಾದ ಅರಿವು ಎಂಬ ಗುರುದೇವನಿಗೆ ತನು ಮತ್ತು ಮನದಿಂದ ಗಳಿಕೆ ಮಾಡಿದ ಅರಿವನ್ನು ಅರ್ಪಣೆ ಮಾಡಿ, ಆತನಿಗೆ ಮೊರೆಹೋಗಬೇಕು. ಆ ಗುರುದೇವನಿಗೆ ಶರಣು ಹೋಗಿ ಶರಣಾಗತನಾಗಬೇಕು. ನೋಡಿದ ಅಜ್ಞಾನದ ನೋಟ, ಕೇಳಿದ ಶಬ್ದ, ಮುಟ್ಟಿದ ಸ್ಪರ್ಶ, ರುಚಿಸಿದ ಪದಾರ್ಥ ಮೂಸಿಸಿದ ಗಂಧ ದುರ್ಗಂಧ, ಆತನಿಗೆ ಅರ್ಪಣೆ ಮಾಡಬೇಕು. ಆಗ ಕತ್ತಲ ಮನ ಅರಿವೆಂಬ ಗುರುದೇವನ ಬೆಳಕಿನಲ್ಲಿ ಮಿಂದು ಆ ಬೆಳಕೆ ತಾನಾಗುವುದು.

ದುಗ್ಗಳೆ : ತನುವಿನಲ್ಲಿ ತನ್ಮಯವಾದ ಅರಿವಿನ ರಹಸ್ಯವನ್ನು ನಮಗೆ ತಿಳಿಯುವಂತೆ ಉಣಬಡಿಸಿದ ತಮಗೆ ಶರಣು ಶರಣಾರ್ಥಿ ಬಸವರಸ.

ಸಿದ್ಧಬುದ್ಧಯ್ಯ :

ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ;
ಮತಿಗೆಟ್ಟೆನು ಮನದ ವಿಕಾರದಿಂದ;
ಧೃತಿಗೆಟ್ಟೆನು ಕಾಯ ವಿಕಾರದಿಂದ;
ಶರಣುವೊಕ್ಕೆನು ಕೂಡಲಸಂಗಮದೇವಯ್ಯಾ. ॥ 43 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ಶರಣರಿಗೆ ತಿಳಿಯುವಂತೆ ಬಿಡಿಸಿ ಹೇಳಿ ತಂದೆ.

ಬಸವಣ್ಣ : ಮನುಷ್ಯನಿಗೆ ಐದು ಇಂದ್ರಿಯಗಳು ಇವೆ. ಕಣ್ಣು ಕಿವಿ ಮೂಗು ನಾಲಿಗೆ ಚರ್ಮ. ನೋಡುವ ಕಣ್ಣಿನಲ್ಲಿ ಸದಾ ಅಜ್ಞಾನದ ಧಾತು ಚೆಲ್ಲುವ ದೃಶ್ಯ ಒಂದಿದೆ. ಇದರ ಬೆನ್ನಿಗೆ ಅಂಟಿಕೊಂಡು ಸದಾ ಬ್ರಹ್ಮರಸ ಚೆಲ್ಲುವ ಮಹಾ ಜ್ಞಾನದ ದೃಶ್ಯವೊಂದಿದೆ.

ಸಿದ್ಧಬುದ್ಧಯ್ಯ : ಎಂತಹ ಸುಂದರವಾದ ಸೂತ್ರವನ್ನು ನಮಗೆ ದಯಪಾಲಿಸಿದಿರಿ ಬಸವರಸ. ದಯವಿಟ್ಟು ಮುಂದುವರಿಸಿ.

ಬಸವಣ್ಣ : ಕಣ್ಣು ಎರಡು ದೃಶ್ಯಗಳಿಗೆ ಉಪಕರಣವಾಗಿದೆ. ಒಂದು ದೃಶ್ಯದಲ್ಲಿ ಮನ ತನ್ನ ಸುಳ್ಳು ಸಾಮ್ರಾಜ್ಯ ಕಟ್ಟಿಕೊಂಡಿದೆ; ಮತ್ತೊಂದು ದೃಶ್ಯದಲ್ಲಿ ಅರಿವು ಎನ್ನುವ ಗುರುದೇವ ವಾಸ ಮಾಡಿದ್ದಾನೆ.

ಮನೋಮಯವಾದ ದೃಶ್ಯ, ತಾನು ಗಂಡಾಗಿ ಹೆಣ್ಣನ್ನು ನೋಡಿ, ಇಡೀ ದೇಹದಲ್ಲಿ ಅಜ್ಞಾನದ ಧಾತು ಚೆಲ್ಲಿ, ಕಾಮ ಪಿಶಾಚಿಯನ್ನಾಗಿ ಮಾಡುತ್ತದೆ. ಆ ದೇಹದೊಂದಿಗೆ ಮಾತನಾಡಬೇಕಾದರೆ ಅಕ್ಕ ತಂಗಿ ಸೊಸೆ ಮೈದುನ ಅಣ್ಣ ತಮ್ಮ ಎಂದು ನುಡಿಯುವ ಮುಖವಾಡದ ಧಾತು ದೇಹದಲ್ಲಿ ಚೆಲ್ಲುತ್ತದೆ.

ಮಧುವಯ್ಯ : ಸಾಕ್ಷಾತ್ ಗುರುದೇವನು ವಾಸ ಮಾಡಿದ ಅರಿವಿನ ದೃಶ್ಯದ ಪಾತ್ರವೇನು ಬಸವರಸ?

ಬಸವಣ್ಣ: ಗುರುದೇವ ವಾಸಮಾಡಿದ ದೃಶ್ಯಕ್ಕೆ ಪಾತ್ರ ಎನ್ನಬಾರದು. ಅದು ಕೋಟಿ ಸೂರ್ಯರನ್ನು ಬೆಳಗಿಂಗೆ ಬೆಳಗಾಗಿ ಬೆಳಗುವ ಅರಿವಿನ ಬೆಳಕಿನ ದೃಶ್ಯ . ನೀನು ನೋಡಿದಂತೆ ಮಾತನಾಡಲಿಲ್ಲ. ಮಾತನಾಡಿದಂತೆ ನಿನಗೆ ನೋಡಲು ಬರುವುದಿಲ್ಲ. ಇದು ತಪ್ಪಲ್ಲವೆ? ಎಂದು ಗುರುದೇವನ ದೃಶ್ಯ, ಮನೋಮಯವಾದ ದೃಶ್ಯಕ್ಕೆ ಬೋಧೆ ಮಾಡುತ್ತದೆ. ಗುರುದೇವ ವಾಸ ಮಾಡಿದ ಅರಿವಿನ ದೃಶ್ಯಕ್ಕೆ, ನಾನು ಕೂಡಲಸಂಗಯ್ಯ ವಾಸ ಮಾಡಿದ ದೃಶ್ಯವೆಂದು ಕರೆದಿದ್ದೇನೆ.

ಬಿಬ್ಬಿ ಬಾಚಯ್ಯ : ಧನ್ಯರಾದೆವು ತಂದೆ ದಯವಿಟ್ಟು ಮುಂದಿನದನ್ನು ಹೇಳಿ.

ಬಸವಣ್ಣ: ಮನೋಮಯವಾದ ಅಜ್ಞಾನದ ದೃಶ್ಯ ಭೋಧೆ ಮಾಡುವ ಅರಿವಿನ ಸಂಗಯ್ಯನ ದೃಶ್ಯಕ್ಕೆ ಶರಣು ಹೋಗಿ, ಶರಣಾಗತನಾದರೆ ಸಾಕು; ಅಜ್ಞಾನದ ದೃಶ್ಯವನ್ನು ಸುಟ್ಟು ಬೂದಿ ಮಾಡಿ ತನ್ನಂತೆ ಮಾಡಿಕೊಳ್ಳುತ್ತಾನೆ.

ವರದ ಸಂಕಣ್ಣ: ಪುರಾಣದಲ್ಲಿ ಬರುವ ಶಿವ, ಮುಕ್ಕಣ್ಣನಾಗಿ ಕಾಮನನ್ನು ಸುಡುವ ಕಥೆ. ತಾವು ಇದೀಗ ನಮಗೆ ತಿಳಿಹೇಳಿದ ಸೂತ್ರ, ಒಂದೇ ಆಗಿರಬೇಕಲ್ಲ ಬಸವರಸ?

ಬಸವಣ್ಣ: ತಮಗೆ ಶರಣು ಶರಣಾರ್ಥಿ ಸಂಕಣ್ಣನವರೆ. ತಾವು ಜ್ಞಾನಕ್ಕೆ ಹೋಗಿ ಸರಿಯಾಗಿ ಊಹಿಸಿರುವಿರಿ. ಕಾಲಘಟ್ಟದಲ್ಲಿ ಜ್ಞಾನಿಗಳು ಸಕಲ ಕಾಯಗಳಿಗೂ ತಿಳಿಯಲೆಂದು ಕಥೆ ಪುರಾಣಗಳ ಮೂಲಕ ಜ್ಞಾನದ ಸೂತ್ರಗಳನ್ನು ರಚಿಸಿದ್ದಾರೆ. ಆದರೆ ಮನ ಶಿವಪುರಾಣ ಸಂಗ್ರಹ ಮಾಡಿಕೊಂಡು, ಕಥೆ ಹೇಳುವ ಮೂಲಕ ಪುರಾಣಿಕನಾಗುತ್ತದೆ ಹೊರತು ಜ್ಞಾನಿಯಾಗುವುದಿಲ್ಲ. ಇದು ಮನ ಮತ್ತು ತನುವಿನ ದುರ್ದೈವ.

ಮೋಳಿಗೆ ಮಾರಯ್ಯ : ಕಿವಿಯಿಂದ ಕಾಯ ಹೇಗೆ ವಿಕಾರಗೊಳ್ಳುತ್ತದೆ ಎಂಬುದನ್ನು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಕಿವಿಯಲ್ಲಿ ಮತ್ತೆರಡು ಕಿವಿಗಳಿವೆ. ಒಂದು ಮನೋಮಯವಾದ ಅಜ್ಞಾನದ ಕಿವಿ; ಮತ್ತೊಂದು ಅರಿವಿನ ಕಿವಿ. ಶಬ್ದದಲ್ಲಿ ಅರಿವಿದೆ ಎನ್ನುವುದು ಅಜ್ಞಾನದ ಕಿವಿಗೆ ಗೊತ್ತಾಗುವುದಿಲ್ಲ. ಯಾರಾದರೂ ತನಗೆ ಕತ್ತೆ ಎಂದರೆ ಸಾಕು ಅದನ್ನು ಕೇಳಿದ ಅಜ್ಞಾನದ ಕಿವಿ, ಇಡೀ ಕಾಯದಲ್ಲಿ ಅಜ್ಞಾನದ ಧಾತುವನ್ನು ಚೆಲ್ಲಿ ಕಾಯವನ್ನು ವಿಕಾರಗೊಳಿಸುತ್ತದೆ. ಇಡೀ ಕಾಯದಲ್ಲಿ ಅಗ್ನಿ ಪ್ರವೇಶವಾಗಿ ನುಡಿದ ಕಾಯದೊಂದಿಗೆ ಯುದ್ಧ ಮಾಡುತ್ತದೆ. ಈ ಯುದ್ಧ ಅಂದೇ ಶಮನವಾಗುವುದಿಲ್ಲ; ಅವನು ನಿನ್ನನ್ನು ಕತ್ತೆ ಅಂದನಲ್ಲ ಎಂದು ಮನ, ಕಾಯಕ್ಕೆ ಕಾಯ ಇರುವವರೆಗೆ ಮತ್ತೆ ಮತ್ತೆ ನೆನಪು ಮಾಡಿ ಕಾಯವನ್ನು ಕೊಲ್ಲುತ್ತದೆ.

ಶಾಂತರಸ : ಆಗ ಅರಿವಿನ ಕಿವಿ ಏನು ಹೇಳುತ್ತದೆ ಬಸವಣ್ಣ?

ಬಸವಣ್ಣ : ಅವನು ಹಾಗಂದರೇನಾಯಿತು; ನೀನು ಕತ್ತೆಯಲ್ಲ ಎನ್ನುವುದು ನಿನಗೆ ಗೊತ್ತಿಲ್ಲವೆ? ಎಂದು ಗುರುದೇವ ವಾಸ ಮಾಡಿದ ಕಿವಿ ಬೋಧೆ ಮಾಡಿದರು ಕೂಡಾ ಮನೋಮಯವಾದ ಕಿವಿ, ಗುರು ದೇವನನ್ನು ದೂರ ತಳ್ಳಿ, ತಾನು ಕೇಳಿದ್ದನ್ನೆ ಕಾಯಕ್ಕೆ ಮತ್ತೆ ಮತ್ತೆ ನೆನಪು ಮಾಡಿ, ಕಾಯ ಇರುವವರೆಗೆ, ಕಾಯವನ್ನು ವಿಕಾರಗೊಳಿಸುತ್ತದೆ.

ಮೇದಾರ ಕೇತಯ್ಯ : ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಪ್ರತಿ ಶಬ್ದದಲ್ಲಿ ಅರಿವಿದ್ದರೂ ಕೂಡಾ, ಮನ ಮರೆವಿನಿಂದ ಶಬ್ದ ಕೇಳಿದ ತಪ್ಪಿಗಾಗಿ, ಗುರುದೇವ ಕಾಯ ಇರುವವರೆಗೆ, ಕಾಯಕ್ಕೆ ಅರಿವು ಆಗುವವರೆಗೆ, ಶಬ್ದ ಕೇಳಿದ ಕಾಯಕ್ಕೆ ಹಾಗೂ ಶಬ್ದ ನುಡಿದ ಕಾಯಕ್ಕೆ ಶಿಕ್ಷೆ ಕೊಡುತ್ತಾನೆ.

ಮೆರೆಮಿಂಡಯ್ಯ : ಅದು ಹೇಗೆ ಬಸವರಸ? ನಮಗೆ ತಿಳಿಯುವಂತೆ ವಿವರಿಸಿ ಹೇಳಿ.

ಬಸವಣ್ಣ : ನಿಃಶಬ್ದಂ ಬ್ರಹ್ಮಮುಚ್ಚತೆ ಎಂದು ಪುರಾತನರು ಶಬ್ದದ ಬಗ್ಗೆ ವ್ಯಾಖ್ಯಾನಿಸಿದ್ದಾರೆ. ಪ್ರತಿ ಶಬ್ದದಲ್ಲಿ ಬ್ರಹ್ಮ ಬಚ್ಚಿಟ್ಟುಕೊಂಡಿದ್ದಾನೆ. ಶಬ್ದ ಭ್ರಮೆಯಿಂದ ಕೇಳಿದ ಕಾಯಕ್ಕೆ ಹೀಗೆ ನುಡಿದನಲ್ಲಾ ಎಂದು ಕಾಯ ಇರುವವರೆಗೂ, ಕೇಳಿದ ಶಬ್ದ ಕಾಯಕ್ಕೆ ಗಾಯ ಮಾಡುತ್ತಲೆ ಇರುತ್ತದೆ. ಹಾಗೆಯೇ ನುಡಿದ ಕಾಯಕ್ಕೆ ಹೀಗೆ ನುಡಿಯಬಾರದಿತ್ತು ಎಂದು ನುಡಿದ ಕಾಯಕ್ಕೂ ಕಾಯ ಇರುವವರೆಗೂ ಶಬ್ದ ಗಾಯ ಮಾಡುತ್ತಲೇ ಇರುತ್ತದೆ.

ಶಬ್ದ ಅರಿವಿನಿಂದ ಕೇಳಿದರೆ ನಪುಂಸಕವಾಗುತ್ತದೆ. ಅದು ನಿಃಶಬ್ದವಾಗುತ್ತದೆ. ಕೇಳಿದ ಕಾಯಕ್ಕೆ ಗಾಯ ಮಾಡುವುದಿಲ್ಲ. ಶಬ್ದ ರಬಸದಿಂದ ನುಡಿದ ಕಾಯಕ್ಕೆ ಗಾಯ ಮಾಡದೆ ಬಿಡುವುದಿಲ್ಲ.

ಮಾದಾರ ಧೂಳಯ್ಯ : ಬಸವರಸ ತಾವು 'ವಚನದಲ್ಲಿ ನಾಮಾಮೃತ ತುಂಬಿ' ಎಂದು ಬರೆದಿರುವಿರಲ್ಲ ಈ ಸೂತ್ರ ಕೂಡಾ ಇದಕ್ಕೆ ಹೋಲುತ್ತದೆಯೇ?

ಬಸವಣ್ಣ : ಹೌದು ಶರಣರೆ, ತಾವು ಸರಿಯಾಗಿಯೇ ಊಹಿಸಿರುವಿರಿ. ನಿಮ್ಮ ಮಾತು ಕೇಳಿ ನಾನು ಧನ್ಯನಾದೆ.

ಮಾದಾರ ಧೂಳಯ್ಯ : ನಾನು ಅಲ್ಪ. ಅಷ್ಟು ದೊಡ್ಡ ಮಾತು ಹೇಳಬೇಡಿ ನನ್ನೊಡೆಯಾ.

ಬಸವಣ್ಣ : ಕಾಯ ದೊಡ್ಡದಲ್ಲ ಶರಣರೆ, ಅದು ಸಣ್ಣದೂ ಅಲ್ಲ. ಪ್ರತಿ ಕಾಯದಲ್ಲಿ ಅರಿವು ಎನ್ನುವ ಸಂಗಮನಾಥ ವಾಸ ಮಾಡಿದ್ದಾನೆ. ಆತ ದೊಡ್ಡವನು! ಆತ ಮಾತ್ರ ಹಿರಿಯ! ನಾನು ಕಿರಿಯ! ಆತನಿಂದ ಹೊರಬರುವ ನುಡಿಯಲ್ಲಿ ಆತನೇ ಇದ್ದಾನೆ. ಕಾಯ ಮತ್ತು ಮನ ಆತ ಇದ್ದ ನುಡಿಯನ್ನು ಭ್ರಮೆಯಿಂದ ನುಡಿದರೆ, ನುಡಿದ ಕಾಯವನ್ನು ಮೊದಲು ಸುಡುತ್ತಾನೆ. ಭ್ರಮೆಯಿಂದ ಕೇಳಿದರೆ ಕೇಳಿದ

ಕಾಯವನ್ನು ನಂತರ ಸುಡುತ್ತಾನೆ. ಎರಡೂ ಕಾಯಗಳಿಗೂ ಶಬ್ದ ಅರಿವು ಆಗುವವರೆಗೆ ನಿರಂತರ ನೆನಪು ಮಾಡಿ ಮಾಡಿ ಸುಡುತ್ತಲೇ ಇರುತ್ತಾನೆ.

ಭಿಕಾರಿ ಭೀಮಯ್ಯ : ಹೀಗೆ ಶಬ್ದ ನುಡಿದು ಸರ್ವನಾಶವಾದ ಕಾಯಗಳು ಇವೆಯೇ ಬಸವರಸ?

ಬಸವಣ್ಣ: ಭೀಮಯ್ಯ ಶರಣರು ಸುಂದರವಾದ ಪ್ರಶ್ನೆ ಕೇಳಿದ್ದಾರೆ. ಸಕಲ ಶರಣರು ಸರಿಯಾಗಿ ಆಲಿಸಿ.

ರಾಮ ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕು; ನನ್ನ ಮಗ ಭರತ ಪಟ್ಟಕ್ಕೆ ಕೂಡಬೇಕು ಎಂದು ಎರಡು ಮಾತುಗಳ ಬೇಡಿಕೆಯನ್ನು; ಕೈಕೇಯಿ, ರಾಜ ದಶರಥನ ಮುಂದೆ ಇಟ್ಟಾಗ, ದಶರಥನಿಗೆ ಸಹಿಸಿಕೊಳ್ಳದ ನೋವಾಯಿತು. ಕೈಕೇಯಿಗೆ ಸಂತೋಷವಾಯಿತು. ರಾಮ ತಾಯಿಯ ಮಾತು ಪ್ರಸಾದವೆಂದು ಸ್ವೀಕರಿಸಿ, ಕಾಡಿಗೆ ಹೋದಾಗ, ಇಡೀ ರಾಜ್ಯಕ್ಕೆ ದುಃಖವಾಯಿತು. ದಶರಥ ಸತ್ತು ಹೋದ. ಭರತ ಪಟ್ಟಕ್ಕೆ ಕೂಡಲಿಲ್ಲ. ಸುಖ ಪಡಬೇಕಾದ ಕೈಕೇಯಿ ಹೀಗೆ ಮಾತನಾಡಬಾರದಿತ್ತು ಎಂದು ದುಃಖಸಾಗರದಲ್ಲಿ ಮುಳುಗಿ ಕಾಯ ಇರುವವರೆಗೆ ಕತ್ತಲ ಕೋಣೆಯಲ್ಲಿದ್ದು ಸತ್ತು ಹೋದಳು.

ಮಡಿವಾಳನ ಮಾತು, ಶ್ರೀರಾಮ ಭ್ರಮೆಯಿಂದ ಕೇಳಿದ ತಪ್ಪಿಗಾಗಿ ಸೀತಾಮಾತೆಯನ್ನು ಕಾಡಿಗೆ ಅಟ್ಟಿದ. ದುಃಖ ಸಾಗರದಲ್ಲಿ ಮುಳುಗಿದ. ಸೀತಾ ರಾಮರಿಬ್ಬರೂ ದುಃಖದಿಂದ ಮೇಲೆ ಏಳಲೇ ಇಲ್ಲ. ಶಬ್ದದ ಬ್ರಹ್ಮಾಸ್ತ್ರವನ್ನು ಭ್ರಮೆಯಿಂದ ರಾಮ ಬಿಟ್ಟರೇನು ಅದನ್ನು ಸೀತೆ ಸ್ವೀಕರಿಸಿದರೇನು?

ಸ್ವತಃ ಬ್ರಹ್ಮ ಬಚ್ಚಿಟ್ಟುಕೊಂಡ ಶಬ್ದವನ್ನು ಭ್ರಮೆಯಿಂದ ನುಡಿದ ಕೈಕೇಯಿ, ಕೇಳಿದ ದಶರಥ, ಆಲಿಸಿದ ರಾಮ, ನುಡಿದ ಮಡಿವಾಳ, ದುಃಖದಿಂದ ಬಳಲಿ ಬಳಲಿ, ಸತ್ತು ಹೋದರು. ವಾಲ್ಮೀಖಿ ಮಹರ್ಷಿಗಳು ಮಹಾಜ್ಞಾನಿಗಳು; ಜಾಣರ ಜಾಣರು! ಶಬ್ದ ಬ್ರಹ್ಮನನ್ನು ನಿಃಶಬ್ದಗೊಳಿಸಿ ಅರಿವಿನಿಂದ ಕೇಳಲು ತಾವು ಚಿತ್ರಿಸಿದ ಮಹನೀಯರಿಗೂ ಸಾಧ್ಯವಾಗಲಿಲ್ಲ ಎಂಬ ರಹಸ್ಯವನ್ನು ಇಡೀ ರಾಮಾಯಣದಲ್ಲಿ ಬಚ್ಚಿಟ್ಟಿದ್ದಾರೆ.

ಸತ್ಯಕ್ಕ : ಸುಗಂಧ ದುರ್ಗಂಧದ ವಿಚಾರ ಹೇಳಿ ಬಸವರಸ.

ಬಸವಣ್ಣ : ಸಕಲ ಕಾಯಗಳಲ್ಲಿರುವ ಮೂಗಿಗೆ ಸುಗಂಧ ಮತ್ತು ದುರ್ಗಂಧ ಮಾತ್ರ ಗೊತ್ತು . ಇವೆರಡರಲ್ಲಿ ಬಚ್ಚಿಟ್ಟುಕೊಂಡ ಪರಿಮಳದ ಪರಿಚಯ ಮೂಗಿಗೆ ಗೊತ್ತಿಲ್ಲ. ಮೂಗಿನಲ್ಲಿಯೇ ಇರುವ ಅರಿವಿನ ಮೂಗಿಗೆ ಗೊತ್ತಿದೆ.

ಬಾಲಸಂಗಣ್ಣ : ಅದು ಹೇಗೆ ಬಸವರಸ?

ಬಸವಣ್ಣ: ಪದಾರ್ಥದ ಸತ್ಯ ಸುಗಂಧವೂ ಅಲ್ಲ, ದುರ್ಗಂಧವೂ ಅಲ್ಲ. ಅದು ಪರಿಮಳವನ್ನು ಸೂಸುತ್ತದೆ. ಜಲ ಹರಿದು, ಮಲ್ಲಿಗೆ ಜಾಜಿ ಬಕುಳ

ಚಂಪಕ ನಾನಾ ಪುಷ್ಪಗಳು ಅರಳುತ್ತವೆ. ಅವು ಸುಗಂಧ ಬೀರುತ್ತವೆ. ಕೊಳೆತಾಗ ದುರ್ಗಂಧ ಬೀರತ್ತವೆ. ಇವುಗಳ ಮೂಲ ಜಲ. ಇದಕ್ಕೆ ವಾಸನೆಯಿಲ್ಲ, ಬಣ್ಣವಿಲ್ಲ. ಮೂಗಿನಲ್ಲಿಯೇ ಬಚ್ಚಿಟ್ಟುಕೊಂಡ ಅರಿವಿನ ಮೂಗಿಗೆ ಜಲದ ಪರಿಚಯವಿದೆ. ಮೂಗಿಗೆ ಜಲದಿಂದ ಉತ್ಪನ್ನವಾದ ಸುಗಂಧ ದುರ್ಗಂಧದ ಪರಿಚಯವಿದೆ. ಮೂಗಿಗೆ ವಸ್ತುವಿನ ಸತ್ಯ ಪರಿಚಯವಾದರೆ, ಜ್ಞಾನದ ಧಾತುವನ್ನು ಚೆಲ್ಲಿ ಕಾಯವನ್ನು ವಿಕಾರಗೊಳಿಸುವುದಿಲ್ಲ. ಮೂಗು, ಮೂಗಿನಲ್ಲಿಯೇ ಇರುವ ಅರಿವಿನ ಮೂಗಿಗೆ ಶರಣು ಹೋಗಬೇಕು.

ಪಂಡಿತಾರಾಧ್ಯ: ಧನ್ಯರಾದೆವು ಬಸವಣ್ಣ. ನಾಲಿಗೆಯ ಪರಿಚಯ ಮಾಡಿಸಿ.

ಬಸವಣ್ಣ: ಈ ಹಿಂದೆ ನಾಲಿಗೆ ಮತ್ತು ಚರ್ಮದ ವಿಷಯವನ್ನು ಪ್ರಸ್ತಾಪಿಸಲಾಗಿದೆ. ರುಚಿಸುವ ವಸ್ತುವಿನ ಜಲಕ್ಕೆ ರುಚಿ ಇಲ್ಲ ಎನ್ನುವುದು ನಾಲಿಗೆಯೊಳಗೆ ಇದ್ದ ನಾಲಿಗೆಗೆ ಗೊತ್ತಿದೆ. ಹೀಗಾಗಿ ಐದಾರು ತುತ್ತುಗಳನ್ನು ನಾಲಿಗೆ ರುಚಿಸಿದ ನಂತರ ಪದಾರ್ಥದಲ್ಲಿರುವ ರುಚಿ ಕಳೆದು ಹೋಗುತ್ತದೆ. ತನುವಿನಲ್ಲಿದ್ದ ಸಕಲ ಜಲರಾಶಿ ನಾಲಿಗೆಯ ತುದಿಗೆ ಬಂದು ಪದಾರ್ಥವನ್ನು ತನ್ನಂತೆ ಮಾಡಿಕೊಳ್ಳುತ್ತದೆ.

ನಾಲಿಗೆಯನ್ನು ಆವರಿಸಿದ ಮನ, ಮೊದಲ ತುತ್ತನ್ನು ಸ್ವೀಕರಿಸಿ ಕಾಯದಲ್ಲಿ ರುಚಿ-ಅರುಚಿಯ ಧಾತು ಚೆಲ್ಲುತ್ತದೆ. ಹೀಗಾಗಿ ಕಾಯ ವಿಕಾರಗೊಳ್ಳುತ್ತದೆ.

ಸೂಳೆಸಂಕವ್ವೆ: ರುಚಿಯಾದರು ಕೂಡಾ ಕಾಯ ವಿಕಾರಗೊಳ್ಳುತ್ತದೆಯೆ ಬಸವರಸ?

ಬಸವಣ್ಣ: ಹೌದು ತಾಯಿ. ರುಚಿ-ಅರುಚಿ ಎನ್ನುವುದು ಮನದ ಅಜ್ಞಾನ. ಪದಾರ್ಥದ ಸತ್ಯ ರುಚಿಯೂ ಅಲ್ಲ ಅರುಚಿಯೂ ಅಲ್ಲ; ಅದು ಜಲ! ಜಲದಿಂದ ಗಟ್ಟಿಗೊಂಡ ಪದಾರ್ಥ ಜಲದಲ್ಲಿ ಬೆರೆತು ಜಲವಾಗಲು ಸ್ವಲ್ಪ ಸಮಯ ಬೇಕು ಅಷ್ಟೆ.

ಬೊಂತಾದೇವಿ: ಧನ್ಯರಾದೆವು ಬಸವರಸ. ಚರ್ಮದ ಬಗ್ಗೆ ಹೇಳಿ.

ಬಸವಣ್ಣ: ಚರ್ಮದಲ್ಲಿ ಅರಿವಿನ ಚರ್ಮ ಬಚ್ಚಿಟ್ಟುಕೊಂಡ ವಿಷಯ ಹಿಂದೆ ಪ್ರಸ್ತಾಪಿಸಲಾಗಿದೆ. ಬಲಗೈ ಚರ್ಮದ ಮೂಲಕ ದೇಹದ ಯಾವ ಭಾಗ ಮುಟ್ಟಿಕೊಂಡರೂ ಕೂಡಾ ಏನೂ ಆಗುವುದಿಲ್ಲ. ಏಕೆಂದರೆ ಚರ್ಮ ಚರ್ಮವನ್ನು ಮುಟ್ಟುತ್ತಿದೆ ಎನ್ನುವುದು ಚರ್ಮಕ್ಕೆ ಗೊತ್ತಾಗುತ್ತದೆ. ದೇಹ ಮತ್ತೊಂದು ದೇಹವನ್ನು ಮುಟ್ಟಿದಾಗ, ತಾನು ಹೆಣ್ಣು ಎನ್ನುವ ಅಜ್ಞಾನದ ಧಾತುವನ್ನು ಚರ್ಮ ಹೊರಗೆ ಚೆಲ್ಲಿ, ಗಂಡು ಎನ್ನುವ ಅಜ್ಞಾನದ ಧಾತುವನ್ನು ಸ್ವೀಕರಿಸುತ್ತದೆ. ಹೀಗಾಗಿ ಕಾಯದಲ್ಲಿ ಕಾಮದ್ರವ್ಯ ಉಕ್ಕಿ ಕಾಯ ವಿಕಾರಗೊಳ್ಳುತ್ತದೆ.

ಬೊಂತಾದೇವಿ: ಇದು ಸತ್ಯ ಅಲ್ಲವೆ ಬಸವರಸ?

ಬಸವಣ್ಣ: ಚರ್ಮ ಹೆಣ್ಣು ಅಲ್ಲ; ಗಂಡು ಅಲ್ಲ. ಚರ್ಮವನ್ನು ಆವರಿಸಿದ ಮನ ಹೆಣ್ಣು ಗಂಡು ಎನ್ನುವ ಅಜ್ಞಾನದ ಧಾತುವನ್ನು ಕಾಯದೊಳಗೆ ಚೆಲ್ಲಿ , ಕಾಯವನ್ನು ವಿಕಾರಗೊಳಿಸುತ್ತದೆ.

ಬೊಂತಾದೇವಿ: ಜಗತ್ತಿನಲ್ಲಿರುವ ಸಕಲ ಕಾಯಗಳು ಜ್ಞಾನದ ಯಜ್ಞದಲ್ಲಿ ಪಾಲ್ಗೊಳ್ಳಲಿ ಎನ್ನುವ ಹಿರಿಯ ಆಸೆ ತಮ್ಮಲ್ಲಿ ಕಂಡು ನಮಗೆಲ್ಲ ಪರಮ ಸಂತೋಷವಾಗಿದೆ ಬಸವರಸ. ತಮಗೆ ಶರಣು.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಮುಂದುವರಿಸೋಣ ಎಂದು ಸಭೆಗೆ ಮಂಗಲ ಹಾಡಿದರು.

ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವರಸ ಎಂದು ಕೈ ಮುಗಿದು ತಮ್ಮ ತಮ್ಮ ಮನೆಗೆ ತೆರಳಿದರು.

□

೧೫

ಕತ್ತಲು ನಿಧಾನವಾಗಿ ಸೂರ್ಯನ ಬೆಳಕಿನ ಗರ್ಭದಲ್ಲಿ ಜಾರುತ್ತಲಿದೆ. ಶರಣರು ಮಹಾಮನೆಯತ್ತ ನಡೆಯುತ್ತಾ ಕತ್ತಲ ಬೆಳಕಿನ ಆಟವನ್ನು ಗಮನಿಸುತ್ತಿದ್ದಾರೆ. ವೇದಿಕೆಯ ಮೇಲೆ ಕುಳಿತ ಬಸವಣ್ಣನವರಿಗೆ ಶರಣು ಶರಣಾರ್ಥಿ ಎಂದು ತಲೆಬಾಗಿ ಕುಳಿತುಕೊಳ್ಳುತ್ತಾರೆ.

ಅಕ್ಕಮ್ಮ :

ಮುನಿದೆಯಾದಡೆ ಒಮ್ಮೆ ಜರಿದಡೆ ಸಾಲದೆ?
ಅಕಟಕಟಾ, ಮದನಂಗೆ ಮಾರುಗೊಡುವರೆ?
ಹಗೆಗೆ ಮಾರುಗೊಟ್ಟು ನಿನ್ನವರ ನೊಪ್ಪಿಸುವರೆ,
ಕೂಡಲಸಂಗಮದೇವಾ. ॥ 44 ॥

ತಮ್ಮ ಈ ವಚನದ ಬೆಡಗನ್ನು ಶರಣರಿಗೆ ತಿಳಿಯುವಂತೆ ಬಿಡಿಸಿ ಹೇಳಿ ತಂದೆ.

ಬಸವಣ್ಣ : ಆಗಲಿ ಅಕ್ಕ. ತಮಗೆ ತಿಳಿಯದ್ದು ಏನಿದೆ? ಶರಣರಿಗೆ ತಿಳಿಯಲಿ ಎಂದು ಪ್ರಶ್ನಿಸಿರುವಿರಿ.

ದೇಹದಲ್ಲಿರುವ ಅಜ್ಞಾನವನ್ನು ಯಾರೂ ಕಳೆಯಲು ಬರುವುದಿಲ್ಲ. ದೇಹದಲ್ಲಿಯೇ ಸಂಗಮವಾದ ಜ್ಞಾನವನ್ನು ಯಾವ ಗುರುಗಳಾಗಲಿ ಶಿಕ್ಷಣ ಸಂಸ್ಥೆಗಳಾಗಲಿ ವೃದ್ಧಿಸಲು ಬರುವುದಿಲ್ಲ.

ದೇಹದ ಅಜ್ಞಾನಕ್ಕೆ ಮನವೇ ಕಾರಣ. ದೇಹದ ಜ್ಞಾನಕ್ಕೆ ಕೂಡಾ ಮನವೇ ಕಾರಣ. ಮನದ ಅಜ್ಞಾನವನ್ನು ದೇಹದಲ್ಲಿಯೇ ಸಂಗಮವಾದ ಅರಿವೆಂಬ ಗುರುದೇವನೇ ಜರಿಯಬೇಕು. ಆತನೇ ಮುನಿಯಬೇಕು.

ಗುರುದೇವನೇ, ಮುನಿದೆಯಾದಡೆ ಮರ್ಕಟ ಮನವೆಂಬ ನನ್ನನ್ನು ಒಮ್ಮೆ ಜರಿದಡೆ ಸಾಲದೆ? ಅಕಟಕಟಾ ಸದಾ ವಿಷಯವೆಂಬ ಹಸುರು ತಿನ್ನುವ ಪಶು ನಾನು. ಈ ಪಶು ಸಮಾನವಾದ ಮದನಂಗೆ ಮಾರುಗೊಡುವರೆ? ಈ ಅಜ್ಞಾನಿ ಮನದ ಹಗೆತನಕ್ಕೆ ಮಾರುಗೊಡುವುದೆ?

ಗುರುದೇವನೆ ನೀನು ವಾಸ ಮಾಡಿದ ಕಾಯ ಕೈಲಾಸ! ಜಗದಲ್ಲಿ ಇರುವ ಸಕಲ ಕಾಯಗಳಲ್ಲಿಯೂ ನೀನೇ ವಾಸ ಮಾಡಿರುವಿ. ನೀನು ವಾಸ ಮಾಡಿದ ಸಕಲ ಕಾಯಗಳನ್ನು ಮನವೆಂಬ ರಕ್ಕಸನಿಗೆ ಒಪ್ಪಿಸಬಹುದೆ? ನೀನು ಒಮ್ಮೆ ಜರಿದು ಮುನಿದಡೆ ಮನದ ಭ್ರಾಂತಿ ತನುವಿನಲ್ಲಿ ತಳ ಊರಬಹುದೆ? ನಿನ್ನವರನ್ನು ಮನಕ್ಕೆ ಒಪ್ಪಿಸುವುದಕ್ಕಿಂತ ಮನವನ್ನು ಅಪ್ಪಿಕೊಂಡು ನಿನ್ನಂತೆ ಮಾಡಿಕೊ ಸಂಗಮನಾಥನೆ

ಎಂದು ಮನದಿಂದ ಮನವೇ ಟಿಸಿಲೊಡೆದು ಹೊರಗೆ ಬಂದು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನನ್ನು ತನು ಮನಗಳೆರಡೂ ಪ್ರಾರ್ಥಿಸಬೇಕು.

ಅಕ್ಕಮ್ಮ : ಅರಿವೆಂಬ ಗುರುದೇವನೊಂದಿಗೆ ತನು ಮತ್ತು ಮನಗಳೆರಡೂ ಕೂಡಿಕೊಂಡು ಹೃದಯಂಗಮವಾಗಿ ಸಂಭಾಷಣೆ ಮಾಡುವ ಮಹಾ ಸೂತ್ರವನ್ನು ಸಕಲ ಶರಣರಿಗೂ ಹೇಳಿಕೊಟ್ಟಿರಿ ಬಸವಣ್ಣ ನಿನಗೆ ಶರಣು.

ಬಸವಣ್ಣ : ಅಕ್ಕ, ನೀವು ನನಗೆ ಗುರುದೇವನಾಗಿ ಸಕಲ ಕಲೆಗಳನ್ನು ಕಲಿಸಿರುವಿರಿ. ನನಗೆ ಶರಣು ಎಂದು ಹೇಳುವುದು ಅಪಚಾರ ತಾಯಿ. ಸಕಲ ಶರಣರಿಗೆ ನಿನಗೆ ಶರಣು ಶರಣಾರ್ಥಿ.

ಗಾಣದ ಕಣ್ಣಪ್ಪ :

ಆನು ಒಬ್ಬನು, ಸುಡುವರೈವರು;
ಮೇಲೆ ಕಿಚ್ಚು ಘನ; ನಿಲಲು ಬಾರದು!
ಕಾಡಬಸವನ ಹುಲಿ ಕೊಂಡೊಯ್ವಡೆ
ಆರೈಯಲಾಗದೆ ಕೂಡಲಸಂಗಮದೇವಾ? ॥ 45 ॥

ಬಸವರಸ, ತಮ್ಮ ಈ ವಚನದ ಸೂತ್ರವನ್ನು ಶರಣರಿಗೆ ತಿಳಿಯುವಂತೆ ಬಿಡಿಸಿ ಹೇಳಿ ತಂದೆ.

ಬಸವಣ್ಣ : ನಾನು ಒಬ್ಬನೇ; ಆದರೂ ಸ್ವತಂತ್ರನಲ್ಲ. ನನ್ನೊಳಗೆ ಐವರು ಮನೆ ಮಾಡಿಕೊಂಡಿದ್ದಾರೆ. ನಾನು ಅವರಿಗೆ ಗುಲಾಮನಾಗಿದ್ದೇನೆ. ದೇಹ ನನ್ನದೇ, ಆದರೂ ನಾನು ಸ್ವತಂತ್ರನಲ್ಲ. ಕಣ್ಣೊಳಗೆ ಒಬ್ಬನಿದ್ದಾನೆ. ನನ್ನ ಕಣ್ಣ ಮೂಲಕ ಅವನು ನೋಡಿ ನನ್ನ ದೇಹದ ಮೂಲಕ ಮಾನಸಿಕ ಹಾದರ ಮಾಡುತ್ತಾನೆ. ಹತ್ತಿರ ಬಂದಾಗ ಅಕ್ಕ ತಂಗಿ ಸೊಸೆ ಎಂದು ಪುನಃ ನನ್ನ ಮೂಲಕ ಮುಖವಾಡ ಧರಿಸಿ ಮಾತನಾಡಿಸುತ್ತಾನೆ.

ಅವನು ನನ್ನ ಕಣ್ಣ ಮೂಲಕ ನೋಡಿದ್ದೇ ಬೇರೆ. ಪುನಃ ನನ್ನ ಬಾಯಿ ಮೂಲಕ ಅವನು ಮಾತನಾಡಿದ್ದೇ ಬೇರೆ. ಅವನು ನೋಡಿದಂತೆ ನಾನು ಮಾತನಾಡಿದರೆ ನನಗೆ ಪೆಟ್ಟು ಬೀಳುತ್ತದೆ. ಹೀಗಾಗಿ ಅವನೇ ನೋಡಿ ಅವನೇ ಮಾತನಾಡುತ್ತಾನೆ. ಅವನು ಮಾತನಾಡಿದಂತೆ ನನಗೆ ನೋಡಲು ಸಾಧ್ಯವಾಗುತ್ತಿಲ್ಲ. ಅವನು ನಾನಲ್ಲವೆಂದು ನನಗೆ ಗೊತ್ತಿದೆ. ಆದರೂ ಅವನ ಬಂಧನದಿಂದ ನನಗೆ ಬಿಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವನು ಹಚ್ಚಿದ ಕಿಚ್ಚು ನನ್ನನ್ನು ನಿಲ್ಲಲು ಬಾರದಂತೆ ಸುಡುತ್ತಲಿದೆ.

ನೀಲಮ್ಮ : ಅವನು ಯಾರು ಎನ್ನುವುದನ್ನು ಹೇಳಿ ಒಡೆಯಾ.

ಬಸವಣ್ಣ : ಅವನು ಯಾರು ಎನ್ನುವುದು ನಿನಗೆ ತಿಳಿದಿಲ್ಲವೆ? ಆದರೂ ಶರಣರಿಗಾಗಿ ಕೇಳುತ್ತಿರುವೆ. ಅವನು ಬೇರಾರೂ ಅಲ್ಲ; ಮನವೆಂಬ ಮಾಯೆ. ಅವನು ಕಣ್ಣಲ್ಲಿ ತನ್ನದೇ ಆದ ಸುಳ್ಳು ದೃಶ್ಯದ ಸಾಮ್ರಾಜ್ಯವನ್ನು ಕಟ್ಟಿಕೊಂಡಿದ್ದಾನೆ. ಹಾಗೆಯೇ

ಕಿವಿ ಮೂಗು ನಾಲಿಗೆ ಚರ್ಮದಲ್ಲಿ ಕೂಡಾ ತನ್ನ ಸಾಮ್ರಾಜ್ಯ ಕಟ್ಟಿಕೊಂಡು, ತಾನು ಕೇಳುವ ಮೂಲಕ, ತಾನು ಮೂಸಿಸುವ ಮೂಲಕ, ತಾನು ರುಚಿಸುವ ಮೂಲಕ, ತಾನು ಸ್ಪರ್ಶಿಸುವ ಮೂಲಕ ತನುವಿಗೆ ಕಿಚ್ಚು ಹಚ್ಚಿ ಕತಕತನೆ ಕುದಿಯುವಂತೆ ಮಾಡುತ್ತಾನೆ.

ಬೋಂತಾದೇವಿ: ಬೇರೆ ಉಪಾಯವಿಲ್ಲವೇ ಬಸವರಸ?

ಬಸವಣ್ಣ: ತನು ಕಾಡ ಬಸವನಾಗಿದೆ; ಮನವೆಂಬ ಮಾಯೆ ಹುಲಿಯಾಗಿ ತನುವನ್ನು ಕಚ್ಚಿ ಕಚ್ಚಿ ತಿನ್ನುತ್ತಲಿದೆ. ತನು, ತನುವಿನಲ್ಲಿಯೇ ತನ್ಮಯವಾದ ಅರಿವಿನ ಸಂಗಯ್ಯನಿಗೆ ಮೊರೆಯಿಡಬೇಕು. ಕಾಡಬಸವನ ಹುಲಿ ಕೊಂಡೊಯ್ವಡೆ ಆರೈಯಲಾಗದೆ ಕೂಡಲಸಂಗಮದೇವಾ. ನನ್ನನ್ನು ರಕ್ಷಣೆ ಮಾಡು ತಂದೆ ಎಂದು ಸೆರಗೊಡ್ಡಿ ಬೇಡಬೇಕು.

ಸತ್ಯಕ್ಕ: ಶರಣು ಶರಣಾರ್ಥಿ ಬಸವಣ್ಣ. ಮನುಕುಲ ಪಾವನವಾಗಲು ಎಂತಹ ಅದ್ಭುತವಾದ ಸೂತ್ರವನ್ನು ಅದರ ರಹಸ್ಯವನ್ನು ತೊಳೆ ತೊಳೆಯಾಗಿ ಬಿಚ್ಚಿ ಹೇಳಿದಿರಿ. ಸಕಲ ಶರಣರು ಪುಳಕಿತಗೊಂಡು ಮಂತ್ರ ಮುಗ್ಧರಾಗಿದ್ದಾರೆ. ತಮಗೆ ಶರಣು.

ಕಲಕೇತಯ್ಯ :

ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ , ಮಿಥ್ಯೆ
ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ.
ಅದೇಕೆಂದಡೆ:
ನಿಮ್ಮತ್ತಲೆನ್ನ ಬರಲೀಯವು.
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ. ॥ 46 ॥

ಬಸವರಸ, ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ಬಿಡಿಸಿ ಹೇಳಿ ತಂದೆ.

ಬಸವಣ್ಣ : ಕಣ್ಣು ಕಿವಿ ಮೂಗು ನಾಲಿಗೆ ಚರ್ಮದಲ್ಲಿ ಮನವೆಂಬ ಮಾಯೆ ಮುಸುಕಿರುವುದರಿಂದ ಅವು ಭವಿಯಾಗಿ ಆಸೆ, ಆಮಿಷಕ್ಕೆ ಒಳಗಾಗಿವೆ. ತಾಮಸ, ಹುಸಿ ವಿಷಯಕ್ಕೆ ಒಳಗಾಗಿವೆ. ಕುಟಿಲ, ಕ್ರೋಧ, ಕುಹಕಕ್ಕೆ ಒಳಗಾಗಿವೆ. ಕ್ಷುದ್ರ , ಮಿಥ್ಯೆಗೆ ಒಳಗಾಗಿ ಮನವೆಂಬ ಮಾಯೆ ತನ್ನ ಸುಖಕ್ಕಾಗಿ ತನುವನ್ನು ಬಳಕೆ ಮಾಡಿಕೊಳ್ಳುತ್ತದೆ. ತಾನು ಸುಖಿಸಿ ಅದರ ಎಂಜಲವನ್ನು ತನುವಿನ ಮುಖಕ್ಕೆ ಸವರಿ ತನುವನ್ನು ಅಪರಾಧಿಯನ್ನಾಗಿ ನಿಲ್ಲಿಸುತ್ತದೆ.

ಕಿನ್ನರಿಬ್ರಹ್ಮಯ್ಯ : ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಪಂಚೇಂದ್ರಿಯಗಳಲ್ಲಿ ಮನವೆಂಬ ಮಾಯೆ ಇದೆ. ಅಲ್ಲಿ ನಾನೂ ಇದ್ದೇನೆ. ಹಾಗೆಯೇ ಅರಿವೆಂಬ ಗುರುದೇವನಾದ ನೀನು ಕೂಡಾ ಅಲ್ಲಿಯೇ ಇರುವಿ!

ಮನವೆಂಬ ಮಾಯೆ ನನ್ನನ್ನು ನಿಮ್ಮತ್ತ ಬರಲೀಯದು. ನನ್ನನ್ನು ಗುಲಾಮನನ್ನಾಗಿಸಿಕೊಂಡಿದೆ. ಇವೆಲ್ಲವನ್ನು ಕಳೆದು ಪಂಚೈವರನ್ನು ನಿನ್ನ ಭಕ್ತರನ್ನಾಗಿ ಮಾಡು ತಂದೆ ಎಂದು ಗುರುದೇವನನ್ನು ತನು ಬೇಡಲೇಬೇಕು.

ಸದಾ ತನುವಿನೊಂದಿಗೆ ಭೌತಿಕ ಸುಖ ಉಣ್ಣಲು ಉತ್ಸುಕವಾದ ಮನವೆಂಬ ಮಾಯೆ; ಒಮ್ಮೆ ತನುವಿನಲ್ಲಿಯೇ ತನ್ಮಯವಾದ, ಅರಿವೆಂಬ ಗುರುದೇವನ ಆಂತರಿಕ ಸುಖ ಉಣ್ಣಲು ಆಸೆ ಮಾಡಿದರೆ ಸಾಕು, ತನು ಮತ್ತು ಮನವನ್ನು ಗುರುದೇವ ತನ್ನಂತೆ ಮಾಡಿಕೊಳ್ಳುತ್ತಾನೆ.

ಕಿನ್ನರಿಬ್ರಹ್ಮಯ್ಯ : ತಮ್ಮ ಈ ವಚನದ ಬೆಡಗನ್ನು ತಿಳಿಹೇಳಿದ ತಮಗೆ ಶರಣು ಶರಣಾರ್ಥಿ.

ಕಾಳಿಂಗದೇವ:

ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯಾ ?
ಎಂತು ಶಿವಾಚಾರವೆನಗೆ ವೇದ್ಯವಪ್ಪುದಯ್ಯಾ ?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಿಂದ ಕಟ್ಟುವಡೆದೆನು.
ಹಸಿವು, ತೃಷೆ, ವ್ಯಸನದಿಂದ ಕುಸಿಯುತ್ತಿದ್ದೇನೆ.
ಪಂಚೇಂದ್ರಿಯ, ಸಪ್ತಧಾತು
ಹರಿಹಂಚ ಮಾಡಿ ಕಾದಿಹವಯ್ಯಾ !
ಅಯ್ಯಾ , ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ !
ಕೂಡಲಸಂಗಮದೇವಾ ನಾನೇವೆನೇವೆನಯ್ಯಾ ! ॥ 47 ॥

ಬಸವರಸ, ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ತಿಳಿಸಿ ಹೇಳಿ ತಂದೆ.

ಬಸವಣ್ಣ: ಎಂತು ಶಿವಾಚಾರವು ಎನಗೆ ವೇದ್ಯವಪ್ಪುದಯ್ಯಾ ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಒಡಲಲ್ಲಿ ಹುಟ್ಟಿ , ಒಡಲನ್ನು ಕತಕತನೆ ಕುದಿಯುವಂತೆ ಮಾಡಿವೆ. ಹೀಗೆ ಕ್ಷಣ ಕ್ಷಣಕ್ಕೂ ಕುದಿಯುವ ಒಡಲ ಮೂಲಕ; ಮನ ಶಿವಾಲಯ ನಿರ್ಮಾಣ ಮಾಡಿ, ಆಲಯದಲ್ಲಿದ್ದ ಶಿವನಿಗೆ ಭಕ್ತಿ ಮಾಡಿದರೆ; ಕಾಮ ಕ್ರೋಧದಿಂದ ಕುದಿಯುತ್ತಿರುವ ಒಡಲು ಶಾಂತಗೊಳ್ಳುವುದೆ? ಬದಲಾಗಿ ಆಲಯಕ್ಕೆ ಬಂದ ಒಡಲನ್ನೇ, ಕಾಮದಿಂದ ನೋಡಿ, ಪುನಃ ಹಾದರಕ್ಕೆ ಒಳಗಾಗುವುದು. ಭಕ್ತಿ ಮಾಡಲು ಆಲಯಕ್ಕೆ ಹೋದ ಒಡಲುಗಳನ್ನು, ಒಡಲಿಂದಲೇ ಮಾಡಿದ ಶಿಲೆಯ ಶಿವ, ಒಡಲನ್ನು ರಕ್ಷಣೆ ಮಾಡುವುದಿಲ್ಲ.

ದುಗ್ಗಳೆ : ಯಾರಿಗೆ ಭಕ್ತಿ ಮಾಡಿದರೆ ಒಡಲಲ್ಲಿ ಉಂಟಾದ ಅರಿಷಡ್ವರ್ಗಗಳು ತೊಲಗುವವು ಬಸವರಸ?

ಬಸವಣ್ಣ : ಪ್ರತಿ ಒಡಲಲ್ಲಿ ಅರಿವು ಎನ್ನುವ ಗುರುದೇವನಿದ್ದಾನೆ. ಆ ಗುರುದೇವನನ್ನು ಪುರಾತನರು ಸದಾಶಿವನೆಂದು ಕರೆದಿದ್ದಾರೆ. ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮನೂ ಆಗಿದ್ದಾನೆ. ಈತ ಪ್ರತಿ ಒಡಲುಗಳ ಒಡೆಯ! ಒಡಲನ್ನು ಆವರಿಸಿದ ಮನ, ಒಡಲಲ್ಲಿಯೇ ವಾಸಮಾಡಿದ ಸದಾಶಿವನಿಗೆ ಹಣೆ ಮಣಿದು, ಭಕ್ತಿ ಮಾಡಿ ಭಕ್ತನಾಗಬೇಕು. ಇದು ಸಾಕ್ಷಾತ್ ಶಿವನನ್ನು ಆರಾಧನೆ ಮಾಡುವ ಆಚಾರ; ಶಿವಾಚಾರ!

ದುಗ್ಗಳೆ : ಆಲಯದಲ್ಲಿರುವ ಶಿವನಿಗೆ ಭಕ್ತಿ ಮಾಡುವುದು ತಪ್ಪೆ?

ಬಸವಣ್ಣ: ಶಿವ ಅನ್ನುವವನು ಆಲಯದಲ್ಲಿ ಇಲ್ಲ; ಹಾಗೆಯೇ ಕೈಲಾಸದಲ್ಲಿಯೂ ಇಲ್ಲ. ಪ್ರತಿ ಕಾಯದಲ್ಲಿಯೂ ಇದ್ದಾನೆ. ಶಿವ ಅಂದರೆ ಪ್ರತಿ ಕಾಯದಲ್ಲಿರುವ ಅರಿವು, ಆ ಶಿವ ಒಡಲಲ್ಲಿಯೇ ಇದ್ದು ಒಡಲಿಗೆ, ಒಡಲನ್ನು ಆವರಿಸಿದ ಮನಕ್ಕೆ ಪಾಠ ಮಾಡುತ್ತಾನೆ.

ಸತ್ಯಕ್ಕ : ಉದಾಹರಿಸಿ ಹೇಳಿ ಬಸವರಸ.

ಬಸವಣ್ಣ : ಅರಿವು ಎನ್ನುವ ಗುರುದೇವನ ಬೆಳಕಿನಿಂದ; ಮನವೆಂಬ ಕತ್ತಲು ಒಡಲಲ್ಲಿಯೇ ಹುಟ್ಟಿಕೊಂಡಿದೆ. ಮನವೆಂಬ ಕತ್ತಲಿಗೆ, ಅರಿವು ಎಂಬ ಗುರುದೇವನಿಗೆ ಒಡಲು ಉಪಕರಣವಾಗಿದೆ. ಪ್ರತಿ ಒಡಲು, ಒಡಲನ್ನು ಆವರಿಸಿದ ಮನದ ಮಾತು ಕೇಳುವುದರಿಂದ, ಮನ, ಒಡಲಲ್ಲಿಯೇ ಇದ್ದ ಅರಿವು ಎನ್ನುವ ಗುರುದೇವನನ್ನು ಪಕ್ಕಕ್ಕೆ ತಳ್ಳಿದೆ. ತನಗೆ ಬೇಕಾದ ದೇವರನ್ನು ಮನ ಒಡಲ ಮೂಲಕ ಮಣ್ಣು, ಕಲ್ಲು, ಕಟ್ಟಿಗೆ, ಲೋಹದಿಂದ ನಿರ್ಮಾಣ ಮಾಡಿದೆ. ಒಡಲಿಗೆ ಭಕ್ತಿ ಮಾಡಲು ಹಚ್ಚಿದೆ. ಹೀಗೆ ಮನ, ಪ್ರತಿ ಒಡಲಲ್ಲಿ ಸುಳ್ಳು ಭಕ್ತಿ ನಿರ್ಮಾಣ ಮಾಡಿದೆ. ಮನ, ಒಡಲಿನೊಂದಿಗೆ ಮಾಡುವ ಭಕ್ತಿಯೇ ಭಕ್ತಿಯೆಂದು ಸಕಲ ಒಡಲುಗಳು ನಿರ್ಣಯ ಮಾಡಿವೆ.

ಒಡಲಲ್ಲಿಯೇ ಇರುವ ಅರಿವಿನ ದೇವರನ್ನು ಹೊತ್ತುಕೊಂಡು, ದೇವರಿಗೆ ಹೋಗಿ ಒಡಲನ್ನು ಬಾಗಿಸುವ ಮನವನ್ನು ನೋಡಿ, ಒಡಲಲ್ಲಿಯೇ ಇದ್ದ ಒಡಲೊಡೆಯ ಗಹಗಹಿಸಿ ನಗುತ್ತಾನೆ.

ಸತ್ಯಕ್ಕ : ಇದಕ್ಕೆ ಪರಿಹಾರವಿಲ್ಲವೆ ಬಸವಣ್ಣ?

ಬಸವಣ್ಣ : ಕಾಯವನ್ನು ಆವರಿಸಿದ ಮನ, ಕಾಯದಲ್ಲಿ ಕಾಮವನ್ನು ಸೃಷ್ಟಿ ಮಾಡುತ್ತದೆ. ಅದು ತನಗೆ ಸಿಕ್ಕದಿದ್ದರೆ ಕ್ರೋಧವನ್ನು, ಸಿಕ್ಕರೆ ಲೋಭವನ್ನು, ಮೋಹವನ್ನು, ಮದವನ್ನು ಸೃಷ್ಟಿ ಮಾಡುತ್ತದೆ. ಮತ್ತೊಂದು ಸುಂದರವಾದ ಒಡಲನ್ನು ಕಂಡು ಮತ್ಸರ ಸೃಷ್ಟಿಮಾಡಿ, ಹಸಿವು ತೃಷೆ ವ್ಯಸನಗಳಿಂದ ಕಾಯವನ್ನು ಕುದಿಯುವಂತೆ ಮಾಡುತ್ತದೆ.

ಸತ್ಯಕ್ಕ : ಇದು ಒಡಲಲ್ಲಿರುವ ಮನದ ಪಾತ್ರವಾಯಿತು. ಇಲ್ಲಿ ಅರಿವು ಎನ್ನುವ ಗುರುದೇವನ ಪಾತ್ರವೇನು ಬಸವರಸ? ಆತನನ್ನು ಪೂಜಿಸುವುದಾದರೂ ಹೇಗೆ?

ಬಸವಣ್ಣ: ಒಡಲನ್ನು ಆವರಿಸಿದ ಮನ, ಒಡಲಲ್ಲಿಯೇ ಇರುವ ಅರಿವಿನ ಮೂಲಕ ಆಲಯವನ್ನು ನೋಡಿದರೆ ಸಾಕು; ಅದು ಕಲ್ಲು! ಅದರಲ್ಲಿ ಇರುವ ದೇವರು ಕೂಡಾ ಕಲ್ಲು! ಮನ ಅರಿವಿನಿಂದ ಕಾಯವನ್ನು ನೋಡಿದರೆ, ಅದು ತನ್ನಂತೆಯೇ ಇರುವ ಕಾಯ! ಆ ಕಾಯದಲ್ಲಿಯೂ ಅರಿವು ಎನ್ನುವ ಗುರುದೇವನಿದ್ದಾನೆ. ಆತನಿಗೆ ಭಕ್ತಿ ಮಾಡುವ ಮನವು ಇದೆ. ಹೀಗಾಗಿ ಕಾಯದಲ್ಲಿ ಕಾಮ ಹುಟ್ಟುವುದಿಲ್ಲ. ಕ್ರೋಧ ಲೋಭ ಮೋಹ ಮದ ಮತ್ಸರಗಳು ಹುಟ್ಟುವುದಿಲ್ಲ. ಹಸಿವು ತೃಷೆ ವ್ಯಸನಗಳು ಹುಟ್ಟುವುದಿಲ್ಲ.

ಸತ್ಯಕ್ಕ: ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ: ನಿನಗೆ ಅದೆಷ್ಟು ಅರಿವಿನ ಹಸಿವಾಗಿದೆ ತಾಯಿ! ಹೀಗೆ ಮನಕ್ಕೆ ಅರಿವಿನ ಹಸಿವಾದರೆ ಸಾಕು, ಮನದ ಅಜ್ಞಾನ ತನಗೆ ತಾನೇ ಸಾಯುತ್ತದೆ. ಅನ್ನದ ಹಸಿವಿಗಾಗಿ ಮನಕ್ಕೆ, ಭೂಮಿಯ ಮೇಲೆ ಆಸೆಯಾಗುತ್ತದೆ, ಹಸಿವು ನೀಗಿಸಿಕೊಳ್ಳುವ ವ್ಯವಹಾರಕ್ಕಾಗಿ ಹೇಮದ ಮೇಲೆ ಆಸೆಯಾಗುತ್ತದೆ. ಕಾಯಕ್ಕೆ ತನ್ನ ಗರ್ಭದಿಂದ ಮತ್ತೊಂದು ಕಾಯ ಬೇಕು ಎನ್ನುವ ಆಸೆಯಿಂದಾಗಿ, ಕಾಯದಲ್ಲಿ ಕಾಮದ ಹಸಿವಾಗುತ್ತದೆ.

ಕಾಯದಲ್ಲಿಯೇ ಸಂಗಮವಾದ ಅರಿವಿಗೆ ಇದಾವುದು ಬೇಡ. ಏಕೆಂದರೆ ಅದು ಬಯಲು! ಅದು ತನ್ನ ಗರ್ಭದಲ್ಲಿ ಆಮ್ಲಜನಕವನ್ನು ಜಲಜನಕವನ್ನು ಸೃಷ್ಟಿಮಾಡಿ ಅವೆರಡನ್ನು ಒಂದು ಮಾಡಿ ತಾನು ಅದರಲ್ಲಿ ಬೆರೆತು ಜೀವಜಲದ ಬೀಜವಾಗಿದೆ. ಆ ಜಲ ಕುದ್ದು ಗಟ್ಟಿಯಾಗಿ ಭೂಮಿಯಾಗಿದೆ. ಭೂಮಿಯೊಳಗಣ ಹೇಮವಾಗಿದೆ. ಆ ಜೀವಜಲವೇ ಭೂಮಿಯ ಮೇಲೆ ಹರಿದು ಸಸ್ಯ ಕಾಶಿಯಾಗಿದೆ. ಆ ಬಯಲ ಬೀಜವೇ ಕಾಯವೆಂಬ ಬೇರಿಲ್ಲದ ವೃಕ್ಷವಾಗಿದೆ. ಕಾಯವನ್ನು ಆವರಿಸಿದ ಮನಕ್ಕೆ ಮತ್ತು ಕಾಯಕ್ಕೆ ಬೋಧೆ ಮಾಡುತ್ತಾ ನಡೆದಾಡುವ ಬೋಧಿವೃಕ್ಷವಾಗಿದೆ. ಹೀಗೆ ಬೋಧೆ ಮಾಡುವ ಅರಿವು ಎನ್ನುವ ಗುರುದೇವನನ್ನು ತಿಳಿದ ಮನವೇ ಘನಮನವಾಗುತ್ತದೆ. ತನು, ಜ್ಞಾನಿ ತನು ಆಗುತ್ತದೆ. ಸಕಲ ತನುಗಳ ಮೂಲಕ ಜ್ಞಾನಿ ಎಂದು ಕರೆಯಿಸಿಕೊಳ್ಳುತ್ತದೆ. ಈ ಭಾಗ್ಯ ಜಗದಲ್ಲಿರುವ ಸಕಲ ತನುಗಳಿಗೂ ಇದೆ. ತನುವಿನಲ್ಲಿದ್ದ ಅರಿವಿನ ಸಂಪತ್ತನ್ನು ತನು ಮತ್ತು ಮನ ಬಳಕೆ ಮಾಡಿಕೊಳ್ಳಬೇಕು ಅಷ್ಟೇ.

ಬಸವಣ್ಣ: ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸೇರೋಣ.

ಅರಿವಿನ ಈ ಪರಮಸುಖದಿಂದ ಶರಣರು ಓಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೧೬

ಕತ್ತಲು ನಿಧಾನವಾಗಿ ಸೂರ್ಯನ ಬೆಳಕಿನ ಗರ್ಭದಲ್ಲಿ ಜಾರುತ್ತಲಿದೆ. ಶರಣರು ಮಹಾಮನೆಯತ್ತ ನಡೆಯುತ್ತಾ ಕತ್ತಲ ಬೆಳಕಿನ ಆಟವನ್ನು ಗಮನಿಸುತ್ತಿದ್ದಾರೆ. ವೇದಿಕೆಯ ಮೇಲೆ ಕುಳಿತ ಬಸವಣ್ಣನವರಿಗೆ ಶರಣು ಶರಣಾರ್ಥಿ ಎಂದು ತಲೆಬಾಗಿ ಕುಳಿತುಕೊಳ್ಳುತ್ತಾರೆ.

ಗುರುಭಕ್ತಯ್ಯ :

ಕಾಯವಿಕಾರ ಕಾಡಿಹುದಯ್ಯಾ ;
ಮನೋವಿಕಾರ ಕೂಡಿಹುದಯ್ಯಾ ;
ಇಂದ್ರಿಯ ವಿಕಾರ ಸುಳಿವುದಯ್ಯಾ!
ಸುಳಿವಿನೊಳಗೆ ಸುಳಿಯುತ್ತಲಿದ್ದೇನೆ; ಸಿಲುಕಿಸದಿರಯ್ಯಾ !
ಅನ್ಯ ಚಿತ್ತವಿರಿಸದಿರಯ್ಯಾ ; ನಿಮ್ಮ ಚಿತ್ತವಿರಿಸಯ್ಯಾ !
ಅನುಪಮ ಸುಖ ಸಾರಾಯ ಶರಣರಲ್ಲಿ
ಕೂಡಲಸಂಗಮದೇವಯ್ಯಾ , ಇದನೆ ಬೇಡುವೆನಯ್ಯಾ ! ॥ 48 ॥

ಬಸವರಸ, ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಕಾಯ, ನೋಡಿ ಕೇಳಿ ಮುಟ್ಟಿ ಮೂಸಿಸಿ ರುಚಿಸಿ ಭಾವಿಸಿ ಕ್ಷಣ ಕ್ಷಣಕ್ಕೂ ವಿಕೃತಗೊಳ್ಳುತ್ತದೆ. ಇದಕ್ಕೆ ಕಾರಣ ಮನ. ತಾನು ಸುಖಿಸುವುದಕ್ಕಾಗಿ ಕಾಯವನ್ನು ತನ್ನಂತೆ ಮಾಡಿಕೊಂಡು ; ಕಾಯದ ಮೂಲಕ ವಿಕೃತ ಸುಖವನ್ನು ಅನುಭವಿಸುತ್ತಲಿದೆ. ಇವೆರಡರ ಸುಳ್ಳು ಸುಖದಿಂದಾಗಿ ಜ್ಞಾನೇಂದ್ರಿಯಗಳು ತಮ್ಮ ಅರಿವಿನ ಬೆಳಕನ್ನು ಹೊರ ಚೆಲ್ಲದಂತೆ ಆಗಿವೆ. ಇಂದ್ರಿಯಗಳು ತನು ಮತ್ತು ಮನಕ್ಕೆ ಸಹಕಾರಿಯಾಗಿ ತನುವನ್ನು ವಿಕಾರಗೊಳಿಸಿ ಇಡೀ ತನುವನ್ನು ಆವರಿಸಿಕೊಂಡಿವೆ.

ಕಾಯದೊಳಗೆ ಸಂಗಮವಾದ ಗುರುದೇವನೇ ನಿನ್ನ ಬೋಧೆಯಿಂದ ನನಗೆ ಗೊತ್ತಾಗುತ್ತಲಿದೆ. ನಾನು ಈ ಸುಳಿವಿನೊಳಗೆ ಸಿಲುಕಿ ಸುಳಿಯುತ್ತಲಿದ್ದೇನೆ. ನನ್ನನ್ನು ಸಿಲುಕಿಸದಿರಯ್ಯಾ! ಅಜ್ಞಾನದ ಚಿತ್ತವನ್ನು ಸುಟ್ಟು; ನಿಮ್ಮ ಚಿತ್ತವಿರಿಸಯ್ಯಾ ! ನಿಮ್ಮ ದರುಶನ ಭಾಗ್ಯ ಪಡೆದ; ಅನುಪಮ ಸುಖ ಸಾರಾಯ ಶರಣರಲ್ಲಿ ; ನಾನು ಇದನ್ನೇ ಬೇಡುವೆನಯ್ಯಾ ಎಂದು ತನಗೆ ತಾನೆ ತನುವಿನಲ್ಲಿ ತನ್ಮಯವಾದ ಗುರುದೇವನಲ್ಲಿ ಬೇಡಬೇಕು. ಕಾಯ, ಮನ, ಇಂದ್ರಿಯಗಳು ವಿಕಾರಗೊಳ್ಳುತ್ತಿರುವುದನ್ನು ಸಾಕ್ಷಿಯಾಗಿ ನೋಡಬೇಕು.

ಗುರುಭಕ್ತಯ್ಯ : ಧನ್ಯರಾದೆವು ಬಸವರಸ ತಮಗೆ ಶರಣು ಶರಣಾರ್ಥಿ.

ಕಾಳವ್ವೆ :

ಬಂದ ಯೋನಿಯನರಿದು ಸಲಹೆನ್ನ ತಂದೆ!
ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು ;
ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು .
ಎನ್ನ ತಂದೆ ಕೂಡಲಸಂಗಮದೇವಾ,
ಇವ ಮಾಣಿಸು ನಿಮ್ಮ ಧರ್ಮ! ॥ 49 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಬಂದ ಯೋನಿಯನರಿದು ಸಲಹೆನ್ನ ತಂದೆ ಎಂದು ಗುರುದೇವನನ್ನು ಬೇಡಬೇಕು. ಬೆಂದ ಮನವು ನನ್ನನ್ನು ಗತಿ-ಗೆಡಿಸಿ ಕಾಡಿತ್ತು; ಬೆಂದ ಮನವು ನನ್ನನ್ನು ಮತಿ-ಗೆಡಿಸಿ ಕಾಡಿತ್ತು .

ತಾನು ಹೊರ ಬಂದ ಯೋನಿಯೊಂದಿಗೆ ತಾನೇ ಸುಖಿಸಲು ಹೋದ ಕೀಚಕ ಸತ್ತ . ತಾನು ಹೊರ ಬಂದ ಯೋನಿಯೊಂದಿಗೆ ಸುಖಿಸಲು ಹೋದ ವಾಲಿ ಸತ್ತ . ಬಂದ ಯೋನಿಯೊಂದಿಗೆ ಸುಖಿಸಲು ಹೋದ ರಾವಣ ಸತ್ತ. ಬಂದ ಯೋನಿ ಅರಿವಿನ ದೇಹಕ್ಕೆ ಜನ್ಮ ನೀಡಿದ ಜ್ಞಾನದ ಬಾಗಿಲು. ಅದು ದೇವಾಂಗ!

ರೂಪು ಹಲವಾದಡೇನು ಯೋನಿ ಒಂದೇ. ರೂಪ ಹೊತ್ತ ಚರ್ಮ ಒಂದೇ. ಚರ್ಮದೊಳಗೆ ಇದ್ದ ಪದಾರ್ಥಗಳು ಒಂದೇ. ತನುವನ್ನು ಆವರಿಸಿದ ಮನ, ತನುವಿನ ರೂಪ ನೋಡಿ, ಇದು ನಿನಗೆ ಜನ್ಮ ನೀಡಿದ ಯೋನಿಯೆಂದು ತಿಳಿಹೇಳದೆ ಗತಿ-ಗೆಡಿಸಿ ಮತಿ-ಗೆಡಿಸಿ ದೇಹದೊಳಗೆ ರಸಾಯನದ ಕಿಚ್ಚು ಹೊತ್ತಿಸಬೇಕೆ? ಹೀಗೆ ತನುವನ್ನು ಸದಾ ಕಾಡುವ ಮನಕ್ಕೆ ಯಾರು ಕಡಿವಾಣ ಹಾಕಬೇಕು?.

ಸದಾ ದೇಹವನ್ನು ಆಪತ್ಕಾಲಕ್ಕೆ ತಳ್ಳುವ ಮನಕ್ಕೆ ಯಾರು ಶಿಕ್ಷೆ ಕೊಡಬೇಕು? ತನುವಿನೊಂದಿಗೆ ತನುವೇ ಸುಖಿಸಿ, ತನುವನ್ನು ಸಂಕಟಕ್ಕೆ ತಳ್ಳುವ ಮನವನ್ನು ಬಂಧಿಸುವುದಾದರೂ ಹೇಗೆ?

ಸಂಬಂಧ ಕಲ್ಪಿಸಿದ್ದು ಮನವೇ. ಸಂಬಂಧ ಮುರಿಯುವುದು ಕೂಡಾ ಮನವೇ. ಮನಕ್ಕೆ ತಂದೆ ತಾಯಿ ಅಕ್ಕ ತಂಗಿ ಅಣ್ಣ ತಮ್ಮ ಮಾವ ಅಳಿಯ ಗುರು ಶಿಷ್ಯ ಅನ್ನುವ ಅರಿವೂ ಇಲ್ಲ. ರೂಪ ಕಂಡರೆ ಸಾಕು; ಕಾಮ ಪಿಶಾಚಿ!

ಗುರುದೇವನ ಹೆಂಡತಿಯೆಂದು ಅರಿಯದ ಮನ, 'ಚಂದ್ರ'ನ ತನುವನ್ನು ಅಪರಾಧಕ್ಕೆ ಗುರಿ ಮಾಡಿತು. ಗುರುದೇವ ಮನಕ್ಕೆ ಶಿಕ್ಷೆ ಕೊಡಲೇ ಇಲ್ಲ; ದೇಹಕ್ಕೆ ಶಿಕ್ಷೆ ಕೊಟ್ಟ. ಇವರಿಬ್ಬರ ಕಾಮ ಕ್ರೀಡೆಯಿಂದ ಹುಟ್ಟಿದ ಬುಧ ಎನ್ನುವ ಮಗುವಿಗೆ ಶಿಕ್ಷೆ ಕೊಟ್ಟ.

ಮನಕ್ಕೆ ದೇವರ ದೇಹವಾದರೇನು? ಬಲಶಾಲಿಯ ದೇಹವಾದರೇನು? ರಾಜನ ದೇಹವಾದರೇನು? ಪ್ರಧಾನಿಯ ದೇಹವಾದರೇನು? ಸಕಲ ದೇಹಗಳಲ್ಲಿಯೂ

ತನ್ನ ಅಜ್ಞಾನದ ಸಾಮ್ರಾಜ್ಯವನ್ನು ಕಟ್ಟಿಕೊಂಡಿದೆ.

ಗಾಣದ ಕಣ್ಣಪ್ಪ : ಇದಕ್ಕೆ ಪರಿಹಾರವಿಲ್ಲವೆ ಬಸವರಸ?

ಬಸವಣ್ಣ : ತನುವನ್ನು ಆವರಿಸಿದ ಮನ ಟಿಸಿಲೊಡೆದು, ತನುವಿನಲ್ಲಿಯೇ ತನ್ಮಯವಾದ ಗುರುದೇವನನ್ನು ; ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ . ಈ ಮನವೆಂಬ ಮರ್ಕಟವನ್ನು ಹಿಡಿಯಲು ಯಾರೂ ಅರಿಯರಯ್ಯಾ ಎಂದು ಅರಿವಿಗೆ ಮೊರೆ ಹೋಗಬೇಕು.

ಬೊಂತಾದೇವಿ: ಬಂದ ಯೋನಿಯನರಿಯದೆ ಆಶ್ರಯ ಪಡೆದ ತನುವನ್ನು, ಸಂಕಟಕ್ಕೆ ಒಡ್ಡುವ ಮನದ ಬಗ್ಗೆ, ಸಕಲ ತನುಗಳಿಗೂ ತಿಳಿಯುವಂತೆ ಹೇಳಿದಿರಿ ಬಸವರಸ; ಅರಿವೆಂಬ ಗುರುದೇವನಿಗೆ ಶರಣು ಹೋಗುವ ಸೂತ್ರವನ್ನು ಕೇಳಿ ಧನ್ಯರಾದೆವು ತಂದೆ ತಮಗೆ ಶರಣು.

ನಾಗಲಾಂಬಿಕೆ:

ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು ಎಚ್ಚರಲೀಯದು.
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ , ಲಿಂಗತಂದೆ;
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ. ॥ 50 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ಬಸವಣ್ಣ.

ಬಸವಣ್ಣ : ತನು ಅರಿವಿನಿಂದ ಮುಗಿಲಿನೆತ್ತರಕ್ಕೂ ಬೆಳೆ ಬೆಳೆಯುವ ಭೂಮಿ. ಅದರ ಬೇರು ಪಾತಾಳದಿಂದಲೂ ಅತ್ತತ್ತ ಚಾಚಿಕೊಳ್ಳುವ ಶಕ್ತಿ ಹೊಂದಿದೆ. ಅದರ ರೆಂಬೆ ಟೊಂಗೆಗಳಿಗೆ ಜಗದಗಲ ಚಾಚಿಕೊಳ್ಳುವ ಶಕ್ತಿಯಿದೆ. ಇಂತಹ ಭೂಮಿಯಲ್ಲಿ ಮನವೆಂಬ ಅರಿಷಡ್ವರ್ಗಗಳ ಕಸ ಹುಟ್ಟಿದೆ. ಸಪ್ತ ವ್ಯಸನಗಳ, ಅಷ್ಟ ಮದಗಳ ಕಸ ಹುಟ್ಟಿದೆ. ಇಂತಹ ಅವಗುಣಗಳೆಂಬ ಕಸವ ಕಿತ್ತು ಸಲಹುವ ಶಕ್ತಿ; ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಮಾತ್ರ ಇದೆ. ಆತ ಅಂಗದಲ್ಲಿಯೇ ಸಂಗಮವಾದ ಲಿಂಗಯ್ಯ. ಈತ ಕಸ ಕಿತ್ತಿದರೆ ಮಾತ್ರ ಅಂಗ ಲಿಂಗ ಒಂದಾಗಿ ಲಿಂಗಾಂಗವಾಗುವುದು. ಆಗ ಅದು ವಿರಾಟ ಸ್ವರೂಪದಂತೆ ಮುಗಿಲೆತ್ತರಕ್ಕೂ ಬೆಳೆದು ಬೆಳಗಿಂಗೆ ಬೆಳಗಾಗಿ ಬೆಳಗುವುದು.

ನಾಗಲಾಂಬಿಕೆ: ತನು ಅರಿವಿನಿಂದ ಮುಗಿಲಿನೆತ್ತರಕ್ಕೂ ಬೆಳೆ ಬೆಳೆಯುವ ಭೂಮಿ ಎಂದು ವಿವರಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಕೇತಲದೇವಿ:

> ವಿಷಯವೆಂಬ ಹಸುರನೆನ್ನಮುಂದೆ ತಂದು ಪಸರಿಸಿದೆಯಯ್ಯಾ;
> ಪಶುವೇನ ಬಲ್ಲುದು, ಹಸುರೆಂದೆಳೆಸುವುದು.
> ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,
> ಸುಬುದ್ಧಿಯೆಂಬ ಉದಕವನೆರೆದು
> ನೋಡಿ ಸಲಹಯ್ಯಾಕೂಡಲಸಂಗಮದೇವಾ. ॥ 51 ॥

ಬಸವರಸ, ತಮ್ಮ ವಚನದಲ್ಲಿ ವಿಷಯವೆಂಬ ಹಸುರನೆನ್ನಮುಂದೆ ತಂದು ಪಸರಿಸಿದೆಯಯ್ಯಾ ಎಂದು ಹಾಡಿರುವಿರಲ್ಲ ತಂದೆ, ಇದಕ್ಕೆ ಲಿಂಗಯ್ಯನೆ ಕಾರಣವೆ ಹೇಗೆ?

ಬಸವಣ್ಣ: ಅಂಗದಲ್ಲಿಯೇ ಸಂಗಮವಾದ ಅರಿವನ್ನು; ಗುರುದೇವನೆಂದು ಸದಾಶಿವನೆಂದು ಸಾಕ್ಷಾತ್ ಪರಬ್ರಹ್ಮನೆಂದು ಲಿಂಗಯ್ಯನೆಂದು ಸಂಗಮನಾಥನೆಂದು ಹೆಸರಿಟ್ಟು ಕರೆದಿದ್ದೇನೆ.

ಸೂರ್ಯನಿಂದಾಗಿ ಕತ್ತಲ ಬೆಳಕಿನ ಆಟ ಭೂಮಿಯ ಮೇಲೆ ಹೇಗೆ ನಡೆದಿದೆಯೋ ಹಾಗೆಯೇ ಅರಿವಿನ ಲಿಂಗಯ್ಯನಿಂದಾಗಿ ಅಂಗದಲ್ಲಿ ಕತ್ತಲ ಬೆಳಕಿನ ಆಟ ನಡೆದಿದೆ. ಲಿಂಗಯ್ಯ ಬೆಳಗುವ ಅರಿವಿನ ಬೆಳಕಿನಿಂದ ಅಂಗದಲ್ಲಿ ಮನವೆಂಬ ಕತ್ತಲು ಹುಟ್ಟಿಕೊಂಡಿದೆ. ಆ ಕತ್ತಲಿನಿಂದಾಗಿ ವಿಷಯವೆಂಬ ಹಸಿರು ಅಂಗದ ಕಣ ಕಣದಲ್ಲಿ ಪಸರಿಸಿದೆ. ಅಂಗ ಪಶುವಿದ್ದಂತೆ ಹಸುರೆಂದು ತಿಳಿದು ತಿಂದು ಹಾಕುವುದು.

ಪಶುವನ್ನು ತಡೆದು, ವಿಷಯ ರಹಿತನ ಮಾಡಿ ಭಕ್ತಿ ರಸವನ್ನು ಹೊಟ್ಟೆ ತುಂಬಾ ಮೇಯಿಸಿ, ಸುಬುದ್ಧಿಯೆಂಬ ಉದಕವನು ಎರೆದು, ಪಶುವನ್ನು ವಿಷಯಕ್ಕೆ ಹರಿಯದಂತೆ ನೋಡಿ ಸಲಹು ತಂದೆ ಎಂದು ಸಕಲ ತನು ಮನಗಳು ತನುವಿನಲ್ಲಿಯೇ ತನ್ಮಯವಾದ ಅರಿವಿನ ತಂದೆಯನ್ನು ಬೇಡಿಕೊಳ್ಳಬೇಕು.

ಕೇತಲದೇವಿ : ವಚನದಲ್ಲಿ ಬಚ್ಚಿಟ್ಟುಕೊಂಡ ರಹಸ್ಯವನ್ನು ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ ತಂದೆ.

ಬಸವಣ್ಣ: ಸಕಲ ಶರಣರಿಗೂ ಶರಣು ಶರಣಾರ್ಥಿ. ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಮಂಗಲ ಹಾಡಿದರು.

ಅರಿವಿನ ಈ ಪರಮಸುಖದಿಂದ ಶರಣರು ಓಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೧೭

ಕತ್ತಲು ನಿಧಾನವಾಗಿ ಸೂರ್ಯ ಬೆಳಗುವ ಬೆಳಕಿನ ಗರ್ಭದಲ್ಲಿ ಜಾರುತ್ತಲಿದೆ. ಶರಣರು ಮಹಾಮನೆಯತ್ತ ನಡೆಯುತ್ತಾ ಕತ್ತಲ ಬೆಳಕಿನ ಆಟವನ್ನು ಗಮನಿಸುತ್ತಿದ್ದಾರೆ. ವೇದಿಕೆಯ ಮೇಲೆ ಕುಳಿತ ಬಸವಣ್ಣನವರಿಗೆ ಶರಣು ಶರಣಾರ್ಥಿ ಎಂದು ತಲೆಬಾಗಿ ಕುಳಿತುಕೊಳ್ಳುತ್ತಾರೆ.

ಹೆಂಡದ ಮಾರಯ್ಯ :

ಕೆಸರಲ್ಲಿ ಬಿದ್ದ ಬಡ ಪಶುವಿನಂತೆ
ಆನು ದೆಸೆದೆಸೆಗೆ ಬಾಯಿ ಬಿಡುತ್ತಿದ್ದೆನಯ್ಯಾ !
ಆರಯ್ವರಿಲ್ಲ-ಅಕಟಕಟಾ! ಪಶುವೆಂದೆನ್ನ
ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ. ॥ 52 ॥

ಬಸವರಸ, ತಮ್ಮ ಈ ವಚನದ ರಹಸ್ಯವನ್ನು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ದೇಹಕ್ಕೆ ಬಡತನವಿಲ್ಲ. ಪ್ರತಿ ದೇಹದಲ್ಲಿ ಅರಿವಿನ ಶ್ರೀಮಂತ ಬಚ್ಚಿಟ್ಟುಕೊಂಡಿದ್ದಾನೆ. ಮನ ಆ ಶ್ರೀಮಂತನ ಅರಿವನ್ನು ದೇಹದ ಮೂಲಕ ವ್ಯಯ ಮಾಡದೆ ಅದನ್ನು ಹಾಗೆ ಬಚ್ಚಿಟ್ಟು ಲೋಕದಿಂದ ಬಂದ ಅರಿವನ್ನು ದೇಹದ ಮೂಲಕ ಬಳಕೆ ಮಾಡುತ್ತಿರುವುದರಿಂದಾಗಿ ದೇಹ ಕೆಸರಲ್ಲಿ ಬಿದ್ದ ಬಡಪಶುವಿನಂತೆ ಒದ್ದಾಡುತ್ತಲಿದೆ.

ಮಾರಯ್ಯ : ತಮ್ಮ ಮಾತು ರಹಸ್ಯಮಯವಾಗಿದೆ; ನಮಗೆ ತಿಳಿಯಲಿಲ್ಲ ತಂದೆ ದಯವಿಟ್ಟು ವಿವರಿಸಿ.

ಬಸವಣ್ಣ: ನಿಮಗೆ ತಿಳಿದಿದೆ. ಆದರೂ ಮನಕ್ಕೆ ತನುವಿನಲ್ಲಿ ತನ್ಮಯವಾದ ಅರಿವಿನ ಶ್ರೀಮಂತಿಕೆ ಬಳಕೆ ಮಾಡಲು ಸಾಧ್ಯವಾಗುತ್ತಿಲ್ಲ ; ನಿಮಗಷ್ಟೇ ಏಕೆ ಇಡೀ ಜಗತ್ತಿನಲ್ಲಿರುವ ಯಾವ ತನುಗಳಿಗೂ ಸಾಧ್ಯವಾಗುತ್ತಿಲ್ಲ.

ಮಾರಯ್ಯ : ದಯವಿಟ್ಟು ಮುಂದುವರಿಸಿ ಬಸವಣ್ಣ.

ಬಸವಣ್ಣ : ಚರ್ಮ ಹೆಣ್ಣೊ ಅಥವಾ ಗಂಡೋ?

ಧೂಳಯ್ಯ : ಅದು ಹೆಣ್ಣೂ ಅಲ್ಲ; ಗಂಡೂ ಅಲ್ಲ ಬಸವಣ್ಣ ; ಕೇವಲ ಚರ್ಮ.

ಶರಣರು: ಹೌದು ಬಸವಣ್ಣ ಅದು ಚರ್ಮ ಎಂದು ಒಕ್ಕೊರಲಿನಿಂದ ಹೇಳಿದರು.

ಬಸವಣ್ಣ : ಕಣ್ಣು ಕಿವಿ ಮೂಗು ನಾಲಿಗೆ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ರೋಮ ನಖ ಇವು ಹೆಣ್ಣೋ ಗಂಡೋ?

ಶರಣರು: ಅವು ಯಾವೂ ಹೆಣ್ಣೂ ಅಲ್ಲ ಗಂಡೂ ಅಲ್ಲ ಬಸವರಸ.

ಬಸವಣ್ಣ : ಮೊಲೆ ಮೂಡಿ ಬಂದ ದೇಹವನ್ನು ಹೆಣ್ಣು ಎಂದು ; ಗಡ್ಡ ಮೀಸೆ ಬಂದ ದೇಹವನ್ನು ಗಂಡು ಎಂದು ಲೋಕ ನಿರ್ಧರಿಸಿದಂತೆ ಆಗಲಿಲ್ಲವೆ?

ಶರಣರು: ಹೌದು ಬಸವರಸ.

ಬಸವಣ್ಣ : ಲೋಕದ ಜ್ಞಾನವನ್ನು ಮನ ದೇಹದಲ್ಲಿ ಸಂಗ್ರಹ ಮಾಡಿಕೊಂಡಿದೆ. ಮನ ತಾನು ಗಂಡು ಎನ್ನುವ ಅಜ್ಞಾನ ಆಮಂತ್ರಣ ಮಾಡಿಕೊಂಡು; ಹೆಣ್ಣನ್ನು ನೋಡಿ ಕಾಮ ರಸವನ್ನು ಕಾಯದ ಕಣಕಣದಲ್ಲಿ ಚೆಲ್ಲುತ್ತದೆ; ಕಾಯ ಕಾಯವನ್ನೇ ಕಾಮ ಪಿಶಾಚಿಯಂತೆ ಹರಿದು ತಿನ್ನುವಂತೆ ಮಾಡುತ್ತದೆ. ತನುವಿನಲ್ಲಿಯೇ ತನ್ಮಯವಾದ ಅರಿವಿನ ಮಾತು ತನು ಕೇಳುವುದಿಲ್ಲ; ಮನವೂ ಕೇಳುವುದಿಲ್ಲ. ನಂತರ ಸಿಕ್ಕಿ ಹಾಕಿಕೊಳ್ಳುವುದು ಬಡ ತನು; ರಾಜನಾದಾತ ಯಾವ ಅಪರಾಧ ಮಾಡದ ಬಡ ತನುವನ್ನು ದಂಡಿಸುತ್ತಾನೆಯೇ ಹೊರತು, ಅಪರಾಧಕ್ಕೆ ಕಾರಣವಾದ ಮನವನ್ನು ಅಲ್ಲ.

ಮನ ಮತ್ತು ತನು ತನುವಿನಲ್ಲಿಯೇ ಇರುವ ಅರಿವನ್ನು ಬಳಕೆ ಮಾಡಿ ಕೊಂಡು ನೋಡಿದರೆ, ಅದು ತನ್ನಂತೆಯೇ ಇರುವ ಅರಿವುಳ್ಳ ತನು! ಅರಿವಿನ ಶ್ರೀಮಂತಿಕೆಯಿಂದ ತುಂಬಿ ತುಳುಕುವ ಜ್ಞಾನಿ ತನು! ಹೊನ್ನು ಹೆಣ್ಣು ಮಣ್ಣು ಎನ್ನುವುದು ದೇಹದ ಶ್ರೀಮಂತಿಕೆಯಿಂದ ಪರಿಚಯವಾದ ತೃಣವೆಂದು ತನು ಮತ್ತು ಮನಕ್ಕೆ ತನುವಿನಲ್ಲಿ ತನ್ಮಯವಾದ ಅರಿವಿನಿಂದಲೇ ತಿಳಿಯುತ್ತದೆ.

ಮಾರಯ್ಯ : ತನು ಮತ್ತು ಮನ, ಸದಾ ತನುವಿನಲ್ಲಿ ತನ್ಮಯವಾದ ಸತ್ಯದೊಂದಿಗೆ ಸಂಗ ಮಾಡುವ ವಿಧಾನ ತಮ್ಮ ಈ ಸತ್ಸಂಗದಿಂದ ತಿಳಿಯಿತು ಬಸವರಸ; ತಮಗೆ ಶರಣು ಶರಣಾರ್ಥಿ.

ಹಡಪದ ಅಪ್ಪಣ್ಣ:

ಬಡಪಶು ಪಂಕದಲ್ಲಿ ಬಿದ್ದಡೆ
ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ?
ಶಿವ ಶಿವ! ಹೋದೆಹೆ ಹೋದೆಹೆನಯ್ಯಾ .
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ .
ಪಶುವಾನು, ಪಶುಪತಿ ನೀನು!
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯ ನಿಮ್ಮ ಬಯ್ಯದಂತೆ ಮಾಡು,
ಕೂಡಲಸಂಗಮದೇವಾ. ॥ 53 ॥

ಬಸವರಸ, ತಮ್ಮ ಈ ವಚನದ ರಹಸ್ಯವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ದೇಹದಲ್ಲಿ ಮನವೆಂಬ ಪಶುವೂ ಇದೆ; ಅರಿವು ಎನ್ನುವ ಪಶುಪತಿಯೂ ಇದ್ದಾನೆ. ಮನಕ್ಕೆ ವಿಷಯವೆಂಬ ಹಸಿರಿನ ಬಯಕೆಯಾದರೆ ದೇಹವನ್ನು ಕರೆದೊಯ್ದು ದೇಹವನ್ನೇ ತಿನ್ನುತ್ತದೆ. ದೇಹದೊಂದಿಗೆ ಸೆರೆ ಕುಡಿದು, ಲಂಚಕ್ಕೆ ಕೈ ಒಡ್ಡುತ್ತದೆ. ಆಭರಣ, ಹಾದರ, ಕಳುವಿಗೆ ಎಳೆಸಿ ದೇಹವನ್ನು ಸೆರೆಮನೆಗೆ ಕಳಿಸುತ್ತದೆ. ಜನಕ್ಕೇನು ಗೊತ್ತು ದೇಹ ಪಶುಪತಿಯ ಸೊತ್ತೆಂದು!

ಮಂಚಣ್ಣ: ಮನದಿಂದಾಗಿ ಅಜ್ಞಾನದ ಕೆಸರಿನಿಂದ ಹೊರಬರುವ ಉಪಾಯ ದೇಹಕ್ಕೆ ಆಗುವುದಾದರೂ ಯಾವಾಗ ಬಸವರಸ?

ಬಸವಣ್ಣ: ಪಶು ನಾನು; ನನ್ನನ್ನು ಹಡೆದ ಪಶುಪತಿ ನೀನು. ಬೇಲಿ ಹಾರಿ ವಿಷಯವೆಂಬ ಹಸುರು ಮೇಯಲು ಹೋದ ಪಶುವನ್ನು ಹಿಡಿದು; ಹೊಲದ ಒಡೆಯ ದಂಡಿಸುವ ಮುನ್ನ ; ಇದು ಯಾರಿಗೆ ಹುಟ್ಟಿದ ಪಶು? ಇದರ ಒಡೆಯ ಯಾರೆಂದು ಪಶುವಿನ ಒಡೆಯನನ್ನು ಬಯ್ಯುತ್ತಾನೆ.

ತುಡುಗುಣಿಯೆಂದು ನನ್ನನ್ನು ಹಿಡಿದು ಬಡಿಯದ ಮುನ್ನ; ಒಡೆಯ ನಿಮ್ಮ ಬಯ್ಯದಂತೆ ಮಾಡು. ನಾನು ಪಶು; ನನ್ನನ್ನು ಹಡೆದ ತಂದೆ ನೀನು ಎಂದು ಅರಿವಿನ ತಂದೆಯನ್ನು ಬೇಡಬೇಕು.

ಮಂಚಣ್ಣ: ಎಂತಹ ಸುಂದರವಾದ ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ನಿಮಗೆ ಶರಣು.

ಮಂಚಣ್ಣ :

ಅಡವಿಯಲ್ಲಿ ಹೊಲಬುಗೆಟ್ಟ ಪಶುವಿನಂತೆ
'ಅಂಬೆ, ಅಂಬೆ' ಎಂದು ಕರೆಯುತ್ತಲಿದ್ದೇನೆ;
'ಅಂಬೆ, ಅಂಬೆ' ಎಂದು ಒರಲುತ್ತಲಿದ್ದೇನೆ;
ಕೂಡಲಸಂಗಮದೇವಾ 'ಬಾಳು ಬಾಳೆಂಬನ್ನಕ್ಕ! ॥ 54 ॥

ಬಸವರಸ, ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ದೇಹ ಎನ್ನುವುದು ಜ್ಞಾನದ ಕೈಲಾಸ! ಎಲ್ಲವನ್ನೂ ಜ್ಞಾನದಿಂದ ನೋಡುವ ಅಂಜನ ವಿದ್ಯೆ ದೇಹದಲ್ಲಿದೆ. ಪ್ರತಿ ಶಬ್ದವನ್ನು ಅರಿವಿನಿಂದ ಕೇಳಿ, ಸಂತೋಷ ಪಡುವ ಶಕ್ತಿ ತನುವಿನಲ್ಲಿದೆ. ಪ್ರತಿ ಪದಾರ್ಥದ ಪರಿಮಳ ಮೂಸಿಸಿ ಪುಳಕಿತಗೊಳ್ಳುವ ಮಂತ್ರ ವಿದ್ಯೆ ತನುವಿನಲ್ಲಿದೆ. ಪ್ರತಿ ತುತ್ತಿನ ರುಚಿಯನ್ನು ಪ್ರಸಾದದಂತೆ ಸ್ವೀಕರಿಸುವ ಭಕ್ತಿ ತನುವಿನಲ್ಲಿದೆ. ಪ್ರತಿ ಸ್ಪರ್ಷವನ್ನು ಆನಂದದಿಂದ ಸ್ವೀಕರಿಸುವ ಶಕ್ತಿ, ತನುವಿನಲ್ಲಿದೆ. ತನು ಅರಿವೆಂಬ ಗುರುವಿನ ಮಂತ್ರದಂಡ!

ಹೀಗಿದ್ದೂ ತನುವನ್ನು ಆವರಿಸಿದ ಮನ ಕಣ್ಣಿನಲ್ಲಿ ಬೆರೆತು, ನೋಡುವ

ಮೂಲಕ ತನುವಿಗೆ ಸುಖ ದುಃಖಗಳನ್ನುಂಟು ಮಾಡಿ, ಜೊಲ್ಲು ಸುರಿಸುತ್ತದೆ; ಇಲ್ಲ ಸಂಕಟಪಡುತ್ತದೆ. ಅರಿವಿನ ಕೈಲಾಸ ಆಗಬೇಕಾದ ತನು, ದಟ್ಟಾರಣ್ಯವಾಗಿದೆ. ಹೊಲಬುಗೆಟ್ಟು ಪಶುವಿನಂತೆ ಅಂಬೆ ಅಂಬೆ ಎನ್ನುತ್ತಲಿದೆ.

ಕೇಳಿ ಅರಿವಾಗ ಬೇಕಾದ ಶಬ್ದ, ದುಃಖಕ್ಕೆ ಈಡು ಮಾಡಿ, ಇಡೀ ತನುವನ್ನು ಅಂಬೆ ಅಂಬೆ ಎಂದು ಒರಲುವಂತೆ ಮಾಡಿದೆ. ಮೂಸಿಸಿ, ರುಚಿಸಿ, ಸ್ಪರ್ಶಿಸಿ, ಆನಂದ ಪಡಬೇಕಾದ ತನು ಅಡವಿಯೊಳಗೆ ಹೊಲಬುಗೆಟ್ಟು, ಅಂಬೆ ಅಂಬೆ ಎಂದು ಕರೆಯುತ್ತ ಒರಲುತ್ತಲಿದೆ.

ತನುವಿನಲ್ಲಿದ್ದ ಅರಿವೆಂಬ ಗುರು ದೇವನು, ತನುವಿನಲ್ಲಿ ಆವರಿಸಿದ ಮನಕ್ಕೆ ದರ್ಶನವನಿತ್ತು, ಬಾಳು ಬಾಳೆಂದು ಹೇಳುವವರೆಗೆ ತನುವಿನ ಬವಣೆ ಹರಿಯುವುದಿಲ್ಲ.

ತನು ಶ್ರೀಮಂತನದಾದರೇನು; ಬಡವ ಭಿಕ್ಷುಕನದಾದರೇನು: ತನುವಿನ ನಿಜ ಶ್ರೀಮಂತಿಕೆ ತನುವಿಗೆ ತಿಳಿಯುವವರೆಗೆ ಅದು ಹೊಲಬುಗೆಟ್ಟ ಪಶುವಿಗೆ ಸಮ. ಅಂಬೆ ಅಂಬೆ ಎಂದು ಕರೆಯುತ್ತ ಒರಲುವುದು ತಪ್ಪುವುದಿಲ್ಲ.

ತನುವಿನ ಅಜ್ಞಾನ ತನುವೇ ಕಳೆದುಕೊಳ್ಳಲು ಬರುವುದಿಲ್ಲ. ತನುವಿನಲ್ಲಿ ತನ್ಮಯವಾದ ಅರಿವು ಎಂಬ ಗುರುದೇವನು ಮಾತ್ರ ಕಳೆಯಬಲ್ಲ. ಆತನನ್ನು ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ ಅಂಬೆ ಅಂಬೆ ಎಂದು ಕರೆಯುತ್ತಲಿದ್ದೇನೆ; ಅಂಬೆ, ಅಂಬೆ ಎಂದು ಒರಲುತ್ತಲಿದ್ದೇನೆ ಕೂಡಲ ಸಂಗಮದೇವಾ ನಿನ್ನ ಕಂದನಾದ ಪಶು ನಾನು; ನೀನಾಗಿಯೇ ಬಾಳು ಬಾಳು ಎಂದು ನನ್ನನ್ನು ಹರಸುವವರೆಗೆ ನನ್ನ ಈ ರೋಧನ ನಿಲ್ಲದು ತಂದೆ ಎಂದು ಒಡಲು, ಒಡಲೊಡೆಯನನ್ನು ಬೇಡಲೇಬೇಕು.

ಮಂಚಣ್ಣ : ತನುವಿನ ನಿಜ ತನುವಿಗೆ ತಿಳಿಯುವವರೆಗೆ ಅದು ಹೊಲಬುಗೆಟ್ಟ ಪಶುವಿಗೆ ಸಮ ಎಂದು ನಮಗೆ ತಿಳಿಹೇಳಿದ ತಮಗೆ ಶರಣು ಶರಣಾರ್ಥಿ.

ಮೆರೆಮಿಂಡಯ್ಯ :

ಸಮುದ್ರದೊಳಗಣ ಸಿಂಪಿನಂತೆ
ಬಾಯ ಬಿಡುತ್ತಿದ್ದೇನಯ್ಯಾ !
ನೀವಲ್ಲದೆ ಮತ್ತಾರು ಎನ್ನನರಿವವರಿಲ್ಲ ನೋಡಯ್ಯಾ .
ಕೂಡಲಸಂಗಮದೇವಾ,
ನೀವಲ್ಲದೊಳಕೊಂಬವರಿಲ್ಲವಯ್ಯಾ ! ॥ 55 ॥

ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಸಮುದ್ರ ತನ್ನ ಜಲದಿಂದ ಎಷ್ಟೋ ಚಿಪ್ಪುಗಳನ್ನು ಮಾಡುತ್ತದೆ. ಜಲದಿಂದಾದ ಸಕಲ ಚಿಪ್ಪುಗಳಿಗೂ ಮುತ್ತು ಮಾಡಲು ಸಾಧ್ಯವಾಗುವುದಿಲ್ಲ. ಚಿಪ್ಪಿಗೆ

ಮುತ್ತು ಮಾಡುವ ತವಕ ಬೇಕು. ಹಗಲಿರುಳೆನ್ನದೆ ಸ್ವಾತಿ ಹನಿಗಾಗಿ ಬಾಯಿಬಿಟ್ಟು ಕಾಯಬೇಕು; ಸುಸ್ತಾಗಬೇಕು. ಆಗ ಸ್ವಾತಿಯ ಜಲಬಿಂದು ಕರುಣೆ ತೋರುತ್ತದೆ.

ತನಗಾಗಿ ಹಗಲಿರುಳೆನ್ನದೆ ಪರಿತಪಿಸುವ ಚಿಪ್ಪಿನ ಬಾಯಲ್ಲಿ ಜಲಬಿಂದು ಚಿಮ್ಮುತ್ತದೆ. ಆ ಜಲಬಿಂದುವೇ ಗಟ್ಟಿಯಾಗಿ ಮುತ್ತಾಗಿ ಫಳಫಳನೆ ಹೊಳೆಯುತ್ತದೆ.

ಲದ್ದೆಯ ಸೋಮಯ್ಯ : ಮತ್ತಷ್ಟು ಹೇಳಿ ಬಸವಣ್ಣ.

ಬಸವಣ್ಣ : ಚಿಪ್ಪು ಜಲದಿಂದಲೆ; ಮುತ್ತು ಕೂಡಾ ಜಲದಿಂದಲೇ ಹುಟ್ಟಿದೆ. ಬಿಚ್ಚಿ ನೋಡುವ ಸಮರ್ಥ ಎರಡನ್ನೂ ತಿಳಿಯುತ್ತಾನೆ. ಚಿಪ್ಪಿನ ಒಳಮೈ, ಅದರೊಳಗಿದ್ದ ಮುತ್ತು ಥಳಥಳನೆ ಹೊಳೆಯುತ್ತದೆ. ಚಿಪ್ಪಿನ ಹೊರಮೈ ಹೊಳೆಯುವುದಿಲ್ಲ. ಮುತ್ತು ಬೆಳಗುವ ಮೂಲಕ ಹೊಳೆಯುತ್ತದೆ. ತನು ನುಡಿಯುವ ಮೂಲಕ ಹೊಳೆಯುತ್ತದೆ. ಎರಡೂ ಜಲದಿಂದಾದ ಪದಾರ್ಥಗಳೇ.

ಜ್ಞಾನಿ ನೋಡಿ ತಿಳಿದು ಸಂಭ್ರಮಿಸಿ ಜಲದ ಲೀಲೆಯನ್ನು ಅರಿಯುತ್ತಾನೆ. ಮುಟ್ಟುವುದಿಲ್ಲ; ಸಂಗ್ರಹಿಸುವುದಿಲ್ಲ; ನೋಡಿ ಆನಂದ ಪಡುತ್ತಾನೆ. ಸಮುದ್ರದ ಎಲ್ಲಾ ಚಿಪ್ಪಿನಲ್ಲಿ ಮುತ್ತುಗಳು ಇರುವುದಿಲ್ಲ. ಆದರೆ ಜಗದಲ್ಲಿರುವ ಸಕಲ ತನುಗಳು ಕೂಡಾ ಮುತ್ತುಗಳೇ ಆಗಿವೆ. ಮುತ್ತುಗಳಿಗೆ ಮುತ್ತುಗಳು ಎಂದು ಹೇಗೆ ಗೊತ್ತಿಲ್ಲವೊ ಹಾಗೆಯೇ ತನುಗಳಿಗೆ ತಾನು ಜ್ಞಾನಿ ಎನ್ನುವುದು ಗೊತ್ತಿಲ್ಲ. ಚಿಪ್ಪಿನಲ್ಲಿ ಮುತ್ತು ಹೇಗೆ ಬಚ್ಚಿಟ್ಟುಕೊಂಡಿದೆಯೋ ಹಾಗೆಯೇ ತನುವಿನಲ್ಲಿ ತನುವನ್ನು ಬೆಳಗಿಂಗೆ ಬೆಳಗಾಗಿ ಬೆಳಗುವ ಅರಿವು ಬಚ್ಚಿಟ್ಟುಕೊಂಡಿದೆ.

ತನು ಮತ್ತು ಮನಗಳೆರಡು ಕೂಡಿ "ನೀವಲ್ಲದೆ ಮತ್ತಾರೂ ಎನ್ನನು ಅರಿವವರು ಇಲ್ಲ ನೋಡಯ್ಯಾ, ಕೂಡಲಸಂಗಮದೇವಾ ನೀವಲ್ಲದೆ ಎನ್ನನು ಒಳಕೊಂಬುವರು ಇಲ್ಲವಯ್ಯಾ'' ಎಂದು ಬೇಡಲೇ ಬೇಕು.

ಅಜ್ಞಾನದ ಪೊರೆ ಹರಿದುಕೊಂಡು ಚಿಪ್ಪು ಸೀಳಿ ಅರಿವಿನ ಮುತ್ತು ನೋಡುವ ಬಯಕೆ ಮನಕ್ಕೆ ಆಗಲೇಬೇಕು. ಅಥವಾ ಮನದ ಅಜ್ಞಾನದ ಚಿಪ್ಪು ಸೀಳಿ, ಪೊರೆ ಹರಿದು, ಅರಿವಿನ ಮುತ್ತಿನ ಬೆಳಕು ಪ್ರಜ್ವಲಿಸಿ ಹೊರಬರಬೇಕು. ಮನದ ಕತ್ತಲು ಜಾತಿ-ಮುತ್ತಿನ ಅರಿವಿನ ಬೆಳಕಿನಲ್ಲಿ ಲೀನವಾಗಿ, ತನು ಮುತ್ತಿನಂತೆ ಥಳಥಳನೆ ಹೊಳೆಯಬೇಕು.

ಕಾಳವ್ವೆ : ತನುವನ್ನು ಆವರಿಸಿದ ಮನದ ಮೂಲಕ ಅರಿವು ಬೇಡುವ ಸೂತ್ರವನ್ನು ದಯಪಾಲಿಸಿದ ತಮಗೆ ಶರಣು ಶರಣಾರ್ಥಿ ಬಸವರಸ.

ಬಸವಣ್ಣ : ತಮ್ಮೆಲ್ಲರಿಗೂ ಶರಣು ಶರಣಾರ್ಥಿ. ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸತ್ಸಂಗದ ಸಭೆಯಲ್ಲಿ ಸೇರೋಣ ಎಂದು ಸಭೆಗೆ ಮಂಗಲ ಹಾಡಿದರು.

ಸಕಲ ಶರಣರು ವಚನದ ಸುಧೆಯನುಂಡ ಅರಿವಿನ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

೧೮

ಮಹಾಮನೆಯಲ್ಲಿ ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವಣ್ಣ ಎಂದು ಹೇಳುತ್ತಾ ಪುನಃ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

ಡೋಹರ ಕಕ್ಕಯ್ಯ :

ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ.
ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ.
ಓ ಎನ್ನಲಾಗದೆ ಅಯ್ಯಾ ?
ಆಗಳೂ ನಿಮ್ಮ ಕರೆವುತ್ತಲಿದ್ದೇನೆ,
ಮೌನವೇ ಕೂಡಲಸಂಗಮದೇವಾ? ॥ 56 ॥

ತಮ್ಮ ಈ ವಚನದ ಬೆಡಗಿನ ರಹಸ್ಯವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ಇಡೀ ಜಗತ್ತಿನಲ್ಲಿರುವ ಸಕಲ ಕಾಯಗಳಿಗೂ ಗುರುದೇವನು ಒಬ್ಬನೇ ಆಗಿದ್ದಾನೆ. ಆತ ಸಕಲ ಕಾಯಗಳಲ್ಲಿಯೂ ಅರಿವು ಆಗಿ ಸಂಗಮವಾಗಿದ್ದಾನೆ. ಕಾಯವನ್ನು ಆವರಿಸಿದ ಮನ ಕಾಯದಲ್ಲಿಯೇ ಸಂಗಮವಾದ ಅರಿವು ಎನ್ನುವ ಗುರುದೇವನಿಗೆ ಶಿಷ್ಯನಾಗಿ ಅಯ್ಯಾ ಅಯ್ಯಾ ಎಂದು ಕರೆಯಬೇಕು.

ಕಕ್ಕಯ್ಯ : ಕಾಯ ಮತ್ತೊಂದು ಕಾಯವನ್ನು ಗುರುವನ್ನಾಗಿಸಿಕೊಂಡು ತಾನು ಶಿಷ್ಯನಾಗಿದೆಯಲ್ಲ ಬಸವರಸ?

ಬಸವಣ್ಣ : ಕಾಯದಲ್ಲಿ ಸಂಗಮವಾದ ಅರಿವೇ ಗುರುದೇವನಾಗಿ ಕಾಯಕ್ಕೂ ಮನಕ್ಕೂ ಕ್ಷಣ ಕ್ಷಣಕ್ಕೂ ಬೋಧೆ ಮಾಡುತ್ತಿದ್ದರೂ, ಕಾಯವನ್ನು ಆವರಿಸಿದ ಮನ ಆತನ ಬೋಧೆಯನ್ನು ಆಲಿಸುತ್ತಿಲ್ಲ. ಮನ, ಕಾಯದಿಂದ ಹೊರಬಂದ ಅರಿವಿನ ಪುಸ್ತಕಗಳಿಗೆ ಮರುಳಾಗಿದೆ. ಪುಸ್ತಕಗಳನ್ನು ರಚನೆ ಮಾಡಿದ ಕಾಯಕ್ಕೆ ಮರುಳಾಗಿದೆ.

ಪುಸ್ತಕ ಓದಿ ಹೇಳುವಾಗ ಕುಳಿತು ಕೇಳುವ ಕಾಯಕ್ಕೆ ಸಂತೋಷವಾಗುವುದಿಲ್ಲವೆ?

ಪುರದ ನಾಗಣ್ಣ: ಓದುವ ಕಾಯಕ್ಕೆ ಆಗುವಷ್ಟು ಸಂತೋಷ ಕೇಳುವ ಕಾಯಕ್ಕೂ ಆಗುತ್ತದೆ ಬಸವಣ್ಣ.

ಬಸವಣ್ಣ : ಓದಿ ಹೇಳುವ ಮತ್ತು ಕೇಳುವ ಕಾಯಗಳೆರಡರಲ್ಲಿ ಅರಿವು ಎನ್ನುವ ಗುರುದೇವ ಆಲಿಸಿ, ಆ ಎರಡೂ ಕಾಯಗಳನ್ನು ಸಂತೋಷ ಪಡಿಸುತ್ತಾನೆ. ಆದರೆ ಎರಡೂ ಕಾಯಗಳನ್ನು ಆವರಿಸಿದ ಮನದ ಭ್ರಮೆಯಿಂದಾಗಿ, ಓದಿ ಹೇಳುವ ಕಾಯ

ಗುರುವಾಗಿ ಹೇಳುತ್ತದೆ; ಆಲಿಸುವ ಕಾಯ ಶಿಷ್ಯನಾಗಿ ಆಲಿಸುತ್ತದೆ. ಹೀಗಾಗಿ ಎರಡೂ ಕಾಯಗಳಲ್ಲಿರುವ ಗುರುದೇವ ಎರಡೂ ಕಾಯಗಳಿಗೂ ಪರಿಚಯವಾಗುವುದಿಲ್ಲ.

ಗೊಗ್ಗವ್ವೆ: ತಿಳಿಹೇಳುವವರು ಯಾರೂ ಇಲ್ಲವೆ ಬಸವರಸ?

ಬಸವಣ್ಣ: ಕಾಯದಲ್ಲಿಯೇ ಇದ್ದು ಕಾಯಕ್ಕೆ ಮನಕ್ಕೆ ಬೋಧೆ ಮಾಡುವ ಗುರುದೇವನನ್ನು ಮನ ತಳ್ಳಿ, ಕಾಯಕ್ಕೆ ಗುರುದೇವನ ವೇಷ ಹಾಕಿ, ತನ್ನಂತೆಯೇ ಇರುವ ಕಾಯವನ್ನು ಶಿಷ್ಯನನ್ನಾಗಿಸಿಕೊಂಡು ಬೋಧೆ ಮಾಡುವ ಕಾಯವನ್ನು ಯಾರು ತಡೆಯಬೇಕು?

ಗೊಗ್ಗವ್ವೆ: ಗುರು ಕಾಯವಾದರೇನು ಶಿಷ್ಯ ಕಾಯವಾದರೇನು, ಇವೆರಡು ತಮಗೆ ತಾವೇ ಮೋಸ ಮಾಡಿಕೊಂಡಂತಾಗಲಿಲ್ಲವೆ ಬಸವರಸ?

ಬಸವಣ್ಣ: ಹೌದು ತಾಯಿ. ನೀವು ಸರಿಯಾಗಿಯೇ ಹೇಳಿರುವಿರಿ. ಗುರುವಿನ ದೇಹಕ್ಕೂ, ಶಿಷ್ಯನ ದೇಹಕ್ಕೂ ಗುರುದೇವ ಒಬ್ಬನೇ ಆಗಿದ್ದಾನೆ. ಆ ಗುರುವಿಗೆ ಶಿಷ್ಯರಾಗಿ ಅಯ್ಯಾ ಅಯ್ಯಾ ಎಂದು ಕರೆಯುವ ಬಯಕೆಯಾಗಬೇಕು. ನಾನು ಎಷ್ಟು ಕರೆದರೂ ಓ ಎನ್ನಲಾಗದೆ ಅಯ್ಯಾ; ಎಂದು ತನು ಮತ್ತು ಮನದಿಂದ ಅರಿವೆಂಬ ಗುರುದೇವನಿಗೆ ಮೊರೆ ಹೋಗಬೇಕು. ಆಗಲೂ ನಿಮ್ಮನ್ನು ಕರೆಯುತ್ತಲಿದ್ದೇನೆ, ಈಗಲೂ ನಿಮ್ಮನ್ನು ಕರೆಯುತ್ತಲಿದ್ದೇನೆ ; ಸದ್ಗುರುವೆ ಮೌನವೇ ತಂದೆ ಎಂದು ತನಗೆ ತಾನೇ ತನುವಿನ ಕಣ ಕಣದಲ್ಲಿ ತನ್ಮಯವಾದ ಅರಿವಿಗೆ ಮೊರೆ ಹೋಗಬೇಕು.

ಆಯ್ದಕ್ಕಿ ಲಕ್ಕಮ್ಮ: ಧನ್ಯರಾದೆವು ಬಸವರಸ. ತನುವಿನಲ್ಲಿಯೇ ತನ್ಮಯವಾದ ಸತ್ಯದೊಂದಿಗೆ; ತನು ಮತ್ತು ಮನಗಳೆರಡು ಕೂಡಿ ಹೇಗೆ ಸಂಗ ಮಾಡಬೇಕು ಎನ್ನುವ ತಮ್ಮ ಸತ್ಸಂಗದಿಂದಾಗಿ ನಾವೆಲ್ಲ ಪಾವನರಾದೆವು ತಂದೆ ತಮಗೆ ಶರಣು.

ಉರಿಲಿಂಗಪೆದ್ದಿ :

ನೀ ಹುಟ್ಟಿಸಿದಲ್ಲಿ ಹುಟ್ಟಿ,
ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ?
ನೀವಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ ?
ಅಕಟಕಟಾ! ಎನ್ನವ ನೆನ್ನವ ನೆನ್ನಯ್ಯಾ ,
ಕೂಡಲಸಂಗಮದೇವಾ. ॥ 57 ॥

ಬಸವರಸ, ತಮ್ಮ ಈ ವಚನದ ಸೂತ್ರವನ್ನು ವಿವರಿಸಿ ಹೇಳಿ ಎನ್ನೊಡೆಯ.

ಬಸವಣ್ಣ: ತನು, ಶ್ರೀಮಂತ ಬಡವ ಭಿಕ್ಷುಕ ಜಾತಿ-ಮತ ಪಂಥ ನಾನಾ ಧರ್ಮಗಳನ್ನು ಹೊತ್ತುಕೊಂಡ ಗರ್ಭದಲ್ಲಿ ಹೆಣ್ಣಾಗಿ ಗಂಡಾಗಿ ಜನ್ಮ ತಾಳುತ್ತದೆ. ಇದು ತನುವಿನ ವಶದಲ್ಲಿಲ್ಲ; ತಂದೆ ತಾಯಿಗಳ ವಶದಲ್ಲಿಯೂ ಇಲ್ಲ. ಇದು ಅರಿವೆಂಬ ಗುರುದೇವನ ಇಚ್ಛೆ; ಮನವೆಂಬ ಬ್ರಹ್ಮನ ಇಚ್ಛೆ!

ಗುಪ್ತ ಮಂಚಣ್ಣ: ತಾವು ಹೇಳುವುದು ವಿಚಿತ್ರವಾಗಿದೆಯಲ್ಲ ಬಸವರಸ? ಇಂತಹ ಜಾತಿ-ಮತ ಪಂಥದಲ್ಲಿ ಹುಟ್ಟಿದ್ದು ನನ್ನ ದುರ್ದೈವ ಎಂದು ಕಳವಳಿಸುತ್ತಿರುತ್ತಾರೆ.

ಬಸವಣ್ಣ: ಹುಟ್ಟಿದ್ದು ತನ್ನ ತಪ್ಪಲ್ಲ; ತಂದೆ ತಾಯಿಗಳ ತಪ್ಪೂ ಅಲ್ಲ. ಅದು ತನುವಿನ ಇಚ್ಛೆಯೂ ಅಲ್ಲ. ಅರಿವು ಎನ್ನುವ ಗುರುದೇವ ಜೀವಜಲವನ್ನೇ ಬೀಜ ಮಾಡಿ, ಆ ಬೀಜದಲ್ಲಿ ತಾನಿದ್ದು ತಂದೆಯ ಮುಖಾಂತರ ತಾಯಿ ಗರ್ಭಕ್ಕೆ ಪ್ರವೇಶ ಮಾಡಿ, ತಾಯಿ ಗರ್ಭದಿಂದ ಹೊರಬರುತ್ತಾನೆ. ಇಲ್ಲಿ ತನುವನ್ನು ಹಡೆದ ತಂದೆ ತಾಯಿ ನೆಪ ಮಾತ್ರ ಆಗುತ್ತಾರೆ.

ಉರಿಲಿಂಗಪೆದ್ದಿ: ಧನ್ಯರಾದೆವು ಬಸವಣ್ಣ. ತಮ್ಮ ಮಾತು ನಮ್ಮೆಲ್ಲರ ಅನುಭವಕ್ಕೆ ಬರುತ್ತಲಿದೆ. ತನು ಹೆಣ್ಣಾದರೇನು, ಗಂಡಾದರೇನು ಅದರ ಸಾರಥಿ ಮಾತ್ರ ಮಹಾದೇವನೇ ಆಗಿದ್ದಾನೆ ; ಸಾಕ್ಷಾತ್ ಪರಬ್ರಹ್ಮನೇ ಆಗಿದ್ದಾನೆ ಎನ್ನುವ ಸುಳಿವು ತಮ್ಮ ಮಾತುಗಳಲ್ಲಿ ಬಚ್ಚಿಟ್ಟುಕೊಂಡಿದೆಯಲ್ಲ ಬಸವರಸ?

ಬಸವಣ್ಣ : ಸರಿಯಾಗಿ ಊಹಿಸಿರುವಿರಿ ಶರಣರೆ. ಇಂತಹ ಶರಣ ಬಳಗವನ್ನು ಪಡೆದ ನಾನು ಧನ್ಯ .

ತನುವನ್ನು ಆವರಿಸಿದ ಮನ, ತನ್ನ ಭ್ರಮೆ ಕಳೆದುಕೊಂಡು ಸಾರಥಿಯಾಗಿ, ತನುವನ್ನು ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನ ಹತ್ತಿರ ಕರೆದುಕೊಂಡು ಹೋದರೆ ಸಾಕು, ಮನ ತನ್ನ ಭ್ರಮೆ ಕಳೆದುಕೊಂಡು ಸಾಕ್ಷಾತ್ ಬ್ರಹ್ಮನೇ ತಾನಾಗುತ್ತದೆ.

ತನು ಬ್ರಹ್ಮ ಹುಟ್ಟಿಸಿದಲ್ಲಿ ಹುಟ್ಟುತ್ತದೆ. ಬ್ರಹ್ಮ ಕೊಂದಲ್ಲಿ ಸಾಯುತ್ತದೆ. ಬ್ರಹ್ಮ ಇರಿಸಿದಲ್ಲಿ ಇರುತ್ತದೆ. ಗುರುದೇವನೊಂದಿಗೆ ಲೀನವಾದ ಮನ ನಿಃಶ್ಚಲ ಬ್ರಹ್ಮನಾಗುತ್ತದೆ. ಆಗ ತನು ಬ್ರಹ್ಮನ ವಶವೇ ಹೊರತು ಭ್ರಮೆಯ ವಶವಲ್ಲ!

ಅಮುಗಿ ದೇವಯ್ಯ : ಮನದಿಂದಾಗಿ ತನು ತನ್ನನ್ನು ಜಾತಿ-ಮತ ಪಂಥಗಳಿಂದ ಸೀಳಿಕೊಂಡಿದೆ. ಗಂಡು ಹೆಣ್ಣು ಎನ್ನುವ ಅಜ್ಞಾನದಿಂದ ಬೇರ್ಪಡಿಸಿಕೊಂಡಿದೆ. ರಾಜ ಪ್ರಧಾನಿ ಸೈನಿಕ ಕಾಲಾಳು ಪ್ರಜೆ ಎಂದು ವಿಂಗಡಿಸಿಕೊಂಡಿದೆಯೇ ಹೇಗೆ ಬಸವರಸ?

ಬಸವಣ್ಣ: ಹೌದು ಶರಣರೆ; ಸರಿಯಾಗಿ ಹೇಳಿದಿರಿ. ಮನ, ಅರಿವು ಎನ್ನುವ ಗುರುದೇವನ ಸಹಾಯದಿಂದ ನೋಡಿದರೆ ಸಕಲ ತನುಗಳು ತನ್ನಂತೆಯೇ ಇವೆ. ತನು ಯಾವ ದೇಶದ್ದಾದರೇನು, ಯಾವ ಭಾಷೆಯದಾದರೇನು? ಚರ್ಮ ಒಂದೇ. ಅದರೊಳಗೆ ಬಚ್ಚಿಟ್ಟುಕೊಂಡ ಪದಾರ್ಥಗಳು ಕೂಡಾ ಒಂದೇ. ಮನದಿಂದಾಗಿ ತನ್ನದೇ ಆದ ಅರಿವಿನಿಂದ ತನುವನ್ನು ಬೇರ್ಪಡಿಸಿದೆ.

ಸತ್ಯಕ್ಕ: ಮನ, ತನ್ನದೇ ಆದ ಭ್ರಮಾ ಅರಿವನ್ನು ತನುವಿನ ಮೂಲಕ ಚಲಾಯಿಸುತ್ತದೆಯೇ? ಅದು ಹೇಗೆ ಬಸವರಸ?

ಬಸವಣ್ಣ: ಹೌದು ತಾಯಿ. ಹಳದಿ ಲೋಹವನ್ನು ಚಿನ್ನ ಎಂದು ಮನ ತನುವಿಗೆ ಯಾಮಾರಿಸಿ ಆ ಚಿನ್ನಕ್ಕಾಗಿ ತನುವನ್ನು ಹಗಲಿರುಳು ಎನ್ನದೇ ದುಡಿಯಲು ಹಚ್ಚುತ್ತದೆ. ಚಿನ್ನ ಕದಿಯಲು ತನುವನ್ನು ಪ್ರೇರೇಪಿಸಿ ತನುವಿಗೆ ಕಳ್ಳನ ಪಟ್ಟ ಕಟ್ಟುತ್ತದೆ. ಯುದ್ಧ ಮಾಡಿ ಅನ್ಯ ತನುವನ್ನು ಕೊಂದು ಚಿನ್ನ ಪಡೆದ ತನುವನ್ನು ರಾಜನನ್ನಾಗಿಸುತ್ತದೆ. ಹೀಗೆ ಮನದಿಂದಾಗಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಎಂದು ತನುವನ್ನು ವಿಂಗಡಿಸಿಕೊಂಡಿದೆ.

ಗಾಣದ ಕಣ್ಣಪ್ಪ: ತನ್ನದೇ ಆದ ಅಜ್ಞಾನದ ಅರಿವಿನಲ್ಲಿ ಬಿದ್ದು ಒದ್ದಾಡುವ ತನು ಮನಗಳು ಇದರಿಂದ ಹೊರಬರಲು ಸಾಧ್ಯವೆ ಬಸವಣ್ಣ?

ಬಸವಣ್ಣ : ಚರ್ಮ ಹೆಣ್ಣೋ ಗಂಡೋ ಎಂದು ತನುವನ್ನು ಕೇಳಿದರೆ, ಮನ ಮತ್ತು ತನು, ತನುವಿನಲ್ಲಿ ತನ್ಮಯವಾದ ಮೂಲ ಅರಿವಿಗೆ ಹೋಗಿ, ಚರ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಅದು ಚರ್ಮ ಎಂದು ಉತ್ತರಿಸುತ್ತದೆಯಲ್ಲ. ಆಗ ತನುವಿನಲ್ಲಿ ಮನದಿಂದಾಗಿ ನಿರ್ಧರಿಸಲ್ಪಟ್ಟ ಅಜ್ಞಾನದ ಅರಿವು ನಾಷವಾಗಲಿಲ್ಲವೆ?

ಆದಯ್ಯ : ತನ್ನ ತಾನು ಅರಿಯದ ಮುನ್ನ ತನ್ಮಯವಾದ ಅರಿವು; ತನ್ನ ತಾನು ಅರಿದ ಬಳಿಕ ಅರಿವು ತನ್ಮಯವೆಂದು ಅರಿತ ಅರಿವು. ಆ ಅರಿವೇ ಕರಿಗೊಂಡ ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ ಎಂದು ಹೇಳಿದಂತಾಗಲಿಲ್ಲವೇ ಬಸವರಸ?

ಬಸವಣ್ಣ : ಆಹಾ ಧನ್ಯನಾದೆ. ಆದಯ್ಯ ಶರಣರಿಂದ ಹೊರಬಂದ ಈ ಸೂತ್ರದ ಮಾತು ಸಕಲ ಶರಣರನ್ನು ಪುಳಕಿತಗೊಳಿಸಿತು. ಅಷ್ಟೇ ಏಕೆ ಈ ಭೂಮಂಡಲದಲ್ಲಿರುವ ಸಕಲ ತನುಗಳಿಗೂ ಇದು ಮಹಾ ಸೂತ್ರದ ಮಾತಾಗಿ ದಾಖಲೆಗೊಳ್ಳುವುದರಲ್ಲಿ ಸಂದೇಹವೇ ಇಲ್ಲ.

(ಸಕಲ ಶರಣರು ಬಸವಣ್ಣ ಎದ್ದು ನಿಂತು ಒಕ್ಕೊರಲಿನಿಂದ ಶರಣು ಶರಣಾರ್ಥಿ ಆದಯ್ಯ ಶರಣರೇ ಎಂದು ಹೇಳುತ್ತಾ ಕುಳಿತುಕೊಂಡರು)

ಮನ ಅರಿವಿಗೆ ಹೋಗಿ ಆ ಅರಿವೆ ತಾನಾಗಿ ಘನಮನವಾದಾಗ; ನೀ ಹುಟ್ಟಿಸಿದಲ್ಲಿ ನಾ ಹುಟ್ಟುವೆ ತಂದೆ, ನೀನು ಕೊಂದಲ್ಲಿ ನಾನು ಸಾಯುವೆ ನನ್ನಯ್ಯ; ಜನನ ಮರಣ ಎನ್ನ ವಶವೇ ಅಯ್ಯಾ ? ನೀವು ಇರಿಸಿದಲ್ಲಿ ಇರದೆ ಅದು ಎನ್ನ ವಶವೇ ಅಯ್ಯಾ ? ಅಕಟಕಟಾ ಭಗವಂತನೇ ಗುರುದೇವನೇ ನನ್ನನ್ನು ನೀನು, ಎನ್ನವನು ಎನ್ನವನು ಎಂದು ಹೇಳಯ್ಯಾ ಕೂಡಲಸಂಗಮದೇವಾ ಎಂದು ಮನ ತನು ಸೇರಿ; ತನುವಿನಲ್ಲಿ ತನ್ಮಯವಾದ ಗುರುದೇವನೊಂದಿಗೆ ಮಾತನಾಡಬೇಕು. ತನು ಲೋಕಕ್ಕೆ ಇರುವದು ಇದೊಂದೇ ದಾರಿ.

ಗಾಣದ ಕಣ್ಣಪ್ಪ : ತಮ್ಮ ವಚನದ ರಹಸ್ಯವನ್ನು ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ ಬಸವರಸ.

ನಾಗಲಾಂಬಿಕೆ :

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ
ಶಿವಾ ಶಿವಾ ಎಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು
ಕೂಡಲಸಂಗಮದೇವಾ. ॥ 58 ॥

ಬಸವರಸ, ತಮ್ಮ ಈ ವಚನದ ಸೂತ್ರವನ್ನು ವಿವರಿಸಿ ಹೇಳಿ ಎನ್ನೊಡೆಯ.

ಬಸವಣ್ಣ: ಈ ಭೂಮಿಯ ಮೇಲೆ ಒಂದೇ ಜಾತಿಯ ಪ್ರಾಣಿಗಳಿಲ್ಲ, ಒಂದೇ ಜಾತಿಯ ಕೀಟಗಳಿಲ್ಲ, ಒಂದೇ ಜಾತಿಯ ಪಕ್ಷಿಗಳಿಲ್ಲ, ಒಂದೇ ಜಾತಿಯ ಗಿಡಮರಗಳಿಲ್ಲ, ಒಂದೇ ಜಾತಿಯ ಜಲಚರಗಳಿಲ್ಲ. ಆದರೂ ಬಲು ಸೊಬಗಿನಿಂದ ಕೂಡಿವೆ. ಯಾವ ಗದ್ದಲಗಳಿಲ್ಲ.

ಈ ಭೂಮಂಡಲದ ಮೇಲಿರುವ ಮನುಷ್ಯ ಜಾತಿ ಒಂದೇ ಆಗಿದ್ದರೂ ಸಮಾಧಾನದಿಂದ ಇಲ್ಲ. ಪ್ರಚಾರ ಬಯಸಿದ ತನು ಪಲ್ಲಕ್ಕಿಯಲ್ಲಿ ಕೂಡುವುದು ತಡವಿಲ್ಲ; ಹೊತ್ತ ತನುಗಳು ಕುಳಿತ ತನುವನ್ನು ಬೀಳಿಸುವುದೂ ತಡವಿಲ್ಲ.

ಒಂದು ತನು ಭಿಕ್ಷುಕನಾದರೆ ಮತ್ತೊಂದು ತನು ದಾನಿ, ಒಂದು ತನು ರಾಜನಾದರೆ ಮತ್ತೊಂದು ತನು ಪ್ರಧಾನಿ, ಸೈನಿಕ, ಕಾಲಾಳು, ಹೆಣ್ಣು, ಗಂಡು ಹೀಗೆ ತನು ತನ್ನನ್ನು ತಾನೇ ಅಜ್ಞಾನದಿಂದ ಸೀಳಿಕೊಂಡ ತನುಗಳ ಕಾಡು, ದಟ್ಟಾರಣ್ಯ .

ಭೂಮಿಯ ಮೇಲೆ ತಳಊರಿದ ಯಾವ ತನುವನ್ನು ಭೂಮಿ ಹೊರಗೆ ತಳ್ಳುವುದಿಲ್ಲ. ಆದರೂ ಭೂಮಿಗಾಗಿ ಯುದ್ಧ! ಭೂಮಿಯೊಳಗಿದ್ದ ಹೇಮಕ್ಕಾಗಿ ಯುದ್ಧ, ಹೆಣ್ಣಿಗ್ಗಾಗಿ ಯುದ್ಧ, ಮಾತಿಗಾಗಿ ಯುದ್ಧ, ನೋಟಕ್ಕಾಗಿ ಯುದ್ಧ; ರುಚಿ ಸ್ಪರ್ಶ ವಾಸನೆಗಾಗಿ ಯುದ್ಧ. ಇಂತಹ ಅಜ್ಞಾನದ ದಟ್ಟ ಅರಣ್ಯದಲ್ಲಿ ನನ್ನನ್ನು ಹುಲುಗಿಳಿಯನ್ನಾಗಿ ಮಾಡಿ ಶಿವ ಶಿವಾ ಎಂದು ನನ್ನಿಂದ ಓದಿಸಿ ಸಲಹು ತಂದೆ.

ದೇಹವನ್ನೇ ಹಂದರ ಮಾಡಿಕೊಂಡು ಅದರಲ್ಲಿ ವಾಸಮಾಡಿದ ಗುರುದೇವನೇ ನಿನ್ನ ಅರಿವಿನ ಭಿಕ್ಷೆ ನೀಡಿ ಭಕ್ತಿಯೆಂಬ ಪಂಜರದೊಳಗೆ ನನ್ನನ್ನು ಇಟ್ಟು ಸಲಹು ತಂದೆ ಎಂದು ಬೇಡಬೇಕು.

ಸತ್ಯಕ್ಕ : ಮನ, ಅರಿವೆಂಬ ಗುರುದೇವನನ್ನು ಬೇಡುವ ಸೂತ್ರವನ್ನು ನಮಗೆ ನೀಡಿದ ತಮಗೆ ಶರಣು ಶರಣಾರ್ಥಿ ಬಸವರಸ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಎಲ್ಲರಿಗೂ ಶರಣು ಶರಣಾರ್ಥಿ.

ಸಕಲ ಶರಣರು ಎದ್ದು ನಿಂತು ಬಸವಣ್ಣನವರಿಗೆ ಕೈಮುಗಿದು ಸತ್ಸಂಗದ ಬ್ರಹ್ಮರಸ ಪಾನಮಾಡಿದ ಮತ್ತಿನಲ್ಲಿ ತಮ್ಮ ತಮ್ಮ ಮನೆಗೆ ನಡೆದರು.

□

೧೯

ಮಹಾ ಮನೆಗೆ ಬಸವಣ್ಣ ಬರುವುದೊಂದೆ ತಡ ಶರಣರು ಎದ್ದು ನಿಂತು ಕೈಮುಗಿದು ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ.

ಸತ್ಯಕ್ಕ :

ಅತ್ತಲಿತ್ತ ಹೋಗದಂತೆ : ಹೆಳವನ ಮಾಡಯ್ಯ ತಂದೆ;
ಸುತ್ತಿಸುಳಿದು ನೋಡದಂತೆ : ಅಂಧಕನ ಮಾಡಯ್ಯ ತಂದೆ;
ಮತ್ತೊಂದು ಕೇಳದಂತೆ : ಕಿವುಡನ ಮಾಡಯ್ಯ ತಂದೆ;
ನಿಮ್ಮ ಶರಣರ ಪಾದವಲ್ಲದೆ,
ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲಸಂಗಮದೇವಾ. ॥ 59 ॥

ತಮ್ಮ ಈ ವಚನದ ಬೆಡಗನ್ನು ನಮಗೆ ತಿಳಿಯುವಂತೆ ಬಿಡಿಸಿ ಹೇಳಿ ತಂದೆ.

ಬಸವಣ್ಣ: ಅತ್ತಲಿತ್ತ ಹೋಗದಂತೆ : ಹೆಳವನ ಮಾಡಯ್ಯ ತಂದೆ; ಸುತ್ತಿಸುಳಿದು ನೋಡದಂತೆ : ಅಂಧಕನ ಮಾಡಯ್ಯ ತಂದೆ; ಮತ್ತೊಂದು ಕೇಳದಂತೆ : ಕಿವುಡನ ಮಾಡಯ್ಯ ತಂದೆ; ಅರಿವೆಂಬ ಗುರುದೇವನ ದರುಶನ ಪಡೆದ ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆ ನನ್ನನ್ನು ಎಳೆಸದಂತೆ ಈ ಕಂದನನ್ನು ಇರಿಸು ತಂದೆ ಎಂದು ಮನ ಕಂದನಾಗಿ ಅರಿವಿನ ತಂದೆಯನ್ನು ಬೇಡಲೇಬೇಕು.

ಸತ್ಯಕ್ಕ: ದೇವರು ಕಾಣುವುದಿಲ್ಲವಲ್ಲ ಬಸವಣ್ಣ, ಕಾಣದ ದೇವರೊಂದಿಗೆ ಮಾತನಾಡುವುದಾದರೂ ಹೇಗೆ?

ಬಸವಣ್ಣ: ಮನ, ತನಗೆ ಬೇಕಾದ ದೇವರನ್ನು ತನುವಿನೊಂದಿಗೆ, ಕಲ್ಲು ಕಟ್ಟಿಗೆ ಲೋಹದಲ್ಲಿ ಮಾಡಿ, ಅದನ್ನೇ ದೇವರೆಂದು ದೇಹಕ್ಕೆ ಯಾಮಾರಿಸಿ, ಅನಂತ ಕಾಲದಿಂದಲೂ ಆರಾಧಿಸುತ್ತಲಿದೆ. ಅನಂತ ಕಾಲಗಳು ಗತಿಸಿದರೂ, ತಾನು ಮಾಡಿದ ದೇವರು ತನ್ನೊಂದಿಗೆ ಮಾತನಾಡುವುದಿಲ್ಲ.

ತನುವನ್ನು ಮಾಡಿ, ತನ್ನನ್ನು ತಿಳಿಯಲು ಆ ತನುವಿನಲ್ಲಿ ಮನವನ್ನು ಮಾಡಿ, ತಾನು ಆ ತನುವಿನಲ್ಲಿಯೇ ವಾಸವಾಗಿ, ಸದಾ ತನು ಮತ್ತು ಮನಕ್ಕೆ ಅರಿವಿನ ಪಾಠ ಮಾಡುವ ದೇವರನ್ನು ದೇವರೆಂದು ಪುರಾತನರು ಕರೆದಿದ್ದಾರೆ. ಈ ಮಾತು ಸಕಲ ತನುಗಳ ಅನುಭವಕ್ಕೂ ಬರುತ್ತದೆ.

ಸತ್ಯಕ್ಕ: ತನು ಮತ್ತು ಮನದ ಚೇಷ್ಟೆ ಸಕಲ ತನುಗಳ ಅನುಭವಕ್ಕೆ ಬರುತ್ತದೆ. ಆದರೆ ದೇವರು ಮಾಡುವ ಅರಿವಿನ ಪಾಠದ ಅನುಭವ ಆಗುವುದು ಹೇಗೆ?

ಬಸವಣ್ಣ: ಮನ, ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆಯಲ್ಲಿ ತನ್ನ ಸುಳಿವಿನ ಸಾಮ್ರಾಜ್ಯವನ್ನು ಕಟ್ಟಿಕೊಂಡು ತನುವಿನ ಮೂಲಕ ರಾಜ್ಯಭಾರ ಮಾಡುತ್ತದೆ.

ಸತ್ಯಕ್ಕ: ಅದು ಹೇಗೆ ಬಸವಣ್ಣ?

ಬಸವಣ್ಣ: ಕಲ್ಲನ್ನು, ಕಣ್ಣು ಕಲ್ಲು ಎಂದು ನೋಡುತ್ತದೆ. ಹೀಗೆ ನೋಡುವಾಗ, ಅರಿವು-ಮನ-ತನು ಒಂದೇ ಕೆಲಸದಲ್ಲಿ ಇವೆ. ಈ ಮೂರಕ್ಕೂ ಕಲ್ಲು ಮಾತ್ರ ಗಮನಕ್ಕೆ ಬರುತ್ತದೆ. ಮನ ತನುವಿನ ಮೂಲಕ ಶಿವನ ಮೂರ್ತಿ ಕೆತ್ತಿದಾಗ ; ಮನ, ತನುವಿಗೆ ದೇವರೆಂದು ಬೋಧೆ ಮಾಡಿ, ಕೈಮುಗಿದು ಹಣೆ ಮಣಿಯುವಂತೆ ಮಾಡುತ್ತದೆ. ಆಗ ಅರಿವು, ಅದು ದೇವರಲ್ಲ, ಕಲ್ಲು ಎಂದು ತನು ಮತ್ತು ಮನಕ್ಕೆ ಬೋಧೆ ಮಾಡುತ್ತದೆ. ತನು, ಮನದ ಮಾತು ಕೇಳಿ ಕಲ್ಲನ್ನೇ ದೇವರೆಂದು ನಿರ್ಧಾರ ಮಾಡುತ್ತದೆ. ಕಲ್ಲಲ್ಲಿಯೇ ಶಿವೆಯ ಮೂರ್ತಿ ಕಟೆದು ಶಿವ ಶಿವೆಗೆ ಕಲ್ಯಾಣೋತ್ಸವ ಮಾಡುತ್ತದೆ. ಮನ ತನುವಿನ ಮೂಲಕ ಶೋಬಾನೆ ಪದ ಹಾಡಿ, ಶಿವ ಶಿವೆಯರನ್ನು ಶಯನ ಗೃಹಕ್ಕೆ ಕಳಿಸಿ, ಧನ್ಯರಾದೆವು ಎನ್ನುವ ಮೂಲಕ ಶಿವಾರಾಧನೆ ಸಂಪನ್ನಗೊಳ್ಳುತ್ತದೆ.

ಸತ್ಯಕ್ಕ: ಇದಕ್ಕೆ ಕೊನೆ ಇಲ್ಲವೆ ಬಸವಣ್ಣ?

ಬಸವಣ್ಣ: ಇದು ತಪ್ಪು ಎಂದು ಹೇಳಿದ ಜ್ಞಾನಿ ತನುವನ್ನು, ಇತರ ತನುಗಳು ಕಲ್ಲಿನಿಂದ ಹೊಡೆದು ಕೊಂದು ಹಾಕುತ್ತವೆ. ರಾಜನಿಗೆ ಬೇಕಾದ ದೇವರನ್ನು ರಾಜ ಸ್ಥಾಪನೆ ಮಾಡುತ್ತಾನೆ. ರಾಜನನ್ನು ಮತ್ತೊಬ್ಬ ರಾಜ ಯುದ್ಧದಲ್ಲಿ ಸಾಯಿಸಿದಾಗ, ತನಗೆ ಬೇಕಾದ ದೇವರನ್ನು ಅದೇ ಆಲಯದಲ್ಲಿ ಸ್ಥಾಪನೆ ಮಾಡುತ್ತಾನೆ; ಅಲ್ಲಿದ್ದ ದೇವರನ್ನು ಕಿತ್ತಿ ಬೀಸಾಡುತ್ತಾನೆ. ಶಿವನನ್ನು ಪೂಜೆ ಮಾಡಿದ ಪ್ರಜೆಗಳು, ವಿಷ್ಣು ಪೂಜೆಗೆ ಒಪ್ಪುವುದಿಲ್ಲ. ಒಪ್ಪದಿದ್ದರೆ ಮಾರಣಹೋಮ ತಪ್ಪುವುದಿಲ್ಲ. ಇಲ್ಲಿ ರಾಜನಾದರೇನು, ಪ್ರಧಾನಿಯಾದರೇನು; ಪುರೋಹಿತನಾದರೇನು, ಪ್ರಜೆಯಾದರೇನು? ಎಲ್ಲರೂ ಮನಕ್ಕೆ ಸಮಾನರೆ. ಸಕಲ ತನುಗಳಲ್ಲಿಯೂ ಮನ, ತನ್ನ ಸುಳ್ಳು ಸಾಮ್ರಾಜ್ಯವನ್ನು ಕಟ್ಟಿಕೊಂಡಿದೆ.

ಶಿವನಾದರೇನು, ಶಿವೆಯಾದರೇನು? ವಿಷ್ಣುವಾದರೇನು, ಕಾಳಿಯಾದರೇನು? ಕಲ್ಲು ಕಲ್ಲಲ್ಲವೆ? ತನುವಿನಲ್ಲಿಯೇ ತನ್ಮಯವಾದ ಅರಿವಿನ ದೇವರ ಮಾತು, ತನು ಮತ್ತು ಮನಕ್ಕೆ ನಾಟದಿದ್ದರೆ ಆ ದೇವರಾದರೂ ಏನು ಮಾಡಿಯಾನು?

ಮನದಿಂದಾಗಿ ತಿಪ್ಪೆಯಂತಾದ ತನುವಿನ ಸಾಮ್ರಾಜ್ಯದಲ್ಲಿ, ತಿಪ್ಪೇರುದ್ರನಾಗಿ ಪರಮ ಸಂತೋಷದಿಂದ ವಿರಾಜಮಾನನಾಗಿದ್ದಾನೆ. ಮನದಿಂದ ಉಂಟಾದ ತನುವಿನ ಅಜ್ಞಾನವನ್ನು ಅನ್ಯ ತನು ತಪ್ಪಿಸಲು ಸಾಧ್ಯವೆ? ತನುವಿನಲ್ಲಿಯೇ ತನ್ಮಯವಾದ ಗುರುದೇವನೇ ತಪ್ಪಿಸಬೇಕು. ಸಟೆಯಿಲ್ಲದಂತೆ, ಅಜ್ಞಾನದ ಪ್ರಪಂಚುವಿಲ್ಲದಂತೆ, ವಿಷಯಕ್ಕೆಳೆಸದಂತೆ ನಡೆಸಯ್ಯಾ ಅರಿವಿನ ಲಿಂಗ ತಂದೆ. ಒಂದು ನಿಮಿಷವಾದರೂ ಅರಿವಿನ ದರುಶನ ಮಾಡಿಕೊಂಡ ಶರಣರ ಸಂಗದಲ್ಲಿ ನನ್ನನ್ನು ಇರಿಸಯ್ಯಾ . ಬೇರೆ ಮತ್ತೆ ಅನ್ಯವ ತೋರಿಸದಿರಯ್ಯಾ ಎಂದು ಬೇಡಲೇಬೇಕು.

ಸತ್ಯಕ್ಕ: ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಮಗೆ ಶರಣು ಶರಣಾರ್ಥಿ.

ಸತ್ಯಕ್ಕ :

ಎನ್ನ ವಾಮಕ್ಷೇಮ ನಿಮ್ಮದಯ್ಯಾ ;
ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ ;
ಎನ್ನ ಮಾನಾಪಮಾನ ನಿಮ್ಮದಯ್ಯಾ-
ಬಳ್ಳಿಗೆ ಕಾಯಿ ದಿಮ್ಮಿತ್ತೆ , ಕೂಡಲಸಂಗಮದೇವಾ? ॥ 60 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ಬಿಡಿಸಿ ಹೇಳಿ ತಂದೆ.

ಬಸವಣ್ಣ: ಶರಣರು, ಸಂತರು, ಉಪನಿಷತ್‌ಕಾರರು ಕಾಣದ ದೇವರಿಗೆ ಪೂಜಿಸಲಿಲ್ಲ. ಅವುಗಳಿಗೆ ಮಠ ಮಂದಿರಗಳನ್ನು ಕಟ್ಟಿ ಹಾಡಲಿಲ್ಲ. ನನ್ನ ಬರಹ ತೋರಿಕೆಗೆ ಹಾಗೆ ಕಂಡರೂ ಅದು ಬೆಡಗಿನ ಬರಹವೆಂದು ಇತರ ಓದುಗರಿಗೆ ತೋಚುವುದೇ ಇಲ್ಲ. ನನ್ನ ಈ ವಚನ ಸರಳವಾಗಿ ಕಂಡರೂ ಅಷ್ಟೇ ಜಟಿಲ! ನಾನು ಅರಿವಿನ ಲಿಂಗಯ್ಯನನ್ನು ಕುರಿತು ಹಾಡಿದರೆ; ಇತರರು ದೇವರನ್ನು ಕುರಿತು ಹಾಡುತ್ತಾರೆ. ನಾನು ನನ್ನ ಮೇಲೆ ಆರೋಪಿಸಿಕೊಂಡು ಅರಿವಿನ ಸರಳ ಮಾರ್ಗ ಜನರಿಗೆ ಸೂಚಿಸಿದರೆ; ಅವರು ಎಷ್ಟೊಂದು ಯಾತನೆ ಪಟ್ಟಿದ್ದಾರೆ . ಜೀವನ ಅವರಿಗೆ ಸರಳವಿಲ್ಲದ ಮೇಲೆ ನಮಗೆ ತಪ್ಪಿದ್ದಲ್ಲ ಎಂದು ಲೊಚಗುಟ್ಟಿ ಜನ ಅರಿವಿನ ಮಾರ್ಗಕ್ಕೆ ಎಳ್ಳು ನೀರು ಬಿಡುತ್ತಾರೆ.

ಅರಿವು ಮತ್ತು ಮನದ ಜುಗಲಬಂದಿಯೇ ಹೀಗೆ! ದೇಹದಲ್ಲಿ ನುಡಿದು, ಕೈಹಿಡಿದು ಮುನ್ನಡೆಸುವ ಅರಿವಿನ ದೇವರಿದ್ದರೂ, ಪೂಜಿಸದ ಮನ, ದೇಹವನ್ನು ನಾನಾ ದೇವರಿಗೆ ಕರೆದುಕೊಂಡು ಹೋಗಿ ಮಣ್ಣು ಮಾಡುತ್ತದೆ! ಮನಕ್ಕೆ ದೇಹದ ಅರಿವಿನ ದೇವರನ್ನು ಕೂಡಲು ಜನ್ಮಗಳೇ ಬೇಕಾಗಬಹುದು! ಮನದಿಂದ ಯಾವ ದೇಹಕ್ಕೂ ಮೋಸವಾಗಬಾರದೆಂದು ತಿಳಿದು ಈ ಸೂತ್ರ ರಚಿಸಿದ್ದೇನೆ.

ಕುಂಬಳ, ಕಲ್ಲಂಗಡಿ, ಕರಬೂಜು, ಸೋರೆ, ಹೀರೆ, ಸೌತೆ, ಹಾಗಲ, ಪಡವಲ ಇವು ಬಳ್ಳಿಯಲ್ಲಿ ಹುಟ್ಟುವ ಕಾಯಿಗಳು. ಕಾಯಿ ದೊಡ್ಡದು , ಬಳ್ಳಿ ಚಿಕ್ಕದು. ಕಾಲಿಗೆ ತಟ್ಟುತ್ತದೆಂದು ಭೋಗ್ಯದಾರ ಬಳ್ಳಿಯನ್ನು ಕತ್ತರಿಸುವುದಿಲ್ಲ. ಬಳ್ಳಿಗೆ ನೀರೆರೆದು ಪೋಷಿಸುತ್ತಾನೆ. ಕಾಯಿ ಸದೃಢವಾಗಲೆಂದು ಗೊಬ್ಬರ ಹಾಕುತ್ತಾನೆ. ಸುತ್ತಲೂ ಬೆಳೆದ ಕಳೆ ಕಿತ್ತಿ ಸಲುಹುತ್ತಾನೆ.

ಕಾಯಿಯ ವಾಮಕ್ಷೇಮ ಬಳ್ಳಿಯದೆಂದು ಆರೈಕೆ ಮಾಡುತ್ತಾನೆ. ಕಾಯಿಯ ಹಾನಿ ವೃದ್ಧಿ ಬಳ್ಳಿಯದೆಂದು ಕ್ಷಣ ಕ್ಷಣವೂ ಅವಲೋಕಿಸುತ್ತಾನೆ. ಬಳ್ಳಿಗೆ ಕಾಯಿ ಭಾರವೇ ಎಂದು ಹಾಡಿ ಹೊಗಳುತ್ತಾನೆ. ಭೋಗ್ಯದಾರನಾದ ರೈತನಿಗೆ ಇದು ತಿಳಿದಿದೆ.

ದೇಹ ದೊಡ್ಡದು, ಅರಿವಿನ ಬಳ್ಳಿ ದೇಹಕ್ಕಾಧಾರ! ಕಣ ಕಣದಲ್ಲಿಯೂ ಅರಿವಿನ ಬಳ್ಳಿಯ ತಂತುಗಳು ಪಸರಿಸಿವೆ! ದೇಹ ಕಾಣುತ್ತದೆ; ಅರಿವು ಕಾಣುವುದಿಲ್ಲ. ಅದನ್ನು ಆರಾಧಿಸಬೇಕಾದ ಮನವೂ ಕಾಣುವುದಿಲ್ಲ. ಮನವೇ ದೇಹದ ಭೋಗ್ಯದಾರ; ಅರಿವೇ ದೇಹಕ್ಕಾಧಾರ!

ಕಣ ಕಣದಲ್ಲಿಯೂ ಅರಿವೇ ತುಂಬಿದ ದೇಹವನ್ನು, ಮನ ತನ್ನ ಭೋಗ್ಯಕ್ಕಾಗಿ

ದುರ್ಬಳಕೆ ಮಾಡಿಕೊಳ್ಳುತ್ತದೆ. ಸೆರೆ ಅಂಗಡಿಗೆ, ಜೂಜಿನ ಮನೆಗೆ, ಲಂಚ ವಂಚನೆಗೆ, ಭ್ರಷ್ಟಾಚಾರಕ್ಕೆ, ಕಳುವು, ಹಾದರ, ಮೋಸಕ್ಕೆಳೆಸಿ ಸುಖಿಸುತ್ತದೆ.

ನುಡಿದು ಹೇಳುವ ಅರಿವಿನ ದೇವರನ್ನು ಮನವೆಂಬ ಭೋಗ್ಯದಾರ ಕಡೆಗಣಿಸಿ, ದೇಹವನ್ನು ತನ್ನ ಭೋಗ್ಯಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಾನೆ. ಕಾಯಕ್ಕೆ ಕಳ್ಳ, ವಂಚಕ, ಮೋಸಗಾರ, ಕುಡುಕ, ಭ್ರಷ್ಟಾಚಾರಿಯ ಪಟ್ಟ ಕಟ್ಟುತ್ತಾನೆ.

ಎನ್ನ ವಾಮಕ್ಷೇಮ ನಿಮ್ಮದಯ್ಯ ಎಂದು ಮನವೆಂಬ ಭೋಗ್ಯದಾರ ಅರಿವಿನ ದೇವರನ್ನು ಕುರಿತು ಒಮ್ಮೆಯೂ ಹಾಡುವುದಿಲ್ಲ. ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ ಎಂದು ಒಮ್ಮೆಯೂ ಬೇಡುವುದಿಲ್ಲ. ಎನ್ನ ಮಾನಾಪಮಾನ ನಿಮ್ಮದಯ್ಯಾ ಎಂದು ಒಮ್ಮೆಯೂ ಕಾಡುವುದಿಲ್ಲ. ಅರಿವಿನ ಬಳ್ಳಿಗೆ ಈ ಕಾಯ ಭಾರವೇ ಎಂದು ಒಮ್ಮೆಯೂ ಪ್ರಾರ್ಥಿಸುವುದಿಲ್ಲ.

ಅರಿವಿನಿಂದ ಹಾಡಿ, ಆಡಿ, ಅರಿವಿನಿಂದಲೇ ನೋಡಿ ಕೇಳಿ, ಮುಟ್ಟಿ, ಮೂಸಿಸಿ, ಅರಿವಿನಿಂದಲೇ ಅರಿವನ್ನೇ ರುಚಿಸಿದ ಭೋಗ್ಯದಾರ ಬುದ್ಧನಾದ ! ಅರಿವನ್ನೇ ಮರೆತು ಮರೆವನ್ನೇ ರುಚಿಸಿದ ಭೋಗ್ಯದಾರ ಅಂಗುಲಿಮಾಲನಾದ!

ಎನ್ನ ವಾಮ ಕ್ಷೇಮ ನಿಮ್ಮದಯ್ಯಾ , ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ , ಎನ್ನ ಮಾನಾಪಮಾನ ನಿಮ್ಮದಯ್ಯಾ ಕಾಯಿ ದೊಡ್ಡದಾಯಿತೆಂದು ಬಳ್ಳಿ ಬಿಸುಟಲು ಸಾಧ್ಯವೆ ಕೂಡಲಸಂಗಮದೇವಾ ಎಂದು ತನು ಮತ್ತು ಮನ ಒಂದಾಗಿ ತನುವಿನಲ್ಲಿಯೇ ತನ್ಮಯವಾದ ಅರಿವಿನ ದೇವರನ್ನು ಬೇಡಬೇಕು.

ದಸರಯ್ಯ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ವೀರಗೊಲ್ಲಾಳ :

ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ, ವೈಶಿಕವಿಲ್ಲದಂತೆ
ನಡೆಸಯ್ಯಾ , ಲಿಂಗ ತಂದೆ.
ಒಂದು ನಿಮಿಷವಾದಡೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ ;
ಬೇರೆ ಮತ್ತೆ ಅನ್ಯವ ತೋರದಿರಯ್ಯಾ ;
ಹೊಲಬುಗೆಟ್ಟೆನಯ್ಯಾ , ಕೂಡಲಸಂಗಮದೇವಾ! ॥ 61 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ಬಿಡಿಸಿ ಹೇಳಿ ತಂದೆ.

ಬಸವಣ್ಣ : ವೈಶಿಕ ಎಂದರೆ ಕಾಮ; ಮನಕ್ಕೆ ಇದು ದಕ್ಕದಿದ್ದರೆ ಕ್ರೋಧ; ವೈಶಿಕ ಸುಖಕ್ಕಾಗಿಯೇ ಲೋಭ, ಮೋಹ, ಮದ, ಮತ್ಸರಗಳುಳ್ಳ ಸುಳ್ಳಿನ ಪ್ರಪಂಚ! ಇದು ಮನಕ್ಕೆ ಬಲು ಸುಖವೆನಿಸುತ್ತದೆ. ಅಧಿಕಾರ ಬಳಸಿ ಸುಖಿಸಿದರೆ ರಾಜಸ ತನು. ದೌರ್ಜನ್ಯವೆಸಗಿದರೆ ತಾಮಸ ತನು. ತೋರಗೊಡದೆ ಮನದ ಹಾದರದಿಂದ

ಸುಖಿಸಿದರೆ ಸಾತ್ವಿಕ ತನು ; ಹೀಗೆ ಮನ ತನುವಿಗೆ ಹಾದರದ ಪಟ್ಟ ಕಟ್ಟುತ್ತದೆ.

ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ, ವೈಶಿಕವಿಲ್ಲದಂತೆ ಒಂದು ನಿಮಿಷವೂ ಮನಕ್ಕೆ ಸುಮ್ಮನಿರಲು ಸಾಧ್ಯ ಆಗುವುದಿಲ್ಲ. ತನುವಿನಲ್ಲಿ ವಿಷಯವೆಂಬ ಸುಳ್ಳಿನ ಹಾದರ ನಡೆದೇ ಇರುತ್ತದೆ. ಮನ ಬಯಸಿದತ್ತ ದೇಹ ವಿಷಯ ಸುಖಕ್ಕೆ ವಾಲುತ್ತದೆ. ಇದು ಮನದ ಹಾದರದ ದುರ್ಗುಣ. ಪ್ರಾರ್ಥಿಸಿದರೆ ಅಳಿಯುವುದಿಲ್ಲ.

ದೇಹವನ್ನು ವೈಶಿಕ ಸುಖಕ್ಕೆ ಕರೆದುಕೊಂಡು ಹೋಗುವ ಮನಕ್ಕೆ ಜ್ಞಾನಿಗಳ ಸತ್ಸಂಗದ ಬಯಕೆಯಾಗಬೇಕು. ಮತ್ತೆ ಮತ್ತೆ ಅವರೊಂದಿಗೆ ಬೆರೆಯುವ ಬಯಕೆಯಾಗಬೇಕು. ಹೊಲಬುಗೆಟ್ಟ ಮನಕ್ಕೆ ಅನ್ಯವ ನೋಡಬಾರದೆಂಬ ದೃಢ ನಿರ್ಧಾರವಾಗಬೇಕು. ಆಗ ಶರಣರು ವೈಶಿಕ ಸುಖವಿಲ್ಲದ ಸಟೆಯಿಲ್ಲದ ಅರಿವಿನ ಮತ್ತೊಂದು ಪ್ರಪಂಚವನ್ನೇ ಪರಿಚಯಿಸುತ್ತಾರೆ.

ದೇಹ ಅರಿವಿನ ದೇವರಿದ್ದ ದೇವಾಲಯ! ಕೂಡಲಸಂಗಯ್ಯನ ಸ್ವಕ್ಷೇತ್ರ . ಅಲ್ಲಿ ಸಟೆಯಿಲ್ಲದ ವೈಶಿಕವಿಲ್ಲದ ಅರಿವಿನ ಲಿಂಗ ತಂದೆ ವಾಸಿಸಿದ್ದಾನೆ. ಜ್ಞಾನಿಗಳು, ತಮ್ಮ ಸಂಗದಲ್ಲಿ ನಿರತವಾದ ಮನದ ಕೈ ಹಿಡಿದು ಅರಿವಿನ ಲಿಂಗ ತಂದೆಗೆ ಒಪ್ಪಿಸುತ್ತಾರೆ. ಸಟೆಯಿಂದ, ವೈಶಿಕದಿಂದ ಹೊಲಬುಗೆಟ್ಟ ಮನ, ಅರಿವಿನ ಅಮೃತ ಉಂಡು ಅಲ್ಲಿಯೇ ವಿರಮಿಸುತ್ತದೆ.

ಭೋಗಣ್ಣ : ತಮ್ಮ ವಚನದ ಬೆಡಗನ್ನು ನಮಗೆ ತಿಳಿಯುವಂತೆ ಬಿಚ್ಚಿ ಹೇಳಿದ ತಮಗೆ ಶರಣು ಶರಣಾರ್ಥಿ.

ಮಾರೇಶ್ವರೊಡೆಯ :

ಇವನಾರವ, ಇವನಾರವ ಇವನಾರವನೆಂದೆನಿಸದಿರಯ್ಯಾ ;
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ .
ಕೂಡಲಸಂಗಮದೇವಾ,
ನಿಮ್ಮ ಮನೆಯ ಮಗನೆಂದೆನಿಸಯ್ಯಾ . ॥ 62 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ಬಿಡಿಸಿ ಹೇಳಿ ತಂದೆ.

ಬಸವಣ್ಣ: ದೇಹ ಎನ್ನುವುದು ಅರಿವಿನ ಮನೆ. ಮನ ಅರಿವಿನ ಮನೆಯ ಮಗನಾಗಬೇಕಿತ್ತು . ಅರಿವಿನಿಂದ ನೋಡಿದರೆ ಭೂಮಂಡಲದ ಮೇಲಿರುವ ಸಕಲ ದೇಹಗಳೂ ಒಂದೇ. ಚರ್ಮ, ಅದರೊಳಗೆ ಹರಿಯುವ ರಕ್ತ , ಮೂಳೆ, ಮಾಂಸ, ಮಜ್ಜೆ, ಮೇದಸ್ಸುಗಳೆಲ್ಲ ಒಂದೇ. ಅರಿವಿನ ಕಣ್ಣಿನಲ್ಲಿ ಮನವೆಂಬ ಅಜ್ಞಾನ ಬೆರೆತು, ಹೆಣ್ಣು ಗಂಡು ಎಂದು ಆರೋಪಿಸಿಕೊಂಡಿದೆ. ಜಾತಿ-ಮತ ಪಂಥ ಪಂಗಡಗಳೆಂದು ಶ್ರೀಮಂತ ಬಡವ ಭಿಕ್ಷುಕ ಅಧಿಕಾರಿ ಸೈನಿಕ ಎಂದು ತನ್ನನ್ನು ತಾನೇ ಸೀಳಿಕೊಂಡಿದೆ.

ಅರಿವಿನ ಮನೆಯ ಮಗನಾಗಬೇಕಾದ ಮನ, ಅರಿವಿನ ತಂದೆಯನ್ನು

ಗುರುತಿಸದೆ ಪಾಪದ ಕೂಪಕ್ಕೆ ತನ್ನನ್ನು ತಳ್ಳಿಕೊಂಡಿದೆ. ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದು ಹೇಳದೆ; ಇವನಾರವ ಇವನಾರವ ಇವನಾರವನೆಂದು ಬೊಗಳುತ್ತಲಿದೆ. ಕೂಡಲಸಂಗಮದೇವಾ ; ತನ್ನಂತೆಯೇ ಇರುವ ತನುವನ್ನು ; ತನುವನ್ನು ಆವರಿಸಿದ ಮನವನ್ನು ಅಪ್ಪಿಕೊಂಡು ನಿಮ್ಮ ಮನೆಯ ಮಗನೆಂದು ಅನ್ನಿಸಬಾರದೆ!

ಭಿಕಾರಿ ಭೀಮಯ್ಯ : ಇವನಾರವ ಇವನಾರವ ಎನ್ನುವ ಸೂತ್ರದ ವಚನವನ್ನು ಸುಲಿದ ಬಾಳೆಹಣ್ಣಿನಂತೆ ಬಿಚ್ಚಿ ಶರಣರಿಗೆ ತಿನ್ನಿಸಿದಿರಿ. ತಮಗೆ ಶರಣು ಶರಣಾರ್ಥಿ ತಂದೆ.

ಬಸವಣ್ಣ : ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಮಂಗಲ ಹಾಡಿದರು.

ಸಕಲ ಶರಣರು ಬಸವಣ್ಣನವರಿಗೆ ಕೈ ಮುಗಿದು ಶರಣೆನ್ನುತ್ತಾ ಅರಿವಿನ ಅಮೃತ ಪಾನಮಾಡಿದ ಮತ್ತಿನಲ್ಲಿ ತಮ್ಮ ತಮ್ಮ ಮನೆಗೆ ನಡೆದರು.

□

೨೦

ಮಹಾಮನೆಯಲ್ಲಿ ಬಸವಣ್ಣನವರ ಬರುವಿಕೆಗಾಗಿ ಶರಣರು ಕಾದು ಕುಳಿತಿದ್ದಾರೆ. ಅವರು ಬರುವುದೊಂದೇ ತಡ, ಸಕಲ ಶರಣರು ಎದ್ದು ನಿಂತು ಶರಣು ಶರಣಾರ್ಥಿ ಬಸವಣ್ಣ ಎಂದು ಹೇಳುತ್ತಾ ಕುಳಿತುಕೊಳ್ಳುತ್ತಾರೆ.

ಭಿಕಾರಿ ಭೀಮಯ್ಯ :

ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟಡೆ
ನಿಮ್ಮ ನಗುವರಯ್ಯಾ .
ಶಿವಬಟ್ಟೆಯಲ್ಲೆನ್ನನಿರಿಸಯ್ಯಾ ಹರನೆ;
ಹೊಲಬುಗೆಟ್ಟೆನು ಬಟ್ಟೆಯ ತೋರಯ್ಯಾ !
ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯಾ ;
ಕೂಡಲಸಂಗಮದೇವಯ್ಯ ನೆನ್ನ ಕಾಡಿಹನಯ್ಯಾ ! ॥ 63 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ಬಿಡಿಸಿ ಹೇಳಿ ತಂದೆ.

ಬಸವಣ್ಣ: ನನ್ನನ್ನು ಹುಟ್ಟಿಸಿದ ನೀನು ಮಹಾಜ್ಞಾನಿ. ಮನವೆಂಬ ನಿನ್ನ ಮಗನಾದ ನಾನು ಅಜ್ಞಾನಿ! ಹುಟ್ಟೆಂದು ನನ್ನನ್ನು ಹುಟ್ಟಿಸಿ ಈ ಲೋಕದಲ್ಲಿ ಇಳಿಯ ಬಿಟ್ಟಡೆ, ಇದನ್ನು ನೋಡಿ ಲೋಕ ನಗುವುದಿಲ್ಲವೆ ತಂದೆ? ನಿನ್ನದೇ ಆದ ಅರಿವಿನ ದಾರಿಯಲ್ಲಿ ನನ್ನ ಕೈಹಿಡಿದು ನಡೆಸು ತಂದೆ. ಅದು ಶಿವಬಟ್ಟೆ; ಹೊಲಬುಗೆಟ್ಟೆನು; ನಿನ್ನ ಬಟ್ಟೆಯ(ದಾರಿ) ತೋರಯ್ಯಾ !

ಅಮರಗಣಂಗಳೆ ಕೇಳಿರಯ್ಯಾ ; ನಿಮಗೆ ಅರಿವಿನ ದಾರಿ ತೋರಿ ಕೈಹಿಡಿದು ನಡೆಸಿದ ನನ್ನ ತಂದೆ ನನ್ನನ್ನು ಕಾಡಿಹನಯ್ಯಾ ! ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ನನ್ನನ್ನು ಮಾತ್ರ ಅಜ್ಞಾನದಲ್ಲಿ ಇಳಿಯ ಬಿಟ್ಟಡೆ ನನ್ನನ್ನು ನೋಡಿ ನೀವು ನಗುವುದಿಲ್ಲವೆ? ನನ್ನ ತಂದೆಗೆ ನೀವಾದರೂ ಹೇಳಿ, ನನ್ನನ್ನು ತನ್ನ ದಾರಿಯಲ್ಲಿ ಕೈಹಿಡಿದು ನಡೆಸೆಂದು!

ಭೀಮಯ್ಯ : ಆಹಾ! ಪುಳಕಿತಗೊಂಡೆವು ಬಸವರಸ; ಮತ್ತಷ್ಟು ಹೇಳಿ ತಂದೆ.

ಬಸವಣ್ಣ: ಈ ದೇಹ, ನೀನು ಸೃಷ್ಟಿ ಮಾಡಿದ ಅರಿವಿನ ಬಟ್ಟೆ. ಎಂದೆಂದೂ ಹರಿಯದ ಹರನ ಜ್ಞಾನದ ಬಟ್ಟೆ! ಈ ದೇಹದಲ್ಲಿ ಜ್ಞಾನೇಶ್ವರನಾದ "ನೀನು'' ಇರುವಿ. ನಿನ್ನನ್ನು ತಿಳಿಯಲೇ ಬೇಕಾದ ಮನವೆಂಬ "ನಾನೂ'' ಇರುವೆ. ನನ್ನ ತಂದೆ ನೀನು. ನಿನ್ನ ಮಗ ನಾನು. ನಿನ್ನನ್ನು ತಂದೆ ಎಂದು ತಿಳಿಯದ ಮೂರ್ಖ ನಾನು. ನಿನ್ನಿಂದ ಹೊರಬಂದ ಪುಸ್ತಕಗಳನ್ನು ಓದಿ ಕೆಟ್ಟೆ. ಓದಿ ಕೆಟ್ಟ ಕೂಚು ಭಟ್ಟ ಎಂದು ಜ್ಞಾನಿಗಳಿಂದ ಅನ್ನಿಸಿಕೊಂಡೆ. ನನ್ನಲ್ಲಿಯೇ ಇದ್ದ ನಿನ್ನ ಜ್ಞಾನವನ್ನು ತಿಳಿಯಲಿಲ್ಲ; ನಿನ್ನನ್ನೂ ತಿಳಿಯಲಿಲ್ಲ.

ಹೊಲಬುಗೆಟ್ಟೆನು ಹರನೇ ಶಿವಜ್ಞಾನದ ಬಟ್ಟೆಯ ತೋರಿ ಸಲಹು ತಂದೆ.

ಮಗ ದೊಡ್ಡವನಾದ ಮೇಲೆ ತಂದೆಯನ್ನು ಪಾಲು ಕೇಳಲೇಬೇಕು. ಕೊಡದಿದ್ದಾಗ ಪಂಚರಲ್ಲಿ ಹೋಗಿ ನ್ಯಾಯ ಕೇಳಲೇಬೇಕು. ಹುಟ್ಟಿಸಿದ ಮಗನಿಗೆ ಪಾಲು ಕೊಡದಿದ್ದರೆ ಹೇಗೆ? ಜನ ಒಪ್ಪುವುದಿಲ್ಲ. ಇದು ಊರ ಪಂಚರಿಂದ ಬಗೆಹರಿಯುವ ನ್ಯಾಯವಲ್ಲ!

ತಂದೆ ಮಗನ ಈ ನ್ಯಾಯವನ್ನು ಅಮರಗಣಂಗಳು ಮಾತ್ರ ಬಗೆಹರಿಸಬಲ್ಲರು.

ಎನ್ನ ತಂದೆ, ಕೂಡಲಸಂಗಯ್ಯ, ನನ್ನನ್ನು ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿದ್ದಾನೆ. ಕಲ್ಲು ಮಣ್ಣು ಲೋಹವನ್ನು ನನಗೆ ತೋರಿ, ಇದನ್ನೇ ಸಂಪತ್ತೆನ್ನುವ ಅಜ್ಞಾನದಲ್ಲಿ ನನ್ನನ್ನು ಇಳಿಬಿಟ್ಟಿದ್ದಾನೆ. ನನಗೆ ದಕ್ಕಬೇಕಾದ ಜ್ಞಾನದ ಪಾಲು ನನಗೆ ಕೊಡೆಂದು, ಹೊಲಬುಗೆಟ್ಟು ಹುಯ್ಯಲಿಟ್ಟು ಬೇಡಿದರೂ ಕೊಡುತ್ತಿಲ್ಲ. ಕೊಡದಿದ್ದರೂ ಅಡ್ಡಿಯಿಲ್ಲ ; ನಿನ್ನ ಬೆರಳಿಂದಲಾದರೂ ತೋರು ಎಂದರೂ ತೋರುತ್ತಿಲ್ಲ. ನನ್ನನ್ನು ತನ್ನ ಜ್ಞಾನದ ಬಟ್ಟೆಯಲ್ಲಿಟ್ಟು ಸಲಹುತ್ತಿಲ್ಲ. ಇದು ನ್ಯಾಯವೆ! ಅಮರ ಗಣಂಗಳಾದ ನೀವಾದರೂ ನನಗೆ ನ್ಯಾಯ ಕೊಡಿಸಿರಯ್ಯಾ ! ನನ್ನನ್ನು ಹುಟ್ಟಿಸಿದ ತಂದೆ ನನ್ನನ್ನೇ ಕಾಡಿಹನಯ್ಯಾ ಎಂದು ಬೇಡಬೇಕು. ಇದು ಭಕ್ತಿ ಮಾರ್ಗ.

ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗಯ್ಯನೇ ತಂದೆ. ಅಂಗವನ್ನು ಆವರಿಸಿದ ಮನವೇ ಅರಿವಿನ ಲಿಂಗಯ್ಯನಿಗೆ ಮಗ! ಈ ಮನವೆಂಬ ಮಗ ಅರಿವಿನ ಲಿಂಗಯ್ಯನಿಗೆ ''ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಹಾಲಲ್ಲಾದರೂ ಅದ್ದು, ನೀರಲ್ಲಾದರೂ ಅದ್ದು ನಿನ್ನ ಧರ್ಮ'' ಎಂದು ತನ್ನನ್ನು ತಾನು ತನ್ನ ತಂದೆಗೆ ಶರಣು ಹೋಗುತ್ತಾ ಭಕ್ತಿ ಮಾಡಬೇಕು.

ಭೀಮಯ್ಯ : ಲೋಕ ಮಾಡುವ ಭಕ್ತಿ ಭಕ್ತಿಯಲ್ಲವೆ ಬಸವಣ್ಣ.

ಬಸವಣ್ಣ : ಅದು ಲೋಕದ ಭಕ್ತಿ . ಇದು ತನಗೆ ದಾರಿ ತೋರುವ ತನ್ನವರಿಗೆ ತಾನೇ ಶರಣು ಹೋಗಿ ಶರಣಾಗತನಾಗಿ ಶರಣನೇ ತಾನಾಗುವ ಶರಣರ ಭಕ್ತಿ .

ದಸರಯ್ಯ : ಅರಿವಿಗೆ ಹೋಗುವ ಸೂತ್ರ ನೀಡಿದ ತಮಗೆ ಶರಣು ಶರಣಾರ್ಥಿ.

ನುಲಿಯ ಚಂದಯ್ಯಾ:

ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ!
ಅಕಟಕಟಾ, ಶಿವ ನಿನಗಿನಿತು ಕೃಪೆಯಿಲ್ಲ!
ಏಕೆ ಹುಟ್ಟಿಸಿದೆ ಇಹ ಲೋಕ ದುಃಖಿಯ?
ಏಕೆ ಹುಟ್ಟಿಸಿದೆ, ಕೂಡಲಸಂಗಮದೇವಾ ಕೇಳಯ್ಯಾ :
ಎನಗಾಗಿ ಮತ್ತೊಂದು ತರುಮರನಿಲ್ಲವೆ? ॥ 64 ॥

ತಮ್ಮ ಈ ವಚನದ ಸೂತ್ರವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಚಂದಯ್ಯನವರೆ, ಕಾಯದಲ್ಲಿ ಎರಡು ಸಂಸಾರಗಳಿವೆ. ಒಂದು ಮನದ ಸಂಸಾರ; ಮತ್ತೊಂದು ಅರಿವಿನ ಸಂಸಾರ. ಮನ ಅರಿವಿನ ಸಂಸಾರಕ್ಕೆ ಹೋದರೆ ಅಲ್ಲಿ ಶಿವನಿದ್ದಾನೆ. ಮನವನ್ನು ಮಹಾದೇವಿಯನ್ನಾಗಿ ಮಾಡಿಕೊಳ್ಳುತ್ತಾನೆ. ಕರುಣೆಯಿಂದ ಕಾಯವನ್ನೇ ಕೈಲಾಸವನ್ನಾಗಿ ಮಾಡುತ್ತಾನೆ. ಆತನ ಕೃಪೆಯಿಂದ ಕಾಯ ಸದಾ ಕರುಣಾರಸ ಬೀರುವ ಶಾಂತಮಹಾಸಾಗರವಾಗುತ್ತದೆ.

ಆದರೆ ಮನಕ್ಕೆ ಮಹಾದೇವಿಯಾಗುವ ಬಯಕೆಯಿಲ್ಲ. ಮಹಾದೇವನಿದ್ದ ಕಾಯವನ್ನು ತನ್ನಂತೆ ಮಾಡಿಕೊಂಡು ಅದರಲ್ಲಿ ಸುಳ್ಳಿನ ಸಾಮ್ರಾಜ್ಯವನ್ನು ಕಟ್ಟಿಕೊಂಡಿದೆ. ಮಹಾದೇವನ ಮಾತು ಮನ ಕೇಳುವುದಿಲ್ಲ; ಕಾಯವೂ ಕೇಳುವುದಿಲ್ಲ. ಮನ ಮತ್ತು ಕಾಯ ಒಂದಾಗಿ ಶಿವನಿದ್ದ ಕಾಯವನ್ನು ತಿಪ್ಪೆಕುಣಿಯಾಗಿ ಮಾಡಿಕೊಂಡಿವೆ. ಮನದಿಂದಾಗಿ ಕಾಯಕ್ಕೆ ಸದಾ ಆಪತ್ತು.

ಚಂದಯ್ಯ : ಅದು ಹೇಗೆ ಬಸವರಸ?

ಬಸವಣ್ಣ : ಕಾಯದಲ್ಲಿದ್ದ ಅರಿವಿನ ಸಂಪತ್ತು ಕಾಯಕ್ಕೆ ದಕ್ಕದ ನಿಮಿತ್ತ, ಕಾಯಕ್ಕೆ ದುಃಖ! ಪ್ರತಿ ಕಾಯದಲ್ಲಿ ಅರಿವಿನ ಸಂಪತ್ತು ಇದ್ದರೂ ಕೂಡಾ, ಮನ ತನ್ನದೇ ಆದ ಅಜ್ಞಾನದ ಸಂಪತ್ತನ್ನು ಕಾಯದ ಮೂಲಕ ನಿರ್ಮಾಣ ಮಾಡಿಕೊಂಡಿದೆ.

ಹಳದಿ ಲೋಹಕ್ಕೆ ಚಿನ್ನ ಎನ್ನುವ ಹೆಸರು ಕೊಟ್ಟು, ಮನ ಕಾಯವನ್ನು ಯಾಮಾರಿಸಿದೆ. ದುಡಿದು ಚಿನ್ನ ಸಂಗ್ರಹ ಮಾಡಿದ ಕಾಯಕ್ಕೆ ಶ್ರೀಮಂತ ಎಂದು ಹೆಸರಿಸಿ ಕಾಯವನ್ನು ಕಾಯಗಳಿಂದಲೇ ಬೇರ್ಪಡಿಸಿದೆ. ಕದ್ದು ಚಿನ್ನ ಸಂಗ್ರಹ ಮಾಡಿದ ಕಾಯವನ್ನು ಕಳ್ಳ ಎಂದು, ಯುದ್ಧ ಮಾಡಿ ಕೊಂದು ಚಿನ್ನ ಪಡೆದ ಕಾಯವನ್ನು ರಾಜ ಎಂದು, ಹೀಗೆ ಮಾಡುವುದು ಉಚಿತವಲ್ಲ ಎಂದು ಬೋಧಿಸಿದ ಕಾಯವನ್ನು ಗುರು ಎಂದು, ಬೋಧೆ ಕೇಳುವ ಕಾಯವನ್ನು ಶಿಷ್ಯ ಎಂದು ಮನ ನಿರ್ಧಾರ ಮಾಡಿ, ಮನಕ್ಕೆ ಆಶ್ರಯ ಕೊಟ್ಟ ಕಾಯವನ್ನೇ ಯಾಮಾರಿಸಿ, ಪ್ರತಿ ಕಾಯದಲ್ಲಿ ತನ್ನ ಸುಳ್ಳಿನ ಸಾಮ್ರಾಜ್ಯ ಕಟ್ಟಿಕೊಂಡಿದೆ.

ಮನದಿಂದಾಗಿ ಕಾಯ ಛಿದ್ರ ಛಿದ್ರ ಗೊಂಡಿದೆ. ಪ್ರತಿ ಕಾಯದಲ್ಲಿ ಅರಿವು ಎನ್ನುವ ಶ್ರೀಮಂತ ಶಿವನಿದ್ದರೂ, ಆತನಿಗೆ ಶರಣು ಹೋಗಬೇಕು ಎನ್ನುವ ಆಲೋಚನೆಯನ್ನು, ಮನ ಕಾಯದಿಂದ ಕಸಿದುಕೊಂಡಿದೆ.

ಚಂದಯ್ಯ : ಈ ಮಾತು ನಮಗೆ ತಿಳಿಯಲಿಲ್ಲ ಬಸವರಸ.

ಬಸವಣ್ಣ : ನಿಮಗೇ ಏಕೆ, ಇಡೀ ಲೋಕದ ಕಾಯಗಳಿಗೆ ಅರಿವು ಮರೆವಾಗಿದೆ. ಇದಕ್ಕೆ ಕಾರಣ ತಾನು ಸಲಹಿದ ಮನವೆಂದು ಲೋಕದ ಕಾಯಗಳಿಗೆ ತಿಳಿಯುತ್ತಿಲ್ಲ.

ಚಂದಯ್ಯ : ವಿವರಿಸಿ ಹೇಳಿ ಬಸವಣ್ಣ.

ಬಸವಣ್ಣ : ಲೋಹವನ್ನೇ ಚಿನ್ನವೆಂದು, ಮನ ಸಕಲ ಕಾಯಗಳನ್ನು ಹೇಗೆ

ಯಾಮಾರಿಸಿದೆಯೋ, ಮನಕ್ಕೆ ಬೇಕಾದ ದೇವರನ್ನು ಕೂಡಾ ಕಾಯದ ಮೂಲಕವೇ ಕೆತ್ತಿ, ದೊಡ್ಡ ದೊಡ್ಡ ಆಲಯಗಳನ್ನು, ಕಲ್ಲು ಮಣ್ಣು ಕಟ್ಟಿಗೆ ಮೂಲಕ ಕಟ್ಟಿ ; ಕಲ್ಲು ದೇವರೇ ದೇವರೆಂದು, ಕಾಯದ ಅರಿವಿನ ಕಣ್ಣಿಗೆ ಮಣ್ಣು ತೂರಿ, ಸೆರಗೊಡ್ಡಿ ಕಾಯವನ್ನು ಬೇಡಲು ಹಚ್ಚಿದೆ.

ಹೆಣ್ಣು ದೇವರಿಗೆ ಸೀರೆ, ಗಂಡು ದೇವರಿಗೆ ಪಂಚೆ ಉಡಿಸಿ, ಕಲ್ಯಾಣೋತ್ಸವ ಮಾಡಿ, ಶೋಬಾನೆ ಪದ ಹಾಡಿ, ದೇವರನ್ನು ಶಯನ ಗೃಹಕ್ಕೆ ಕಳುಹಿಸುವ ಆರಾಧನೆಯಲ್ಲಿ, ಮನ ಸಕಲ ಕಾಯಗಳನ್ನು ತೊಡಗಿಸಿಕೊಂಡಿದೆ.

ನನ್ನ ದೇವರು ಶ್ರೇಷ್ಠ, ನಿನ್ನ ದೇವರು ಅಧಮ ಎಂದು ಕಾಯ, ಕಾಯದಲ್ಲಿಯೇ ಜಗಳ ಹಚ್ಚಿ ಮಹಾಯುದ್ಧಗಳಲ್ಲಿ ಕಾಯಗಳು ಸುಟ್ಟು ಕರಕಲಾಗುವಂತೆ ಮಾಡಿದೆ. ಇದು ಮನದ ಚೇಷ್ಟೆಯೆಂದು ಕಾಯಕ್ಕೆ ಹೊಳೆಯದಂತೆ ಮಾಡಿದೆ.

ಕಾದ ತಲೆಯ ಮೇಲೆ ಚಿನ್ನದ ಕಿರೀಟ ಧರಿಸಿ, ಬೆರಳುಗಳಲ್ಲಿ ಚಿನ್ನದ ಉಂಗುರಗಳನ್ನು ಇಟ್ಟು, ಆಸೆಯೇ ದುಃಖಕ್ಕೆ ಕಾರಣ ಎಂದು ಕಾಯವೇ ಕಾಯಗಳಿಗೆ ಭೋಧೆ ಮಾಡುವಂತೆ ಮಾಡಿದ ಮನವನ್ನು ಜಗದ್ಗುರುವೇ ತಾನಾದ ಕಾಯವನ್ನು ಅರಿಯದಂತೆ ಮಾಡಿದೆ.

ಬೋಧೆ ಆಲಿಸಿದ ಕಾಯಗಳಿಗೆ ದಾನ ನೀಡುವಂತೆ ಪ್ರೇರೇಪಣೆ ಮಾಡುವ ಮನವನ್ನು ದಂಡಿಸಲು, ಯಾವ ಕಾಯಗಳಿಗೂ ಸಾಧ್ಯವಾಗದ ಪರಿಸ್ಥಿತಿಯನ್ನು, ಕಾಯದಲ್ಲಿಯೇ ಇದ್ದ ಮನ ಕಾಯಗಳಿಗೆ ತಂದೊಡ್ಡಿದೆ.

ಒಂದು ಕಾಯ ಶ್ರೇಷ್ಠವಾದರೆ ಮತ್ತೊಂದು ಕಾಯ ಅಧಮವೆ? ಒಂದು ಕಾಯ ಭಿಕ್ಷುಕನಾದರೆ ಮತ್ತೊಂದು ಕಾಯ ದಾನಿ ಹೇಗೆ? ಇದನ್ನೆಲ್ಲ ತಿಳಿಯುವ ಅರಿವು ಕೂಡಾ ಕಾಯದಲ್ಲಿಯೇ ಇದೆ. ಆ ಅರಿವೇ ಪ್ರತಿ ಕಾಯಕ್ಕೂ ಗುರುವಾಗಬೇಕು. ಆ ಗುರುದೇವನೇ ಪ್ರತಿ ಕಾಯಕ್ಕೂ ಮಹಾದೇವನಾಗಬೇಕು. ಆ ಮಹಾದೇವನೇ ಪ್ರತಿ ಕಾಯಕ್ಕೂ ಸದಾಶಿವನಾಗಬೇಕು; ಸಾಕ್ಷಾತ್ ಪರಬ್ರಹ್ಮನಾಗಬೇಕು. ಮನದ ಉಪಟಳವನ್ನು ಸಹಿಸಿಕೊಳ್ಳಲು ಸಾಧ್ಯವಾಗದ ಕಾಯ, ಕಾಯದಲ್ಲಿಯೇ ಸಂಗಮವಾದ ಶಿವನನ್ನು ಕುರಿತು ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲವೆ, ಶಿವ ನಿನಗಿನಿತು ಕೃಪೆಯಿಲ್ಲವೆ, ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಎನಗಾಗಿ ಮತ್ತೊಂದು ತರುಮರವಿಲ್ಲವೆ ಎಂದು ಹಾಡುತ್ತಾ, ಅರಿವಿನ ಸಂಸಾರದಲ್ಲಿ ಅಡಿಯಿಡಬೇಕು.

ಸತ್ಯಕ್ಕ : ಧನ್ಯರಾದೆವು ಬಸವರಸ. ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಮಂಗಲ ಹಾಡಿದರು.

□

೨೧

ಸೂರ್ಯನ ಬೆಳಕು ಭೂಮಿಯನ್ನು ಬೆಳಗಲು ಸಿದ್ಧವಾಗಿದೆ. ಶರಣರು ಸತ್ಸಂಗಕ್ಕಾಗಿ ಮಹಾಮನೆಗೆ ನಡೆದಿದ್ದಾರೆ. ವೇದಿಕೆಯ ಮೇಲೆ ಆಸೀನರಾದ ಬಸವಣ್ಣನವರಿಗೆ ಹಣೆಮಣಿದು ಕುಳಿತುಕೊಳ್ಳುತ್ತಾರೆ.

ಬೊಕ್ಕಸದ ಚಿಕ್ಕಣ್ಣ :

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ !
ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ !
ಇರುಳು ಹಗಲೆನ್ನದೆ ಪ್ರಾಣ ಘಾತಕವ ಮಾಡಿದ
ಬೇಡನ ಕೈಲಾಸಕೊಯ್ದೆಯಯ್ಯಾ !
ಎನ್ನನೇತಕೊಲ್ಲೆ, ಕೂಡಲಸಂಗಮದೇವಾ? ॥ 65 ॥

ಕಾಯ, ಮನದ ಉಪಟಳ ತಾಳದೆ, ಶಿವ ನಿನಗಿನಿತು ಕೃಪೆಯಿಲ್ಲವೆ ಎಂದು, ಅರಿವಿನ ಶಿವನನ್ನು ಬೇಡುವ ಸೂತ್ರ ನಿನ್ನೆಯ ಸತ್ಸಂಗದಲ್ಲಿ ಹೇಳಿದಿರಿ ಬಸವರಸ. ನಾವು ಪಾವನರಾದೆವು. ಕಾಯ, ತನ್ನವರಿಗೆ ತಾನೇ ಶರಣು ಹೋಗುವ ಕಲೆ ಹೇಳಿಕೊಟ್ಟ ತಮಗೆ, ಕೋಟಿ ಕೋಟಿ ನಮನಗಳು. ಇಂದು ನರ ಕೂರಂಬಿನಲೆಚ್ಚ ಅವಂಗೊಲಿದೆಯಯ್ಯಾ ಎನ್ನುವ ವಚನದ ಸೂತ್ರವನ್ನು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಕಿರಾತನ ವೇಷ ಧರಿಸಿ ಬಂದ ಶಿವನ ಮೇಲೆ, ಹರಿತವಾದ ಬಾಣ ಬಿಟ್ಟ ಅರ್ಜುನನಿಗೆ ಒಲಿದು, ಪಾಶುಪತ ಅಸ್ತ್ರ ನೀಡಿದೆ; ನನಗೇಕೆ ಒಲಿಯುತ್ತಿಲ್ಲ ಎಂದು ಮನ, ಭಕ್ತನಾಗಿ ತನುವಿನಲ್ಲಿಯೇ ತನ್ಮಯವಾದ ಅರಿವಿನ ಶಿವನನ್ನು ಪ್ರಶ್ನಿಸುವ ಸೂತ್ರವಿದು.

ದಸರಯ್ಯ : ಮಹಾಭಾರತದ ಕಿರಾತ ಅರ್ಜುನನ ಬಗ್ಗೆ ವಿವರಿಸಿ ಬಸವರಸ.

ಬಸವಣ್ಣ : ವ್ಯಾಸ ಮಹರ್ಷಿ ಬಹಳ ಜಾಣ; ಜಾಣರ ಜಾಣ. ಮನ ಪಶುವೂ ಹೌದು ಕಿರಾತನೂ ಹೌದು. ಅರಿವು ಎನ್ನುವ ಶಿವನೇ ಪಶುಪತಿ. ಮನ, ತನಗೆ ತಾನೇ ತನ್ನಲ್ಲಿಯೇ ಟಿಸಿಲೊಡೆದು ನಾನು ಎನ್ನುವ ಪಶುವನ್ನು ಅರ್ಜುನನಾಗಿ ಶಿವನನ್ನು ಜಯಿಸಲೇಬೇಕು. ಅವನು ಎನ್ನುವ ಶಿವನೇ ಪಶುಪತಿ. ಆ ಪಶುಪತಿಯಿಂದ ಪಾಶುಪತ ಅಸ್ತ್ರವನ್ನು ಪಡೆಯಲೇಬೇಕು.

ಪಾಶುಪತಾಸ್ತ್ರ ಎನ್ನುವ ಬಾಣ ಇರುವುದಿಲ್ಲ. ಸರ್ಪಾಸ್ತ್ರ ಎನ್ನುವ ಬಾಣವೂ ಇರುವುದಿಲ್ಲ. ವರುಣಾಸ್ತ್ರ ಎನ್ನುವ ಬಾಣವೂ ಇರುವುದಿಲ್ಲ. ತನುವಿನಲ್ಲಿಯೇ ಉಂಟಾದ ಮಹಾಭಾರತದ ಯುದ್ಧದಲ್ಲಿ, ಅರಿವಿನ ದಿವ್ಯ ಸೂತ್ರಗಳನ್ನು ಬಳಕೆಮಾಡಿ, ಅಜ್ಞಾನವನ್ನು ಜ್ಞಾನದಿಂದ ಕೊಂದು ಹಾಕಲು ಹೆಣೆದ ನಿಃಶಬ್ದ ಜಾಲವಿದು.

ಮೆರೆಮಿಂಡಯ್ಯ : ಆಹಾ ಎಂತಹ ಅದ್ಭುತವಾದ ಸೂತ್ರವನ್ನು ಶರಣರಿಗೆ ಕರುಣಿಸಿದಿರಿ ಬಸವರಸ ; ನಿಮಗೆ ಕೋಟಿ ಕೋಟಿ ನಮನಗಳು.

ಬಸವಣ್ಣ : ಇಂತಹ ಮಹಾಜ್ಞಾನದ ಕಠಿಣವಾದ ಸೂತ್ರವನ್ನು ಕೇಳಿ ನೀವು ಪುಳಕಿತಗೊಳ್ಳುವಿರಲ್ಲ; ನಿಮ್ಮ ಅರು ಹೃದಯಕ್ಕೆ ನಾನು ಮಾರು ಹೋಗಿದ್ದೇನೆ; ನಿಮಗೆ ಶರಣು.

ದಸರಯ್ಯ : "ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ'' ಎಂದು ವಚನದ ಎರಡನೇ ಸಾಲಿನಲ್ಲಿ ಹೇಳಿರುವಿರಲ್ಲ ಬಸವಣ್ಣ? ದಯವಿಟ್ಟು ವಿವರಿಸಿ.

ಬಸವಣ್ಣ : ಪ್ರಖರವಾದ ಬಾಣ ಬಿಟ್ಟ ಅರ್ಜುನನಿಗೆ ಒಲಿದು ಪಾಶುಪತಾಸ್ತ್ರ ಕೊಟ್ಟೆ. ಹೂ ಬಾಣ ಬಿಟ್ಟ ಕಾಮನನ್ನು ಸುಟ್ಟೆ. ಏನಿದು ನಿನ್ನ ಲೀಲೆ. ಎಲ್ಲಾ ತಿರುವು ಮುರುವಾಗಿದೆಯಲ್ಲಾ! ಇದು ನಿನಗೆ ನ್ಯಾಯವೆ? ಎಂದು ಮನದಿಂದಲೇ ಶಿವನನ್ನು ಪ್ರಾರ್ಥಿಸಿದ ಸೂತ್ರವಿದು.

ಅದು ಹೂ ಬಾಣವಲ್ಲ; ಇಡೀ ತನುವನ್ನೇ ಕಾಮದ ಉದ್ರೇಕದಿಂದ ತಲ್ಲಣಗೊಳಿಸುವ ಕಾಮದ ಬಾಣ!

ದಸರಯ್ಯ : ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಕಣ್ಣನ್ನು ಆವರಿಸಿದ ಮನವೆಂಬ ಕಾಮದ ದೃಶ್ಯ ಇಡೀ ದೇಹವನ್ನೇ ರಕ್ಕಸನನ್ನಾಗಿ ಮಾಡುತ್ತದೆ.

ದಸರಯ್ಯ : ಅದು ಹೇಗೆ ಬಸವಣ್ಣ?

ಬಸವಣ್ಣ : ಪ್ರತಿ ಕಣ್ಣಲ್ಲಿ ಅರಿವಿನ ನಿರೂಪು ದೃಶ್ಯ ಭರಿತವಾಗಿದೆ. ಹಾಗೆಯೇ ಕಣ್ಣನ್ನು ಮನವೆಂಬ ಅಜ್ಞಾನದ ನಿರೂಪ ದೃಶ್ಯ ಆವರಿಸಿದೆ. ಅಜ್ಞಾನದ ದೃಶ್ಯದಿಂದ ರೂಪ ನೋಡಿದಾಗ ದೇಹ ಹೆಣ್ಣಾಗಿ ಕಾಣುತ್ತದೆ. ಆಗ ಇಡೀ ದೇಹ ಕಾಮದಿಂದ ತಲ್ಲಣಗೊಂಡು ರಕ್ಕಸನಂತಾಗುತ್ತದೆ.

ಕಣ್ಣಲ್ಲಿಯೇ ಹುಟ್ಟಿದ ಕಾಮದ ದೃಶ್ಯವನ್ನು; ಕಣ್ಣಲ್ಲಿಯೇ ಸಂಗಮವಾದ ಅರಿವಿನ ಶಿವನ ಕಿಡಿಗಣ್ಣ ಮೂಲಕ ಭಸ್ಮ ಮಾಡುವ ಸೂತ್ರವೇ ಇದಾಗಿದೆ. ಹೂ ಬಾಣ ಬಿಟ್ಟು ಭೋಗಕ್ಕೆಳೆಸುವ ಕಾಮದ ದೃಶ್ಯವನ್ನು ; ಅರಿವಿನ ದೃಶ್ಯದಿಂದ ಸುಟ್ಟು ಭಸ್ಮ ಮಾಡಿ ತನಗೆ ತಾನೇ ಮುಕ್ಕಣ್ಣನು ಆಗಲೇಬೇಕು. ಆ ಅರಿವಿನ ಭಸ್ಮವನ್ನೇ ಧರಿಸಿ ಶಿವನಾಗಲೇಬೇಕು.

ದಸರಯ್ಯ : ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ ಬೇಡನ ಕೈಲಾಸಕ್ಕೆ ಒಯ್ದೆಯಯ್ಯಾ ; ಎನ್ನನೇತಕೆ ಒಲ್ಲೆ ಕೂಡಲಸಂಗಮದೇವ. ಎನ್ನುವ ವಚನದ ಮೂರನೇ ಸಾಲನ್ನು ವಿವರಿಸಿ ಎನ್ನೊಡೆಯಾ.

ಬಸವಣ್ಣ : ಅರಿವಿನ ದೃಶ್ಯದಿಂದ ನೋಡಬೇಕಾದ ಕಣ್ಣು ; ಅಜ್ಞಾನದ ದೃಶ್ಯದಿಂದ ನೋಡಿ ಹಗಲಿರುಳೆನ್ನದೆ ಇಡೀ ಕಾಯವನ್ನು ಅಶನದ ಬೇಟೆಗೆ ತಳ್ಳಿದೆ.

ವ್ಯಸನದ ಬೇಟೆಗೆ ತಳ್ಳಿದೆ. ಕಾಯದಲ್ಲಿ ಕಾಮದ ಹಸಿವನ್ನು ಸೃಷ್ಟಿಮಾಡಿ ಕಾಯ; ಕಾಯವನ್ನೇ ಬೇಟೆಯಾಡಿ ಹರಿದು ತಿನ್ನುವಂತೆ ಮಾಡಿದೆ.

ಇಂತಹ ಬೇಡವಾದ ಕಣ್ಣು ನನಗೆ ಬೇಡವೇ ಬೇಡ ಶಿವನೇ ಎಂದು; ಕಣ್ಣಲ್ಲಿಯೇ ಇದ್ದ ಅರಿವಿನ ಕಣ್ಣಪ್ಪನಿಗೆ ಅರ್ಪಣೆ ಮಾಡಬೇಕು. ಇಂತಹ ಸುಂದರವಾದ ಬೇಡರ ಕಣ್ಣಪ್ಪನ ಅರಿವಿನ ಕಥೆಯನ್ನು ರಚಿಸಿ ಮನುಕುಲಕ್ಕೆ ನೀಡಿದ ಪುರಾತನರೇ ಧನ್ಯರು.

ದಸರಯ್ಯ : ಅರಿವಿಗೆ ಹೋಗುವ ಕಣ್ಣಪ್ಪನ ಈ ಸೂತ್ರ; ಜಾತಿಯನ್ನು ಸೃಷ್ಟಿಸಿದೆಯಲ್ಲ ಬಸವರಸ.

ಬಸವಣ್ಣ : ಇದಕ್ಕೆ ಕಾರಣ ಮನವೇ ಹೊರತು ತನುವಲ್ಲ ಶರಣರೆ.

ದಸರಯ್ಯ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಮಾದಾರ ಚೆನ್ನಯ್ಯ :

ನೀನೊಲಿದಡೆ ಕೊರಡು ಕೊನರುವುದಯ್ಯಾ.
ನೀನೊಲಿದಡೆ ಬರಡು ಹಯನಹುದಯ್ಯಾ.
ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ.
ನೀನೊಲಿದಡೆ ಸಕಲ ಪಡಿಪದಾರ್ಥ
ಇದಿರಲ್ಲಿರ್ಪುವು ಕೂಡಲಸಂಗಮದೇವಾ. ॥ 66 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ಒಡೆಯಾ.

ಬಸವಣ್ಣ : ಬೇರಿದ್ದ ಮರ ಚಿಗುರುತ್ತದೆ. ಎಲೆ ಹೂ ಕಾಯಿ ಹಣ್ಣು ಬಿಟ್ಟು ನಳನಳಿಸುತ್ತದೆ. ಪಶು ಪಕ್ಷಿ ಪ್ರಾಣಿ ಕೀಟಗಳಿಗೆ ಆಶ್ರಯವಿತ್ತು ಧನ್ಯತೆ ಮೆರೆಯುತ್ತದೆ. ಪತ್ರ ರಂಧ್ರಗಳ ಮೂಲಕ ಜಲ ಹೀರಿ, ಬೇರಿನ ಮೂಲಕ ಮಣ್ಣನ್ನು ಜಿಗಿಗೊಳಿಸಿ; ಯಾರ ಆಶ್ರಯವಿಲ್ಲದೆ ಗಟ್ಟಿಯಾಗಿ ನಿಲ್ಲುತ್ತದೆ. ಮರದ ಕೆಚ್ಚು ಕಡಿಮೆಯಾದಾಗ ಆಶ್ರಯಕೊಟ್ಟ ಕ್ರಿಮಿಗಳಿಗೆ ಮರ ಆಹಾರವಾಗಿ ಕೊರಡಾಗಿ ನಿಲ್ಲುತ್ತದೆ. ಮನೆಗೆ ತೊಲೆಯಾಗಿ, ಬಾಗಿಲು ಕಿಟಕಿಯಾಗಿ ಸಹಕಾರಿಯಾಗುತ್ತದೆ. ಇದು ಬೇರಿದ್ದ ಮರದ ಕಥೆ.

ದೇಹವು ಬೇರಿಲ್ಲದ ಮರ. ಮಾತನಾಡುತ್ತಾ ಚಲಿಸುವ ಮರ. ನುಡಿದು ಬೆಳಗಿಂಗೆ ಬೆಳಗಾಗಿ ಬೆಳಗುವ ಮೂಲಕ ಅರಿವಿನ ಫಲ ಕೊಡುವ ಬೋಧೀವೃಕ್ಷ!

ತಿಳಿಯದೆ ಮರೆವಿನಿಂದ ನುಡಿದರೆ; ನುಡಿದ ತನುವಿಗೆ ಸಂಕಟ ನೀಡಿ ಮುಳುವಾಗುವ ಕೊರಡು!

ಕೈಕೇಯಿಯ ಎರಡು ನುಡಿಗಳು ರಾಮನನ್ನು ಕಾಡಿಗೆ ಕಳಿಸಿದವು.

ಮಡಿವಾಳನ ನುಡಿ ಕೇಳಿ, ರಾಮ ಸೀತಾಮಾತೆಯನ್ನು ಕಾಡಿಗೆ ಕಳುಹಿಸಿದ. ಅರಿವಿನಿಂದ ನುಡಿಯದ ತನುವನ್ನು, ಅರಿವಿನಿಂದ ನುಡಿ ಕೇಳದ ತನುವನ್ನು ಕೊರಡೆನ್ನಲು ಬರುವುದಿಲ್ಲ; ಬರಡೆನ್ನಲೂ ಬರುವುದಿಲ್ಲ; ತನು ನುಡಿಯ ಮೂಲಕ ವಿಷ ಚೆಲ್ಲುವ ಜಂತು.

ಸಸಿ ಪ್ರಭುದ್ಧತೆಗೆ ಬರುವುದೊಂದೆ ತಡ ಮರವಾಗಿ, ಹೂವಾಗಿ, ತನಗೆ ತಾನೇ ಅರಳುತ್ತದೆ.ಅದು ಹೂವಾಗಿ ಅರಳಲು ಮತ್ತೊಂದು ಮರದ ಸಹಾಯ ಪಡೆಯುವುದಿಲ್ಲ. ಸಸಿಯಲ್ಲಿ ಮರದಲ್ಲಿ ಬಚ್ಚಿಟ್ಟುಕೊಂಡ ಹೂ; ತನಗೆ ತಾನೆ ಅರಳಿ ಪ್ರಕೃತಿಯನ್ನು ಬೆರಗು ಗೊಳಿಸುತ್ತದೆ. ಮನುಕುಲಕ್ಕೆ ಸುಗಂಧದ ಪರಿಮಳ ಬೀರುತ್ತದೆ.

ಮನುಷ್ಯ ಕೂಡಾ, ಮರದಂತೆ ತನಗೆ ತಾನೆ ಜ್ಞಾನದಿಂದ ಅರಳುವ ಅವಕಾಶವಿದ್ದರೂ ಕೂಡಾ, ಅರಳುವುದಕ್ಕಾಗಿ ಮತ್ತೊಬ್ಬ ಮನುಷ್ಯನನ್ನು ಗುರುವಾಗಿಸಿಕೊಳ್ಳುತ್ತಾನೆ. ಆ ಗುರುವಿಗೆ ತಾನು ಶಿಷ್ಯನಾಗುತ್ತಾನೆ. ಅವರಿಬ್ಬರೂ ತನು ಮತ್ತು ಮನದ ಸುಖದ ವ್ಯವಹಾರದಲ್ಲಿ ಮುಳುಗಿ ಜ್ಞಾನದಿಂದ ಅರಳುವುದನ್ನೇ ಮರೆತು ಬಿಡುತ್ತಾರೆ. ಹೀಗಾಗಿ ತನುವಿನಲ್ಲಿ ತನ್ಮಯವಾದ ಅರಿವು ತನುವಿಗೂ ಒಲಿಯಲಿಲ್ಲ; ಮನಕ್ಕೂ ಒಲಿಯಲಿಲ್ಲ.

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಹಣೆಮಣಿದು ನೀನೊಲಿದಡೆ ಕೊರಡು ಕೊನರುವುದಯ್ಯಾ ; ಬರಡು ಹಯನಹುದಯ್ಯಾ ಎಂದು ತನು ಬೇಡಲಿಲ್ಲ; ಮನವೂ ಕೂಡಾ ತನುವಿಗೆ ಸಹಕರಿಸಲಿಲ್ಲ. ಹೀಗಾಗಿ ತನುವಿನ ಆಯುಷ್ಯದ ಅವಧಿ ಮುಗಿಯುತ್ತಾ ಬಂದರೂ ತನುವಿನಲ್ಲಿಯೇ ತನ್ಮಯವಾದ ಅರಿವು ಎನ್ನುವ ಜ್ಞಾನದ ಹೂ ಅರಳುವುದೇ ಇಲ್ಲ.

ತನು ಸದಾ ಹಸಿರಿನಿಂದ ಹಸಿಹಸಿಯಾಗಿ ಕಂಡರೂ; ಜ್ಞಾನದ ಹೂ ಬಿಡದ ಬರಡು ತನು; ಚಿಗುರು ಮೊಗ್ಗು ಹೂ ಬಿಡದ ಕೊರಡು ತನುವಾಗಿ ಆಯುಷ್ಯದ ಅವಧಿ ಮುಗಿದ ಮೇಲೆ ಇಲ್ಲವಾಗುತ್ತದೆ.

ಮರ, ಮರದಲ್ಲಿಯೇ ಇದ್ದ ಮೊಗ್ಗನ್ನು ಹೂವನ್ನಾಗಿಸಿ, ತನ್ನ ಕಾಂಡಗಳ ಮೂಲಕ ಹೊರ ಚೆಲ್ಲಿ ಹೇಗೆ ಸುಗಂಧ ಬೀರುತ್ತದೆಯೋ, ಹಾಗೆಯೇ ತನು, ತನುವಿನಲ್ಲಿಯೇ ಇದ್ದ ಜ್ಞಾನದ ಹೂವನ್ನು ತನುವಿನ ಮೂಲಕವೇ ಅರಳಿಸಿ ಜ್ಞಾನದ ಸುಗಂಧ ಬೀರಬೇಕು.

ನೀನೊಲಿದಡೆ ತನುವನ್ನು ಆವರಿಸಿದ ಮನವೆಂಬ ಅಜ್ಞಾನದ ವಿಷವೆಲ್ಲ ಅಮೃತವಾಗುವುದಯ್ಯಾ ; ನೀನೊಲಿದಡೆ ಸಕಲ ಪಡಿ ಪದಾರ್ಥಗಳು, ಇದಿರಲ್ಲಿಯೇ ಇರ್ಪವು ಕೂಡಲಸಂಗಮದೇವಾ ಎಂದು ದೇಹದಲ್ಲಿಯೇ ಇದ್ದ ಅರಿವಿನ ದೇವರನ್ನು ಬೇಡಬೇಕು.

ಸತ್ಯಕ್ಕ : ಅರಿವಿಗೆ ಹೋಗುವ ಸೂತ್ರ ತಿಳಿಹೇಳಿದ ತಮಗೆ ಶರಣು ಶರಣಾರ್ಥಿ.

ಮಲಹರ ಕಾಯಕದ ಚಿಕ್ಕ ದೇವಯ್ಯ :

ಮೇರುಗುಣವನರಸುವುದೆ ಕಾಗೆಯಲ್ಲಿ?
ಪರುಷಗುಣವನರಸುವುದೆ ಕಬ್ಬುನದಲ್ಲಿ?
ಸಾದು ಗುಣವನರಸುವುದೆ ಅವಗುಣಿಯಲ್ಲಿ?
ಚಂದನ ಗುಣವನರಸುವುದೆ ತರುಗಳಲ್ಲಿ?
ಸರ್ವಗುಣಸಂಪನ್ನ ಲಿಂಗವೆ, ನೀನೆನ್ನಲ್ಲಿ
ಅವಗುಣವನರಸುವುದೆ ಕೂಡಲಸಂಗಮದೇವಾ? ॥ 67 ॥

ತಮ್ಮ ಈ ವಚನವನ್ನು ಶರಣರಿಗೆ ತಿಳಿಯುವಂತೆ ವಿವರಿಸಿ ಹೇಳಿ ತಂದೆ.

ಬಸವಣ್ಣ : ಓದಿ, ಕಲಿತು, ಕೇಳಿ, ಅಳವಡಿಸಿಕೊಂಡು ಜ್ಞಾನಿಯಾಗಬೇಕು ಎನ್ನುವ ಮನದ ಸಂಕಲ್ಪ; ಕತ್ತಲಲ್ಲಿ ಬೆಳಕು ಹುಡುಕಿದಂತೆ. ಕತ್ತಲಿಗೆ ಬೆಳಕಾಗು ಎಂದು ಹೇಳಿದಂತೆ!

ಚಿಕ್ಕದೇವಯ್ಯ : ತಿಳಿಯುವಂತೆ ಹೇಳಿ ಬಸವರಸ.

ಬಸವಣ್ಣ : ಮನ ಎನ್ನುವುದು ಕಾಗೆ. ಅದರಿಂದ ಮಧುರ ಧ್ವನಿ ಹೊರಬರುವುದಿಲ್ಲ.ಮನ ಎನ್ನವುದು ಕಬ್ಬಿಣ. ಅದಕ್ಕೆ ಹೊನ್ನಿನ ಬಣ್ಣ ಬಳಿದರೂ ಕೂಡಾ ಒಮ್ಮೆ ಬಣ್ಣದೊಂದಿಗೆ ಇಲ್ಲವಾಗುತ್ತದೆ. ಅದರಲ್ಲಿ ಪರುಷ ಹುಡುಕಲು ಸಾಧ್ಯವಿಲ್ಲ.

ಮನ ಎನ್ನುವುದು ಅವಗುಣಿ; ಅದರಲ್ಲಿ ನಿರ್ಗುಣವ ಹುಡುಕುವುದು ಸಾಧ್ಯವಾಗುವುದಿಲ್ಲ. ಹಾಗೆಯೇ ತರುಮರಗಳಲ್ಲಿ ಚಂದನದ ಸುವಾಸನೆಯನು ಹುಡುಕಲು ಸಾಧ್ಯವಿಲ್ಲ.

ನಗೆಮಾರಿತಂದೆ: ಓದಿ ಜ್ಞಾನಿಯಾಗಲು ಸಾಧ್ಯವಿಲ್ಲವೆ ಬಸವರಸ?

ಬಸವಣ್ಣ : ಮನ ತನುವಿನೊಂದಿಗೆ ವೇದ ಆಗಮ ಉಪನಿಷತ್ತುಗಳನ್ನು ಓದಿದರೆ, ಓದಿದ್ದನ್ನೇ ಕಾಗೆಯಂತೆ ಒದರುತ್ತದೆಯೇ ಹೊರತು, ತನುವಿನಲ್ಲಿ ತನ್ಮಯವಾದ ಅರಿವಿನಲ್ಲಿ ಬೆರೆತು ಆ ಅರಿವೇ ತಾನಾಗಲಾರದು. ಓದಿ ಕೇಳಿ ಪಂಡಿತನಾಗಬಹುದು, ಶಾಸ್ತ್ರಿಯಾಗಬಹುದು ಜ್ಞಾನಿಯಾಗಲು ಸಾಧ್ಯವಿಲ್ಲ.

ಪುರದ ನಾಗಣ್ಣ : ಅದು ಹೇಗೆ ಬಸವರಸ?

ಬಸವಣ್ಣ : ವೇದ ಆಗಮ ಉಪನಿಷತ್ತುಗಳು ತನುವಿನ ಮೂಲಕ ಹೊರಬಂದಿವೆ. ಅರಿವಿನ ಸಂಪತ್ತು ಸಕಲ ತನುಗಳಲ್ಲಿಯೂ ಬಚ್ಚಿಟ್ಟುಕೊಂಡಿದೆ ಎಂದು ಹೇಳುವ ಸೂತ್ರಗಳನ್ನು ಮನ ಪಠಣ ಮಾಡಿ, ತನುವಿನ ಮೂಲಕ ನುಡಿದರೆ; ಅದು ಮತ್ತೊಂದು ತನುವಿನಿಂದ ಹೊರಬಂದು ಪುಸ್ತಕದಲ್ಲಿ ಸೇರಿ ನುಡಿಯ ಮೂಲಕ ಹೊರಬರುವ ಎಂಜಲಾಯಿತೆ ಹೊರತು ಮೀಸಲಾಗಲಿಲ್ಲ. ಮೀಸಲು ತನುವಿನಲ್ಲಿಯೇ ಉಳಿದು; ಓದಿದ, ಕೇಳಿದ ಎಂಜಲು ಹೊರಬಂದಂತಾಗಲಿಲ್ಲವೆ?

ಬಿಬ್ಬಿ ಬಾಚಯ್ಯ : ಭೂಮಿಯ ಮೇಲಿದ್ದ ಸಕಲ ತನುಗಳು ಜ್ಞಾನಿಯಾಗಲು ಸಾಧ್ಯವಿಲ್ಲವೆ ಬಸವಣ್ಣ?

ಬಸವಣ್ಣ : ಸಕಲ ಮರಗಳೂ ಹೂಬಿಡಲು ಸಾಧ್ಯವಿಲ್ಲವೆ ಬಾಚಯ್ಯ ಶರಣರೆ? ಹಾಗೆಯೇ ಸಕಲ ತನುಗಳಲ್ಲಿ ಅರಿವು ಬಚ್ಚಿಟ್ಟುಕೊಂಡಿದೆ. ಹೀಗೆ ಬಚ್ಚಿಟ್ಟುಕೊಂಡ ಅರಿವನ್ನು, ತನು ಮತ್ತು ಮನ ಒಂದಾಗಿ, ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಬಳಕೆ ಮಾಡಬೇಕು. ಪುಸ್ತಕದಲ್ಲಿದ್ದ ಅರಿವು, ಗುರುವಿನಿಂದ ಕೇಳಿದ ಅರಿವು ಬಳಕೆ ಮಾಡಿದರೆ, ತನುವಿನಲ್ಲಿ ಇದ್ದ ಅರಿವು ತನುವಿನಲ್ಲಿಯೇ ಉಳಿಯಲಿಲ್ಲವೆ?

ಬಾಚಯ್ಯ : ಮತ್ತಷ್ಟು ಹೇಳಿ ಬಸವರಸ.

ಬಸವಣ್ಣ: ಮನ, ತನುವಿನಲ್ಲಿ ತನ್ಮಯವಾದ ಅರಿವಿನಲ್ಲಿ ಮಿಂದರೆ, ಅದು ಕೋಗಿಲೆಯಂತೆ ಇಂಪಾಗಿ ಹಾಡುವುದು. ಮನವೆಂಬ ಕಬ್ಬಿಣ, ಅರಿವೆಂಬ ಪರುಷದಲ್ಲಿ ಮಿಂದರೆ ಅದು ಹೊನ್ನಿನಂತೆ ಬೆಳಗುವುದು. ಮನವೆಂಬ ಅವಗುಣಿ ಅರಿವೆಂಬ ಗುರುದೇವನಿಗೆ ಶರಣು ಹೋದರೆ ಸಾಕು, ಅದು ಗುಣಾವಗುಣಗಳನ್ನು ಕಳೆದುಕೊಂಡು ನಿರ್ಗುಣಿಯಾಗಿ ಬೆಳಗುವುದು. ಚಂದನದಂತೆ ಘಮಘಮಿಸಿ ಪರಿಮಳ ಬೀರುವುದು.

ಭೋಗಣ್ಣ : ಸರ್ವಗುಣ ಸಂಪನ್ನ ಲಿಂಗವೆ, ನೀನೆನ್ನಲ್ಲಿ ಅವಗುಣವನರಸುವುದೆ ಕೂಡಲಸಂಗಮದೇವಾ ಎಂದು ವಚನದ ಕೊನೆಯ ಸಾಲಿನಲ್ಲಿ ಹೇಳಿರುವಿರಿ ದಯವಿಟ್ಟು ವಿವರಿಸಿ.

ಬಸವಣ್ಣ: ಭೂಮಿಯ ಮೇಲೆ ಸೂರ್ಯನ ಬೆಳಕು, ಕತ್ತಲು ಬೆಳಕಿನ ಆಟ ಹೇಗೆ ಆಡುವುದೊ; ಹಾಗೆಯೇ ಅಂಗದಲ್ಲಿಯೇ ವಾಸ ಮಾಡಿದ ಅರಿವಿನ ಲಿಂಗಯ್ಯ; ಅಂಗದ ಮೂಲಕ ಜ್ಞಾನ–ಅಜ್ಞಾನದ ಆಟವನ್ನು ಆಡುತ್ತಲಿದ್ದಾನೆ.

ಭೋಗಣ್ಣ: ಸೂರ್ಯನ ಬೆಳಕು ಅದು ಹೇಗೆ ಕತ್ತಲು ಬೆಳಕಿನ ಆಟ ಆಡುತ್ತದೆ?

ಬಸವಣ್ಣ: ಸೂರ್ಯ ಮುಳುಗುವುದೂ ಇಲ್ಲ, ತೇಲುವುದೂ ಇಲ್ಲ. ಅದು ನಿಂತಲ್ಲೇ ನಿಂತು ಸದಾ ಬೆಳಕು ಚೆಲ್ಲುವ ಒಂದು ಗ್ರಹ. ಭೂಮಿ ತನ್ನ ಸುತ್ತು ಸುತ್ತುತ್ತಾ, ಸೂರ್ಯ ಗ್ರಹದ ಸುತ್ತು ಸುತ್ತುವುದರಿಂದ, ಬೆಳಕಿನ ಅಭಿಮುಖಕ್ಕೆ ಬಂದ ಅರ್ಧ ಭೂಮಿ ಬೆಳಕಾಗುವುದು. ಭೂಮಿಯ ಬೆನ್ನಭಾಗದ ಇನ್ನರ್ಧ ಭೂಮಿ ಕತ್ತಲಾಗುವುದು. ಅಂದರೆ ಸೂರ್ಯನ ಬೆಳಕು ಅರ್ಧ ಭೂಮಿ ಬೆಳಗಿ, ಆ ಬೆಳಕೆ ಭೂಮಿಯ ಬೆನ್ನ ಹಿಂದಿನ ಭೂಮಿಗೆ ಕತ್ತಲುಂಟು ಮಾಡಿತು. ಆ ಕತ್ತಲೇ ಭೂಮಿಯ ಜೊತೆಗೆ ಸರಿಯುತ್ತಾ ಸರಿಯುತ್ತಾ ಬೆಳಕಿನಲ್ಲಿ ಲೀನವಾಗಿ ಬೆಳಕಾಯಿತು. ಇದು ಪ್ರತಿನಿತ್ಯ ನಡೆಯುತ್ತಿರುವ ಕತ್ತಲು ಬೆಳಕಿನ ಆಟ ಆಗಲಿಲ್ಲವೆ?

ಭೋಗಣ್ಣ : ಇದೆಂತಹ ಆಶ್ಚರ್ಯದ ಮಾತು ಹೇಳಿದಿರಿ! ಈ ಕತ್ತಲ ಬೆಳಕಿಗೂ ದೇಹದಲ್ಲಿರುವ ಅಜ್ಞಾನದ ಕತ್ತಲಿಗೂ ಏನು ಸಂಬಂಧ?

ಬಸವಣ್ಣ : ಇದರಂತೆಯೇ ಸದಾ ಜ್ಞಾನದಿಂದ ಬೆಳಗಿಂಗೆ ಬೆಳಗಾಗಿ ಬೆಳಗುವ, ಅರಿವೆಂಬ ಗುರುದೇವ ಪ್ರತಿ ತನುವಿನಲ್ಲಿ ತನ್ಮಯವಾಗಿದ್ದಾನೆ. ಆತನ ಅರಿವಿನ ಬೆಳಕಿನಿಂದ, ತನುವಿನಲ್ಲಿ ಮನವೆಂಬ ಮರೆವಿನ ಕತ್ತಲು ಹುಟ್ಟಿದೆ. ಈ ಕತ್ತಲು ಕಣ್ಣಲ್ಲಿ ಪ್ರವೇಶ ಮಾಡಿ, ಅರಿವಿನಿಂದ ನೋಡದಂತೆ ಮಾಡಿದೆ. ಕಿವಿಯಲ್ಲಿ ಪ್ರವೇಶ ಮಾಡಿ, ಅರಿವಿನಿಂದ ಕೇಳದಂತೆ ಮಾಡಿದೆ. ಚರ್ಮದಲ್ಲಿ ಪ್ರವೇಶವಾದ ಮನವೆಂಬ ಕತ್ತಲು, ಅರಿವಿನಿಂದ ಮುಟ್ಟದಂತೆ ಮಾಡಿದೆ. ನಾಲಿಗೆ, ಮೂಗಿನಲ್ಲಿ ಪ್ರವೇಶ ಮಾಡಿ ಅರಿವಿನಿಂದ ರುಚಿಸಿ, ಮೂಸಿಸದಂತೆ ಮಾಡಿದೆ.

ಭೋಗಣ್ಣ : ಇದಕ್ಕೆ ಪರಿಹಾರವಿಲ್ಲವೆ ಬಸವಣ್ಣ ?

ಬಸವಣ್ಣ : ಸುಂದರವಾದ ಪ್ರಶ್ನೆ ಕೇಳಿದಿರಿ ಶರಣರೆ. ಸೂರ್ಯನ ಬೆಳಕಿನಿಂದ ಉಂಟಾದ ಕತ್ತಲು, ಬೆಳಕಿನಲ್ಲಿ ಸಂಗಮವಾಗಿ ಬೆಳಕಾಗಲು ಅರ್ಧ ದಿನ ಸಾಕು. ಭೂಮಿ-ತನಗೆ ತಾನೆ ಕತ್ತಲಿನೊಂದಿಗೆ ಬೆಳಕಿನತ್ತ ಸರಿದು ಬೆಳಕಾಗುತ್ತದೆ. ಪುನಃ ತನಗೆ ತಾನೇ ಬೆಳಕಿನಿಂದ ಕತ್ತಲಿನತ್ತ ಸರಿದು ಕತ್ತಲಾಗುತ್ತದೆ.

ತನುವನ್ನು ಆವರಿಸಿ, ಸದಾ ಚಲನೆಯಲ್ಲಿರುವ ಮನ, ತನುವಿನಲ್ಲಿಯೇ ತನ್ಮಯವಾಗಿ ಸದಾ ಬೆಳಗುವ ಜ್ಞಾನ ಸೂರ್ಯನಲ್ಲಿ ಸಂಗಮವಾದರೆ ಸಾಕು, ಮನ ತನ್ನ ಅಜ್ಞಾನದ ಕತ್ತಲನ್ನು ಕಳೆದುಕೊಂಡು, ಮಹಾಜ್ಞಾನದ ಬೆಳಕಿನಿಂದ ಬೆಳಗಿಂಗೆ ಬೆಳಕಾಗಿ ಬೆಳಗುತ್ತದೆ. ಮತ್ತೆಂದೂ ಅಜ್ಞಾನದ ಕತ್ತಲು ದೇಹವನ್ನು ಆವರಿಸಿಕೊಳ್ಳುವುದಿಲ್ಲ.

ಸೂರ್ಯ ಹೇಗೆ ಸದಾ ಬೆಳಗುತ್ತಾನೆಯೋ ಹಾಗೆಯೇ ಜ್ಞಾನ ಸೂರ್ಯ ಕೋಟಿ ಸೂರ್ಯರು ನಾಚುವಂತೆ, ಸೂರ್ಯ ಬೆಳಗುವ ಬೆಳಕನ್ನು ಬೆಳಗಿಂಗೆ ಬೆಳಗಾಗಿ ಬೆಳಗುತ್ತಾನೆ.

ಎನ್ನಂಗದಲ್ಲಿ ಸಂಗಮವಾದ ಸರ್ವಗುಣ ಸಂಪನ್ನನಾದ ಅರಿವಿನ ಲಿಂಗಯ್ಯನೆ, ನೀನು ನನ್ನಲ್ಲಿ ಅವಗುಣವನ್ನು ಹುಡುಕುವುದೆ? ನಿನ್ನ ಕಂದ ನಾನು, ನನ್ನ ತಂದೆ ನೀನು. ನನ್ನನ್ನು ನೀನು ಅಪ್ಪಿಕೊಂಡು ನಿನ್ನಂತೆ ಎನ್ನನು ಮಾಡಿಕೊ ಎಂದು ಮನ ಬೇಡಲೇ ಬೇಕು.

ಭೋಗಣ್ಣ : ಧನ್ಯರಾದೆವು ಬಸವರಸ. ಸತ್ಸಂಗದಲ್ಲಿ ಸೇರಿದ ಸರ್ವ ಅಂಗಗಳಿಗೆ ಅಂಗದಲ್ಲಿಯೇ ಸಂಗಮವಾದ ಅರಿವಿನ ಲಿಂಗಯ್ಯನ ದರುಶನ ಮಾಡಿಸಿದಿರಿ ತಂದೆ. ಅಂಗವನ್ನು ಆವರಿಸಿದ ಅಜ್ಞಾನಿ ಮನಕ್ಕೆ ಮುಕ್ತಿ ದೊರಕಿಸಿದಿರಿ ತಂದೆ. ನಿಮಗೆ ಕೋಟಿ ಕೋಟಿ ವಂದನೆಗಳು.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸತ್ಸಂಗದಲ್ಲಿ ಸೇರೋಣ,

ಸಕಲ ಶರಣರು ತಮ್ಮ ತಮ್ಮ ಮನೆಗೆ ನಡೆದರು.

೨೨

ಇನ್ನೂ ಸೂರ್ಯೋದಯವಾಗಿಲ್ಲ. ಸತ್ಸಂಗಕ್ಕಾಗಿ ಶರಣರು ಮಹಾಮನೆಯತ್ತ ನಡೆದಿದ್ದಾರೆ. ಬಸವಣ್ಣನವರಿಗೆ ಶರಣು ಹೇಳಿ ಕುಳಿತುಕೊಳ್ಳುತ್ತಾರೆ.

ಸುಂಕದ ಬಂಕಣ್ಣ :

ಭವಭವದಲ್ಲಿ ಎನ್ನ ಮನವು ನೀವಲ್ಲದೆ;
ಭವಭವದಲ್ಲೆನ್ನ ಮನವು ಸಿಲುಕದೆ
ಭವರಾಟಳದೊಳು ತುಂಬದೆ, ಕೆಡಹದೆ !
ಭವರೋಗವೈದ್ಯ ನೀನು, ಭವವಿರಹಿತ ನೀನು !
ಅವಧಾರು! ಕರುಣಿಸುವುದು ಕೂಡಲಸಂಗಮದೇವಾ. ॥ 68 ॥

ತಮ್ಮ ಈ ವಚನವನ್ನು ಶರಣರಿಗೆ ತಿಳಿಯುವಂತೆ ವಿವರಿಸಿ ಹೇಳಿ ತಂದೆ.

ಬಸವಣ್ಣ : ಮನದ ಅಜ್ಞಾನವೇ ಹೀಗೆ. ತನ್ನ ಸುಖಕ್ಕಾಗಿ ಮನ ತನುವನ್ನು ಹಗಲಿರುಳೆನ್ನದೆ ಕಾಡುತ್ತದೆ. ಅರಿವಿನ ಪರಿಚಯವಿಲ್ಲದ ಮನ, ಅರಿವಿನ ದೇಹವನ್ನು ಕ್ಷಣಕ್ಷಣಕ್ಕೂ ತಲ್ಲಣಗೊಳಿಸುತ್ತದೆ. ಮನ ಹುಟ್ಟಿನೊಂದಿಗೆ ಬಂದು ಸಾವಿನವರೆಗೆ ಕಾಡುತ್ತದೆ. ಕಾಯದ ಕಾಯಿಲೆಗೆ ವೈದ್ಯ ಮದ್ದನರೆದು ಕಳೆಯಬಹುದು. ಆದರೆ ಇದು ಕಾಯದ ಕಾಯಿಲೆಯಲ್ಲ; ಮನ ಕಾಯಕ್ಕೆರಗಿ ಕಾಯವನ್ನು ಸಾವಿನವರೆಗೆ ಕಾಡುವ ಭವರೋಗದ ಕಾಯಿಲೆ!

ಬಂಕಣ್ಣ : ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ಗಿರಕಿ ಬಾವಿಯಲ್ಲಿ ಇಳಿಬಿಟ್ಟ ಕೊಡದಂತೆ ನೀರಲ್ಲಿ ಮುಳಗಿಸುವುದು ತೇಲಿಸುವುದು ನಿರಂತರ ನಡೆಯುತ್ತದೆ.

ಹಗ್ಗ ಹರಿಯುವವರೆಗೆ ಕೊಡಕ್ಕೂ ತಿಳಿಯುವುದಿಲ್ಲ; ಹಗ್ಗ ಕೊಡವನ್ನು ಹೊರಗೂ ಬಿಡುವುದಿಲ್ಲ. ಪ್ರಾಣ, ಕಾಯ, ಮನದ ನಂಟು ಕಾಯ ಇರುವವರೆಗೆ ಹೀಗೇ ನಡೆಯುತ್ತದೆ.

ಭವಭವದಿಂದ, ಆದಿ ಅನಾದಿಯಿಂದ, ತನುವಿನೊಂದಿಗೆ ಬಂದ ಮನ, ತನುವಿನಲ್ಲಿಯೇ ತನ್ಮಯವಾದ ಗುರುದೇವನನ್ನು ಮರೆತುದೇ ತನುವಿನ ದುಃಖಕ್ಕೆ ಕಾರಣವಾಗಿದೆ.

ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಜನನವಿಲ್ಲ ಮರಣವಿಲ್ಲ; ಭವವಿಲ್ಲ ಬಂಧನವಿಲ್ಲ. ಆತ ಭವರೋಗದ ವೈದ್ಯ. ಮನ ಆ ವೈದ್ಯನ ಮೊರೆಹೊಕ್ಕರೆ ಭವವಿರಹಿತ ; ಮನದ ಮೈದಡವಿ ತನ್ನಂತೆ ಮಾಡಿಕೊಳ್ಳುತ್ತಾನೆ ಆತ.

ಕರುಣಾಕರ,ಅಭಯಂಕರ, ವರವ ನೀ ಕರುಣಿಸಯ್ಯಾ; ಸಂಸಾರ ಬಂಧನವನ್ನು ಮಾಣಿಸಿ, ಎನಗೆ ಕೃಪೆಮಾಡಿ, ನಿಮ್ಮ ಶ್ರೀಪಾದ ಪದ್ಮದಲ್ಲಿ ಭ್ರಮರನಾಗಿರಿಸು. ಭಕ್ತಜನ ಮನೋವಲ್ಲಭ ಎಂದು ತನು ಮತ್ತು ಮನ ತನುವಿನಲ್ಲಿಯೇ ತನ್ಮಯವಾದ ಅರಿವಿನ ದೇವರನ್ನು ಬೇಡುವ ಮಹಾ ಸೂತ್ರವಿದು.

ದಸರಯ್ಯ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಮಂಚಣ್ಣ :

ಆಸೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ ;
ಸಕೃತು ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯಾ !
ಕರುಣಾಕರ, ಅಭಯಕರ, ವರದ ನೀ ಕರುಣಿಸಯ್ಯಾ ;
ಸಂಸಾರ ಬಂಧನವನು ಮಾಣಿಸಿ ಎನಗೆ ಕೃಪೆ ಮಾಡಿ
ನಿಮ್ಮ ಶ್ರೀಪಾದ ಪದ್ಮದಲ್ಲಿ ಭ್ರಮರನಾಗಿರಿಸು
ಭಕ್ತಜನ ಮನೋವಲ್ಲಭ ಕೂಡಲಸಂಗಮದೇವಾ. ॥ 69 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ಆಸೆಯೆಂಬ ಉರುಳಿನ ಕುಣಿಕೆಯಲ್ಲಿ ಹುಟ್ಟಿದಂದಿನಿಂದ ಮನ ಬಂಧಿಯಾಗಿದೆ. ಸದಾ ಅರಳಿದ ಅರಿವಿನ ಹೂ ಅಲ್ಲಿಯೇ ಇದೆ. ಮನವೆಂಬ ಭ್ರಮರವೂ ಅಲ್ಲಿಯೇ ಇದೆ. ಮನಕ್ಕೆ ಅರಿವೆಂಬ ಕರುಣಾಕರನ ಪರಿಚಯವಿಲ್ಲ. ತನುವಿನ ಕಣಕಣದಲ್ಲಿ ಸಂದಿಲ್ಲದಂತೆ ನಿರ್ಭಯೀ ಅಭಯನು ವಾಸವಾಗಿದ್ದಾನೆ. ವರದ ನೀ ಕರುಣಿಸಯ್ಯಾ ಎಂದು ಬೇಡುವ ಆಸಕ್ತಿ ಮನಕ್ಕೆ ಹುಟ್ಟಿದರೆ ಸಾಕು; ಅದರ ಅಜ್ಞಾನ ಸಂಸಾರದ ಬಂಧನವನು ಕ್ಷಣಾರ್ಧದಲ್ಲಿ ಹರಿದು ಕೃಪೆ ಮಾಡುತ್ತಾನೆ. ಸಂಸಾರದಿಂದಾದ ದುಃಖವನ್ನು ಮಾಣಿಸುತ್ತಾನೆ.

ಅರಿವಿನ ಪಾದ ಪದ್ಮದ ಪರಿಮಳದಲ್ಲಿ ಮನವನ್ನು ಭ್ರಮರವಾಗಿರಿಸಿ ಅದರ ಭ್ರಮೆಯನ್ನು ಕಳೆಯುತ್ತಾನೆ. ಅರಿವಿನ ಶ್ರೀಪಾದ ನೆನೆಯುವ ಭಕ್ತ ಜನರಿಗೆ ಮನೋವಲ್ಲಭನಾಗಿ ದರ್ಶನ ನೀಡುತ್ತಾನೆ. ಆಸೆಯ ಪಾಶದ ಕುಣಿಕೆಯ ಹರಿದು ಭವ ಬಂಧನದಿಂದ ಮನವನ್ನು ಮುಕ್ತನಾಗಿಸುತ್ತಾನೆ. ತೆರಹಿಲ್ಲದಂತೆ ತನುವಿನಲ್ಲಿಯೇ ದರ್ಶನವಿತ್ತು ಅಭವನಾಗಿ ಮೆರೆಯುತ್ತಾನೆ.

ಸತ್ಯಕ್ಕ: ವಸ್ತುವಿನ ಸತ್ಯದರ್ಶನ ಮಾಡಿಸಿದ ತಮಗೆ ಶರಣು ಶರಣಾರ್ಥಿ ಬಸವಣ್ಣ.

ಸತ್ಯಕ್ಕ :

ಮಡಕೆಯ ಮಾಡುವಡೆ ಮಣ್ಣೆ ಮೊದಲು;
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು;
ಶಿವ ಪಥವನರಿವಡೆ ಗುರುಪಥವೆ ಮೊದಲು
ಕೂಡಲಸಂಗಮದೇವರನರಿವಡೆ
ಶರಣರ ಸಂಗವೆ ಮೊದಲು. ॥ 70 ॥

ತಮ್ಮ ಈ ವಚನವನ್ನು ವಿವರಿಸಿ ಹೇಳಿ ತಂದೆ.

ಬಸವಣ್ಣ: ಜಗದ ಜನಕ್ಕೆ ಜಗದೀಶನನ್ನು ಕಾಣಬೇಕೆಂಬ ಬಯಕೆಯಿದೆ. ಅದಕ್ಕಾಗಿಯೇ ಎಲ್ಲೆಲ್ಲೂ ಶಿವನ ಮಂದಿರ; ಜಗದೀಶನ ಆರಾಧನೆ ನಡೆದಿದೆ. ಜಗದೀಶ, ಈಶ್ವರ, ಶಿವ, ನಾಗಭೂಷಣ, ಮಹಾದೇವ, ಸದಾಶಿವ ಹೀಗೆ ನೂರಾರು ಹೆಸರಿನಿಂದ ಆತನನ್ನು ಜನ ಪೂಜಿಸುತ್ತಾರೆ. ಆತನಿಗಾಗಿ ಭವ್ಯವಾದ ಮಂದಿರಗಳನ್ನು ನಿರ್ಮಿಸಿ ಉತ್ಸವಗಳನ್ನು ಮಾಡುತ್ತಾರೆ. ಕುಳಿತರೆ ನಿಂತರೆ ಮಲಗಿದರೆ ಆತನದೇ ಧ್ಯಾನ. ಆತನನ್ನು ಪ್ರತ್ಯಕ್ಷ ಮಾಡಿಕೊಳ್ಳಬೇಕೆಂಬ ತವಕವೂ ಇದೆ.

ಶಿವನೆಂದರೆ ಯಾರು, ಆತನನ್ನು ಪ್ರತ್ಯಕ್ಷ ಮಾಡಿಕೊಳ್ಳುವ ಬಗೆ ಹೇಗೆ? ಆತನಲ್ಲಿಗೆ ಹೋಗುವ ಮಾರ್ಗ ಯಾವುದೆಂದು ತಿಳಿದಿಲ್ಲ. ಸತ್ತಾಗ ಶಿವನ ಪಾದ ಸೇರಿದ ಎಂದು ಹೇಳುವುದು ವಾಡಿಕೆಯಾಗಿದೆ.

ನಾನು ಶಿವಪಥದ ಮಾರ್ಗ ತಿಳಿಯುವ ಸೂತ್ರವನ್ನು ನಾಲ್ಕು ಸಾಲುಗಳಲ್ಲಿ ಹೇಳಿದ್ದೇನೆ. ಸಾವಿರಾರು ವರ್ಷಗಳಿಂದಲೂ ಸಾಧ್ಯವಾಗದ್ದನ್ನು ಸುಲಿದ ಬಾಳೆಯ ಹಣ್ಣಿನಂತೆ ಶರಣರ ಬಾಯಿಗೆ ಹಾಕಲಾಗಿದೆ. ಸಾಧ್ಯವಾದವರು ಸವಿದು ಗಮ್ಯ ಸೇರಬಹುದು.

ಸತ್ಯಕ್ಕ: ಮಡಕೆಯ ಮಾಡುವಡೆ ಮಣ್ಣೆ ಮೊದಲು ಎಂದು ಹೇಳಲು ಕಾರಣವೇನು ಬಸವಣ್ಣ ?

ಬಸವಣ್ಣ : ಮಡಕೆ, ಹರವಿ, ಮುಚ್ಚಳ, ಪ್ರಣತಿ, ಹೂಜಿ ಮಾಡಲು ಮಣ್ಣು ಬೇಕು. ಈಶ್ವರ, ಶಿವ, ಪಾರ್ವತಿ, ಗಣೇಶ, ಕ್ರಿಷ್ಣನ ಮೂರ್ತಿಗಳನ್ನು ಮಾಡಲು ಕೂಡಾ ಮಣ್ಣೇ ಬೇಕು. ಮಣ್ಣು ಹದಗೊಳಿಸಿ ಮಡಕೆ ಮಾಡಿ ಸುಟ್ಟ ಮೇಲೆ ಮಣ್ಣು ಕಾಣುವುದಿಲ್ಲ; ಮಡಕೆ ಕಾಣುತ್ತದೆ. ಮಣ್ಣು ಮಡಕೆಯ ಗರ್ಭಸೇರಿ ಹರವಿ, ಮುಚ್ಚಳ, ಪ್ರಣತಿ, ಹೂಜಿಯ ಹೆಸರು ಪಡೆಯುತ್ತದೆ. ಒಡೆದರೆ ಬೋಕಿಯ ಹೆಸರು ಪಡೆಯುತ್ತದೆ. ಈಶ್ವರ, ಶಿವ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಕ್ರಿಷ್ಣನ ಹೆಸರು ಪಡೆಯುತ್ತದೆ. ಮಣ್ಣು ಒಂದೆ, ಆದರೆ ಕಣ್ಣಿನ ಗರ್ಭದಲ್ಲಿ ಮಣ್ಣು ಉಳಿದು, ಕಣ್ಣಿನಲ್ಲಿ ಆವರಿಸಿದ ಮನ ಈಶ್ವರ, ಶಿವ,ಪಾರ್ವತಿ, ಲಕ್ಷ್ಮಿ, ಸರಸ್ವತಿ, ಕ್ರಿಷ್ಣನೆಂದು ಆರಾಧಿಸುತ್ತದೆ. ಕಲ್ಲು, ಮಣ್ಣನ್ನೇ ದೇವರನ್ನಾಗಿಸಿ, ಕಲ್ಲು ಮಣ್ಣಿನಿಂದಲೇ ಮಠ

ಮಂದಿರ ಕಟ್ಟಿ,ರಥ ಉತ್ಸವಗಳನ್ನು ಮಾಡಿ ,ಆಚರಿಸಿ ಆರಾಧಿಸುತ್ತದೆ.

ಮಣ್ಣು ನೋಡಿದ ಕಣ್ಣು ಅರಿವಿನ ಕಣ್ಣು; ಇದು ಶಿವನ ಕಣ್ಣು. ಮಣ್ಣಿನಲ್ಲಿ ಕಣ್ಣು ಯಾವ ದೇವರನ್ನು ಹುಡುಕುವುದಿಲ್ಲ. ಇದು ಪಾರ್ವತಿ ಪರಮೇಶ್ವರ ಲಕ್ಷ್ಮಿ ಸರಸ್ವತಿ ಗಣೇಶ ಕ್ರಿಷ್ಣನೆಂದರೆ ನಂಬುವುದಿಲ್ಲ; ಆರಾಧಿಸುವುದಿಲ್ಲ, ಪೂಜಿಸುವುದಿಲ್ಲ! ಹಾಗೆಯೇ ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ತೋರಿಸಿ ಇದು ಮಣ್ಣೆಂದರೆ ನಂಬುವುದಿಲ್ಲ. ಪಾರ್ವತಿ ಪರಮೇಶ್ವರ ಕಿಷ್ಣನೆಂದು ಆರಾಧಿಸಲು ಅಣಿಯಾಗುತ್ತದೆ.

ಮಣ್ಣು ಒಂದೇ. ಬೊಂಬೆ ಒಂದೇ. ಕಾಣುವ ಕಣ್ಣು ಕೂಡಾ ಒಂದೇ. ಮಠ ಮಂದಿರಗಳಿಗೆ ಬಳಸಿದ ಕಲ್ಲು ಮಣ್ಣು ಕೂಡಾ ಒಂದೇ. ಕಲ್ಲು ಮಣ್ಣು ನೋಡಿದ ಕಣ್ಣು ಸಹಜ. ಕಲ್ಲು ಮಣ್ಣಿನಿಂದಾದ ಕ್ರಿಷ್ಣನನ್ನು ನೋಡಿದ ಕಣ್ಣು , ಈಶ್ವರನನ್ನು ನೋಡಿ ಉರಿಯುತ್ತದೆ. ಪರಮೇಶ್ವರ, ಪಾರ್ವತಿ, ಲಕ್ಷ್ಮಿ,ಕ್ರಿಷ್ಣ ಹಾಗೂ ಮಡಕೆಗೆ ಬಳಕೆಯಾದ ಮಣ್ಣೆಲ್ಲ ಒಂದೇ. ಆದರೂ ಕಣ್ಣು ಮೂರ್ತಿಗಳಿಗೆ ಬಳಕೆಯಾದ ಮಣ್ಣು ನೋಡಲಿಲ್ಲ. ಮಣ್ಣು ನೋಡಿದ ಅರಿವು ಕಣ್ಣಿನ ಗರ್ಭದಲ್ಲಿಯೇ ಉಳಿದು, ಮರೆವು ಮಾತ್ರ ಕಣ್ಣಿಗೆ ಬಳಕೆಯಾಯಿತು.

ಸತ್ಯಕ್ಕ: ತನು ಕುಲಕ್ಕೆ ಅದ್ಭುತವಾದ ಸೂತ್ರ ಪರಿಚಯಿಸಿದಿರಿ ತಂದೆ. ತೊಡಿಗೆಯ ಮಾಡುವಡೆ ಹೊನ್ನೆ ಮೊದಲು ಎಂದು ಹೇಳಲು ಕಾರಣವೇನು ಬಸವಣ್ಣ?

ಬಸವಣ್ಣ: ಉಂಗುರ, ಕಾಸಿನ ಸರ, ಬೆಂಡೋಲೆ, ತಾಳಿಸರ, ಮೂಗುತಿ ಮುಂತಾದ ಆಭರಣಗಳನ್ನು ಮಾಡಲು ಚಿನ್ನ ಬೇಕೇ ಬೇಕು. ಚಿನ್ನ ಒಂದು ಹಳದಿ ಬಣ್ಣದ ಲೋಹ! ಇದು ಹಲವಾರು ಮಾಟಗಳಿಂದ ಕೂಡಿದ ಆಭರಣದ ಹೆಸರು ಪಡೆದು ಲೋಹ ಮರೆಯಾಗಿದೆ.

ಕಣ್ಣಿನಲ್ಲಿ ಆವರಿಸಿದ ಮನ, ಆಭರಣ ನೋಡಿ ಖರೀದಿಸುತ್ತದೆ ; ಇಲ್ಲ ಕಳುವು ಮಾಡಲು ದೇಹಕ್ಕೆ ಪ್ರೇರಣೆ ನೀಡುತ್ತದೆ. ಆಭರಣದಲ್ಲಿ ಹಳದಿ ಬಣ್ಣವಿಲ್ಲದಿದ್ದರೆ ಖರೀದಿಸುವುದಿಲ್ಲ, ಕಳುವು ಮಾಡುವುದಿಲ್ಲ. ಬಣ್ಣಕ್ಕೆ ಮರುಳಾದ ಕಣ್ಣು, ಕೊಂದಾದರೂ ಆಭರಣ ಪಡೆಯುತ್ತದೆ. ಮಣ್ಣಿನಿಂದಾದ ಬೊಂಬೆಗೂ, ಲೋಹದಿಂದಾದ ಆಭರಣಕ್ಕೂ ಮರುಳಾದ ಮರೆವಿನ ಕಣ್ಣನ್ನು; ಕಣ್ಣು ಎನ್ನಲು ಸಾಧ್ಯವೆ ! ಕಂಡರೂ ಅದು ಕುರುಡುಗಣ್ಣು.

ಅರಿವೇ ಗುರು; ಆ ಗುರುದೇವನೇ ಮಹಾದೇವ. ಆ ಮಹಾದೇವನೇ ಸದಾಶಿವ. ಆ ಸದಾಶಿವನೇ ಸಾಕ್ಷಾತ್ ಪರಬ್ರಹ್ಮ. ಆ ಪರಬ್ರಹ್ಮನು ತಾನೇ ಆಗಿರುವಾಗ ಭ್ರಮೆಯಿಂದ ಶಿವನನ್ನು ಮಣ್ಣಿನಲ್ಲಿ, ಕಲ್ಲಿನಲ್ಲಿ, ಕಟ್ಟಿಗೆಯಲ್ಲಿ, ಪಂಚಲೋಹಗಳಲ್ಲಿ , ಚಿನ್ನದಲ್ಲಿ ಮಾಡಿದ ಬೊಂಬೆಯಲ್ಲಿ ಹುಡುಕಿದರೆ ಸಿಕ್ಕುವನೆ !

ಸತ್ಯಕ್ಕ: ಶಿವ ಪಥವನರಿವಡೆ ಗುರುಪಥವೆ ಮೊದಲು ಕೂಡಲಸಂಗಮ

ದೇವರನರಿವಡೆ ಶರಣರ ಸಂಗವೆ ಮೊದಲು ಎನ್ನಲು ಕಾರಣವೇನು ಬಸವಣ್ಣ?

ಬಸವಣ್ಣ: ದೇಹದಲ್ಲಿ ಶಿವನೂ ಇದ್ದಾನೆ; ಅರಿವೆಂಬ ಗುರುವೂ ಇದ್ದಾನೆ. ಸರಿದಾರಿ ಹಿಡಿದು ಶಿವನನ್ನೂ ಗುರುವನ್ನೂ ಸೇರುವ ಮನವೂ ಇದೆ. ಈ ಮನಕ್ಕೆ ಶಿವದರ್ಶನ ಮಾಡಿಕೊಂಡ ಮಹಾಜ್ಞಾನಿಗಳಾದ ಶರಣರ ಸಂಗ ಮಾಡುವ ಬಯಕೆಯಾಗಬೇಕು. ಆಗ ಶರಣರು ಶಿವಪಥವನ್ನು, ಗುರುಪಥವನ್ನು ತೋರಿ, ಕೂಡಲಸಂಗಮದೇವನ ದರ್ಶನ ಮಾಡಿಸುತ್ತಾರೆ. ಆಗ ಕಾಯ ಅರಿವಿನ ಕಾಯವಾಗುತ್ತದೆ. ಮಣ್ಣಿನ ಮಡಕೆ-ಬೊಂಬೆಗಳೆಲ್ಲ ಮಣ್ಣಾಗಿ ಕಾಣುತ್ತವೆ. ಆಭರಣಗಳೆಲ್ಲ ಲೋಹವಾಗಿ ಕಾಣುತ್ತದೆ. ಮಣ್ಣು ನೋಡಿದ ಕಣ್ಣು ಜಗಳ ಕಾಯಲಿಲ್ಲ; ಲೋಹ ನೋಡಿದ ಕಣ್ಣು ಕಳ್ಳನಾಗಲಿಲ್ಲ ಖರೀದಿ ಮಾಡಲಿಲ್ಲ! ಕಾಯದಲ್ಲಿದ್ದ ಅರಿವು ಕಾಯದ ಮನಕ್ಕೆ ಒಲಿತು, ಶಿವಕಾಯವಾಗುತ್ತದೆ; ಗುರುಕಾಯವಾಗುತ್ತದೆ.

ಗೊಗ್ಗವ್ವೆ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಉರಿಲಿಂಗಪೆದ್ದಿ :

ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!
ತನುವುದ್ದೇಶ, ಮನವುದ್ದೇಶವಾಗಿ,
ಮಾಡುವ ನೇಮ ಸಲ್ಲವು! ಸಲ್ಲವು!
ಗುರುಪಥವ ಮೀರಿ ಮಾಡುವ ನೇಮ ಸಲ್ಲವು! ಸಲ್ಲವು!
ಕೂಡಲಸಂಗಮದೇವಯ್ಯಾ,
ಇವು ನಿಮ್ಮ ನಿಜದೊಳಗೆ ನಿಲ್ಲವು; ನಿಲ್ಲವು. ॥ 71 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ದೇವಸ್ಥಾನ ಪುಣ್ಯ ಕ್ಷೇತ್ರಗಳಿಗೆ ಹೋಗುವ ತನುಗಳು ಮಡಿ ಮೈಲಿಗೆ ಮುಂತಾದ ಆಚಾರದಲ್ಲಿ ನಿರತವಾಗಿವೆ. ಈ ಎಲ್ಲ ತನುಗಳ ಉದ್ದೇಶ ಮನ ಉದ್ದೇಶದಿಂದ ಕೂಡಿದೆ. ಮನದ ಆದೇಶವನ್ನು ತನುಗಳು ಚಾಚೂ ತಪ್ಪದೆ ಪಾಲಿಸುತ್ತವೆ. ಮನ ಮತ್ತು ತನುವಿನಿಂದ ಮಾಡುವ ನೇಮ, ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನಿಗೆ ಸಲ್ಲವು! ಸಲ್ಲವು!

ಉರಿಲಿಂಗಪೆದ್ದಿ: ಎಂತಹ ಆಶ್ಚರ್ಯದ ಮಾತು ಬಸವರಸ! ಪ್ರತಿ ತನುವಿನೊಳಗೆ ಯುದ್ಧ ನಡೆದಿದೆಯಲ್ಲ. ಈ ಸೂಕ್ಷ್ಮಾತಿ ಸೂಕ್ಷ್ಮದ ಅರಿವಿನ ಸುಳುಹು ಸಿಕ್ಕರೂ ಮನ ಅರಿವಿನ ಮಾತು ಕೇಳುತ್ತಿಲ್ಲ; ತನು ಕೂಡಾ ಅರಿವಿನ ಮಾತು ಕೇಳುತ್ತಿಲ್ಲ. ತಮ್ಮ ಈ ಮಾತು ಸಕಲ ಶರಣರ ಗಮನಕ್ಕೂ ಬರುತ್ತಲಿದೆ.

ಬಸವಣ್ಣ: ಹೌದು ಶರಣರೆ, ಅರಿವೆಂಬ ಗುರುದೇವನ ಬೋಧೆಯನ್ನು

ಆಲಿಸಿ, ಪಾಲಿಸದ ತನುವಿನ ನೇಮ, ಅರಿವೆಂಬ ಗುರುದೇವನಿಗೆ ಸಲ್ಲವು ಸಲ್ಲವು. ಈ ನೇಮಗಳು ಅರಿವಿನ ನಿಜದೊಳಗೆ ನಿಲ್ಲವು ನಿಲ್ಲವು.

ಮೂರ್ನಾಲ್ಕು ಗಾವುದ ದೂರವಿರುವ ಶಿಖರ ನೋಡಿ ಮನ ತನುವಿಗೆ ನಮಸ್ಕರಿಸಲು ಹೇಳುತ್ತದೆ. ದೇವಾಲಯಕ್ಕೆ ಮಣಿಯುತ್ತದೆ. ಕೆತ್ತಿದ ಕಲ್ಲಿಗೂ, ಹೊಸ್ತಿಲಿಗೂ, ಗರ್ಭಗುಡಿಯಲ್ಲಿದ್ದ ದೇವರಿಗೂ, ಬಾಗಿಲುಗಳಿಗೂ ಕೈಮುಗಿಯುತ್ತದೆ. ಮನ ತನ್ನ ನಿಯಮವನ್ನು ತನುವಿಗೆ ಹೇರುತ್ತದೆ. ಮನದಿಂದಾಗಿ ಬಾಗುವ ತನುವನ್ನು ನೋಡಿ ನೋಡಿ ಉಳಿದ ತನುಗಳಿಗೂ ಮನ ಬಾಗಲು ಹೇಳುತ್ತದೆ. ಮನದ ಉದ್ದೇಶವೇ ತನುವಿನ ಕ್ರಿಯೆಯಾಗಿದೆ. ತನುವಿನಲ್ಲಿಯೇ ತನ್ಮಯವಾದ ಅರಿವು, ಬಾಗುವ ತನುವಿಗೂ, ಬಾಗಿಸುವ ಮನಕ್ಕೂ ಹೇಳುತ್ತದೆ; ಶಿಖರವೂ ಕಲ್ಲು, ಆಲಯವೂ ಕಲ್ಲು, ಗರ್ಭಗುಡಿಯೂ ಕಲ್ಲು; ಗುಡಿಯಲ್ಲಿದ್ದ ದೇವರೂ ಕಲ್ಲು!

ಎಲೆ ತನುವೇ ನಿನಗೆ ತಿಳಿಯಬೇಡವೆ? ಮನ ಹೇಳಿದ ಮಾತು ನೀನು ಕೇಳುವುದೆ? ತನುವೆಂಬ ನೀನು ನನ್ನ ಕಂದ; ಅರಿವೆಂಬ ನಾನು ನಿನ್ನ ತಂದೆ. ನೀನು ನನ್ನ ಶಿಷ್ಯನಾದರೆ; ನಾನು ನಿನ್ನ ಗುರು! ನಾನು ನಿನಗೆ ಹೇಳುವ ಮಾತೆಲ್ಲ ನಿಜ. ಒಮ್ಮೆ ಕಣ್ತೆರೆದು ನಿನ್ನ ಕಿವಿಯಿಂದ ನನ್ನ ಮಾತನ್ನು ಆಲಿಸು; ಅಮಾಯಕನಾಗಬೇಡ. ನಿಜ ಬೋಧಿಸುವ ನಿನ್ನ ಗುರುವಿಗೆ ನೀನು ಶರಣಾಗು. ಸದಾ ಅರಿವಿನ ಮಾರ್ಗ ತೋರಿಸುವ ಶರಣರಿಗೆ ಶರಣಾಗು. ಗುರು ಪಥವ ಮೀರಿ ಮಾಡುವ ನಿನ್ನ ನೇಮ ಕೂಡಲಸಂಗಮದೇವನಾದ ನನಗೆ ಸಲ್ಲವು! ಸಲ್ಲವು!

ಕ್ಷಣ ಕ್ಷಣಕ್ಕೂ ತನುವನ್ನು ಅಜ್ಞಾನಕ್ಕೆ ಕರೆದುಕೊಂಡು ಹೋಗುವ ಮನವನ್ನು, ತನುವೇ ಆಲಿಸಿ, ಮನದಿಂದ ದೂರಸರಿದು, ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುವಿಗೆ ಶರಣು ಹೋಗಬೇಕು. ಸಕಲ ತನುಗಳು ತನುವಿನಲ್ಲಿಯೇ ತನ್ಮಯವಾದ ಅರಿವಿನ ಮಾತನ್ನು ಪಾಲಿಸಬೇಕು.

ದಸರಯ್ಯ : ತಮ್ಮ ವಚನದ ಬೆಡಗನ್ನು ನಮಗೆ ತಿಳಿಯುವಂತೆ ಹೇಳಿದ ತಮಗೆ ಶರಣು ಶರಣಾರ್ಥಿ.

ಗಾಣದ ಕಣ್ಣಪ್ಪ :

ಗುರುವಚನವಲ್ಲದೆ ಲಿಂಗವೆಂದೆನಿಸದು;
ಗುರುವಚನವಲ್ಲದೆ ನಿತ್ಯವೆಂದೆನಿಸದು;
ಗುರುವಚನವಲ್ಲದೆ ನೇಮವೆಂದೆನಿಸದು.
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ
ಉಭಯ ಭ್ರಷ್ಟರ ಮೆಚ್ಚುವನೆ,
ನಮ್ಮ ಕೂಡಲಸಂಗಮದೇವ ? ॥ 72 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಅರಿವಿಗೆ ಅಂಗ ಬಳಕೆಯಾದರೆ ಅದು ಅರಿವೆಂಬ ಲಿಂಗಯ್ಯನಿಗೆ ಪೀಠವಾಗುತ್ತದೆ. ಅಂಗವೇ ಲಿಂಗವೆಂದು ಅನ್ನಿಸಿಕೊಳ್ಳುತ್ತದೆ. ಅಂಗದಿಂದ ನಿತ್ಯ ನುಡಿಯುವ ನುಡಿ ಗುರುವಚನವಾಗುತ್ತದೆ. ಅಂಗದ ನೇಮವೆಲ್ಲಾ ಅರಿವಿನ ನೇಮವಾಗುತ್ತದೆ. ಅಂಗದಲ್ಲಿ ತುಂಬಿಕೊಂಡ ಮರೆವು ಮರೆತುಹೋಗಿ ಅಂಗವೇ ಲಿಂಗಾಂಗವಾಗುತ್ತದೆ.

ಮನಕ್ಕೆ ಅಂಗ ಬಳಕೆಯಾದರೆ ತಲೆಯಿಲ್ಲದ ಅಟ್ಟೆಯಂತಾಗುತ್ತದೆ. ಮನ ಅಂಗಕ್ಕೆ ಕಾವಿ ಹಾಕಿ ಗುರುವಿನ ವೇಷ ಧರಿಸಿರೂ ಕೂಡಾ ಭ್ರಮೆಯ ಪಟ್ಟ ದೇಹಕ್ಕೆ ದಕ್ಕುತ್ತದೆ. ಮನ ಅಂಗದೊಂದಿಗೆ ವ್ಯವಹರಿಸುವ ವ್ಯವಹಾರವೆಲ್ಲಾ ಹಾದರದ ವ್ಯವಹಾರವಾಗುತ್ತದೆ. ಅಂಗ ಮತ್ತು ಮನದ ವ್ಯವಹಾರವು ಭ್ರಷ್ಟ ವ್ಯವಹಾರ. ಈ ವ್ಯವಹಾರವನ್ನು ಅಂಗದ ಒಡೆಯ ಸಂಗಮನಾಥನು ಎಂಬ ಅರಿವಿನ ಗುರು ಮೆಚ್ಚುವುದಿಲ್ಲ.

ಅರಿವಿನ ಗುರುದೇವ ಮೆಚ್ಚದ ವಚನ ಲಿಂಗವೆಂದೆನಿಸದು, ನಿತ್ಯವೆಂದೆನಿಸದು, ನೇಮವೆಂದೆನಿಸದು. ತಲೆಯಿಲ್ಲದ ಮನ ಅಂಗವೆಂಬ ಅಟ್ಟೆಗೆ ಪಟ್ಟ ಕಟ್ಟಿದಂತೆ. ಮನವೆಂಬ ಮರ್ಕಟನ ಕೈಗೆ ಮಾಣಿಕ್ಯ ಕೊಟ್ಟಂತೆ. ಉಭಯ ಭ್ರಷ್ಟರನ್ನು ಅರಿವಿನ ಸಂಗಯ್ಯ ಮೆಚ್ಚುವುದಿಲ್ಲ.

ಕಾಳವ್ವೆ : ಧನ್ಯರಾದೆವು ಬಸವಣ್ಣ; ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸತ್ಸಂಗದಲ್ಲಿ ಸೇರೋಣ ಎಂದು ಸಭೆಗೆ ಮಂಗಲ ಹಾಡಿದರು.

ಸಕಲ ಶರಣರೂ ಕೈಮುಗಿದು, ದೇಹದಲ್ಲಿಯೇ ಇರುವ ಅರಿವಿನ ದೇವರ ಪರಿಮಳವನ್ನು ಆಸ್ವಾದಿಸುತ್ತಾ ಪರಮಾನಂದದಿಂದ ತಮ್ಮ ತಮ್ಮ ಮನೆಗೆ ನಡೆದರು.

□

೨೩

ಸತ್ಸಂಗಕ್ಕಾಗಿ ಕಾದು ಕುಳಿತ ಬಸವಣ್ಣನವರಿಗೆ ಶರಣರು ಕೈಮುಗಿದು ಕುಳಿತುಕೊಳ್ಳುತ್ತಾರೆ.

ಬೊಂತಾದೇವಿ :

ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ:
ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
ಸಿಹಿಯಾಗದೆ ಮೂರು ದಿವಸಕ್ಕೆ?
ಅಯ್ಯಾ , ಹಲವು ಕಾಲ ಕೊಂದ ಸೂನೆಗಾರನ ಕೈಯ ಕತ್ತಿಯಾದಡೇನು
ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ !
ಲಲಾಟದಲ್ಲಿ ವಿಭೂತಿ ಬರೆಯಲಿಕೆ ಪಾಪ ಪಲ್ಲಟವಾಗದೆ,
ಕೂಡಲಸಂಗಮದೇವಾ? ॥ 73 ॥

ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಗುರುದೇವನ ಆದೇಶವನ್ನು ಮನ ಪಾಲಿಸದೆ, ತನುವಿನೊಂದಿಗೆ ಸುಖಕ್ಕಾಗಿ ಹಲವಾರು ಪಾಪದ ಕೆಲಸಗಳನ್ನು ಮಾಡುತ್ತದೆ. ತಾನು ಮಾಡಿದ ಪಾಪ, ತನ್ನದೇ ಆದ ಸ್ಮೃತಿಯಲ್ಲಿ ಇದ್ದು, ನೆನಪಿಸಿಕೊಂಡು ಮತ್ತೆ ಮತ್ತೆ ಚಿಂತಿಸುತ್ತದೆ. ದುಃಖಕ್ಕೆ ಒಳಗಾಗಿ ಮನ ತನುವನ್ನು ಆತ್ಮಹತ್ಯೆಗೂ ಕರೆದುಕೊಂಡು ಹೋಗುತ್ತದೆ. ಅರಿವೆಂಬ ಗುರುದೇವ ಕರುಣೆ ತೋರಿದರೆ ಸಾಕು ಬೆಟ್ಟದಷ್ಟಿರುವ ಅಪರಾಧವನ್ನು ಒಂದು ಬೊಟ್ಟಿಲೆ ತೊಡೆದು ಹಾಕುವನು.

ತನು ನಿರಪರಾಧಿ. ಮನ ಅಪರಾಧಿ. ಮನ ತಾನು ಬಯಸಿದ ಸುಖದ ಬಯಕೆಗಳನ್ನೆಲ್ಲಾ ತನುವಿನ ಮುಖಾಂತರ ಪೂರೈಸಿಕೊಂಡು, ತನುವಿಗೆ ಅಪರಾಧದ ಪಟ್ಟ ಕಟ್ಟುತ್ತದೆ. ತನುವನ್ನು ಸೆಗಣಿಯಂತೆ ಮಾಡಿದೆ.

ಮನಕ್ಕೆ ಅರಿವಿನ ರುಚಿ ತಾಗಿದರೆ ಸಾಕು, ತನುವನ್ನು ಅರಿವಿನತ್ತ ಸೆಳೆದೊಯ್ದು, ಅರಿವಿನ ಕಿಚ್ಚಿನಲ್ಲಿ ಬೆಂದು ವಿಭೂತಿ ಕಾಯವಾಗುತ್ತದೆ. ಕಹಿ ಸೋರೆಯಂತಿದ್ದ ಕಾಯ, ಅರಿವಿನ ವಿಭೂತಿ ಬಳಿದುಕೊಂಡು ಸಿಹಿಯಾಗುತ್ತದೆ. ಅರಿವಿನಿಂದ ನೋಡಿದರೆ ಅದು ತನುವಿನ ಅಪರಾಧ ಅಲ್ಲ; ಮನ ಅರಿವಿನಲ್ಲಿ ಲೀನವಾಗಿ ಅರಿವೇ ತಾನಾದರೆ ಅದು ಅರಿವಿನ ತನು! ಸದಾ ಸಿಹಿ ನುಡಿಗಳನ್ನು ನುಡಿಯುವ ಜ್ಞಾನದ ಮಹಾಮನೆ!

ಹಲವಾರು ವರ್ಷಗಳವರೆಗೆ ಕಟುಕನ ಕತ್ತಿ ಪ್ರಾಣಿಗಳನ್ನು ಕೊಂದರೇನು? ಪರುಷ ಮುಟ್ಟಲು ಕಬ್ಬಿಣದ ಕತ್ತಿ ಚಿನ್ನದ ಕತ್ತಿಯಾಗದೆ? ಅಂತೆಯೇ ತನುವಿನಲ್ಲಿದ್ದ ಅರಿವು ಮನಕ್ಕೆ ಹೊಳೆದರೆ ಸಾಕು, ಮನ ಘನಮನವಾಗಿ ಪಲ್ಲಟವಾಗುತ್ತದೆ.

ಮಹಾದೇವನೇ ತಾನಾಗುತ್ತದೆ.

ತನುವಿನಲ್ಲಿಯೇ ಅರಿವು ಇದೆ. ತನುವಿನಲ್ಲಿಯೇ ಮನ ಇದೆ. ತನು ಇವೆರಡರ ಸಂಗಮ. ಮನಕ್ಕೆ ತನು ಮತ್ತು ಅರಿವಿನ ಸಂಗಮದ ಸಂಪತ್ತು ಹೊಳೆದರೆ ಸಾಕು ತಾನೇ ಕೂಡಲಸಂಗಮ. ಪಾಪ ಪುಣ್ಯಗಳೆರಡು ಅರಿವಿನಲ್ಲಿ ಪಲ್ಲಟಗೊಂಡು ತನು ಕೂಡಲಸಂಗಮದೇವನಾಗುತ್ತದೆ.

ಸತ್ಯಕ್ಕ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ನಾಗಲಾಂಬಿಕೆ :

ನೀರಿಂಗೆ ನೈದಿಲೆಯೆ ಶೃಂಗಾರ;
ಸಮುದ್ರಕ್ಕೆ ತೆರೆಯೆ ಶೃಂಗಾರ;
ನಾರಿಗೆ ಗುಣವೇ ಶೃಂಗಾರ;
ಗಗನಕ್ಕೆ ಚಂದ್ರಮನೆ ಶೃಂಗಾರ;
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೇ ಶೃಂಗಾರ. ॥ 74 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ಬಿಡಿಸಿ ಹೇಳಿ ತಂದೆ.

ಬಸವಣ್ಣ: ಸರೋವರದ ನೀರಲ್ಲಿ ಹುಟ್ಟಿದ ಹೂಗಳು ನೀರಿಗೆ ಶೃಂಗಾರ. ನೀರು ಬೀಜವಾಗಿ, ಸಸಿಯಾಗಿ, ನೀರಲ್ಲಿಯೇ ಬೆಳೆದು, ಆ ನೀರೇ ಹೂವಾಗಿ ನೀರ ಮೇಲೆ ಅರಳಿ, ತನ್ನ ಶೃಂಗಾರವನ್ನು ನೀರ ಮೇಲೆಯೇ ಚೆಲ್ಲುತ್ತದೆ. ಅಂತೆಯೇ ಸಮುದ್ರದ ಜಲದಿಂದಲೇ ಹುಟ್ಟಿದ ಅಲೆಗಳು ಸಮುದ್ರಕ್ಕೆ ಶೃಂಗಾರ ತಂದಿವೆ. ಜಲ ಅಲೆಯೆಂಬ ಶಬ್ದ ಪಡೆದು, ಜಲ ಜಲಕ್ಕೆ ಅಪ್ಪಳಿಸಿ, ಭೋರ್ಗರೆದು ದಡಕ್ಕೆ ಬಡಿದು, ಆ ಅಲೆ ಮತ್ತೆ ಜಲದಲ್ಲಿ ಸಂಗಮವಾಗಿ, ಜಲವೆಂದು ಕರೆಸಿಕೊಳ್ಳುತ್ತದೆ.

ತನುವಿನಲ್ಲಿ ಅರಿವು ಎನ್ನುವ ಮಹಾಪುರುಷ ಸಂಗಮವಾಗಿದ್ದಾನೆ. ಅವನು ನಿರ್ಗುಣಿ. ಸಾತ್ವಿಕ, ರಾಜಸ,ತಾಮಸ ಗುಣಗಳು ಈ ಮಹಾಪುರುಷನಲ್ಲಿ ಇಲ್ಲವೇ ಇಲ್ಲ.

ತನುವಿನಲ್ಲಿ ಮನವೆಂಬ ನಾರಿ ಇದ್ದಾಳೆ. ಆಕೆ ಸಾತ್ವಿಕ, ರಾಜಸ,ತಾಮಸ ಗುಣಗಳಿಂದ ಕೂಡಿದ್ದಾಳೆ. ಸಾತ್ವಿಕ ಗುಣದಿಂದ ಒಮ್ಮೆ ತನುವನ್ನು ಮೆರೆಯುತ್ತಾಳೆ. ಮತ್ತೊಮ್ಮೆ ರಾಜಸ ಗುಣದಿಂದ ತನುವನ್ನು ಸಿಂಹಾಸನದ ಮೇಲೆ ಕುಳ್ಳಿರಿಸುತ್ತಾಳೆ. ಮತ್ತೊಮ್ಮೆ ತಾಮಸ ಗುಣದಿಂದ ತನುವನ್ನು ಪ್ರಪಾತಕ್ಕೆ ತಳ್ಳುತ್ತಾಳೆ. ಮನವೆಂಬ ಈ ನಾರಿ ಸದಾ ಶೃಂಗಾರದಿಂದ ಮೆರೆಯಬೇಕಾದರೆ, ಅರಿವೆಂಬ ಮಹಾಪುರುಷನನ್ನು ಗಂಡನನ್ನಾಗಿ ಮಾಡಿಕೊಂಡು ಅರ್ಧನಾರೀಶ್ವರಳಾಗಬೇಕು. ಆಗ ತನು ಅರಿವಿನ

ಶೃಂಗಾರದಿಂದ ಮೆರೆಯುತ್ತದೆ. ಮನವೆಂಬ ನಾರಿಯ ಅವಗುಣಗಳು ಸುಟ್ಟು ಶರಣರ ತನುವಿನ ಹಣೆ ಸೇರಿ ವಿಭೂತಿಯಾಗುತ್ತದೆ. ಮನವೆಂಬ ಸೆಗಣಿ ಒಣಗಿ, ಕುರುಳಾಗಿ ಅರಿವಿನ ಅಗ್ನಿಯಲ್ಲಿ ಬೆಂದು, ಸೆಗಣಿಯೆಂಬ ಮೊದಲ ಹೆಸರು ಕಳೆದುಕೊಂಡು, ವಿಭೂತಿಯ ನಾಮಪಡೆದು ಥಳಥಳನೆ ಹೊಳೆಯುತ್ತದೆ.

ಸತ್ಯಕ್ಕ : ಧನ್ಯರಾದೆವು ಬಸವಣ್ಣ. ತಮಗೆ ಶರಣು ಶರಣಾರ್ಥಿ.

ಸೂಳೆಸಂಕವ್ವೆ :

ಕರಿಯಂಜುವುದು ಅಂಕುಶಕ್ಕಯ್ಯಾ !
ಗಿರಿಯಂಜುವುದು ಕುಲಿಶಕ್ಕಯ್ಯಾ !
ತಮಂಧವಂಜುವುದು ಜ್ಯೋತಿಗಯ್ಯಾ !
ಕಾನನವಂಜುವುದು ಬೇಗೆಗಯ್ಯಾ !
ಪಂಚ ಮಹಾಪಾತಕವಂಜುವುದು
ಕೂಡಲಸಂಗನ ನಾಮಕ್ಕಯ್ಯಾ ! ।। 75 ।।

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಅಂಗದಲ್ಲಿರುವ ಐದು ಜ್ಞಾನೇಂದ್ರಿಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕಾದರೆ, ಮನದ ಸಕಲ ಪಾತಕಗಳು ನಿರ್ನಾಮವಾಗಬೇಕು. ಅರಿವಿನಿಂದ ಹುಟ್ಟಿದ ಮನದ ಪಾತಕಗಳು ಅರಿವಿನ ಅಗ್ನಿಯಲ್ಲೇ ಸುಟ್ಟು ಬೂದಿಯಾಗಬೇಕು.

ಅಂಕುಶ ಚಿಕ್ಕದು. ಆನೆ ದೊಡ್ಡದು. ಮದ ತುಂಬಿದ ಆನೆಯನ್ನು ಪಳಗಿಸುವ ಶಕ್ತಿ ಅಂಕುಶಕ್ಕಿದೆ. ಮನ, ಅಂಗುಲಿಮಾಲನೆಂಬ ಮದ್ದಾನೆಯನ್ನು ತನುವಿನಲ್ಲಿಯೇ ಸೃಷ್ಟಿ ಮಾಡಿತು. ತನುವಿನಲ್ಲಿಯೇ ತನ್ಮಯವಾದ ಅರಿವಿನ ಅಂಕುಶಕ್ಕೆ ಅಂಗುಲಿಮಾಲನೆಂಬ ಆನೆ ಬಲಿಯಾಯಿತು.

ಬಂಡೆಗಲ್ಲು ಭೂಮಿಯದೇ ; ವಜ್ರವೂ ಭೂಮಿಯಿಂದಲೇ ಬಂದಿದೆ. ವಜ್ರ ಚಿಕ್ಕದಾದರೇನು? ಬಂಡೆಗಲ್ಲು ವಜ್ರದ ಹೊಡೆತಕ್ಕೆ ಪುಡಿ-ಪುಡಿಯಾಗುವುದು. ಸೂರ್ಯನ ಬೆಳಕಿನಿಂದ ಕತ್ತಲು ಸೃಷ್ಟಿಯಾಗಿದೆ. ಪುನಃ ಸೂರ್ಯ ಬೆಳಗುವ ಬೆಳಕಿನ ಸಮೀಪಕ್ಕೆ ಕತ್ತಲು ಚಲಿಸಿ ಸೂರ್ಯನ ಬೆಳಕೇ ತಾನಾಗುತ್ತದೆ.

ಮರದಲ್ಲಿ ಮಂದಾಗ್ನಿ ಇದೆ. ಅದಕ್ಕಾಗಿಯೇ ಮರ ಚೈತನ್ಯದಿಂದ ನಳನಳಿಸುತ್ತದೆ. ಮರದಲ್ಲಿದ್ದ ಬೇಗೆಯಿಂದಲೇ ಮರಕ್ಕೆ ಕುತ್ತು .

ಸತ್ಯಕ್ಕ: ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯ ಎಂದಿರುವಿರಲ್ಲ ಬಸವರಸ. ದಯವಿಟ್ಟು ತಿಳಿಸಿ ಹೇಳಿ.

ಬಸವಣ್ಣ: ಅಂಗದಲ್ಲಿ ಐದು ಜ್ಞಾನೇಂದ್ರಿಯಗಳು ಇವೆ.

ಕಣ್ಣು,ಕಿವಿ,ಮೂಗು,ನಾಲಿಗೆ, ಚರ್ಮ ಇವುಗಳಲ್ಲಿ ಅಜ್ಞಾನವೆಂಬ ಮನ ಬೆರೆತು, ಪಂಚ ಮಹಾಪಾತಕಗಳನ್ನು ಸೃಷ್ಟಿಮಾಡಿದೆ. ಅಂಗದಲ್ಲಿಯೇ ಸಂಗಮವಾದ ಜ್ಞಾನ, ಅಂಗದ ಬಳಕೆಗೆ ಬಾರದಂತೆ ಆಗಿದೆ. ಮನ ದೇಹವನ್ನು ಬಳಕೆ ಮಾಡಿಕೊಂಡು ಪಂಚ ಮಹಾಪಾತಕಗಳನ್ನು ಎಸಗುತ್ತದೆ.

ಸತ್ಯಕ್ಕ: ಪಂಚಮಹಾಪಾತಕಗಳು ಎಂದರೆ ಯಾವುವು ಬಸವರಸ?

ಬಸವಣ್ಣ: ಗುರುದ್ರೋಹ, ಲಿಂಗದ್ರೋಹ,ಜಂಗಮದ್ರೋಹ, ಆಚಾರದ್ರೋಹ, ಪ್ರಸಾದದ್ರೋಹ-ಇವು ಪಂಚ ಮಹಾಪಾತಕಗಳು. ಅಂಗದಲ್ಲಿ ಸಂಗಮವಾದ ಅರಿವೇ ಗುರು. ಅಂಗವನ್ನು ಆವರಿಸಿದ ಮನವೇ ಶಿಷ್ಯ. ಅರಿವು ಎನ್ನುವ ಗುರು ಹೇಳಿದಂತೆ ಕೇಳದ ಮನವೆಂಬ ಶಿಷ್ಯನೇ ಗುರುದ್ರೋಹಿ.

ಅಂಗದಲ್ಲಿರುವ ಅರಿವೇ ಲಿಂಗ. ಅಂಗವನ್ನು ಆವರಿಸಿದ ಮನವೇ ಶರಣ. ಮನ ಅರಿವಿನ ಲಿಂಗಯ್ಯನನ್ನು ಪೂಜಿಸಿ, ತನಿಗೆ ಶರಣು ಹೋಗಿ ಲಿಂಗದಲ್ಲಿ ಒಂದಾಗುವುದೇ ಲಿಂಗಾಂಗ. ಇಂತಹ ಲಿಂಗ ಪೂಜಿಸಲು ಒಲ್ಲದ ಅಜ್ಞಾನವೆಂಬ ಮನವೇ ಲಿಂಗದ್ರೋಹಿ.

ಅಂಗದಲ್ಲಿ ಸಂಗಮವಾದ ಅರಿವು ಎಂಬ ಗುರುದೇವ, ಮನಕ್ಕೆ ವೇದ್ಯವಾಗಿ, ಛಲದಿಂದ ಅರಿವು ಪಾಲಿಸಲು ಬಾರದವನೇ ಜಂಗಮದ್ರೋಹಿ.

ಮೂರ್ತಿ ನೋಡಿ ದೇವರೆಂದು ಪೂಜಿಸುವುದು ಗೋಚರದ ಆಚಾರ. ಆ ಮೂರ್ತಿಯನ್ನೇ ಅರಿವಿನಿಂದ ಕಲ್ಲೆಂದು ತಿಳಿದು ಪೂಜಿಸದಿದ್ದರೆ ಅದು ಅಗೋಚರದ ಆಚಾರ. ಗೋಚರದ ಆಚಾರವೆ ಆಚಾರದ್ರೋಹ.

ನೋಡಿದ ವಸ್ತು ಅರಿವಿನಿಂದ ಅನಾವರಣಗೊಂಡು, ಕಣ್ಣಿಗೆ ಪ್ರಸಾದವಾಗಬೇಕು. ಹಾಗಾಗದೆ ಅಂಗಕ್ಕೆ ಸಂಕಟವನ್ನೊಡ್ಡಿದರೆ ಅದು ಪ್ರಸಾದದ್ರೋಹ.

ಸತ್ಯಕ್ಕ: ಪ್ರಸಾದದ ಬಗ್ಗೆ ಮತ್ತಷ್ಟು ತಿಳಿಹೇಳಿ ಬಸವರಸ.

ಬಸವಣ್ಣ: ಕೇಳಿದ ಪ್ರತಿ ಶಬ್ದ ಅರಿವಿನಿಂದ ಅನಾವರಣಗೊಂಡು, ಕಿವಿಗೆ ಪ್ರಸಾದವಾಗಬೇಕು. ಅಂಗಕ್ಕೆ ಸುಖ-ದುಃಖಗಳನ್ನು ಉಂಟು ಮಾಡಿದರೆ ಅದು ಪ್ರಸಾದದ್ರೋಹ. ಮೂಗಿಗೆ ತಾಗಿದ ಗಂಧ ಮೂಗಿನಲ್ಲಿಯೇ ಪ್ರಸಾದವಾಗಬೇಕು. ತನುವಿಗೆ ಸುಗಂಧ-ದುರ್ಗಂಧವೆಂದು ಸುಖ-ದುಃಖವನ್ನುಂಟು ಮಾಡಿದರೆ ಅದು ಪ್ರಸಾದದ್ರೋಹ. ರುಚಿಸಿದ ಪದಾರ್ಥ ನಾಲಿಗೆಯಲ್ಲಿ ಪ್ರಸಾದವಾಗಬೇಕು. ತನುವಿಗೆ ಸುಖ-ದುಃಖಗಳನ್ನುಂಟು ಮಾಡಿದರೆ ಅದು ಪ್ರಸಾದದ್ರೋಹ. ಚರ್ಮಕ್ಕೆ ತಾಗಿದ ಚರ್ಮ, ಚರ್ಮದಲ್ಲಿಯೇ ಪ್ರಸಾದವಾಗಬೇಕು. ತನುವಿಗೆ ಸುಖ-ದುಃಖವನ್ನುಂಟು ಮಾಡಿದರೆ ಅದು ಪ್ರಸಾದದ್ರೋಹ.

ದಸರಯ್ಯ : ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ರಾಯಸದ ಮಂಚಣ್ಣ :

ಜಪ ತಪ ನಿತ್ಯನೇಮವೆನಗೆ ಉಪದೇಶ;
ನಿಮ್ಮ ನಾಮವೆನಗೆ ತಂತ್ರ ;
ಶಿವನಾಮವೆನಗೆ ಮಂತ್ರ ;
ಕೂಡಲಸಂಗಮದೇವಯ್ಯಾ ,
ನಿಮ್ಮ ನಾಮ, ಕಾಮಧೇನುವೆನಗೆ. ॥ 76 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಅರಿವಿನ ಜಪ, ಅರಿವಿನ ತಪ, ಅರಿವಿನ ನಿತ್ಯನೇಮವು ಪ್ರತಿ ತನುವಿಗೂ ಉಪದೇಶವಾಗಬೇಕು. ಅರಿವೆಂಬ ಶಿವನಾಮವೇ ಮನಕ್ಕೆ ಮಂತ್ರವಾಗಬೇಕು. ತನುವಿನಲ್ಲಿ ಅರಿವು ಮತ್ತು ಮನ ಬಂಧಿ ಮಾಡಿದ ಅರಿವಿನ ಸಂಗಯ್ಯನೆ ನಿಮ್ಮ ನಾಮವೆ ಎನಗೆ ಕಾಮಧೇನು ಎಂದು ಟಿಸಿಲೊಡೆದ ಮನದಿಂದಲೇ ಬೇಡಬೇಕು.

ಆಭರಣ ನೋಡಿ, ತನುವಿಗೆ ಕಳುವು ಮಾಡುವ ಸುಳುಹು ನೀಡಿ, ತಾನು ವಾಸ ಮಾಡಿದ ತನುವನ್ನೇ ಕಳ್ಳನನ್ನಾಗಿಸುವ ಮನವನ್ನು ತನು ನೋಡಿ, ನೋಡು ಮನವೆ ಅದು ಹಳದಿ ಬಣ್ಣದಿಂದ ಭರಿತವಾದ ಲೋಹ ಎಂದು ಅರಿವಿನ ಸಂಗಯ್ಯ ನನಗೆ ಪರಿಚಯಿಸಿದ್ದಾನೆ. ಲೋಹ ಹಳದಿಯಾದರೇನು? ಕಪ್ಪಾದರೇನು? ಬಿಳಿಯಾದರೇನು? ಲೋಹ–ಲೋಹವಲ್ಲದೇ ಮತ್ತೇನು? ಎಂದು ಪರಿಚಯಿಸುವ ಅರಿವಿನ ಸಂಗಯ್ಯನ ನಾಮ ಕಾಮಧೇನುವಲ್ಲದೇ ಮತ್ತೇನು!

ರೂಪ ನೋಡಿ ಉದ್ರೇಕದಿಂದ ಜೊಲ್ಲು ಸುರಿಸುವ ಮನಕ್ಕೆ; ನೋಡು ಮನವೆ ರಕ್ತ, ಮೂಳೆ, ಮಾಂಸ, ಮಜ್ಜ, ಮೇದಸ್ಸು ಬೇರಾಗದಂತೆ ಬಂಧಿಸಿದ ನಿನ್ನಂತೆ ಇರುವ ಚರ್ಮವಲ್ಲದೆ ಬೇರಲ್ಲ; ಸರಿಯಾಗಿ ನೋಡು ಎಂದು ಪರಿಚಯಿಸುವ ಅರಿವಿನ ಸಂಗಯ್ಯನ ನಾಮ ಕಾಮಧೇನುವಲ್ಲದೆ ಮತ್ತೇನು!

ಕು ಶಬ್ದವು–ಸು ಶಬ್ದವು ಶಬ್ದದಲ್ಲಿಯೇ ಅಡಗಿದೆ. ಪ್ರತಿ ಶಬ್ದದಲ್ಲಿಯೂ ಅರಿವಿದೆ ಎಂದು ಪರಿಚಯಿಸುವ ಅರಿವು ಕಾಮಧೇನುವಲ್ಲವೆ!

ಸೇವಿಸುವ ಪದಾರ್ಥ ಮೂಗಿಗೆ ಸುಗಂಧ. ವಿಸರ್ಜಿಸುವ ಮಲ ಮೂಗಿಗೆ ದುರ್ಗಂಧ. ಆದರೆ ಅದೇ ಮಲ, ಪ್ರಾಣಿಗೆ ಪರಿಮಳದಂತೆ ಪರಿಚಯಿಸುವ ಅರಿವಿನ ಸಂಗಯ್ಯನ ನಾಮ ಕಾಮಧೇನುವಲ್ಲವೆ!

ಕಬ್ಬಿಗೆ ಹರಿದದ್ದು ಜಲ. ಹುಣಸೆ, ನಿಂಬೆ, ಮೆಣಸು, ಈರುಳ್ಳಿ, ಬೆಳ್ಳುಳ್ಳಿಗೆ ಹರಿದದ್ದು ಜಲ. ತನುವಿನ ಗರ್ಭಕ್ಕೂ ಹರಿದದ್ದು ಜಲಬಿಂದುವಲ್ಲವೆ! ರುಚಿ ಅ–ರುಚಿಗೆ ಸಂಕಟಪಡುವ ತನುವಿನ ಅಜ್ಞಾನಕ್ಕೆ ಮನವರಿಕೆ ಮಾಡಿಸಿದ ಅರಿವಿನ

ಸಂಗಯ್ಯನ ನಾಮ ಕಾಮಧೇನುವಲ್ಲವೆ! ಅಂತಹ ಅರಿವಿನ ಸಂಗಯ್ಯನ ಜಪ-ತಪವೇ ನಿತ್ಯ-ನೇಮವೆನಗೆ, ಆತನ ಉಪದೇಶವೇ ತಂತ್ರ-ಮಂತ್ರವೆನಗೆ, ಆತನೆಂಬ ಅರಿವೇ ಶಿವ. ನಾನು ಎಂಬ ಮನವೇ ಶಿವೆ. ಆತನ ಮಂತ್ರವೇ ಶಿವನಾಮವೆನಗೆ. ಅಂಗದಲ್ಲಿಯೇ ಸಂಗಮವಾಗಿ ಎಂದೆಂದೂ ಅಗಲದ ಅರಿವಿನ ಸಂಗಯ್ಯನೇ ನಿಮ್ಮ ನಾಮವು ಎನಗೆ ಕಾಮಧೇನುವಲ್ಲವೇ!

ಕಾಳವ್ವೆ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಚಂದಿಮರಸ :

ಅಕಟಕಟಾ ಬೆಡಗು ಬಿನ್ನಾಣವೆಂಬುದೇನೊ!
ಓಂ ನಮಃಶಿವಾಯ ಎಂಬುದೆ ಮಂತ್ರ ;
ಓಂ ನಮಃ ಶಿವಾಯ ಎಂಬುದೆ ತಂತ್ರ ;
ನಮ್ಮ ಕೂಡಲಸಂಗಮದೇವರ ನೆನೆವುದೆ ತಂತ್ರ . ॥ 77 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಓಂ ನಮಃ ಶಿವಾಯ ಎಂಬ ಆರಕ್ಷರಗಳುಳ್ಳ ಮಂತ್ರವನ್ನು ಎಲ್ಲರೂ ಪಠಿಸುತ್ತಾರೆ. ಭೋಧಿಸುತ್ತಾರೆ. ಇದು ಷಡಕ್ಷರಿ ಮಂತ್ರ ; ಸರ್ವರಿಗೂ ಬೋಧೆ ಮಾಡುವಂತಹ ಮಂತ್ರ ಇದಲ್ಲವೆಂದು ಕೆಲವರು ಮಾತನಾಡುತ್ತಾರೆ.

ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು, ಇವು ಹೊರಗೆ ಚೆಲ್ಲದಂತೆ ಸುಂದರವಾದ ಚರ್ಮದ ಕವಚವನ್ನು, ತನಗೆ ತಾನೆ ಹೊಲಿದುಕೊಂಡು ಸರ್ವಾಂಗವಾಗಿದೆ. ಕರಸ್ಥಲವೆಂದು ಹೆಸರು ಪಡೆದ ಈ ಅಂಗದಲ್ಲಿ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಅರಿಷಡ್ವರ್ಗಗಳು ಮನದಿಂದಾಗಿ ಹುಟ್ಟಿ ಕೊಂಡಿವೆ.

ಇಡೀ ಬ್ರಹ್ಮಾಂಡದಲ್ಲಿರುವ ಅಂಗಗಳೆಲ್ಲಾ ; ಚರ್ಮ ರಕ್ತ ಮೂಳೆ ಮಾಂಸ ಮಜ್ಜೆ ಮೇದಸ್ಸು ಎಂಬ ಪದಾರ್ಥಗಳನ್ನು ಹೊಂದಿದೆ. ಅಂಗದಲ್ಲಿಯೇ ಸಂಗಮವಾದ ಅರಿವು ಎನ್ನುವ ಲಿಂಗಯ್ಯನ ಮೂಲಕ, ಅಂಗಕ್ಕೆ ಈ ವಿಷಯ ವೇದ್ಯವಾಗಿದೆ. ಆದರೂ ಕೂಡಾ ಅಂಗವನ್ನು ಆವರಿಸಿದ ಮನದಿಂದಾಗಿ, ಅಂಗ ಹೆಣ್ಣು-ಗಂಡು ಎನ್ನುವ ಬೆಡಗು ಬಿನ್ನಾಣದಿಂದ ಮೆರೆಯುತ್ತದೆ.

ಓಂಕಾರ ಎನ್ನುವ ಚರ್ಮದಲ್ಲಿ ಮನ ಸ್ಪರ್ಶ ರೂಪದ ಉದ್ರೇಕವನ್ನು ಸೃಷ್ಟಿಮಾಡಿದೆ. ಚರ್ಮ ಹೆಣ್ಣೂ ಅಲ್ಲ; ಗಂಡೂ ಅಲ್ಲ ಎನ್ನುವ ಅರಿವನ್ನು ಮನ ಮರೆವು ಮಾಡಿ, ತನ್ನ ರಕ್ಕಸ ಶಕ್ತಿಯನ್ನು ತುಂಬಿದೆ. ಮನವೆಂಬ ಆ ಶಕ್ತಿಯನ್ನು ಸಮಾಧಾನಗೊಳಿಸುವ ಓಂಕಾರ ಮಂತ್ರವನ್ನು ಪಠಿಸಿ, ಅರಿವಿನ ಲಿಂಗಯ್ಯನೊಂದಿಗೆ ಒಂದು ಮಾಡುವುದೇ ಈ ಮಂತ್ರದ ತಂತ್ರ .

ಚೆನ್ನಬಸವಣ್ಣ : ತ್ವಙ್ಮಯವಾಗಿಹುದು "ಓಂ"ಕಾರ, ರುಧಿರಮಯವಾಗಿಹುದು

“ನ”ಕಾರ, ಅಸ್ತಿಮಯವಾಗಿಹುದು “ಮ”ಕಾರ, ಮಾಂಸಮಯವಾಗಿಹುದು “ಶಿ”ಕಾರ, ಮಜ್ಜಾಮಯವಾಗಿಹುದು “ವಾ”ಕಾರ, ಮೇಧೋಮಯವಾಗಿಹುದು “ಯ”ಕಾರ ಎಂದು ಕೂಡಾ ಹೇಳಬಹುದಲ್ಲವೆ?

ಬಸವಣ್ಣ: ಧನ್ಯನಾದೆ ಚೆನ್ನಬಸವಣ್ಣ. ವಯಸ್ಸು ಕಿರಿಯದಾದರೇನು, ಅರಿವು ಹಿರಿಯದು! ಅದು ವಿರಾಟ ಸ್ವರೂಪ! ಓಂ ನಮಃ ಶಿವಾಯ ಎಂಬ ಈ ಆರಕ್ಷರಗಳ ಒಕ್ಕೂಟವೇ ಶಿವ! ಈ ಶಿವನೊಂದಿಗೆ ಮನವೆಂಬ ಶಕ್ತಿ ಸಂಗಮವಾದರೆ ಸಾಕು ಇಡೀ ಅಂಗ ಓಂ ನಮಃ ಶಿವಾಯ ಎಂಬ ಮಹಾ ಮಂತ್ರವಾಗುತ್ತದೆ. ಈ ತಂತ್ರಗಾರಿಕೆ ಸರ್ವರಿಗೂ ಗೊತ್ತಾಗಲಿ ಎಂದು ಪುರಾತನರು ಓಂ ನಮಃ ಶಿವಾಯ ಎಂಬ ಮಹಾಮಂತ್ರವನ್ನು ತಂತ್ರದ ರೂಪದಲ್ಲಿ ಹೆಣೆದಿದ್ದಾರೆ.

ಈ ಮಹಾಮಂತ್ರವನ್ನು ಪಠಿಸುವಾಗ, ಶಿವ-ಶಕ್ತಿ ಸಂಗಮವಾದ ಕಾಯವೇ ಕೈಲಾಸ ಎನ್ನುವುದು ಕಾಯಕ್ಕೆ ಗೊತ್ತಾಗಬೇಕು. ಕಾಯ ಹೆಣ್ಣು ಅಲ್ಲ; ಗಂಡೂ ಅಲ್ಲ. ಜಾತಿ-ಮತ ಪಂಥಗಳು ಕಾಯದಲ್ಲಿ ಮೊದಲೇ ಇಲ್ಲ. ಕಾಯದಲ್ಲಿ ಧರ್ಮ ಹುಡುಕಿದರೆ ಸಿಕ್ಕುವುದೇ ಇಲ್ಲ. ರಾಜ ಮಂತ್ರಿ ಸೈನಿಕ ಕಾಲಾಳು ಎಂದು ಕಾಯವನ್ನು ಕರೆಯುವಂತಿಲ್ಲ. ಶ್ರೀಮಂತ ಬಡವ ಭಿಕ್ಷುಕ ಎಂದು ಕಾಯವನ್ನು ವಿಂಗಡಿಸುವಂತಿಲ್ಲ. “ಓಂ ನಮಃ ಶಿವಾಯ” ಎಂಬ ಮಂತ್ರದ ತಂತ್ರಗಾರಿಕೆಯಿಂದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಸುಟ್ಟು ಬೂದಿಯಾಗುತ್ತವೆ.

ಸತ್ಯಕ್ಕ: “ಓಂ ನಮಃ ಶಿವಾಯ” ಎಂಬ ಮಂತ್ರದಲ್ಲಿ ಅದೆಂತಹ ಬೆಡಗು ಬಚ್ಚಿಟ್ಟುಕೊಂಡಿದೆಯಲ್ಲ ಬಸವರಸ! ಈ ಮಂತ್ರದ ಗುಟ್ಟು ರಟ್ಟು ಮಾಡಿ ನಮ್ಮೆಲ್ಲರನ್ನು ಮಂತ್ರಮಯವನ್ನಾಗಿ ಮಾಡಿದಿರಿ. ತಮಗೆ ಶರಣು.

ಆದಯ್ಯ: ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಅವಸರದ ರೇಕಣ್ಣ :

ವಶ್ಯವ ಬಲ್ಲೆವೆಂದೆಂಬಿರಯ್ಯಾ !
ಬುದ್ಧಿಯನರಿಯದ ಮನುಜರು ಕೇಳಿರಯ್ಯಾ;
ವಶ್ಯವಾವುದೆಂದರಿಯದೆ,
ಮರುಳುಗೊಂಬಿರೆಲೆ ಗಾವಿಲ ಮನುಜರಿರಾ!
ಓಂ ನಮಃ ಶಿವಾಯ ಎಂಬ ಮಂತ್ರ, ಸರ್ವಜನವಶ್ಯ ,
ಕೂಡಲಸಂಗಮದೇವಾ ॥ 78 ॥

ಬಸವರಸ, ತಮ್ಮ ಈ ವಚನವನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ವಶೀಕರಣ ವಿದ್ಯೆ ಬಲ್ಲೆವೆಂದು ಸ್ತ್ರೀ ಪುರುಷನನ್ನು, ಪುರುಷ ಸ್ತ್ರೀಯನ್ನು ವಶ ಮಾಡಿಕೊಳ್ಳುವ ವಿಧಾನವನ್ನು ಹಣ ಪಡೆದು ಹೇಳುವವರು ಇದ್ದಾರೆ. ಭ್ರಮೆ ಆವರಿಸಿದವರು ಸುಲಭವಾಗಿ ಮೋಸಕ್ಕೆ ಒಳಗಾಗುತ್ತಾರೆ.

ವ್ಯವಹಾರ ಮಾಡುವ ಮನ, ವ್ಯವಹಾರಕ್ಕೆ ಒಳಗಾದ ಮನ ಇವೆರಡೂ ತನಗೆ ತಾನೆ ಮೋಸಕ್ಕೆ ಒಳಗಾಗಿವೆ. ಮೋಸ ಮಾಡಿ ಹಣ ಪಡೆದೆನೆಂಬ ಭ್ರಮೆ ಒಂದು ಮನಕ್ಕೆ, ವಶೀಕರಣ ವಿದ್ಯೆಯ ಸುಖ ಅನುಭವಿಸಿದೆನೆಂಬ ಸುಖ ಮತ್ತೊಂದು ಮನಕ್ಕೆ. ಇವೆರಡು ಮೂರ್ಖ ಮನಗಳು ಎರಡು ತನುಗಳನ್ನು ಯಾಮಾರಿಸುತ್ತವೆ.

ಅವಸರದ ರೇಕಣ್ಣ : ಅದು ಹೇಗೆ ಬಸವರಸ?

ಬಸವಣ್ಣ : ಒಂದು ಕಾಯದಲ್ಲಿದ್ದ ಅರಿವಿನ ಶಕ್ತಿ, ಮತ್ತೊಂದು ಕಾಯದಲ್ಲಿಯೂ ಇದೆ. ಎರಡು ಕಾಯಗಳು ಅರಿಯದೆ ಮೋಸಕ್ಕೆ ಒಳಗಾಗಿವೆ. ಮನ ತನುವನ್ನು ಆವರಿಸಿದ ಭ್ರಮೆ; ಅರಿವು ತನುವಿನ ಶಕ್ತಿ ; ಅದು ತನುವಿನ ಕಣ ಕಣದಲ್ಲಿ ಭರಿತವಾದ ಮಂತ್ರ ! ಅದು ಓಂ ನಮಃ ಶಿವಾಯ!

ಹಿಂದೆ ಚೆನ್ನಬಸವಣ್ಣನವರು ಹೇಳಿದ ತ್ವಙ್ಮಯವಾಗಿಹುದು ಓಂಕಾರ, ರುದಿರಮಯವಾಗಿಹುದು ನಕಾರ ಎನ್ನುವ ವಚನವನ್ನು ನೆನಪು ಮಾಡಿಕೊಳ್ಳಿ.

ಬೊಂತಾದೇವಿ : ಮತ್ತಷ್ಟು ವಿವರಿಸಿ ಹೇಳಿ ಬಸವಣ್ಣ.

ಬಸವಣ್ಣ : ಕಾಯದ ಕಣಕಣದಲ್ಲಿ ಷಡಕ್ಷರಿ ಮಂತ್ರ ಬಚ್ಚಿಟ್ಟುಕೊಂಡಿದೆ. ಅದು ಮಂತ್ರವೆಂಬುದು ಮನಕ್ಕೆ ತಿಳಿಯದು. ಈ ಮಂತ್ರವನ್ನು ತನ್ನ ವಶದಲ್ಲಿಟ್ಟುಕೊಂಡು ಮನ ಹೋದತ್ತ ಮಂತ್ರ ದೇಹದೊಂದಿಗೆ ಹೋಗಿ, ಅರಿವೆಂಬ ಗುರುವಾಗಿ ಬೋಧಿಸುವುದನ್ನು ಬಿಡದು. ದುರ್ಘಟಕ್ಕೆ ಮರುಳುಗೊಂಡ ಮನ 'ಓಂ ನಮಃ ಶಿವಾಯ' ಎಂಬ ಮಹಾಮಂತ್ರದ ವಶದಲ್ಲಿದೆ. ಕಾಯ ಮನದ ವಶದಲ್ಲಿದೆ. ಭೌತಿಕ ವಸ್ತುಗಳಿಗೆ ಮರುಳಾದ ಮನ ಮತ್ತು ತನು ಅಂತರಾಳದ ಅರಿವನ್ನು ತಿಳಿದರೆ ತಾನೇ ಆ ಮಹಾ ಮಂತ್ರವಾಗುತ್ತದೆ.

ಅವಸರದ ರೇಕಣ್ಣ : ಧನ್ಯರಾದೆವು ತಂದೆ. ತಮಗೆ ಶರಣು ಶರಣಾರ್ಥಿ.

ದುಗ್ಗಳೆ :

ಭವ ಬಂಧನ ದುರಿತಂಗಳ ಗೆಲುವಡೆ
ಓಂ ನಮಃ ಶಿವಾಯ ಶರಣೆಂದಡೆ ಸಾಲದೆ?
ಹರ ಹರ ಶಂಕರ ಶಿವ ಶಿವ ಶಂಕರ
ಜಯ ಜಯ ಶಂಕರ ಶರಣೆನುತ್ತಿದ್ದೇನೆ.
ಎನ್ನ ಪಾತಕ ಪರಿಹರ,
ಕೂಡಲಸಂಗಮದೇವಾ, ಶರಣೆನುತ್ತಿದ್ದೇನೆ. ॥ 79 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ಬಿಚ್ಚಿ ಹೇಳಿ ತಂದೆ.

ಬಸವಣ್ಣ: ಕಾಯಕ್ಕೆ ಹುಟ್ಟು ಸಾವು ಸಹಜ. ಮನದಿಂದಾಗಿ ಕಾಯ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಅನುಭವಿಸುತ್ತ, ಸಂಕಟದಿಂದ ನರಳಿ ನರಳಿ ಒಮ್ಮೆ ಸಾಯುತ್ತದೆ. ಕೈಲಾಸವೇ ಆಗಬೇಕಾದ ಕಾಯ ಮನದಿಂದಾಗಿ ಅರಿಷಡ್ವರ್ಗಗಳಿಗೆ ಒಳಗಾಗಿದೆ.

ಮನ ಅರಿವಿನತ್ತ ವಾಲಿ, ಓಂ ನಮಃ ಶಿವಾಯ ಎಂಬ ಮಂತ್ರಕ್ಕೆ ಶರಣಾದರೆ ಸಾಕು, ಮನದ ಪಾತಕವೆಲ್ಲ ಪರಿಹಾರವಾಗುತ್ತದೆ. ಆ ಅರಿವೆಂಬ ಗುರುದೇವ ಹರಹರ ಶಂಕರನೂ ಹೌದು; ಶಿವ ಶಿವ ಶಂಕರನೂ ಹೌದು; ಜಯ ಜಯ ಶಂಕರನೂ ಹೌದು.

ಕಾಯದ ಕಣಕಣದಲ್ಲಿ ಬೆರೆತ ಓಂ ನಮಃ ಶಿವಾಯ, ಅದು ಬಯಲು. ಜಗದಗಲ ಮುಗಿಲಗಲ. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವು. ಈ ಚೆಲುವಿಗೆ ಹುಟ್ಟಿಲ್ಲ, ಸಾವಿಲ್ಲ. ಈ ಸತ್ಯವನ್ನು ತಿಳಿದ ಮನಕ್ಕೂ ಹುಟ್ಟಿಲ್ಲಸಾವಿಲ್ಲ. ಇವೆರಡೂ ತನ್ನಲ್ಲಿಯೇ ಇದ್ದುದನ್ನು ತಿಳಿದ ಕಾಯವೇ ಕೈಲಾಸ.

ಕಾಳವ್ವೆ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು. ಸಕಲ ಶರಣರಿಗೂ ಶರಣು ಶರಣಾರ್ಥಿ ಎಂದು ಸಭೆಗೆ ಮಂಗಲ ಹಾಡಿದರು.

ಬ್ರಹ್ಮರಸಪಾನ ಮಾಡಿದ ಶರಣರು ಭ್ರಮೆಯನ್ನು ಕಳೆದುಕೊಂಡು ಪರಮಾನಂದದ ನಶೆಯಲ್ಲಿ ಸತ್ಸಂಗದ ವಿಚಾರಗಳನ್ನು ಚರ್ಚೆ ಮಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೨೪

ಕತ್ತಲನ್ನು ಸೂರ್ಯನ ಬೆಳಕು ನಿಧಾನವಾಗಿ ನುಂಗುವುದು ಶರಣರ ಗೋಚರಕ್ಕೆ ಬರುತ್ತಲಿದೆ. ಹೀಗೆ ತನುವನ್ನು ಆವರಿಸಿದ ಮನವೆಂಬ ಕತ್ತಲನ್ನು ತನುವಿನಲ್ಲಿಯೇ ತನ್ಮಯವಾದ ಅರಿವಿನ ಸೂರ್ಯ ನುಂಗಿ ಜಗತ್ತಿನಲ್ಲಿರುವ ಸಕಲ ತನುಗಳನ್ನು ಬೆಳಗಬಾರದೇ ಎಂದು ಆಲೋಚನೆ ಮಾಡುತ್ತಾ ಮಹಾಮನೆಯ ವೇದಿಕೆಯ ಮೇಲೆ ಕುಳಿತುಕೊಂಡ ಬಸವಣ್ಣನವರಿಗೆ ಹಣೆಮಣಿದು ಕುಳಿತುಕೊಳ್ಳುತ್ತಾರೆ.

ಕಲಕೇತಯ್ಯ :

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ ,
ಓಂ ನಮಃ ಶಿವಾಯ, ಓಂ ನಮಃ ಶಿವಾಯ
ಎನುತಿರ್ದೆನಯ್ಯಾ
ಎನಗಿದೇ ಮಂತ್ರ , ಎನಗಿದೇ ಜಪ.
ಕೂಡಲಸಂಗಮದೇವಾ, ನೀನೆ ಬಲ್ಲೆ, ಎಲೆ ಲಿಂಗವೆ. ॥ 80 ॥

ತಮ್ಮ ಈ ವಚನದ ಬೆಡಗನ್ನು ಬಿಚ್ಚಿ ಹೇಳಿ ತಂದೆ.

ಬಸವಣ್ಣ : ಮನ, ತನುವಿನಲ್ಲಿಯೇ ತನ್ಮಯವಾದ ಅಂತರಾಳದ ಅರಿವನ್ನು ತಿಳಿಯುವುದು ಬಿಟ್ಟು; ಎಲ್ಲ ವಿಷಯಗಳನ್ನು ತಿಳಿಯಲು ಆಪೇಕ್ಷಿಸುತ್ತದೆ. ಹಲವಾರು ಪುಸ್ತಕಗಳನ್ನು ಓದುತ್ತದೆ. ವಾದಕ್ಕೆ ಇಳಿಯುತ್ತದೆ. ಓದಿದ ಪುಸ್ತಕಗಳೆಲ್ಲ, ತನುವಿನ ಅಂತರಾಳದಿಂದ ಹೊರಬಂದು, ಮುದ್ರಣಗೊಂಡಿದ್ದು ಎನ್ನುವುದನ್ನೇ ಮರೆಯುತ್ತದೆ.

ತನುವಿನ ಕಣಕಣದಲ್ಲಿ ತನ್ಮಯವಾದ ಅರಿವನ್ನು ಅರಿತರೆ, ಓಂ ನಮಃ ಶಿವಾಯ ಎಂಬ ಷಡಕ್ಷರಿ ಮಂತ್ರವೇ ತಾನಾಗುತ್ತದೆ. ಮಾಂಸ ಪಿಂಡ ಮಂತ್ರ ಪಿಂಡವಾಗುತ್ತದೆ. ಆ ಮಂತ್ರದ ಸಹಾಯದಿಂದ ನೋಡಿದ ನೋಟವೆಲ್ಲ ಮಂತ್ರ ! ನುಡಿದ ನುಡಿಗಳೆಲ್ಲ ಜಪ. ಕೂಡಿದ ಕೂಟವೆಲ್ಲಾ ಕೂಡದ ಅಗಲದ ಕೂಟ! ಮತ್ತೊಂದನು ಅರಿಯದ ಮಂತ್ರಮಯವಾದ ಮನವೇ ಈ ಪರಮಸುಖವನ್ನು ಬಲ್ಲದು.

ಕಲಕೇತಯ್ಯ : ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಮೋಳಿಗೆ ಮಹಾದೇವಿ :

ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ ನಿಂದವು ವೇದ;
ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ ನಿಂದವು ಶಾಸ್ತ್ರ;
ಓಂ ನಮಃ ಶಿವಾಯ ಎಂಬ ಮಂತ್ರವ ಮೀರಲಮ್ಮದೆ ನಿಂದವು ತರ್ಕ;
ಭಯಂಕರ ಭ್ರಮೆಗೊಂಡಿತ್ತು ಮಂತ್ರ-ತಂತ್ರ .
ಶಿವನಂತುವನರಿಯದೆ ಚಿಂತಿಸುತ್ತಿದ್ದಿತ್ತು ಲೋಕ!
ಕೂಡಲಸಂಗಮದೇವ ಶ್ವಪಚನ ಮೆರೆದಡೆ
ಜಾತಿ ಭೇದವ ಮಾಡಲಮ್ಮವು. ॥ 81 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಓಂ ನಮಃ ಶಿವಾಯ ಎಂಬ ಮಂತ್ರವನ್ನು ಮೀರಲು ವೇದಕ್ಕೆ ಸಾಧ್ಯವಾಗುವುದಿಲ್ಲ. ಶಾಸ್ತ್ರಕ್ಕೂ ಸಾಧ್ಯವಾಗುವುದಿಲ್ಲ. ತರ್ಕ ವಿತರ್ಕ ಗ್ರಂಥಗಳಿಗೂ ಸಾಧ್ಯವಾಗುವುದಿಲ್ಲ. ಆದರೆ ಮನ, ತನುವನ್ನು ಮಂತ್ರ-ತಂತ್ರಗಳಿಂದಲೇ ಏನೆಲ್ಲವೂ ಆಗಿದೆ ಎಂದು ಭ್ರಮೆಗೆ ಒಳಗೆ ಮಾಡಿದೆ. ತನುವಿನಲ್ಲಿಯೇ ತನ್ಮಯವಾದ ಅರಿವಿನ ಶಿವನ ಇರುವನ್ನು ಅರಿವ ಜಾಡನು ಮನ ಮರೆತು ಹೋಗಿದೆ. ಮಂತ್ರಗಳ ಹಿಂದೆ ಬಿದ್ದಿದೆ. ಓಂ ನಮಃ ಶಿವಾಯ ಎಂಬ ಮಂತ್ರವನ್ನು ಅರಿಯಲು ಮನಕ್ಕೆ ಸಾಧ್ಯವಾಗುತ್ತಿಲ್ಲ.

ನೀಲಮ್ಮ : ಪ್ರಣವದ ಹೆಸರಿಲ್ಲ ಬಸವಂಗೆ, ಪ್ರಣವದ ಕುರುಹಿಲ್ಲ ಬಸವಂಗೆ, ಪ್ರಣವದ ನೆಲೆಯಿಲ್ಲ ಬಸವಂಗೆ, ಪ್ರಣವದ ರೂಪಿಲ್ಲ ಬಸವಂಗೆ, ಪ್ರಣವವನು ಓದಿ ಓದಲಿಲ್ಲ ಬಸವಂಗೆ, ಪ್ರಮಾಣಕ್ಕೆ ಅಪ್ರಮಾಣನಾದ ನಮ್ಮ ಬಸವನ ಸಂಗಯ್ಯನು. ಈ ವಚನ, ತಾವು ಬರೆದ ವಚನಕ್ಕೆ ಉತ್ತರವಾಗಬಹುದೆ ಎನ್ನೊಡೆಯಾ.

ಬಸವಣ್ಣ : ಆಹಾ! ಧನ್ಯನಾದೆ ನೀಲಾ. ನಿನ್ನ ಮಾತು ಇಡೀ ಶರಣ ಲೋಕವನ್ನು ಪುಳಕಿತಗೊಳಿಸಿದೆ. ಹೆಸರಿಲ್ಲದ, ಕುರುಹಿಲ್ಲದ, ನೆಲೆಯಿಲ್ಲದ, ರೂಪಿಲ್ಲದ ಅಪ್ರಮಾಣವಾದ ಅಗಮ್ಯ , ಅಗೋಚರವಾದ ಪ್ರಣವವನ್ನು ಶರಣರ ಗೋಚರಕ್ಕೆ ತಂದು ಎಡೆಮಾಡಿರುವಿ ನೀಲ; ನಿನಗೆ ಶರಣು ಶರಣಾರ್ಥಿ.

ನೀಲಮ್ಮ : ನನಗೆ ಹೊಳೆದದ್ದನ್ನು ಸಭೆಯ ಮುಂದೆ ಇಟ್ಟಿರುವೆ ಒಡೆಯಾ. ಏನಿದ್ದರೂ ನಾನು ನಿಮ್ಮ ಸೇವೆಗಾಗಿಯೇ ಮೀಸಲಾಗಿರುವೆ. ನನಗೆ ಇಂತಹ ದೊಡ್ಡ ಮಾತನ್ನು ಆಡಬಹುದೆ ಒಡೆಯಾ.

ಬಸವಣ್ಣ : ಪ್ರಣವವನ್ನು ನಾಲ್ಕು ವೇದ, ಹದಿನಾರು ಶಾಸ್ತ್ರ, ಹದಿನೆಂಟು ಪುರಾಣ, ಇಪ್ಪತ್ತೆಂಟು ಆಗಮ, ಮೂವತ್ತೆರಡು ಉಪನಿಷತ್ತುಗಳು ಕೂಡಾ, ಪ್ರಣವ ಮತ್ತು ಪಂಚಾಕ್ಷರ ಸ್ವರೂಪವನ್ನು ಅರಿಯದೇ ವಿಲವಿಲನೆ ಒದ್ದಾಡಿದವು. ಏಳು ಕೋಟಿ ಮಂತ್ರಗಳಿಗೆ ತಾನೇ ಮೂಲ ಮಂತ್ರವಾಗಿ, ಸುರರಿಗೆ ಅಣಿಮಾದಿ ಕೊಟ್ಟುದು,

ಶರಣರಿಗೆ ತ್ರಿನಯನ ಕೊಟ್ಟುದು ಈ ಪಂಚಾಕ್ಷರ. ಪ್ರಣವದೊಳಗೆ ಅಡಕವಾದ ಪಂಚಾಕ್ಷರವನ್ನು ಅರಿತರಿತು ಆ ಪ್ರಸಾದವನ್ನೇ ಶರಣ ಕುಲಕ್ಕೆ ಎಡೆಮಾಡಿದ ಈ ಮಹಾ ತಾಯಿಯನ್ನು ಯಾರಾದರೂ ಸಣ್ಣವರು ಎನ್ನಲು ಸಾಧ್ಯವೆ?

ಬೊಂತಾದೇವಿ : ಪ್ರಣವವನ್ನು ಶರಣರಿಗೆ ತಿಳಿಯುವಂತೆ ವಿವರಿಸಿ ಹೇಳುವ ಮಹಾಸೂತ್ರವನ್ನು ದಯಪಾಲಿಸಿದ ನೀಲಮ್ಮ ತಾಯಿಯವರಿಗೆ ಶರಣು ಶರಣಾರ್ಥಿ. ಇಂತಹ ಪ್ರಣವದ ಬಗ್ಗೆ ಮತ್ತಷ್ಟು ವಿವರಿಸಿ ಹೇಳಿ ಬಸವರಸ.

ಬಸವಣ್ಣ : ನಾಲ್ಕು ವೇದಗಳು, ಹದಿನಾರು ಶಾಸ್ತ್ರಗಳು, ಹದಿನೆಂಟು ಪುರಾಣ, ಇಪ್ಪತ್ತೆಂಟು ಆಗಮ, ಮೂವತ್ತೆರಡು ಉಪನಿಷತ್ತುಗಳು, ಏಳು ಕೋಟಿ ಮಂತ್ರಗಳು ದೇಹವೆಂಬ ಮಹಾ ಪ್ರಣವದಿಂದಲೇ ಹುಟ್ಟಿದವು. ದೇಹವನ್ನು ಆವರಿಸಿದ ಮನದಿಂದಾಗಿ ಅವು ದೇಹಕ್ಕೆ ಸವಾಲಾಗಿ ನಿಂತವು. ದೇಹದಿಂದಲೇ ಹುಟ್ಟಿದ ಮಂತ್ರಗಳು, ದೇಹದಿಂದಲೇ ಪೂಜಿಸಿಕೊಂಡವು. ಇದು ದೇಹದ ದುರ್ದೈವದ ಸಂಗತಿ; ಇದು ವಿಚಿತ್ರ ; ಆದರೂ ಸತ್ಯ !

ತಿಳಿಯಲು ಹೋದರೆ ದೇಹವೇ ಒಂದು ಪ್ರಣವ. ಅದು ಓಂಕಾರ. ಅದು ಪಂಚಾಕ್ಷರಿಯೂ ಹೌದು.

ಸತ್ಯಕ್ಕ : ಇದೇ ವಚನದ ನಾಲ್ಕನೇ ಸಾಲಿನಲ್ಲಿ ಭಯಂಕರ ಭ್ರಮೆಗೊಂಡಿತ್ತು ಮಂತ್ರ–ತಂತ್ರ. ಶಿವನಂತುವನು ಅರಿಯದೆ ಚಿಂತಿಸುತ್ತಿದ್ದಿತ್ತು ಲೋಕ ಎಂದಿರುವಿರಿ ಬಸವರಸ. ನಮಗೆ ತಿಳಿಯುವಂತೆ ಹೇಳಿರಿ ತಂದೆ.

ಬಸವಣ್ಣ : ದೇಹವೇ ಒಂದು ಪ್ರಣವ. ಅದು ಓಂಕಾರ. "ನ" ಕಾರವೇ ಆಚಾರ ಲಿಂಗ. "ಮ" ಕಾರವೇ ಗುರುಲಿಂಗ. "ಶಿ" ಕಾರವೇ ಶಿವಲಿಂಗ. "ವ" ಕಾರವೇ ಜಂಗಮಲಿಂಗ. "ಯ" ಕಾರವೇ ಪ್ರಸಾದಲಿಂಗ–ಹೀಗೆ ಆರು ವಿಧದಲ್ಲಿ ದೇಹ ಬ್ರಹ್ಮಕಮಲವಾಗಿ ಅರಳಿ ನಿಂತಿದೆ.

ಮೂಗಿನಲ್ಲಿ ವಾಸನಾಶಕ್ತಿ ಇದೆ. ಹಾಗೆಯೇ ಹೂವಿನ ಶೃಂಗಾರ, ಅದರ ಪರಿಮಳ ಬಯಸಿ ಕಿತ್ತಿಕೊಳ್ಳುವ ಅಜ್ಞಾನವಿದೆ. ಹೆಂಡದ ವಾಸನೆ ಬಯಸಿ ಕುಡಿದು ಓಲಾಡುವ ಅಜ್ಞಾನವೂ ಇದೆ. ಇವೆರಡಕ್ಕೂ ಜಲವೇ ಮೂಲ; ಮಲ್ಲಿಗೆಗೆ ಹರಿದು ಜಲ ಪರಿಮಳವಾಯಿತು. ಜಲ ಈಚಲಕ್ಕೆ ಹರಿದು ಹೆಂಡವಾಯಿತು. ಹೀಗೆ ತಿಳಿದು ಅರಿವಿನ ಆಚಾರದಲ್ಲಿ ತೊಡಗುವ ಮೂಗು ಆಚಾರಲಿಂಗ. ತಿಳಿಯದಿದ್ದರೆ ಭಯಂಕರ ಭ್ರಮೆಗೊಂಡ ಅಜ್ಞಾನದ ಮೂಗು. ಹೀಗೆಯೇ ನಾಲಿಗೆಯೇ ಗುರುಲಿಂಗ: ರುಚಿಸಿ, ಸುಖಿಸುವ, ದುಃಖಿಸುವ ಅಜ್ಞಾನ ನಾಲಿಗೆಯಲ್ಲಿ ಇದೆ. ರುಚಿಸಿದ್ದನ್ನು ನುಡಿದು ಬಾಧೆಗೆ ಈಡುಮಾಡುವ ಅಜ್ಞಾನವೂ ಇದೆ. ನಾಲಿಗೆ ಜಲಭರಿತವಾಗಿದೆ.

ತಿನ್ನುವ ಪದಾರ್ಥ ಕೂಡಾ ಜಲ ಹರಿದು ಗಟ್ಟಿಗೊಂಡಿದೆ. ಜಲ ಜಲದಲ್ಲಿ ಬೆರೆತು ರುಚಿ ಕಳೆದುಕೊಳ್ಳುತ್ತದೆ. ಹೀಗೆ ತಿಳಿಯುವ ಅರಿವೆಂಬ ಗುರುದೇವನು ನಾಲಿಗೆಯಲ್ಲಿ ಪವಡಿಸಿದ್ದಾನೆ. ಹೀಗಾಗಿ ನಾಲಿಗೆ ಗುರುಲಿಂಗ.

ಸೂಳೆಸಂಕವ್ವೆ : ಕೂಡಲಸಂಗಮದೇವಾ ಶ್ವಪಚನ ಮೆರೆದಡೆ ಜಾತಿ ಬೇಧವ ಮಾಡಲಮ್ಮವು ಎಂದು ವಚನದ ಕೊನೆಯ ಸಾಲಿನಲ್ಲಿ ಹೇಳಿರುವಿರಿ. ದಯವಿಟ್ಟು ತಿಳಿಸಿ ಹೇಳಿ ಬಸವರಸ.

ಬಸವಣ್ಣ: ಶ್ವಪಚಯ್ಯನೆಂಬ ಶರಣ ಅಸ್ಪೃಶ್ಯ. ತನ್ನನ್ನು ತಾನು ತಿಳಿದು ಅಕ್ಷರೋತ್ತಮನಾಗಿದ್ದ. ಓಂ ನಮಃ ಶಿವಾಯ ಎಂಬ ಮಂತ್ರವೇ ತಾನಾಗಿದ್ದ. ತಿನ್ನಲು ಸತ್ತ ನಾಯಿಮಾಂಸ ಬೇಯಿಸುತ್ತಿರುವಾಗ ಸಾಮವೇದಿಯೊಬ್ಬ ಆಕಾಶದಲ್ಲಿ ಸಂಚರಿಸುತ್ತಿದ್ದ. ಆತನ ನೆರಳು ಪ್ರಸಾದದ ಮೇಲೆ ಬೀಳದಿರಲಿ ಎಂದು ತನ್ನ ಕೆರವು ತೆಗೆದು ಮಾಂಸದ ಮಡಕೆಯ ಮೇಲೆ ಮುಚ್ಚುತ್ತಾನೆ.

ಸಾಮವೇದಿಗೆ ಕೋಪ ಬಂದು ಶ್ವಪಚಯ್ಯನೊಂದಿಗೆ ವಾದಕ್ಕಿಳಿಯುತ್ತಾನೆ. ಸೋತು ಶ್ವಪಚಯ್ಯನಿಗೆ ಶರಣಾಗಿ ಆತನ ಶಿಷ್ಯನಾಗುತ್ತಾನೆ. ಹಠಯೋಗಿಯಾಗಿ ಅಷ್ಟಸಿದ್ಧಿಗಳಲ್ಲೊಂದಾದ ಆಕಾಶದಲ್ಲಿ ಹಾರುವ ಸಿದ್ಧಿ ಪಡೆದು, ಅಹಂಕಾರದಿಂದ ಮೆರೆಯುತ್ತಿದ್ದ ಸಾಮವೇದಿ, ಸಕಲ ಶಾಸ್ತ್ರಗಳ ಅಭ್ಯಾಸಕ್ಕಿಂತ ತನ್ನನ್ನು ತಾನು ತಿಳಿಯುವ ಬ್ರಹ್ಮ ವಿದ್ಯೆಯೇ ಶ್ರೇಷ್ಠವೆಂದು ಶ್ವಪಚಯ್ಯನಿಂದ ತಿಳಿಯುತ್ತಾನೆ. ಶ್ವಪಚಯ್ಯನಿಗೆ ಶಿಷ್ಯನಾಗಿ, ಷಡಕ್ಷರಿ ಮಂತ್ರವೇ ತಾನಾಗುತ್ತಾನೆ.

ಕಾಳವ್ವೆ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಚಂದಿಮರಸ :

ಬಿಳಿಯ ಕರಿಕೆ-ಕಣಿಗಿಲೆಲೆಯ, ತೊರೆಯ ತಡಿಯ ಮಳಲ
ತಂದು ಗೌರಿಯ ನೋನುವ ಬನ್ನಿರೆ,
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು-
ಅನುಪಮದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು. ॥ 82 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ಜಗದ ಚಿಕ್ಕ ಚಿಕ್ಕ ಮಕ್ಕಳೆಲ್ಲರೂ ಬಿಳಿಯ ಕರಿಕೆ ಕಣಿಗಿಲೆಲೆಯ, ತೊರೆಯ ತಡೆಯ ಮಳಲ ತಂದು ಗೌರಿಯ ನೋನುವ ಬನ್ನಿರೆ ; ಆಕೆಯ ವ್ರತವನ್ನು ಮಾಡೋಣ ಬನ್ನಿರೇ ಎಂದು ಮನವೆಂಬ ಮಹಾದೇವಿಯನ್ನು ಮನವೇ ಟಿಸಿಲೊಡೆದು ಮನಕ್ಕೆ ಅರಿವೆಂಬ ಶಿವನನ್ನು ಪೂಜಿಸುವ ಇಚ್ಛೆಯಾಗಬೇಕು.

ಬಿಳಿಯ ಕರಿಕೆ, ತೊರೆಯ ತಡಿಯ ಮಳಲು, ಕಣಗಿಲೆ ಎಲೆ ಹಾಗೂ ಕರಿಕೆ ಬಿಳಿ. ಕಣಿಗಿಲೆ ಎಲೆ ಹಾಲು ಬಿಳಿ. ಮಳಲು ಬಿಳಿ. ಇವುಗಳಿಂದ ಮಾಡಿದ ಗೌರಿ ಎನ್ನುವ ಬೊಂಬೆಯು ಬಿಳಿ. ಚಿಕ್ಕ ಚಿಕ್ಕ ಮಕ್ಕಳೆಲ್ಲರೂ ಬಿಳಿ; ಏನೂ ಅರಿಯದ ಕನ್ಯೆಯರು ಇವರು. ಗೌರಿ ಕೂಡಾ ಕನ್ಯೆ. ಈಕೆ ಪರಿಶುದ್ಧವಾದ ಬಿಳಿ.

ತನುವನ್ನು ಆವರಿಸಿದ ಮನ ಹಾಲಿನಂತಿರುವಾಗಲೇ ಅರಿವಿನ ಶಂಕರನೇ

ಗಂಡನಾಗಿ, ಆತನ ಸಂಗ ಮಾಡಬೇಕೆಂದು ವ್ರತ ಮಾಡಬೇಕು. ತನುವುಳ್ಳ ಹಾಲುಗಲ್ಲದ ಮಕ್ಕಳೆಲ್ಲರೂ ಸೇರಿ, ಚಿಕ್ಕ ಚಿಕ್ಕ ಮಕ್ಕಳೆಲ್ಲಾ ಪ್ರಬುದ್ಧರಾಗಿ ಅನುಪಮ ದಾನಿ ಅರಿವಿನ ಸಂಗಯ್ಯನೇ ಗಂಡನಾಗಬೇಕೆಂದು ಗೌರಿಯ ನೋನುವ ಬನ್ನಿರೇ!

ಗೌರಿಯರೆಲ್ಲರೂ ಸೇರಿ ಅರಿವಿನ ಶಿವನೇ ಗಂಡನಾಗಬೇಕೆಂದು ವ್ರತವ ಮಾಡೋಣ ಬನ್ನಿರೇ ಎಂದು ಮನ ಮತ್ತು ತನು ತನುವಿನಲ್ಲಿಯೇ ತನ್ಮಯವಾದ ಗೌರೀ ಶಂಕರನನ್ನು ಕುರಿತು ಹಾಡಬೇಕು.

ತನುವಿಗೆ ಎಷ್ಟು ವಯಸ್ಸಾದರೇನು, ತನುವಿನಲ್ಲಿಯೇ ತನ್ಮಯವಾದ ಅರಿವಿನ ದೇವರನ್ನು ಅರಿಯದ ಮನ ಮತ್ತು ತನು ಕನ್ಯೆಯಿದ್ದಂತೆಯೇ ಸರಿ.

ಕಲಕೇತಯ್ಯ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಉರಿಲಿಂಗಪೆದ್ದಿ :

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ ;
ರಾಶಿಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯಾ ;
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ ;
ನಾಳಿನ ದಿನ ಕಿಂದಿನದಿನ ಲೇಸೆಂದು ಹೇಳಿರಯ್ಯಾ ;
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ ! ॥ 83 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ : ಮುಹೂರ್ತ ಕೇಳಿ ಮದುವೆ ಮಾಡುವುದು ಸಂಪ್ರದಾಯ. ರಾಶಿ ಕೂಟ, ದೇವಗಣ, ರಕ್ಕಸ ಗಣ, ಚಂದ್ರ ಬಲ, ತಾರಾಬಲ ಕೇಳಿ ಮದುವೆ ಮಾಡುವುದು ವಾಡಿಕೆ. ಕರೆಯಲು ಇಟ್ಟ ಹೆಸರು, ಹುಟ್ಟಿದ ನಕ್ಷತ್ರ , ಮುಹೂರ್ತ, ಗಳಿಗೆ ಫಳ ವಿಫಳದಿಂದ ಅಳೆದು ತೂಗಿ ಜ್ಯೋತಿಷಿಗಳು ನಿರ್ಣಯಿಸುತ್ತಾರೆ. ಕಾಗದದಲ್ಲಿ ಬರೆದ ನಕ್ಷತ್ರಗಳು ಕೂಡಿದರೆ ಮದುವೆ ನಿರ್ಧಾರ. ಇಲ್ಲದಿದ್ದರೆ ಇಲ್ಲ. ಮನೆತನ ಸಂಪತ್ತು ವಿದ್ಯ, ರೂಪ ಒಪ್ಪಿಗೆಯಾದರೂ ಕಾಗದದ ಬರಹ ಒಪ್ಪಿಗೆಯಾಗಬೇಕಲ್ಲ !

ಮುಹೂರ್ತ ನೋಡಿ ಮದುವೆಯಾದ ರಾಮ ವನವಾಸಕ್ಕೆ ಹೋದ. ಏನೂ ಅರಿಯದ ಸೀತೆ ಹಿಂಬಾಲಿಸಿದಳು. ಮದುವೆಯಾದ ಲಕ್ಷ್ಮಣ ರಾಮನೊಂದಿಗೆ ಹದಿನಾಲ್ಕು ವರ್ಷ ಕಳೆದ. ಕಾಗದದಲ್ಲಿ ಬರೆದ ಮುಹೂರ್ತ ನೋಡಿ ಮದುವೆಯಾದರೂ ನಾಲ್ಕು ಜನರಿಗೆ ಬಾಧೆ ತಪ್ಪಲಿಲ್ಲ.

ಮುಹೂರ್ತ ನೋಡಿ ತಲೆ ಸೃಷ್ಟಿ ಮಾಡಿಕೊಂಡ ಬ್ರಹ್ಮನ ತಲೆಯೂ ಉಳಿಯಲಿಲ್ಲ ! ಮುಹೂರ್ತ ನೋಡಿ ಮಾಡುವ ಲಗ್ನ ; ಹೆಣ್ಣು ಹೆಣ್ಣು ಕೂಡುವ ಲಗ್ನ ! ಇದು ಹಾಗಲ್ಲ; ಹೆಣ್ಣು ಗಂಡಿನೊಂದಿಗೆ ಕೂಡುವ ಲಗ್ನ ; ಸತಿ–ಪತಿಗಳೊಂದಾಗುವ

ಲಗ್ನ ! ಈ ಲಗ್ನಕ್ಕೆ ಜ್ಯೋತಿಷಿ ಬೇಕಿಲ್ಲ; ನೆರೆಹೊರೆಯವರೂ ಬೇಕಿಲ್ಲ. ಮಹಾಜ್ಞಾನಿ ಶರಣ ಸಾಕು! ಅರಿವಿನೊಂದಿಗೆ ಲಗ್ನದ ಬಯಕೆಯುಳ್ಳ ಒಂದು ದೇಹದ ಮನ ಸಾಕು.

ಅರಿವಿನ ಬಯಕೆಯುಳ್ಳ ಮನ ಅರಿವಿನೊಂದಿಗೆ ಮದುವೆಯಾಗಬೇಕೆಂದು ಗುರುವನ್ನು ಹುಡುಕಲು ಹೋಗುತ್ತದೆ. ಯೋಗ್ಯ ಗುರು ಸಿಕ್ಕಾಗ ; ಶಿಷ್ಯನೆಂಬ ಮನ ಅರಿವಿನ ದೀಕ್ಷೆ ಪಡೆಯಲು ರಾಶಿ ಕೂಟ, ಗಣಸಂಬಂಧ, ಚಂದ್ರಬಲ, ತಾರಾ ಬಲ ನೋಡದೆ ; ಇದೇ ಸರಿಯಾದ ಸಮಯವೆಂದು ಆಲಿಸಬೇಕು. ನಾಳಿನ ದಿನಕ್ಕಿಂತಲೂ ಇಂದಿನ ದಿನವೇ ಲೇಸೆಂದು ಹೇಳಬೇಕು.

ಮದುವೆ ಮಾಡಿಸಲು ಸಜ್ಜಾದ ಶ್ರೀಗುರು ರೂಪುಳ್ಳ ದೇಹವೆಂಬ ಮನೆಯನ್ನು ಶುದ್ಧೀಕರಿಸುತ್ತಾನೆ. ರೂಹಿಲ್ಲದ ಚೆಲುವೆಯೆಂಬ ಮನವನ್ನು ಮದುವೆಗೆ ಅಣಿಗೊಳಿಸುತ್ತಾನೆ. ರೂಹಿಲ್ಲದ, ಕೇಡಿಲ್ಲದ, ಸಾವಿಲ್ಲದ ಅರಿವಿನ ಚೆಲುವ ಚೆನ್ನಿಗನೊಂದಿಗೆ ಮದುವೆ ಮಾಡಿಸುತ್ತಾನೆ. ಕೂಡದ ಅಗಲದ ಕೂಟದ ರತಿ ಸುಖಕ್ಕೆ ಸತಿ ಪತಿಗಳನ್ನು ತನುವಿನ ಕೋಣೆಗೆ ತಳ್ಳುತ್ತಾನೆ.

ಕೂಡದ ಅಗಲದ ಕೂಟದ ಫಲ; ಸತಿ ಪತಿಗಳೊಂದಾದ ಫಲ. ಮನ ಅರಿವನ್ನು ಪೂಜಿಸಿದ ಫಲ. ತನುವಿನಲ್ಲಿ ಉಟಾದ ಅರಿವಿನ ಸಿಹಿಫಲ; ತನುವಿನ ಫಲ.

ಸತ್ಯಕ್ಕ : ತಮ್ಮ ಈ ವಚನದಲ್ಲಿ ಅದೆಷ್ಟು ಬೆಡಗು ತುಂಬಿರುವಿರಿ ಬಸವರಸ. ವಚನದ ಸವಿಯನ್ನು ಉಂಡ ನಾವೆಲ್ಲರೂ ಧನ್ಯ . ತಮಗೆ ಶರಣು ಶರಣಾರ್ಥಿ

ಬಸವಣ್ಣ : ಇಂದಿಗೆ ಇಷ್ಟು ಸಾಕು. ಮತ್ತೆ ನಾಳೆ ಸತ್ಸಂಗದಲ್ಲಿ ಸೇರೋಣ ಎಂದು ಸಭೆಗೆ ಮಂಗಲ ಹಾಡಿದರು.

ಸಕಲ ಶರಣರು ಬಸವಣ್ಣನವರಿಗೆ ಹಣೆಮಣಿದು ಸತ್ಸಂಗದ ಸವಿ ಮಾತುಗಳನ್ನಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೨೫

ಸತ್ಸಂಗಕ್ಕಾಗಿ ಕಾದು ಕುಳಿತ ಬಸವಣ್ಣನವರಿಗೆ ಶರಣರು ಕೈಮುಗಿದು ಕುಳಿತುಕೊಳ್ಳುತ್ತಾರೆ.

ಅವಸರದ ರೇಕಣ್ಣ :

ಪಾತಕ ಶತಕೋಟಿಯ ನೊರಸಲು
ಸಾಲದೆ ಒಂದು ಶಿವನ ನಾಮ?
ಸಾಲದೆ ಒಂದು ಹರನ ನಾಮ?
ಕೂಡಲಸಂಗಮದೇವಾ,
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ. ॥ 84 ॥

ತಮ್ಮ ಈ ವಚನದ ಬೆಡಗನ್ನು ನಮಗೆ ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಕಳುವು, ಭ್ರಷ್ಟಾಚಾರ, ಹಾದರ, ಹಲ್ಲೆ, ಕೊಲೆ, ಅತ್ಯಾಚಾರದಲ್ಲಿ ಅಜ್ಞಾನದಿಂದ ನಿರತವಾದ ಮನಕ್ಕೆ ಬಲು ಸುಖ! ಬಲು ಆನಂದ. ಬೆಳಿಗ್ಗೆ ಎದ್ದು ಏನಾದರೂ ಮಾಡಲೇಬೇಕು ; ಅಂದರೆ ಮಾತ್ರ ಸಮಾಧಾನ. ಹಗಲು ಕಾಲು ಕೆದರಿ ಜಗಳ ತೆಗೆಯಬೇಕು; ಲಂಚ-ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳಬೇಕು; ರಾತ್ರಿ ಅದೇ ಕನಸು ಕಟ್ಟಬೇಕು ; ಇದು ದುರ್ಗತಿ ಹೊಂದಿದ ಮನ ಸದ್ಗತಿ ಹೊಂದಬೇಕಾದ ದೇಹವನ್ನು ದುರ್ಬಳಕೆ ಮಾಡಿಕೊಂಡ ವಿಧಾನ!

ಮನವೆಂಬ ಕೋತಿ ಮಾಡಿದ ಶತಕೋಟಿ ಪಾಪವನ್ನು ಸತ್ಯದ ದೇಹಕ್ಕೆ ಸವರುತ್ತದೆ. ಕೋತಿ ಮೊಸರನ್ನ ತಿಂದು ಮ್ಯಾಕೆ ಮೋತಿಗೆ ಸವರಿದಂತೆ!

ದೇಹ ಪಾಪದ್ದಲ್ಲ. ಅದು ಅರಿವಿನ ಸಿಹಿ ಕಲ್ಲಂಗಡಿ! ದೇಹವನ್ನು ನೋಡಿ, ಅಪರಾಧ ಗುರುತಿಸಿ, ದೇಹಕ್ಕೆ ಶಿಕ್ಷೆ ಕೊಡುವುದು ಮಹಾ ಪಾಪದ ಕೆಲಸ! ಪಾಪದ ಮನ ಮಾತ್ರ ದೇಹ ಗುರುತಿಸಿ ಪಾತಕ ಮಾಡುತ್ತದೆ.

ಸಿದ್ಧಾರ್ಥನಿಗೆ ಅಂಗುಲಿಮಾಲ ಸಿಕ್ಕಿದ್ದರೆ, ಆತನ ದೇಹವನ್ನು ಗಲ್ಲಿಗೆ ಹಾಕುತ್ತಿದ್ದ. ಅದು ಶತಕೋಟಿ ಪಾತಕ ಮಾಡಿದ ದೇಹವೆಂದು ತಿಳಿಯುತ್ತಿದ್ದ. ದೇಹಕ್ಕೆ ಶಿಕ್ಷೆ ನೀಡುತ್ತಿದ್ದ.

ಅಂಗುಲಿಮಾಲನಿಗೆ, ದೇಹದಲ್ಲಿಯ ಅರಿವು ಬಳಕೆಯಾಗಿರಲಿಲ್ಲ. ಮನ ಮಾತ್ರ ದೇಹವನ್ನು ದುರ್ಬಳಕೆ ಮಾಡಿಕೊಂಡಿತ್ತು. ಬುದ್ಧ, ಅಂಗುಲಿಮಾಲನ ದೇಹದಲ್ಲಿರುವ ಅರಿವಿನೊಂದಿಗೆ ಮಾತನಾಡಿದರು. ಅಂಗುಲಿಮಾಲನ ದೇಹ ಬುದ್ಧನ

ದೇಹವಾಯಿತು. ದೇಹಕ್ಕೆ ಅಂಟಿದ ಮನದ ಶತಕೋಟಿ ಪಾಪಗಳನ್ನು, ದೇಹದಲ್ಲಿಯೆ ಇದ್ದ ಬುದ್ಧ ಹೊಸಕಿಹಾಕಿದ. ನೀನೊಲಿದರೆ ಕೊರಡು ಕೊನರುವುದಯ್ಯಾ ಎನ್ನುವಂತೆ ದೇಹದ ಅರಿವು ದೇಹಕ್ಕೆ ಒಲಿತು ಕೊರಡು ಕೊನರಿತು. ಬರಡು ಹಯನಾಯಿತು. ಅಂಗುಲಿಮಾಲ ಬುದ್ಧನಾದ !

ಸತ್ಯಕ್ಕ : ಕೂಡಲಸಂಗಮದೇವಾ ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ ಎನ್ನಲು ಕಾರಣವೇನು ಬಸವಣ್ಣ ?

ಬಸವಣ್ಣ : ಅರಿವಿನ ಸಿಹಿ ಕಲ್ಲಂಗಡಿಯೆಂಬ ದೇಹಕ್ಕೆ ಆವರಿಸಿದ ಮನವೆಂಬ ಪಶು ಉಂಡಿಗೆಯ ಮಾಡಿ ಅಂದರೆ ಕೊರೆದು ಕಲ್ಲಂಗಡಿ ಹೊಕ್ಕು ಅರಿವಿನ ಸಿಹಿಯನುಂಡು ಅರಿವಿನಿಂದ ಮೆರೆಯಿತು. ಬುದ್ಧನಾಯಿತು, ಮನ ಘನಮನವಾಗಿ ಕುಣಿ ಕುಣಿದಾಡಿತು.

ಅವಸರದ ರೇಕಣ್ಣ : ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಕಾಳಿಂಗದೇವ :

ಲಿಂಗದ ಉಂಡಿಗೆಯ ಪಶು ನಾನಯ್ಯಾ ,
ವೇಷಧಾರಿಯಾನು, ಉದರ ಪೋಷಕ ನಾನಯ್ಯಾ .
ಕೂಡಲ ಸಂಗನ ಶರಣ,
ಮನೆಯ ಧರ್ಮದ ಕವಿಲೆಯಾನಯ್ಯಾ. ॥ 85 ॥

ತಮ್ಮ ಈ ವಚನದ ಬೆಡಗನ್ನು ನಮಗೆ ತಿಳಿಯುವಂತೆ ಬಿಡಿಸಿ ಹೇಳಿ ತಂದೆ.

ಬಸವಣ್ಣ : ದೇಹ ಅರಿವಿನ ಉಂಡಿಗೆ. ದೇಹವನ್ನು ಆವರಿಸಿದ ಮನ, ದೇಹ ಕೊರೆದು ಒಳಹೊಕ್ಕು ಅರಿವಿನ ಉಂಡಿಗೆ ಸೇರಿ ಆ ಅರಿವೇ ತಾನಾಗಬೇಕಿತ್ತು . ಆದರೆ ಅಂಗದಲ್ಲಿ ಲಿಂಗವೆಂಬ ಅರಿವಿದ್ದರೂ, ಆ ಅರಿವಿನ ಉಂಡಿಗೆಯ ಪಶುವಾಗಿದೆ.

ಉದರ ಪೋಷಣೆಗಾಗಿ ಮನ, ತನುವಿಗೆ ಗುರು, ರಾಜ, ಪ್ರಧಾನಿ, ಸ್ತ್ರೀ , ಪುರುಷ, ಶಿಕ್ಷಕ, ಹಾದರಿಗ, ಕಳ್ಳ, ಕೊಲೆಗಡುಕ, ವೇಶ್ಯೆ , ವಿಟ, ಲಂಚಕೋರ, ಭ್ರಷ್ಟಾಚಾರಿ ನಾನಾ ರೀತಿಯ ಹಣೆಪಟ್ಟಿ ಕಟ್ಟಿದೆ.

ದೇಹದಲ್ಲಿರುವ ಅರಿವಿಗೆ ಶರಣು ಹೋಗಿ ಆ ಅರಿವಿನಲ್ಲಿ ಸಂಗಮವಾದ ಮನ ಕೂಡಲಸಂಗನ ಶರಣನೂ ಹೌದು. ತನುವಿನ ಮನೆಯ ಅರಿವಿನ ಧರ್ಮದ ಹಸುವೂ ಹೌದು. ಅರಿವನು ಅರಿಯದ ಪಶುವಾದ ಮನ; ಅರಿವನು ಅರಿತು ಆ ಅರಿವಿನಲ್ಲಿ ಲೀನವಾಗಿ; ಅರಿವು ಹೇಳಿದಂತೆ ಕೇಳುವ ಹಸುವಾಯಿತು. ಉದರ ಪೋಷಣೆಯ ವೇಷ ಕಳಚಿ ಅರಿವಿನ ಅಮೃತ ಬೀರುವ ಕವಿಲೆಯಾಯಿತು.

ಕಾಳವ್ವೆ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಸೂಳೆಸಂಕವ್ವೆ :

> ನಮಃಶಿವಾಯ ನಮಃಶಿವಾಯ ನಮಃಶಿವಾಯ
> ಶರಣೆಂದಿತ್ತು ಲಲಾಟಲಿಖಿತ
> ಬರೆದ ಬಳಿಕ ಪಲ್ಲಟವ ಮಾಡಬಾರದು.
> ಎನ್ನ ಉರವ ಉಂಡಿಗೆ, ಶಿರದ ಅಕ್ಷರ
> ಕೂಡಲಸಂಗಯ್ಯಾ ಶರಣೆಂದಿತ್ತು. ॥ 86 ॥

ತಮ್ಮ ಈ ವಚನದ ಬೆಡಗನ್ನು ನಮಗೆ ಬಿಡಿಸಿ ಹೇಳಿ ತಂದೆ.

ಬಸವಣ್ಣ: ಪ್ರತಿ ತನುವಿನ ಹಣೆಯಲ್ಲೂ ಅರಿವೆಂಬ ಗುರುದೇವ ನಮಃ ಶಿವಾಯ ಎಂಬ ಐದಕ್ಷರಗಳಿವೆ. ಇವು ಅಕ್ಷರೋತ್ತಮ ಬರೆದ ಅಕ್ಷರಗಳು. ಆತ ಬರೆದ ಅಕ್ಷರಗಳನ್ನು ಮನ ಓದಿದರೆ ಅಲ್ಲಿಯೇ ಪಲ್ಲಟಗೊಳ್ಳುತ್ತದೆ.

ಮನ ಅಕ್ಷರೋತ್ತಮ ಬರೆದ ಅಕ್ಷರಗಳನ್ನು ಓದುವುದು ಬಿಟ್ಟು ರಾಮಾಯಣ, ಮಹಾಭಾರತ, ವೇದ, ಆಗಮ, ಉಪನಿಷತ್ತುಗಳನ್ನು ಓದುತ್ತದೆ. ಇವು ಅಕ್ಷರೋತ್ತಮ ಬರೆದ ಎಂಜಲುಗಳೆಂದು ಮನಕ್ಕೆ ತಿಳಿಯುವುದಿಲ್ಲ. ಓದಿ, ಮನ ಪಂಡಿತ, ಶಾಸ್ತ್ರಿ, ವಿಜ್ಞಾನಿ ಎನಿಸಿಕೊಳ್ಳುತ್ತದೆಯೇ ಹೊರತು ಮಹಾಜ್ಞಾನಿ ಎನ್ನಿಸಿಕೊಳ್ಳುವುದಿಲ್ಲ.

ಹಣೆಯಲ್ಲಿ ಬರೆದ ಅಕ್ಷರಗಳನ್ನು ಓದುವ ಕಲೆ, ಮನ; ಮಹಾಜ್ಞಾನಿ ಶರಣರಿಂದಲೇ ತಿಳಿಯಬೇಕು. ಪುರಾತರು ಬರೆದ ಸೂತ್ರದಿಂದಲೆ ತಿಳಿಯಬೇಕು.

ಸತ್ಯಕ್ಕ : ಎನ್ನ ಉರದ ಉಂಡಿಗೆ, ಶಿರದ ಅಕ್ಷರ ಕೂಡಲಸಂಗಯ್ಯಾ ಶರಣೆಂದಿತ್ತು ಎನ್ನಲು ಕಾರಣವೇನು ಬಸವರಸ?

ಬಸವಣ್ಣ : ಅರಿವಿನ ದೇಹ, ಅಕ್ಷರೋತ್ತಮನ ಹಣೆ, ಇವು ಮನದ ಸಂಪತ್ತು . ಮನ ತನ್ನ ಅಂತರಾಳದ ಸಂಪತ್ತಿಗೆ ಶರಣು ಹೋಗಬೇಕು. ಅರಿವಿನ ದೇಹದಲ್ಲಿ ಅಕ್ಷರೋತ್ತಮನ ಹಣೆಯಲ್ಲಿ ಸಂಗಮವಾಗಿ ಕೂಡಲ ಸಂಗಯ್ಯನೇ ತಾನಾಗಬೇಕು. ಅರಿವಿನ ಸಂಗಯ್ಯನಿಗೆ ಶರಣು ಹೋಗಿ ಶರಣೆನ್ನಬೇಕು. ಶರಣನೇ ತಾನಾಗಬೇಕು.

ದಸರಯ್ಯ : ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಗಾಣದ ಕಣ್ಣಪ್ಪ :

> ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು;
> ಲಿಂಗದೇವನಿಲ್ಲದ ಠಾವು ನರವಿಂಧ್ಯ , ಹೊಗಲಾಗದು;
> ದೇವಭಕ್ತರಿಲ್ಲದೂರು ಸಿನೆ, ಹಾಳು!
> ಕೂಡಲಸಂಗಮದೇವಾ. ॥ 87 ॥

ತಮ್ಮ ಈ ವಚನದ ಬೆಡಗನ್ನು ನಮಗೆ ಬಿಡಿಸಿ ಹೇಳಿ ತಂದೆ.

ಬಸವಣ್ಣ: ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ, ನೋಡಲಾಗದು: ಅರಿವಿಲ್ಲದ ದೇಹ ಒಂದೂ ಇಲ್ಲ. ಅರಿವಿಲ್ಲದ ಮುಖವೂ ಒಂದೂ ಇಲ್ಲ. ವಿಭೂತಿಯಿಲ್ಲದ ಹಣೆ ಕೂಡಾ ಒಂದೂ ಇಲ್ಲ. ಭಸ್ಮ ಹಚ್ಚದಿದ್ದರೇನಂತೆ; ಕಾಣುವ ಹಣೆಗಳೆಲ್ಲ ಭಸ್ಮದ ಹಣೆಗಳೇ; ಅರಿವಿನ ಹಣೆಗಳೇ ; ಕೂಡಲ ಸಂಗಯ್ಯನೆಂಬ ಅಕ್ಷರೋತ್ತಮನಿದ್ದ ಹಣೆಗಳೇ ಆಗಿವೆ.

ವಿಭೂತಿಯ ಮೂಲ ಸಗಣಿ ; ಸಗಣಿ, ಬಿಸಿಲ ಝುಳದಿಂದ ಒಣಗಿದರೆ ಬೆರಣಿಯಾಗುತ್ತದೆ! ಬೆರಣಿಗೆ ಅಗ್ನಿ ತಾಗಿದರೆ ವಿಭೂತಿಯಾಗುತ್ತದೆ!! ಸಗಣಿಯನ್ನು ನೋಡಲಾಗದು, ಮುಟ್ಟಲಾಗದು. ಒಣಗಿದ ಬೆರಣಿಯನ್ನು ಅಗ್ನಿ ಬಳಸದೆ ಇರಲಾಗದು.ಅಗ್ನಿ ಮುಟ್ಟಿದ ಬೆರಣಿ ಭಸ್ಮವಾಗದೇ ಇರಲಾಗದು. ಭಸ್ಮದಲ್ಲಿ ಸೆಗಣಿಯ ಗುಣಗಳಿಲ್ಲ. ಸಗಣಿಯಲ್ಲಿ ಭಸ್ಮ ಅಡಕವಾಗಿದೆ. ಭಸ್ಮ ನೋಡುವ ಅರಿವು ಪ್ರತಿ ಕಣ್ಣಿನಲ್ಲಿ ಅಡಕವಾಗಿದೆ. ಭಸ್ಮ ನೋಡಿದರೆ ಸೆಗಣಿ ಕಾಣುವುದಿಲ್ಲ. ಸೆಗಣಿ ನೋಡುವ ಕಣ್ಣಿಗೆ ಭಸ್ಮ ಕಾಣುವುದಿಲ್ಲ.ಕಣ್ಣಿನಲ್ಲಿ ಆವರಿಸಿದ ಸೆಗಣಿ ಬೆಂದು ಭಸ್ಮವಾದರೆ, ನೋಡುವ ಹಣೆಗಳೆಲ್ಲ ವಿಭೂತಿಯ ಹಣೆಗಳೆ ಆಗಿವೆ; ಅರಿವಿನ ಮುಖಗಳೇ ಆಗಿವೆ. ಅರಿವು ಇಲ್ಲದ ಕಣ್ಣಿನಿಂದ ನೋಡಲಾಗದು.

ಕಾಳವ್ವೆ : ಲಿಂಗದೇವನಿಲ್ಲದ ಠಾವು ನರವಿಂಧ್ಯ , ಹೊಗಲಾಗದು ಎನ್ನಲು ಕಾರಣವೇನು ಬಸವಣ್ಣ ?

ಬಸವಣ್ಣ : ಅರಿವಿನ ದೇವರಾದ ಗುರುದೇವನಿಲ್ಲದ ಠಾವು ನರವಿಂಧ್ಯ , ಹೊಗಲಾಗದು. ಒಳ ಹೊರ ಠಾವಿನಲ್ಲೂ ದೇವರಿದ್ದು , ಅದನ್ನು ನೋಡದ ಮನ ಮರ್ಕಟ!

ಮರ್ಕಟಗಳೇ ವಾಸಮಾಡಿದ ಸ್ಥಳದಲ್ಲಿ ಭಕ್ತ ಅರಿವಿನೊಂದಿಗೆ ಬೆರೆಯುವುದಾದರೂ ಹೇಗೆ? ದೇವನಿಗೂ ಅವನನ್ನು ಅರಿಯುವ ಭಕ್ತನಿಗೂ ಯಾವ ಅಡ್ಡಗೋಡೆಗಳೂ ಇಲ್ಲ. ದೇಹವನ್ನೇ ಊರು, ಪುರ, ಪಟ್ಟಣವೆಂದು ಕರೆಯುತ್ತಾರೆ. ಅದು ಬಿಳಿಯ ಹಾಳೆ, ಠಾವು; ಆ ಪುರದಲ್ಲಿಯೇ ಪುರುಷೋತ್ತಮನಿದ್ದಾನೆ. ಪುರದಲ್ಲಿಯೇ ಆತನನ್ನು ನೆನೆದು ಪುರಸೇರಿ ಪುರುಷೋತ್ತಮನಾಗುವ ಭಕ್ತನಿದ್ದಾನೆ. ದೇವ–ಭಕ್ತನಿಲ್ಲದೂರು ಸಿನೆ. ದೇವನೂ–ಭಕ್ತನೂ ತೆರಹಿಲ್ಲದಂತೆ ದೇಹದಲ್ಲಿಯೇ ಸಂಗಮವಾಗಿದ್ದಾರೆ. ನೆಲೆಸಿದ್ದಾರೆ. ಇದು ಗೋಚರವಾಗದ ಮನ ಹಾಳು!

ಕಾಳವ್ವೆ : ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಬಾಲಬೊಮ್ಮಣ್ಣ :

> ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ
> ಶರಣರ ಕಂಡಡೆ ನಂಬುವುದೆನ್ನ ಮನವು,
> ನಚ್ಚುವುದೆನ್ನ ಮನವು ಸಂದೇಹವಿಲ್ಲದೆ.
> ಇವಿಲ್ಲದವರ ಕಂಡಡೆ ನಂಬೆ ಕೂಡಲಸಂಗಮದೇವಾ. ॥ 88 ॥

ತಮ್ಮ ಈ ವಚನದ ಬೆಡಗನ್ನು ಶರಣರಿಗೆ ತಿಳಿಯುವಂತೆ ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಮನ ದೇಹದ ಅರಿವು ಬಳಕೆ ಮಾಡಿಕೊಂಡು ಸರಿ ಹೋಗಲು ಬರುತ್ತದೆಯೇ ಹೊರತು; ಮತ್ತೊಂದು ದೇಹಕ್ಕೆ ಪಾಠ ಮಾಡಿ; ಆ ದೇಹವನ್ನು ಸರಿಪಡಿಸಲು ಬರುವುದಿಲ್ಲ. ದೇಹದಲ್ಲಿರುವ ಅರಿವು ಬಳಕೆ ಮಾಡಿಕೊಂಡು ಸರಿಹೋಗುವ ಮನ ಪ್ರತಿ ದೇಹದಲ್ಲಿಯೂ ಇದೆ. ಅದಕ್ಕಾಗಿಯೇ ಈ ಸೂತ್ರ .

ಬಾಲಬೊಮ್ಮಣ್ಣ : ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ ಶರಣರ ಕಂಡಡೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು ಸಂದೇಹವಿಲ್ಲದೆ ಎಂದು ಹೇಳಲು ಕಾರಣವೇನು ಬಸವರಸ?

ಬಸವಣ್ಣ: ಜ್ಞಾನ ಉಳ್ಳ ದೇಹ, ಅದನ್ನು ತಿಳಿಯುವ ಬಯಕೆಯುಳ್ಳ ದೇಹ, ಜ್ಞಾನಿಯೇ ತಾನಾಗುವ ದೇಹ. ಇದು ಶಿವನ ದೇಹ! ಪ್ರತಿ ದೇಹದ ಹಣೆ ಶಿವನ ಮಣಿಮುಕುಟ! ಕಾಯ ಯಾವ ವೇಷದಲ್ಲಿದ್ದರೇನು? ಯಾವ ಕಾಯಕದಲ್ಲಿದ್ದರೇನು? ಅದು ಅರಿವಿನ ಕಾಯ; ಅರಿವಿನ ಲಾಂಛನ! ಅರಿವಿನ ಲಾಂಛನವನ್ನು ನಂಬಲೇಬೇಕು. ಸಂದೇಹವಿಲ್ಲದೆ ಹೀಗೆ ನಂಬಿ ಗೌರವಿಸುವ ಲಕ್ಷಣವೇ ಗುರುವಿನ ಲಕ್ಷಣ. ನಿಜ ಶರಣನ ಲಕ್ಷಣ!

ಹಡಪದ ಅಪ್ಪಣ್ಣ : ಇವಿಲ್ಲದವರ ಕಂಡಡೆ ನಂಬೆ ಕೂಡಲಸಂಗಮದೇವಾ ಎನ್ನಲು ಕಾರಣವೇನು ಬಸವಣ್ಣ?

ಬಸವಣ್ಣ: ಪ್ರತಿ ತನು ಅರಿವಿನ ಲಾಂಛನ. ಆ ತನುವಿನ ಅಂತರಂಗವನ್ನು ಆ ತನುವಿನ ಅರಿವೆಂಬ ಗುರುವೇ ಬಲ್ಲನು! ಆ ಗುರುವನ್ನು ಹೊಂದಿದ ತನುವಿನ ಸೇವೆಯನ್ನು ಅರಿವು ಬಲ್ಲ ಗುರುವೇ ಮಾಡಬೇಕು. ತನುಮನಗಳೆರಡೂ ಅರಿವೆಂಬ ಗುರುವಿನ ತೊತ್ತು; ಸೇವಕರು. ಈ ಸೇವಕನಿಗೆ ಸೇವಕನ ಕೆಲಸವಲ್ಲದೆ ಮತ್ತೊಂದಿಲ್ಲ. ಅರಿವೆಂಬ ಗುರುವಿಗೆ ಸೇವಕನಾದವನು ಮನವೆಂಬ ಅರಸನ ಸುದ್ದಿಗೆ ಹೋಗುವಂತಿಲ್ಲ; ಅದು ಮರ್ಕಟ!

ಅರಿವಿನ ತನುವನ್ನು ಆದರಿಸದೆ ಅಂದರೆ ತನು-ಮನ-ಅರಿವು ಅಡ್ಡ ತ್ರಿಪುಂಡ್ರದ ಮಣಿಮುಕುಟ ಉಳ್ಳ ತನು. ಈ ತನುವನ್ನು ಕಳ್ಳ, ಸುಳ್ಳ, ಹಾದರಿಗ, ವಿಟ, ವೇಶ್ಯೆ , ಭ್ರಷ್ಟ ಲಂಚಕೋರ, ಕೊಲೆಗಡುಕ ಎಂದು ದೂಷಣೆ ಮಾಡುವವರನ್ನು

ಕಂಡಡೆ ನಂಬದೆನ್ನ ಮನವು, ನಚ್ಚದೆನ್ನ ಮನವು ಕೂಡಲಸಂಗಮದೇವಾ.

ಕಾಳವ್ವೆ : ನಾಲ್ಕು ಸಾಲಿನ ವಚನದಲ್ಲಿ ಅದೆಷ್ಟು ರಹಸ್ಯ ಅಡಗಿಸಿರುವಿರಿ ತಂದೆ. ನಮ್ಮೆಲ್ಲರಿಗೂ ತಿಳಿಯುವಂತೆ ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಶರಣು ಹೇಳಿ, ಮಂಗಲಗೊಳಿಸಿದರು.

ಶರಣರು ಭಕ್ತಿರಸವನ್ನು ಮೇದ ಅರಿವಿನ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೨೬

ನಿಧಾನವಾಗಿ ಕತ್ತಲನ್ನು ಬೆಳಕು ನುಂಗುತ್ತಿರುವ ದೃಶ್ಯ ಅಥವಾ ಕತ್ತಲೇ ಓಡೋಡಿ ಬೆಳಕಿನ ಬಾಯಿಗೆ ಬೀಳುವ ದೃಶ್ಯ ಶರಣರ ಗೋಚರಕ್ಕೆ ಬರುತ್ತಲಿದೆ. ಹೀಗೆ ಅಂಗವನ್ನು ಆವರಿಸಿದ ಮನವೆಂಬ ಕತ್ತಲನ್ನು ಅಂಗದಲ್ಲಿಯೇ ಸಂಗಮವಾದ ಅರಿವಿನ ಸೂರ್ಯ ನುಂಗಬಾರದೇ ಎಂದು ಚರ್ಚಿಸುತ್ತಾ ಶರಣರು ಮಹಾಮನೆಗೆ ನಡೆದಿದ್ದಾರೆ. ವೇದಿಕೆಯ ಮೇಲೆ ಶರಣರ ಬರುವಿಕೆಯನ್ನು ಕಾಯುತ್ತಾ ಕುಳಿತ ಬಸವಣ್ಣನವರಿಗೆ ಕೈಮುಗಿದು ಕುಳಿತುಕೊಳ್ಳುತ್ತಾರೆ.

ವೀರಗೊಲ್ಲಾಳ :

ಆರಾಧ್ಯ ಪ್ರಾಣಲಿಂಗವೆಂದರಿದು,
ಪೂರ್ವಗುಣವನಳಿದು ಪುನರ್ಜಾತನಾದ ಬಳಿಕ
ಸಂಸಾರ ಬಂಧುಗಳೆನ್ನವರೆಂದಡೆ, ನಂಟು ಭಕ್ತಿ ;
ನಾಯಕ ನರಕ!
ಇಂತೆಂದುದು ಕೂಡಲಸಂಗನ ವಚನ. ॥ 89 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ತನುವಿನ ಪ್ರಾಣಕ್ಕೆ ಅಂಟಿದ ಅರಿವೇ ಪ್ರಾಣಲಿಂಗ. ಆ ಅರಿವೇ ತನು ಮತ್ತು ಮನದ ಆರಾಧ್ಯ ದೈವ. ಆ ಅರಿವೆಂಬ ಗುರುದೇವನ ನೆರವಿನಿಂದ ಕಾಮ,ಕ್ರೋಧ,ಲೋಭ, ಮೋಹ, ಮದ, ಮತ್ಸರ ಎನ್ನುವ ಕಾಯದ ಪೂರ್ವ ಗುಣಗಳನ್ನು ಕಳೆದುಕೊಂಡವನೇ ಪುನರ್ಜಾತ. ಆತ ಸತ್ತು ಹುಟ್ಟಿದಾತ.

ಹೀಗೆ ಸತ್ತು ಮರುಹುಟ್ಟು ಪಡೆದ ಬಳಿಕ ಮತ್ತೆ ಅರಿಷಡ್ವರ್ಗಗಳೆಂಬ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎನ್ನುವ ಬಂಧುಗಳನ್ನು ಎನ್ನುವರು ಎಂದು ಹೇಳಬಹುದೆ? ತನು ಕಾಮದೊಂದಿಗೆ ಮತ್ತೆ ಸಂಸಾರ ಹೂಡಬೇಕೇ? ಮತ್ತೆ ಅರಿಷಡ್ವರ್ಗಗಳೆಂಬ ಬಂಧುಗಳನ್ನು ತನ್ನವರನ್ನಾಗಿ ಮಾಡಿಕೊಳ್ಳಬೇಕೇ? ಈ ನೆಂಟತನದ ನಂಟು ಭಕ್ತಿ, ನಾಯಕ–ನರಕ. ಹೀಗೆಂದು ಹೇಳುವುದು ಅಂಗದಲ್ಲಿಯೇ ಸಂಗಮವಾದ ಅರಿವಿನ ಆರಾಧ್ಯ ದೈವ; ಒಡಲೊಳಗಿದ್ದು ಒಡಲಿಂಗೆ ಆಧಾರವಾಗಿ ಒಡಲ ಸೋಂಕದೆ ಒಡಲನ್ನು ಬೆಳಗುವ ಒಡಲೊಡೆಯ ಕೂಡಲಸಂಗಯ್ಯನ ವಚನ.

ದಸರಯ್ಯ : ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಮಾರೇಶ್ವರೊಡೆಯ :

> ತಾಳಮರದ ಕೆಳಗೆ ಒಂದು ಹಾಲಹರವಿಯಿದ್ದಡೆ,
> ಅದ ಹಾಲಹರವಿಯೆನ್ನದು; ಸುರೆಯ ಹರವಿಯೆಂಬರು.
> ಈ ಭಾವನಿಂದೆಯ ಮಾಣಿಸಾ,
> ಕೂಡಲಸಂಗಮದೇವಾ. ॥ 90 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ತಾಳದ ಮರದಿಂದ ಒಸರುವ ಜಲ ಹೆಂಡ ಎಂದು ಲೋಕ ತಿಳಿದಿದೆ. ಹಸುವಿನಿಂದ ಬರುವುದು ಹಾಲು ಎನ್ನುವ ಅರಿವು ಕಣ್ಣಿಗೆ ಇದೆ. ತಾಳ ಮರದಿಂದ ಬಂದ ದ್ರವ ಹರವಿಯಲ್ಲಿ ಸಂಗ್ರಹವಾದರೇನು, ಹಸುವಿನಿಂದ ಬಂದ ಹಾಲು ಹರವಿಯಲ್ಲಿ ಸಂಗ್ರಹವಾದರೇನು, ಕಣ್ಣಿನಲ್ಲಿರುವ ಅರಿವು ಅವೆರಡನ್ನೂ ನೋಡಿ ಉದಾಸೀನ ಮಾಡುತ್ತದೆ. ಆದರೆ ಕಣ್ಣಿನಲ್ಲಿ ಬೆರೆತ ಮನ ಹೆಂಡದ ರುಚಿ, ಅದರ ಚೇಷ್ಟೆಯನ್ನು ಸಂಗ್ರಹ ಮಾಡಿಕೊಂಡಿದೆ. ಹಾಲು ಮತ್ತು ಅದರ ರುಚಿ ಕೂಡಾ ಸಂಗ್ರಹ ಮಾಡಿಕೊಂಡಿದೆ.

ಮನ ಸ್ನೇಹಿತನನ್ನು ಭಾವದಿಂದ ಕಾಣುತ್ತದೆ. ಆತ ತಾಳ ಮರದ ಕೆಳಗೆ ಕುಳಿತು ಹಾಲು ಕುಡಿದರೆ ಹೆಂಡ ಕುಡಿದನೆಂದು ನಿರ್ಧರಿಸಿ ದುರ್ಭಾವದಿಂದ ಕಾಣುತ್ತದೆ. ಹಲವಾರು ವರ್ಷಗಳಿಂದ ಸ್ನೇಹದಿಂದ ಭಾವಿಸಿದ ಮನ ದುರ್ಭಾವದಿಂದ ತೆಗಳುತ್ತದೆ. ಹಾಲು ಕುಡಿದ ತನು ಸುಖದಿಂದಲೇ ಇದೆ. ನೋಡಿದ ತನು ದುರ್ಭಾವದಿಂದ ಕುದಿಯುತ್ತದೆ. ನೋಡುವ ತನುವಿನ ಭಾವ-ದುರ್ಭಾವ ಎರಡೂ ಅಳಿದು ನಿರ್ಭಾವವಾಗುವವರೆಗೆ ತನುವಿಗೆ ಸಂಕಟ ತಪ್ಪುವುದಿಲ್ಲ. ತನುವನ್ನು ಆವರಿಸಿದ ಮನದಲ್ಲಿ ಉಂಟಾದ ಭಾವ-ದುರ್ಭಾವಗಳನ್ನು ತನುವಿನಲ್ಲಿಯೇ ತನ್ಮಯವಾದ ನಿರ್ಭಾವದಿಂದಲೇ ಕಳೆದುಕೊಳ್ಳಬೇಕು. ಈ ಉಭಯ ನಿಂದೆಯ ಕಳೆಯುವ ಶಕ್ತಿ ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನಿಗೆ ಮಾತ್ರ ಇದೆ.

ಕಾಳವ್ವೆ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಮರುಳ ಸಿದ್ಧೇಶ್ವರ :

> ಸುಪಥ ಮಂತ್ರದುಪದೇಶವ ಕಲಿತು ಯುಕ್ತಿಗೆಟ್ಟು ನಡೆವಿರಯ್ಯಾ ;
> ತತ್ವಮಸಿ ಎಂಬುದನರಿದು ಕತ್ತಲೆದೊಡವಿರಯ್ಯಾ.
> ವೇದವಿಪ್ರರ ವಿಚಾರಿಸಿ ನೋಡಲು
> ಉಪದೇಶ ಪರೀಕ್ಷೆ ನಾಯಕ ನರಕ, ಎಂದುದು
> ಕೂಡಲಸಂಗನ ವಚನ ಸೂಚನೆ ! ॥ 91 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ಮಂತ್ರ ಹೇಳಿದರೆ ಕತ್ತಲೆ ಕಳೆದು ಬೆಳಕಾಗುವುದಿಲ್ಲ. ದೀಪ ಬೆಳಗಿಸಿ ಕತ್ತಲೆ ಕಳೆಯಬೇಕು. ತನುವಿನ ಅರಿವೇ ಮಂತ್ರ.

ತತ್ವಮಸಿ ಅಂದರೆ ತತ್ ತ್ವಂ ಅಸಿ. ಆ ತತ್ವ ನೀನೇ ಇದ್ದೀಯಾ ಅದನ್ನು ತಿಳಿ. ಆ ತತ್ವವೇ ನೀನಾಗಿ ಇರು. ನೀನು ನಿನ್ನ ಅರಿವಿನಿಂದ ಇರುವುದೇ ಮಂತ್ರ! ಹೀಗೆನ್ನುವ ತತ್ವಮಸಿ ಮಂತ್ರವನ್ನು ಬಾಯಿಯಿಂದ ಬೊಗಳಿ ಯುಕ್ತಿಗೆಟ್ಟು ನಡೆದರೆ ಮಂತ್ರವೇನು ಮಾಡೀತು? ತನುವಿನಿಂದ ಬಂದ ಶಬ್ದ ತನುವೇ ಪಾಲಿಸದಿದ್ದರೆ, ತನುವಿಗೂ ಶಬ್ದಕ್ಕೂ ಸಂಬಂಧವಿಲ್ಲ. ಮಂತ್ರದ ಮೂಲಕ ಕಾಯದ ಕತ್ತಲೆಯನ್ನು ಕಳೆದುಕೊಳ್ಳಲು ಬರುವುದಿಲ್ಲ.

ಮರುಳ ಸಿದ್ಧೇಶ್ವರ : ವೇದ ವಿಪ್ರರ ವಿಚಾರಿಸಿ ನೋಡಲು; ಉಪದೇಶ ಪರೀಕ್ಷೆ ನಾಯಕ-ನರಕ ಎಂಬುದು ಕೂಡಲಸಂಗಮದೇವನ ವಚನ ಸೂಚನೆ ಎನ್ನುವ ಬಗ್ಗೆ ಹೇಳಿ ಎನ್ನೊಡೆಯಾ.

ಬಸವಣ್ಣ : ವಿಚಾರಿಸಿ ನೋಡಲು ಹೋದರೆ, ಉಪದೇಶ ಪಡೆದುಕೊಳ್ಳುವ ಶಿಷ್ಯನನ್ನು; ಉಪದೇಶ ಮಾಡುವ ಗುರುದೇವನನ್ನು ಪರೀಕ್ಷೆಗೆ ಒಳಪಡಿಸುವುದು ಕೂಡಾ ನಾಯಕ-ನರಕ!

ತತ್ವಮಸಿ ಎನ್ನುವ ವಚನದ ಸಾರವು: ತನುವೇ ತತ್ವ. ತನುವಿನಲ್ಲಿ ತತ್ವ ಬಚ್ಚಿಟ್ಟುಕೊಂಡಿದೆ. ಆ ತತ್ವವನ್ನು; ತನುವನ್ನು ಆವರಿಸಿದ ಮನದಿಂದಲೇ ತಿಳಿಯಬೇಕು ಎಂದು ಹೇಳುವ ಸಾರವೇ ತತ್ವಮಸಿ. ಹೀಗಾದಾಗ ಒಂದು ತನು, ಮತ್ತೊಂದು ತನುವನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುವುದು ನಾಯಕ-ನರಕವಲ್ಲವೆ? ಒಂದು ತನು, ಮತ್ತೊಂದು ತನುವನ್ನು ಗುರುವನ್ನಾಗಿ ಮಾಡಿಕೊಳ್ಳುವುದು ನಾಯಕ-ನರಕವಲ್ಲವೆ?

ತನುವಿನಲ್ಲಿಯೇ ತನ್ಮಯವಾದ ಅರಿವು ಇದೆ. ಇದೇ ತತ್ವ. ಮನ, ತನಗೆ ಬೋಧೆ ಮಾಡುವ ಅರಿವೆಂಬ ಗುರುದೇವನನ್ನು ಗುರುವನ್ನಾಗಿ ಮಾಡಿಕೊಳ್ಳಬೇಕು. ಮನ ಈ ಗುರುದೇವನಿಗೆ ಶಿಷ್ಯನಾಗಿ ಅರಿವಿನ ತತ್ವ ತಿಳಿಯಬೇಕು. ಇದೇ ಸುಪಥ. ಇದೇ ಮಂತ್ರದ ಉಪದೇಶ.

ಕಾಳವ್ವೆ : ಈ ವಚನದಲ್ಲಿ ಅದೆಷ್ಟು ರಹಸ್ಯ ಅಡಗಿಸಿರುವಿರಿ ತಂದೆ. ನಮ್ಮೆಲ್ಲರಿಗೂ ತಿಳಿಯುವಂತೆ ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಬಸವಣ್ಣ: ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಶರಣು ಹೇಳಿ, ಮಂಗಲಗೊಳಿಸಿದರು.

ಶರಣರು ಭಕ್ತಿರಸವನ್ನು ಮೇದ ಅರಿವಿನ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೨೭

ಸತ್ಸಂಗಕ್ಕಾಗಿ ಕಾದು ಕುಳಿತ ಬಸವಣ್ಣನವರಿಗೆ ಶರಣರು ಕೈಮುಗಿದು ಕುಳಿತುಕೊಳ್ಳುತ್ತಾರೆ.

ಮೇದಾರ ಕೇತಯ್ಯ :

ಕುಂಬಳದ ಕಾಯಿಗೆ ಕಬ್ಬುನದ ಕಟ್ಟಕೊಟ್ಟಡೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ
ಭಕ್ತಿಯೆಂತಹುದು? ಮುನ್ನಿನಂತೆ!
ಕೂಡಲಸಂಗಯ್ಯಾ ,
ಮನ ಹೀನನ ಮೀಸಲ ಕಾಯ್ದಿರಿಸಿದಂತೆ! ।। 92 ।।

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ನುಲಿಯಿಂದ ತಯಾರಿಸಲ್ಪಟ್ಟ ನೆಲುವಿನಲ್ಲಿ ಕುಂಬಳಕಾಯಿ ಇಟ್ಟರೆ ಕೊಳೆಯುವುದಿಲ್ಲ. ಬಹಳ ದಿನಗಳವರೆಗೆ ಬಾಳುತ್ತದೆ. ಸದ್ಬಳಕೆಗೆ ಬರುತ್ತದೆ. ಇನ್ನೂ ಬಹಳ ದಿನಗಳವರೆಗೆ ಬರಬೇಕೆಂದು ಕಬ್ಬಿಣದ ಸರಳುಗಳಲ್ಲಿ ಬಂಧಿಸಿದರೆ ಎರಡು-ಮೂರು ದಿನಗಳಲ್ಲಿಯೇ ಕೊಳೆಯುತ್ತದೆ.

ಅಳಿಮನದವನಿಗೆ ಶಿವದೀಕ್ಷೆಯ ಕೊಟ್ಟಡೆ ಲಿಂಗ, ವಿಭೂತಿ, ರುದ್ರಾಕ್ಷಿ ಮಾಲೆ ತನುವಿನ ಮೇಲೆ ಶೋಭಿಸುತ್ತದೆಯೇ ಹೊರತು; ತನು ಮತ್ತು ಮನದ ಸ್ವಭಾವ ಹಾಗೆಯೇ ಉಳಿಯುತ್ತದೆ. ತನುವನ್ನು ಆವರಿಸಿದ ಮನಕ್ಕೆ ಶಿವದೀಕ್ಷೆ ನಿಲ್ಲುವುದಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಶಿವನಿಗೆ ಶಿವದೀಕ್ಷೆಯ ಅವಶ್ಯಕತೆ ಇಲ್ಲ.

ಮೇದಾರ ಕೇತಯ್ಯ : ಮನ ಹೀನನ ಮೀಸಲ ಕಾಯ್ದಿರಿಸಿದಂತೆ ಎಂದು ಹೇಳಲು ಕಾರಣವೇನು ಬಸವರಸ.

ಬಸವಣ್ಣ: ತನುವನ್ನು ಆವರಿಸಿದ ಹೀನ ಮನ; ತನುವಿನಲ್ಲಿಯೇ ತನ್ಮಯವಾದ ಅರಿವನ್ನು ಬಳಕೆ ಮಾಡಿಕೊಳ್ಳಲಿಲ್ಲ. ಹೀಗಾಗಿ ಅರಿವೆಂಬ ಶಿವನು ತನುವಿನಲ್ಲಿ ಮೀಸಲಾಗಿ ಹಾಗೆಯೇ ಉಳಿದನು. ಮನಕ್ಕೆ ಬೋಧಿಸಿದ ಶಿವದೀಕ್ಷೆ ತನುವಿಗೆ ಬಳಕೆಯಾದರೆ, ಕಬ್ಬಿಣದ ಸರಪಳಿಯಾಯಿತು. ಕುಂಬಳಕಾಯಿಯಂತೆ ತನು ಕೊಳೆತು ತನ್ನ ಆಯುಷ್ಯವನ್ನು ವ್ಯರ್ಥವಾಗಿ ಕಳೆದುಕೊಂಡಿತು.

ಬಿಬ್ಬಿ ಬಾಚಯ್ಯ : ತಮ್ಮ ಈ ವಚನದಲ್ಲಿ ಎಂತಹ ಬೆಡಗನ್ನು ಬಚ್ಚಿಟ್ಟಿರುವಿರಿ ಬಸವರಸ. ನಮ್ಮ ಶರಣ ಕುಲಕ್ಕೆ ಅರಿವಿನ ಅಮೃತವನ್ನು ಉಣ್ಣಿಸಿ, ಭವರೋಗದ ಬಂಧನವನ್ನು ಬಿಡಿಸಲು ಬಂದ ತಂದೆ ನೀವು. ನಿಮಗೆ ಶರಣು ಶರಣಾರ್ಥಿ ಎಂದು

ಕೈಮುಗಿದರು.

ಬಳ್ಳೇಶ ಮಲ್ಲಯ್ಯ :

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ!
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದಡೆ,
ನಿಚ್ಚ ನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ!
ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟಡೆ,
ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ! ॥ 93 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ತಂದೆ.

ಬಸವಣ್ಣ: ಮನ ಸಗಣಿಯಿದ್ದಂತೆ! ಒಣಗಿ ಬೆರಣಿಯಾಗಿ ಭಸ್ಮವಾಗುವವರೆಗೆ ಸಗಣಿಯ ಗಂಜಳ ಹೋಗುವುದೇ ಇಲ್ಲ. ಇಂತಹ ಮನಕ್ಕೆ ಶಿವದೀಕ್ಷೆಯ ಕೊಟ್ಟರೆ ತನುವಿನ ಹಣೆಗೆ ಅರಿವಿನ ದೀಕ್ಷೆ ವಿಭೂತಿಯಾಗುತ್ತದೆ. ಇಲ್ಲದಿದ್ದರೆ ಸಗಣಿಯಿಂದ ಮಾಡಿದ ಬೆನಕನನ್ನು ಸಂಪಿಗೆಯ ಹೂಗಳಿಂದ ಪೂಜಿಸಿ ಊದಿನಕಡ್ಡಿ ಬೆಳಗಿದಂತೆ! ಸಗಣಿಯ ಗಂಜಳದ ದುರ್ವಾಸನೆ ಸಗಣಿಯನ್ನು ಪೂಜಿಸಿದರೆ ಹೋಗುವುದಿಲ್ಲ.

ಮಣ್ಣಿನ ಪುತ್ಥಳಿಯನ್ನು ದೇವರೆಂದು ತಿಳಿದು; ನಿತ್ಯ-ನಿತ್ಯ ಜಲದಲ್ಲಿ ತೊಳೆದು ಪೂಜಿಸಿದರೂ ಕೂಡಾ; ಅದು ಕೆಸರು ಬಿಡುವುದಲ್ಲದೆ, ಪುತ್ಥಳಿಯ ಅಚ್ಚಿಗೆ ಕಾರಣವಾದ ಜಲ ಬಿಡುವುದಿಲ್ಲ. ಮನ ತನುವನ್ನು ಯಾಮಾರಿಸಿ, ಮಣ್ಣಿನ ಪುತ್ಥಳಿಯೇ ದೇವರೆಂದು ನಂಬಿಸಿ, ತನು ಇರುವವರೆಗೆ ತನುವನ್ನು ಕಾಡಿಸುತ್ತದೆ. ಇಂತಹ ಮನಕ್ಕೆ ಶಿವದೀಕ್ಷೆಯ ಕೊಟ್ಟಡೆ ಕೆಟ್ಟ ಮನವು ಸದ್ಭಕ್ತನು ಆಗಲು ಸಾಧ್ಯವಿಲ್ಲ. ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನನ್ನು ಪೂಜಿಸುವ ಬಯಕೆ ಮನಕ್ಕೆ ಆದರೆ ಸಾಕು. ಸಂಗಯ್ಯ ಕೂಡಲೇ ಮನವನ್ನು ಸದ್ಭಕ್ತನನ್ನಾಗಿ ಮಾಡಿಕೊಳ್ಳುತ್ತಾನೆ. ಆಗ ಮನ ಘನಮನವಾಗುತ್ತದೆ.

ಬಳ್ಳೇಶ ಮಲ್ಲಯ್ಯ : ಸಕಲ ಶರಣರು ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಮರುಳ ಸಿದ್ಧೇಶ್ವರ :

ಕಬ್ಬುನದ ಕೋಡಗವ ಪರುಷ ಮುಟ್ಟಲು,
ಹೊನ್ನಾದಡೇನು ಮತ್ತೇನಾದಡೇನು
ತನ್ನ ಮುನ್ನಿನ ರೂಹ ಬಿಡದನ್ನಕ್ಕ ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕರಿಗಯ್ಯಾ ! ॥ 94 ॥

ಬಸವರಸ, ತಮ್ಮ ಈ ವಚನದ ಬೆಡಗನ್ನು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಕಬ್ಬಿಣದಿಂದ ಮಾಡಿದ ಕೋತಿಗೆ ಪರುಷ ತಾಗಿದರೆ; ಅದು ಚಿನ್ನದ ಕೋತಿಯಾಗುತ್ತದೆ. ಕಬ್ಬಿಣ ಚಿನ್ನವಾದರೇನು? ಅದರ ರೂಪ ಮಾತ್ರ ಕೋತಿಯದೇ ಆಗಿದೆ. ಕಬ್ಬಿಣದ ಕೋತಿಯಾದರೇನು, ಚಿನ್ನದ ಕೋತಿಯಾದರೇನು, ಕೋತಿ ಕೋತಿಯೇ. ಹಾಗೆಯೇ ಕಬ್ಬಿಣ ಚಿನ್ನವಾದರೇನು? ಅದು ಲೋಹವೇ ಹೊರತು ಮತ್ತೇನೂ ಅಲ್ಲ. ಅದರ ಸ್ವಭಾವ ಅಳಿಯದು.

ಮನ ತನುವಿನೊಂದಿಗೆ ದೇವರನ್ನು ಆರಾಧಿಸುತ್ತದೆ. ಅಂದರೆ ಮನ ಮತ್ತು ತನುವಿಗೆ ದೇವರು ಬೇಕೇ ಬೇಕು. ನಿಜ ದೇವರು ಯಾರು ಎಂದು ಮನಕ್ಕೆ ಗೊತ್ತಾಗುವುದಿಲ್ಲ. ತನುವಿಗೂ ಗೊತ್ತಾಗುವುದಿಲ್ಲ. ತನುವಿನಲ್ಲಿಯೇ ತನ್ಮಯವಾದ ಅರಿವಿನ ದೇವರನ್ನು ತನುವೂ ನಂಬುವುದಿಲ್ಲ. ಮನವೂ ನಂಬುವುದಿಲ್ಲ. ಹೀಗೆ ತಾನು ಮಾಡಿದ ದೇವರನ್ನು ನಂಬುವ, ತನು ಮತ್ತು ಮನ, ತನುವನ್ನು ಮಾಡಿ ತನುವಿನಲ್ಲಿಯೇ ಇದ್ದು, ತನು ಮತ್ತು ಮನವನ್ನು ಕೈಹಿಡಿದು ನಡೆಸುವ ದೇವರನ್ನು ನಂಬದ ಡಂಬಕರಿವರು.

ಮನ ತನುವಿನಲ್ಲಿಯೇ ತನ್ಮಯವಾದ ಅರಿವೆಂಬ ಗುರುದೇವನನ್ನು ನಂಬಿ, ಆ ಗುರುದೇವನೇ ತಾನಾದಾಗ, ತನುವಿಗೆ ಹಾಕಿದ ವೇಷ ಕಳಚಿ ಬೀಳುತ್ತದೆ. ಆಗ ತನು ಮನಗಳೆರಡು ಅಪ್ಪಟ ಅಪರಂಜಿಯಂತಾಗುತ್ತದೆ. ಮರ್ಕಟತನವನ್ನು ಕಳೆದುಕೊಂಡ ಮನ ಮಹಾದೇವನಾಗುತ್ತದೆ.

ಮರುಳ ಸಿದ್ಧೇಶ್ವರ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಮೇದಾರ ಕೇತಯ್ಯ :

ತನುವಿನಲೊಂದಿಟ್ಟು ಮನದಲೆರಡಿಟ್ಟಡೆ,
ಬಲ್ಲನೊಲ್ಲನಯ್ಯಾ , ಲಿಂಗವು ಬಲ್ಲನೊಲ್ಲನಯ್ಯಾ.
ಪರಚಿಂತೆಯನೊಲ್ಲನೊಲ್ಲ
ಕೂಡಲಸಂಗಮದೇವ. ॥ 95 ॥

ತಮ್ಮ ಈ ವಚನದ ಬೆಡಗನ್ನು ಬಿಡಿಸಿ ಹೇಳಿ ತಂದೆ.

ಬಸವಣ್ಣ: ಇಡೀ ಜಗತ್ತಿನಲ್ಲಿರುವ ತನುಗಳೆಲ್ಲಾ ಒಂದೇ ಆಗಿವೆ. ತನುವಿನಲ್ಲಿ ತನ್ಮಯವಾದ ಅರಿವನ್ನು ಮನ ಸದ್ಬಳಕೆ ಮಾಡುತ್ತಿಲ್ಲ ಅಷ್ಟೆ. ತನುವಿಗೆ ಅರಿವಿನ ವೇಷ ಹಾಕಿ, ಮನ ತನ್ನ ಆಸೆ-ಆಮಿಷಗಳನ್ನು ತನುವಿನ ಮೂಲಕ ಪೂರೈಸಿಕೊಳ್ಳುತ್ತದೆ.

ಪುಸ್ತಕ ಓದಿ, ಮನ, ತನುವಿಗೆ ಪಂಡಿತ ಶಾಸ್ತ್ರಿಯ ವೇಷ ಹಾಕುತ್ತದೆ. ವೇಷಕ್ಕೂ, ತನುವಿಗೂ, ಮನಕ್ಕೂ ಸಂಬಂಧವೇ ಇರುವುದಿಲ್ಲ. ಉಪನ್ಯಾಸ ಮಾಡುತ್ತಾ ವೇದಿಕೆಯನ್ನು ಮನ ತನ್ನ ವ್ಯವಹಾರಕ್ಕೆ ಬಳಸಿಕೊಳ್ಳುತ್ತದೆ. ಮನ ತನುವಿನೊಂದಿಗೆ ಮಾಡುವ ಉಪನ್ಯಾಸಕ್ಕೂ, ತನುವಿನಲ್ಲಿ ನಡೆಯುವ ಹಾದರಕ್ಕೂ ಸಂಬಂಧವೇ ಇರುವುದಿಲ್ಲ.

ಹಡಪದ ಅಪ್ಪಣ್ಣ : ಬಲ್ಲನೊಲ್ಲನಯ್ಯಾ, ಲಿಂಗವು ಬಲ್ಲನೊಲ್ಲನಯ್ಯಾ, ಎನ್ನಲು ಕಾರಣವೇನು ಬಸವರಸ?

ಬಸವಣ್ಣ : ಮನ ಹೇಳುವ ಉಪನ್ಯಾಸ ಅರಿವಿಗೆ ಗೊತ್ತಿದೆ. ಮನವನ್ನು ಅರಿವೆಂಬ ಗುರುದೇವ ಖಂಡಿಸದೇ ಇರಲಾರ. ಮನ ಮಾಡುವ ಅವಗುಣಗಳನ್ನು ಅರಿವು ಬಲ್ಲದು. ಜಗದ ತನುಗಳೆಲ್ಲ ಹೀಗೆಯೇ ಇವೆ. ಮನ ಮತ್ತು ಅರಿವಿನ ಜುಗಲ್‌ಬಂದಿ ತನುವಿನಲ್ಲಿ ನಡೆದಿದೆ. ಮನ ಪುಸ್ತಕದಲ್ಲಿರುವ ಅರಿವನ್ನು ತನುವಿನ ಮೂಲಕ ಹೇಳಬಲ್ಲದು. ತನ್ನಲ್ಲಿದ್ದ ಅರಿವಿನ ಪಾಠವನ್ನು ತನು ಮತ್ತು ಮನ ಆಚರಿಸಲು ಒಲ್ಲವು. ಸದಾ ಪರರ ಚಿಂತೆಯೇ ಮನಕ್ಕೆ. ತನ್ನ ಚಿಂತೆಯನ್ನು ಬಿಟ್ಟು ಪರರ ಚಿಂತೆಯನ್ನು ಮಾಡುವ ಮನವನ್ನು, ಅಂಗದಲ್ಲಿಯೇ ಸಂಗಮವಾದ ಅರಿವಿನ ಸಂಗಯ್ಯನು ಒಲ್ಲನು ಒಲ್ಲನು. ಮನದಲ್ಲಿ ಆಸೆ–ಆಮಿಷಗಳನ್ನಿಟ್ಟುಕೊಂಡ ಮನವನ್ನು ಆತ ಬಲ್ಲನು. ಅಂತಹ ಮನವನ್ನು ಅಪ್ಪಿಕೊಳ್ಳಲು ಆತ ಒಲ್ಲನು.

ಕಾಳವ್ವೆ : ಈ ವಚನದಲ್ಲಿ ಅದೆಷ್ಟು ರಹಸ್ಯ ಅಡಗಿಸಿರುವಿರಿ ತಂದೆ. ನಮ್ಮೆಲ್ಲರಿಗೂ ತಿಳಿಯುವಂತೆ ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಬಸವಣ್ಣ: ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಶರಣು ಹೇಳಿ, ಮಂಗಲಗೊಳಿಸಿದರು.

ಶರಣರು ಭಕ್ತಿರಸವನ್ನು ಮೇದ ಅರಿವಿನ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

೨೮

ಸತ್ಸಂಗಕ್ಕಾಗಿ ಕಾದು ಕುಳಿತ ಬಸವಣ್ಣನವರಿಗೆ ಶರಣರು ಕೈಮುಗಿದು ಕುಳಿತುಕೊಳ್ಳುತ್ತಾರೆ.

ಮಧುವಯ್ಯ :

ಒಳಗೆ ಕುಟಿಲ, ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯ ಲಿಂಗವು.
ಅವರು ಸತ್ಪಥಕ್ಕೆ ಸಲ್ಲರು ಸಲ್ಲರಯ್ಯಾ !
ಒಳಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬೀಸಾಡುವನವರ
ಜಗದೀಶ ಕೂಡಲಸಂಗಮದೇವಾ. ॥ 96 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ತಿಳಿಸಿ ಹೇಳಿ ತಂದೆ.

ಬಸವಣ್ಣ : ಮನ ಬಲು ಕುಟಿಲ. ತನುವಿಗೆ ವಿನಯದ ವೇಷ ಹಾಕಿ; ಒಳಗೆ ಹಾದರದ ಕೆಲಸ ಮಾಡುತ್ತದೆ. ಮನದ ಹಾದರವನ್ನು ಅರಿವೆಂಬ ಗುರುದೇವ ಬಲ್ಲನು. ಮನ ತನುವಿಗೆ ಹಾಕಿದ ಸೋಗು ಸತ್ಪಥಕ್ಕೆ ಸಲ್ಲದು ಸಲ್ಲದು.

ಮಧುವಯ್ಯ : ಒಳ ಹೊರಗೊಂದಾಗದವರಿಗೆ ಅಳಿಯಾಸೆ ದೋರಿ ಬೀಸಾಡುವನವರ ಜಗದೀಶ ಕೂಡಲ ಸಂಗಮದೇವಾ ಎಂದು ಹೇಳಲು ಕಾರಣವೇನು ಬಸವರಸ?

ಬಸವಣ್ಣ : ಒಳ-ಹೊರಗೊಂದಾಗದ ಮನಕ್ಕೆ ಅಳಿ ಆಸೆಯೇ ಗತಿ. ಮನ ದುಗ್ಗಾಣಿಯ ಲೋಭಕ್ಕಾಗಿ ಕೋಟಿ ಲಾಭವ ಕಳೆದುಕೊಳ್ಳುತ್ತದೆ. ತನುವಿಗೆ ಹಾಕಿದ ವಿನಯದ ವೇಷ, ಮನದ ಕುಟಿಲತನಕ್ಕೆ ಸರಿದೂಗದೆ, ಒಂದಿಲ್ಲ ಒಂದು ದಿನ ಮುಖವಾಡ ಕಳಚಿ ಬೀಳುತ್ತದೆ. ಮತ್ತೆ-ಮತ್ತೆ ಮನ ಮತ್ತು ತನುವಿನ ಮೈದಡವಿ ತನ್ನಂತೆಯೇ ಮಾಡಿಕೊಳ್ಳುವ ಜಗದೀಶನು ಕುಟಿಲತನದ ಮನ ಹೇಳಿದಂತೆ ಕೇಳುವ ತನುವನ್ನು ಒಮ್ಮೆ ಬೀಸಾಡದೆ ಬಿಡನು.

ಒಳಹೊರಗೊಂದಾದ ಮನದ ತನುವಿಗೆ ಕುಟಿಲತನವಿಲ್ಲ. ಭಕ್ತನ ವೇಷವಿಲ್ಲ, ಗುರುವಿನ ವೇಷವೂ ಇಲ್ಲ. ಒಳ-ಹೊರಗೂ ವಿನಯ. ಆಸೆ-ಆಮಿಷಗಳಿಲ್ಲದ ತನು ಸತ್ಪಥಕ್ಕೆ ಸಲ್ಲುವುದು.

ಮಧುವಯ್ಯ : ಕೂಡಲೇ ಅರಿವಿಗೆ ಹೋಗುವ ಸೂತ್ರವನ್ನು ನಮಗೆ ದಯಪಾಲಿಸಿದಿರಿ ತಂದೆ. ತಮಗೆ ಶರಣು ಶರಣಾರ್ಥಿ.

ಕೊಟ್ಟಣದ ಸೋಮಮ್ಮ :

> ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೊ?
> ಹೊಸ್ತಿಲೊಳಗೆ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
> ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ?
> ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
> ಮನೆಯೊಳಗೆ ಮನೆಯೊಡೆಯನಿಲ್ಲ. ಕೂಡಲಸಂಗಮದೇವಾ! || 97 ||

ತಮ್ಮ ಈ ವಚನದ ಬೆಡಗು ವಿವರಿಸಿ ಹೇಳಿ ತಂದೆ.

ಬಸವಣ್ಣ: ಒಡಲೊಳಗೆ ಅರಿವಿನ ಒಡೆಯನಿದ್ದಾನೆ. ಆತ ಒಡಲಿಂಗೆ ಆಧಾರವಾಗಿದ್ದಾನೆ. ಒಡಲು ಸೋಂಕದೆ ಒಡಲನ್ನು ಬೆಳಗುತ್ತಿದ್ದಾನೆ. ಬೆಳಗಿಂಗೆ ಬೆಳಗಾಗಿ ಬೆಳಗುತ್ತಿದ್ದಾನೆ. ಎಂದು ಅಲ್ಲಮಪ್ರಭುಗಳು ಅರಿವಿಗೆ ಹೋಗುವ ಸೂತ್ರವೊಂದನ್ನು, ಮನುಕುಲಕ್ಕೆ ದಯಪಾಲಿಸಿದ್ದಾರೆ. ಒಡೆಯನಿದ್ದ ಒಡಲೊಳಗೆ, ಮನದಿಂದಾಗಿ ಅಜ್ಞಾನದ ಹುಲ್ಲು ಹುಟ್ಟಿದೆ. ಕಸ ತುಂಬಿದೆ. ಹುಸಿ ವಿಷಯ ತುಂಬಿದೆ. ಹೀಗಿದ್ದ ಮೇಲೆ ಮನೆಯೊಳಗೆ ಮನೆಯೊಡೆಯನು ಇದ್ದು ಇಲ್ಲದಂತೆಯೇ ಸರಿ.

ಒಂದು ಒಡಲಿನ ಸ್ವಭಾವವಿದ್ದಂತೆ; ಮತ್ತೊಂದು ಒಡಲಿನ ಸ್ವಭಾವವಿಲ್ಲ. ಒಡಲಲ್ಲಿರುವ ಒಡೆಯನು ಒಬ್ಬನೇ. ಆ ಒಡೆಯನಿದ್ದ ಮನೆಯಲ್ಲಿ ಮನವೆಂಬ ಬಾಡಿಗೆದಾರನು ಕೂಡಾ ಇದ್ದಾನೆ. ಬಾಡಿಗೆದಾರನಿಗೂ ಒಡೆಯನಿಗ ೂ ಅಜಗಜಾಂತರ ವ್ಯತ್ಯಾಸ. ಮನೆಯ ಒಡೆಯನನ್ನೇ ಹಿಂದಕ್ಕೆ ತಳ್ಳಿ, ಆತನಿರುವ ಮನೆಯಲ್ಲಿ ವಿಷಯದ ಕಸ ತುಂಬಿದ್ದಾನೆ. ಬಾಡಿಗೆದಾರನದೇ ಅಧಿಕಾರ. ಒಡಲು ಒಂಭತ್ತು ಅಂಕಣದ ಚಂದದ ಮನೆ. ಈ ಮನೆಗೆ ತಕ್ಕಂತೆ ಸುಂದರವಾದ ಒಡೆಯ. ಈ ಒಡೆಯನ ಅರಿವಿನ ಬೆಳಕಿನಿಂದ ಹುಟ್ಟಿದ ಮನ, ಮನೆ ತುಂಬ ಎಲ್ಲಿ ನೋಡಿದರೂ ಕಸ; ಕತ್ತಲು. ಒಡೆಯನಿದ್ದ ಮನೆಯ ಹೊಸ್ತಿಲನ್ನು ಬಾಗಿಲನ್ನು ಅಷ್ಟೇ ಏಕೆ ಇಡೀ ಒಂಭತ್ತು ಅಂಕಣದ ಮನೆಯನ್ನು ಬಾಡಿಗೆದಾರ ಮನವೆಂಬ ಕತ್ತಲೇ ಆವರಿಸಿದೆ. ಕಣ್ಣಿನಲ್ಲಿ ಅಜ್ಞಾನದ ಕಸ ಬಿದ್ದು ಕಾಣದಂತೆ ಮಾಡಿದೆ. ಕಿವಿ ಕೇಳದಂತೆ, ನಾಲಿಗೆ ರುಚಿಸದಂತೆ, ಮೂಗು ಮೂಸಿಸದಂತೆ, ಚರ್ಮ ಸ್ಪರ್ಶಿಸದಂತೆ; ಲಿಂಗವೇ ಆಗಬೇಕಾದ ಸರ್ವಾಂಗದಲ್ಲಿ ಹುಸಿಯ ಕಸ ತುಂಬಿ; ವಿಷಯಾದಿ ವಸ್ತುಗಳನ್ನು ನೋಡುತ್ತಾ ಕ್ಷಣಕ್ಷಣಕ್ಕೂ ಉದ್ರೇಕಗೊಳ್ಳುತ್ತದೆ. ಬೆಳಕಿನ ಮನೆಯ ತುಂಬ ಮನವೆಂಬ ಕತ್ತಲ ಕಸವೇ ಆವರಿಸಿದೆ. ಒಡಲಿನಲ್ಲಿ ಅರಿವಿನ ಒಡೆಯನೂ ಇದ್ದಾನೆ. ಬಾಡಿಗೆದಾರನೆಂಬ ಕತ್ತಲ ಮನವೂ ಇದೆ. ಸದಾ ಅರಿವಿನಿಂದ ಬೆಳಗಬೇಕಾದ ಒಡಲಿನಲ್ಲಿ ಮನವೆಂಬ ಕಗ್ಗತ್ತಲು ಆವರಿಸಿದೆ. ಒಡಲೊಡೆಯ ಒಡಲಿನಲ್ಲಿ ತೆಪ್ಪಗೆ ಮಲಗಿದ್ದಾನೆ. ಮನವೆಂಬ ಕತ್ತಲಿಗೆ ಬೆಳಕಾಗಬೇಕು ಎಂಬ ಬಯಕೆಯಾಗುವವರೆಗೆ ಕತ್ತಲದೇ ಕಾರುಬಾರು!

ಕೊಟ್ಟಣದ ಸೋಮಮ್ಮ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಸತ್ಯಕ್ಕ :

ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ?
ಕೋಡುಗ ಬಲ್ಲುದೆ ಸೆಳೆಮಂಚದ ಸುಖವ?
ಕಾಗೆ ನಂದನವನದೊಳಗಿದ್ದಡೇನು,
ಕೋಗಿಲೆಯಾಗಬಲ್ಲುದೆ ಹೇಳಾ.
ಕೊಳನ ತಡಿಯಲೊಂದು ಹೊರಸು ಕುಳ್ಳಿರ್ದಡೇನು
ಕಳಹಂಸಿಯಾಗಬಲ್ಲುದೆ, ಕೂಡಲಸಂಗಮದೇವಾ? ॥ 98 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಹೆಂಚು ಅವಲಕ್ಕಿಯ ಸುಖವನ್ನು ಅರಿಯದು. ಮರ್ಕಟ ತೂಗುಮಣೆಯ ಸುಖವನ್ನು ಅರಿಯದು. ಕಾಗೆ ನಂದನವನದಲ್ಲಿದ್ದರೇನು ಕೋಗಿಲೆಯಂತೆ ಕೂಗಲು ಅರಿಯದು. ಕೊಳದ ದಡದಲ್ಲಿ ಬಕ ಕುಳಿತಿದ್ದರೇನು ಅದು ಹಂಸನಾಗಲು ಅರಿಯದು. ಹೀಗೆ ಕಾಯದಲ್ಲಿ ಅರಿವು ಮತ್ತು ಮನ ಸಂಗಮವಾಗಿದ್ದರೂ ಕಾಯ ಮತ್ತು ಮನ ಅರಿವಿನ ಸಂಗಯ್ಯನನ್ನು ಕಾಣಲು ಅರಿಯವು.

ಅರಿವಿನ ಸುಖ; ಹಂಚಿನ ಮೇಲೆ ಹುರಿದು ತಿನ್ನುವ ಅವಲಕ್ಕಿಯ ಸುಖ. ಮರ್ಕಟ ಮಾನವನಾಗಿ, ತೂಗುಮಣೆಯ ಮೇಲೆ ಕೂತು ತೂಗಿಕೊಂಡ ಸುಖ. ಹೀಗೆ ಮನ ಶಿವೆಯಾಗಿ ಅರಿವಿನ ಶಿವನ ತೊಡೆಯೇರಿ ಕಾಯವನ್ನೇ ಕೈಲಾಸ ಮಾಡಿಕೊಂಡು ಆ ಕಾಯದಲ್ಲಿಯೇ ಪವಡಿಸಿದ ಅರಿವಿನ ಪರಮಸುಖ.

ಕಾಳವ್ವೆ : ಈ ವಚನದಲ್ಲಿ ಅದೆಷ್ಟು ರಹಸ್ಯ ಅಡಗಿಸಿರುವಿರಿ ತಂದೆ. ನಮ್ಮೆಲ್ಲರಿಗೂ ತಿಳಿಯುವಂತೆ ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಬಸವಣ್ಣ: ಇಂದಿಗೆ ಇಷ್ಟು ಸಾಕು ಎಂದು ಸಭೆಗೆ ಶರಣು ಹೇಳಿ, ಮಂಗಲಗೊಳಿಸಿದರು.

ಶರಣರು ಭಕ್ತಿರಸವನ್ನು ಮೇದ ಅರಿವಿನ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

೨೯

ಸತ್ಸಂಗಕ್ಕಾಗಿ ಕಾದು ಕುಳಿತ ಬಸವಣ್ಣನವರಿಗೆ ಶರಣರು ಕೈಮುಗಿದು ಕುಳಿತುಕೊಳ್ಳುತ್ತಾರೆ.

ಸೂಳೆಸಂಕವ್ವೆ :

ಎನಿಸುಕಾಲ ಕಲ್ಲು ನೀರೊಳಗಿರ್ದಡೇನು,
ನೆನೆದು ಮೃದುವಾಗಬಲ್ಲುದೆ?
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ ,
ಮನದಲ್ಲಿ ದೃಢವಿಲ್ಲದನ್ನಕ್ಕ ?
ನಿಧಾನವ ಕಾಯ್ದಿರ್ದ ಬೆಂತರನಂತೆ
ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ. ॥ 99 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ: ಜಲದಿಂದ ಆದ ಮುತ್ತು, ಮತ್ತೆ ಜಲವಾಗದೆ ಥಳಥಳನೆ ಹೊಳೆಯುತ್ತದೆ. ಜಲದಿಂದಾದ ಕಲ್ಲು, ಜಲದಲ್ಲಿದ್ದರೂ ಅದು ಮೃದುವಾಗಲು ಅರಿಯದು. ಆ ಕಲ್ಲು ಕಟೆದು ದೇವರ ಮಾಡಿ ಅನಂತ ಕಾಲದವರೆಗೂ ಜಲದಿಂದಲೇ ಅಭಿಷೇಕ ಮಾಡಿ ಪೂಜಿಸಿದರೇನು? ದೇವರು ಪ್ರತ್ಯಕ್ಷನಾಗುತ್ತಾನೆಯೇ? ಸಂಪತ್ತು ಗಳಿಕೆ ಮಾಡಿದ ಜಿಪುಣನು ಭೋಗಿಸಲು ಅರಿಯ. ಅದರಂತೆಯೇ ವಿಧಿ ಮನಕ್ಕೆ ಆಗಿದೆ.

ತನುವಿಗೂ, ಅರಿವಿಗೂ, ಮನಕ್ಕೂ, ಅಂತರವಿಲ್ಲ. ಬೆಳಕಿನಿಂದ ಉಂಟಾದ ನೆರಳೇ ಮನ. ಆ ನೆರಳು ಮತ್ತೆ ಬೆಳಕಾಗಲು ಅರಿಯದು. ಕತ್ತಲು ಎಷ್ಟು ಕಾಲ ದೀಪದ ಕೆಳಗಿದ್ದರೇನು ? ದೀಪದಿಂದಲೇ ನೆರಳು ಸೃಷ್ಟಿಯಾದರೇನು? ನೆರಳು ದೀಪವಾಗಬೇಕಲ್ಲ! ಅರಿವಿನ ಬೆಳಕಿನಿಂದಲೇ ಸೃಷ್ಟಿಯಾದ ಮನವೆಂಬ ನೆರಳು, ಪುನಃ ಬೆಳಕನ್ನು ಬಳಸಲರಿಯದು. ಒಡಲೂ ಇದೆ, ಒಡಲ ಬೆಳಗುವ ಒಡಲೊಡೆಯನು ಒಡಲಲ್ಲಿಯೇ ಇದ್ದಾನೆ. ಇದನ್ನು ಅರಿಯದ ಕತ್ತಲ ಮನವು ಒಡಲನ್ನು ಆವರಿಸಿದೆ. ಇದು ವಿಧಿಯ ವಿಚಿತ್ರ ; ಒಡಲೊಡೆಯ ಅರಿವಿನ ಸಂಗಯ್ಯನ ಲೀಲೆ.

ಕೊಟ್ಟಣದ ಸೋಮಮ್ಮ : ತಮ್ಮ ವಚನದ ರಹಸ್ಯವನ್ನು ವಿವರಿಸಿದ ತಮಗೆ ಶರಣು ಶರಣಾರ್ಥಿ.

ಲಿಂಗಮ್ಮ :

> ಸಂತವಿದ್ದ ಮನೆಗೆ ಕೊಂತವ ತಂದಂತೆ
> ಇದನೆಂತು ಸಂತೈಸುವೆನು?
> ಸಂತೆಯ ಗುಡಿಲ ಸೂಳೆಗೆ ಕೊಂತವಳವಡುವುದೆ?
> ಕೂಡಲಸಂಗಮದೇವರ ಮಹತ್ವ
> ಆರಿಗೆಯೂ ಅಳವಡದು ! ॥ 100 ॥

ತಮ್ಮ ಈ ವಚನದ ಬೆಡಗನ್ನು ದಯವಿಟ್ಟು ವಿವರಿಸಿ ಹೇಳಿ ಎನ್ನೊಡೆಯಾ.

ಬಸವಣ್ಣ : ಅರಸನು ವಾಸ ಮಾಡಿದ ಮನೆಗೆ ಸಾಲವ ತಂದಂತೆ! ಸಂತೆಯ ಗುಡಿಸಲೊಳಗೆ ವಾಸ ಮಾಡಿದ ಸೂಳೆಗೆ ಸಾಲವ ಕೊಟ್ಟಂತೆ! ಇದನೆಂತು ಸಂತೈಸುವುದು ? ಅರಸನಿಗೆ ಸಾಲ ಬೇಕಿಲ್ಲ ; ಸೂಳೆಗೆ ಸಾಲ ಕೊಟ್ಟರೆ ಮರಳಿ ಬರುವಂತಿಲ್ಲ.

ದೇಹ ಮತ್ತು ದೇಹದ ಅವಯವಗಳು ಒಂದೆ. ಆದರೂ ಒಬ್ಬ ಶ್ರೀಮಂತ ಮತ್ತೊಬ್ಬ ಬಡವ. ಹೆಣ್ಣು-ಗಂಡು, ಜಾತಿ-ಮತ, ಧರ್ಮ-ಪಂಥವೆಂಬ ಅಜ್ಞಾನ ; ಪಂಡಿತ ಪಾಮರ ಜ್ಞಾನಿಯೆಂಬ ಪಟ್ಟ . ಶರಣ, ದಾಸ, ಬುದ್ಧ, ಜಿನ, ಸಂತನೆಂಬ ಹೆಸರಲ್ಲದ ಹೆಸರು. ಕಳ್ಳ, ಭ್ರಷ್ಟ, ಲಂಚಕೋರ, ವೇಷ್ಯೆ , ವಿಟ ಎನ್ನುವ ಹಣೆಪಟ್ಟಿ ಕೆಲ ದೇಹಗಳಿಗೆ. ಹೀಗೇಕೆ ಎಂದು ವಿಚಾರಿಸಲು ಹೋದರೆ ಖಂಡಿತ ತನಗೆ ತಾನೇ ತಿಳಿಯುತ್ತದೆ.

ದೇಹವೊಂದೇ. ದೇಹವನ್ನು ಆವರಿಸಿದ ಮನ ಒಂದೇ. ದೇಹದಲ್ಲಿ ಸಂಗಮವಾದ ಅರಿವು ಕೂಡಾ ಒಂದೇ. ದೇಹದಲ್ಲಿರುವ ಅರಿವು ಸಾಮಾನ್ಯವಲ್ಲ. ಆತ ಅರಸ, ಮಹಾಜ್ಞಾನಿ; ಶರಣ, ದಾಸ, ಬುದ್ಧ , ಜಿನ, ಸಂತನೂ ಹೌದು. ಆತ ನವನಿಧಿಗಳ ಕುಬೇರನೂ ಹೌದು. ಆತನಲ್ಲಿರುವ ಅರಿವಿನ ಸಂಪತ್ತು ಅಪಾರ. ಆತನಿಂದಲೇ ವೇದ, ಆಗಮ, ಉಪನಿಷತ್ತುಗಳು, ಪುರಾಣಗಳು, ಪುಸ್ತಕಗಳ ರೂಪದಲ್ಲಿ ಹೊರಬಂದಿವೆ. ಈತ ಜಗದಗಲ ಮುಗಿಲಗಲ; ಈತನ ಪಾದಗಳು ಪಾತಾಳದಿಂದಲೂ ಅತ್ತತ್ತ . ಈತನ ಶ್ರೀಮುಕುಟ ಬ್ರಹ್ಮಾಂಡದಿಂದಲೂ ಅತ್ತತ್ತ . ಗಮನಕ್ಕೂ ಗೋಚರಕ್ಕೂ ಪ್ರಮಾಣಕ್ಕೂ ನಿಲುಕದಾತನಿಗೆ ಯಾರು ಸಾಲ ಕೊಡಬೇಕು? ಈತನಿಗೆ ಯಾರು ಬೋಧಿಸಬೇಕು. ಈತನ ವಾಸಸ್ಥಾನ ಕಾಯವೆಂಬ ಕೈಲಾಸ! ಕಾಯದ ಶ್ರೀಮಂತ ಈತ. ಪಶುಪತಿ; ಒಡಲೊಡೆಯ; ಮಹಾದೇವ ; ಸದಾಶಿವ! ಸದ್ಗುರು! ಸಾಕ್ಷಾತ್ ಪರಬ್ರಹ್ಮನೆಂದು ಈತನನ್ನು ಪುರಾತನರು ಕರೆದಿದ್ದಾರೆ. ಈತನಿಗೆ ಯಾರಾದರೂ ಸಾಲ ಕೊಡಬಹುದೆ.

ಈತನನ್ನು ತಿಳಿಯದೆ ಕಾಯವನ್ನು ಆವರಿಸಿದ ಮನವೆಂಬ ಸೂಳೆಗೆ ಸಾಲ ಕೊಟ್ಟರೆ ಸದ್ಬಳಕೆಯಾಗುವುದೆ? ಕೊಟ್ಟ ಸಾಲ ಹಿಂತಿರುಗಲು ಸಾಧ್ಯವೇ?

ಸೂಳೆ ಎಂದರೆ ಹೆಣ್ಣಲ್ಲ. ಗಂಡು-ಹೆಣ್ಣು ಎನ್ನುವ ದೇಹವನ್ನು ಆವರಿಸಿದ ಮನ! ದೇಹದಲ್ಲಿ ವಾಸಮಾಡಿದ ಅರಿವೆಂಬ ಅರಸನೇ ಮಹಾಪುರುಷ! ಅರಿವಿಗೆ

ಬೋಧೆ ಬೇಕಿಲ್ಲ, ಮನಕ್ಕೆ ಬೋಧೆ ನಿಲ್ಲುವುದಿಲ್ಲ! ಸಕಲ ವೇದ, ಶಾಸ್ತ್ರ, ಆಗಮ, ಉಪನಿಷತ್ತುಗಳನ್ನು ಓದಿ, ಸಾಲದ ರೂಪದಲ್ಲಿ ತನುವಿನಲ್ಲಿ ಸಂಗ್ರಹ ಮಾಡಿಕೊಂಡು, ಮನ ಸೂಳೆಯಂತೆ ತನುವಿಗೆ ಪಂಡಿತ ಶಾಸ್ತ್ರಿಯ ವೇಷ ಹಾಕುತ್ತದೆ. ಕೈಲಾಸವೇ ಆಗಬೇಕಾದ ಕಾಯವನ್ನು ಜಾತಿ, ಮತ, ಪಂಥ, ಧರ್ಮಗಳಿಂದ ಸೀಳುತ್ತದೆ. ಹೆಣ್ಣು-ಗಂಡು ಎನ್ನುವ, ಶ್ರೀಮಂತ-ಬಡವ ಎನ್ನುವ ಬೇಧವನ್ನು ಕಲ್ಪಿಸಿದೆ. ಹೀಗೆ ಮನ ಮಾಡುವುದೆಲ್ಲಾ ಸಂತೆಯ ವ್ಯವಹಾರ. ದೇಹದಲ್ಲಿ ಅರಿವಿನ ಅರಸನೆಂಬ ಸರದಾರನೂ ಇದ್ದಾನೆ. ಮನವೆಂಬ ಸಂತೆಯ ಸೂಳೆಯೂ ಇದ್ದಾಳೆ. ಈಕೆ ಸನ್ನೆ ಮಾಡಿ ಹೊರಗಿನ ವಿಷಯಗಳೊಂದಿಗೆ ಬೆರೆಯುವುದನ್ನು ಬಿಟ್ಟು, ಅರಸನೊಂದಿಗೆ ಕೂಡಿದರೆ ಅರಸಿಯಾಗುತ್ತಾಳೆ. ಅರಿವಿನ ಅರಸ ಮನದ ಸೂಳೆತನವನ್ನು ಮಾಣಿಸಿ; ತನ್ನ ಪಟ್ಟದರಸಿಯನ್ನಾಗಿ ಮಾಡಿಕೊಳ್ಳುತ್ತಾನೆ.

ಕಾಳವ್ವೆ : ಈ ವಚನದಲ್ಲಿ ಅದೆಷ್ಟು ರಹಸ್ಯ ಅಡಗಿಸಿರುವಿರಿ ತಂದೆ. ನಮ್ಮೆಲ್ಲರಿಗೂ ತಿಳಿಯುವಂತೆ ಬಿಡಿಸಿ ಹೇಳಿದ ತಮಗೆ ಶರಣು ಶರಣಾರ್ಥಿ.

ಬಸವಣ್ಣ : ಸಭೆಗೆ ಶರಣು ಹೇಳಿ, ಮಂಗಲಗೊಳಿಸಿದರು.

ಶರಣರು ಭಕ್ತಿರಸವನ್ನು ಮೇದ ಅರಿವಿನ ಅಮಲಿನಲ್ಲಿ ತೇಲಾಡುತ್ತಾ ತಮ್ಮ ತಮ್ಮ ಮನೆಗೆ ನಡೆದರು.

□

ಲೇಖಕರ ಕೃತಿಗಳು

01. ಬೆಳಕಿನ ಬಳ್ಳಿ –2011
02. ಬಯಲ ಬೀಜಗಳು –2012
03. ರೂಹಿಲ್ಲದ ಚೆಲುವೆ –2012
04. ಜ್ಞಾನಭಂಡಾರಿ ಬಸವಣ್ಣ –2018
05. ಅಂಬಿಗರ ಚೌಡಯ್ಯಗಳ ವಚನಾನುಭವ –2019
06. ಹಡಪದ ಅಪ್ಪಣ್ಣಗಳ ವಚನಾನುಭವ –2019
07. ಸಿದ್ಧರಾಮ ಶಿವಯೋಗಿಗಳ ವಚನಾನುಭವ (ಭಾಗ-1) –2019
08. ಸಿದ್ಧರಾಮ ಶಿವಯೋಗಿಗಳ ವಚನಾನುಭವ (ಭಾಗ-2) –2022
09. ಅರಿವೆ ಗುರು (ಸತ್ಯಸಂವಾದ) –2023
10. 12th Century's Enlightenment Technic and Revolution (ಅರಿವೆ ಗುರು ಇಂಗ್ಲಿಷ್ ಅನುವಾದ) –2023
11. ಬಸವಗೀತೆ –2024

ಸಂಪಾದಿತ ಕೃತಿಗಳು

01. ತೆರಹಿಲ್ಲದಭವ ನುಡಿಹೆಡೆಗೊಡನು –2011
02. ಗಗನ ಸಿದ್ಧಾಂತ –2015
03. ಗುರುಕನ್ಯೆ –2017
04. ಅರಿತಕಿರಣ-ಕಲ್ಪಿತವೃಕ್ಷ-ಕಲ್ಪಿತಕೃಪೆ (ಮೂರು ಪುಸ್ತಕಗಳ ಸಂಗಮ) –2022
05. ಉತ್ತರ ಸಿದ್ಧಾಂತ –2023
06. ನಿಜ ಸುಖಿ –2023
07. ಅಂತರಾತ್ಮ ಬೋಧೆ –2023
08. ಕರುಣಾಜಲ –2023
09. ಸ್ವರೂಪ ಸಿದ್ಧಿ –2023



ಏಸುಕ್ರಿಸ್ತ, ಕೃಷ್ಣ, ಮಹ್ಮದ್ ಪೈಗಂಬರರು ಮಹಾಜ್ಞಾನಿಗಳು. ಅಂಗದಲ್ಲಿಯೇ ಸಂಗಮವಾದ ಮಹಾಜ್ಞಾನಕ್ಕೆ ಏಸುಕ್ರಿಸ್ತ (ದೇವರು) ಗಾಡ್ ಎಂದು ಕರೆದರೆ; ಮಹ್ಮದ್ ಪೈಗಂಬರರು ಅಲ್ಲಾ (ದೇವರು)ಎಂದು ಕರೆದರು. ಕೃಷ್ಣ, ತಾನು ವಿರಾಟ ಸ್ವರೂಪಿ ಎಂದು, ಅರ್ಜುನನಿಗೆ ತೋರಿದ. ದೇಹದಲ್ಲಿಯೇ ಇದ್ದ ಅರಿವಿನ ದೇವರು ದೇಹ ಮತ್ತು ಮನಕ್ಕೆ ನಿರಂತರವಾಗಿ ಬೋಧಿಸುತ್ತಾನೆ. ಈತ ನಿರಾಕಾರ, ವಿರಾಟಸ್ವರೂಪಿ, ದೇವರಿದ್ದ ದೇಹ ಸಾಕಾರ, ದೇಹವನ್ನು ಆವರಿಸಿದ ಮನ ನಿರಾಕಾರ. ದೇವರಿದ್ದ ದೇಹವನ್ನು ಮನ ಸೈತಾನನಾಗಿ ಕಾಡುತ್ತದೆ.

ದೇಹದಲ್ಲಿಯೇ ಇದ್ದ ದೇವರನ್ನು ಜ್ಞಾನಿಗಳು ದೇಹ ಮತ್ತು ಮನದ ಮೂಲಕ ದರ್ಶನ ಮಾಡಿಕೊಂಡರು. ಭೂಮಿಯ ಮೇಲೆ ವಾಸಮಾಡುತ್ತಿರುವ ಸಕಲ ದೇಹಗಳು ದೇಹದಲ್ಲಿಯೇ ಇದ್ದ ಜ್ಞಾನದೇವರನ್ನು ದರ್ಶನ ಮಾಡಿಕೊಳ್ಳುವ ಸೂತ್ರಗಳನ್ನು ಖುರಾನ್ ಬೈಬಲ್ ಭಗವದ್ಗೀತೆಗಳ ಮೂಲಕ ದಾಖಲಿಸಿದರು.

ಖುರಾನ್, ಬೈಬಲ್, ಭಗವದ್ಗೀತೆಗಳನ್ನು ಮನ ದೇಹದ ಮೂಲಕ ಉರು ಹೊಡೆದು ದೇಹದಲ್ಲಿ ಸಂಗ್ರಹ ಮಾಡಿಕೊಂಡಿದೆ. ಭಗವದ್ಗೀತೆ, ಬೈಬಲ್, ಖುರಾನ್ ಮುಂತಾದ ಅರಿವಿನ ಗ್ರಂಥಗಳು ಮನ ಮತ್ತು ದೇಹಕ್ಕೆ ಬದುಕುವ ದಾರಿಗಳಾಗಿ ಮಾರ್ಪಟ್ಟಿವೆ. ದೇಹದಲ್ಲಿಯೇ ಸಂಗಮವಾದ ಅರಿವಿನ ದೇವರು ಮನ ಮತ್ತು ದೇಹಕ್ಕೆ ಬಳಕೆಯಾಗದೆ ದೇಹದಲ್ಲಿಯೇ ಉಳಿದಿದ್ದಾನೆ.

ಹಾಗಾದರೆ ಪುಸ್ತಕ ಓದುವ ಓದುಗರು ನಾವೇನು ಮಾಡಬೇಕೆಂದು ಕೇಳಬಹುದು. ಬರಹ ರೂಪದಲ್ಲಿ ಮೂಡಿದ ಬಸವಗೀತೆಯನ್ನು ದಯವಿಟ್ಟು ಓದಿ. ಯುದ್ಧದ ಸಂದರ್ಭದಲ್ಲಿ ಅರ್ಜುನ ಕೇಳಿದ ಪ್ರಶ್ನೆಗೆ ಕ್ರಿಷ್ಣ ವಿರಾಟಸ್ವರೂಪಿಯಾಗಿ ಉತ್ತರ ಕೊಟ್ಟ.

ಬಸವಣ್ಣನವರು ಪ್ರತಿನಿತ್ಯ ಮಾಡುವ ಸತ್ಸಂಗದಲ್ಲಿ ಸತ್ಸಂಗಕ್ಕಾಗಿ ಆಗಮಿಸಿದ ಶರಣರನ್ನೇ ವಿರಾಟಸ್ವರೂಪಿಯಾನ್ನಾಗಿ ನೋಡಿದರು! ಅವರಲ್ಲಿರುವ ಮಹಾಜ್ಞಾನವೆಂಬ ವಿರಾಟಸ್ವರೂಪಿಯನ್ನು ಅವರಿಗೇ ತೋರಿದರು. ಆ ವಿರಾಟ ಸ್ವರೂಪಕ್ಕೆ ತಾವು ಕಿರಿಯರಾಗಿ "ಎನಗಿಂತ ಕಿರಿಯರಿಲ್ಲ" ಎಂದು ಹಣೆಮಣಿದು ಶರಣಾಗತರಾಗಿ ಶರಣು ಹೋದರು.

ಪ್ರತಿ ಅಂಗದಲ್ಲಿಯೂ ಸಂಗಮವಾದ ಅರಿವಿನ ಲಿಂಗಕ್ಕೆ ಅಂಗವನ್ನು ಆವರಿಸಿದ ಮನದಿಂದಲೇ ಶರಣು ಹೋಗಿ ಶರಣನಾಗಬೇಕು. ಶರಣ ಸತಿಯಾಗಬೇಕು; ಲಿಂಗ ಪತಿಯಾಗಬೇಕು. ಅಂಗದಲ್ಲಿಯೇ ಸತಿ ಪತಿಗಳಿಬ್ಬರೂ ಸಂಗಮವಾಗಿ ಅರಿವಿನ ಸಮರಸ ಜೀವನ ನಡೆಸಬೇಕು. ಇದೇ ಲಿಂಗಾಂಗ ಸಾಮರಸ್ಯ!